ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಡಿಸೆಂ. ೨೦೧೭-ಜನ. ೨೦೧೮ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೬ ಸಂಚಿಕೆ: ೧೧-೧೨

ಚಂದಾ : ರೂ. ೨೦೦/-(ಅಕ್ಟೋ.೨೦೧೭ರಿಂದ ಸೆಪ್ಟಂ. ೨೦೧೮) ಬಿಡಿ ಪ್ರತಿ: ರೂ. ೪೦/- ಪುಟ: ೪೦

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರದ ರಾಜಕಾರಣದ ಮುಂದಿನ ದಿಕ್ಕು ದೆಸೆಗಳ ಒಂದು ಸ್ಥೂಲ ಸೂಚನೆ ನೀಡಬಹುದೆಂದು ಹೇಳಲಾಗುತ್ತಿದ್ದ ಗುಜರಾತ್ ವಿಧಾನ ಸಭಾ ಚುನಾವಣೆಗಳು ಮುಗಿದು, ಫಲಿತಾಂಶಗಳು ಹೊರಬಂದಿವೆ. ಐದು ಅವಧಿಗಳ ಕಾಲ ಸತತವಾಗಿ ಸರ್ಕಾರ ನಡೆಸಿದ್ದ ಬಿಜೆಪಿ ಈಗ ಆರನೇ ಅವಧಿಗೂ ಜನಬೆಂಬಲ ಪಡೆದಿದೆ. ಆದರೆ ಇದು ಈ ಕಳೆದ ಐದು ಅವಧಿಗಳಲ್ಲಿ ಈ ಪಕ್ಷ ಪಡೆದ ಜನಬೆಂಬಲದ ಪ್ರಮಾಣಗಳಲ್ಲೇ ಅತ್ಯಂತ ಕಡಿಮೆಯದ್ದಾಗಿದೆ. ಗುಜರಾತ್ ನರೇಂದ್ರ ಮೋದಿಯವರು ಸ್ವಂತ ತಮ್ಮ ಕೈಗಳಿಂದಲೇ ಕಟ್ಟಿದ ಬಿಜೆಪಿಯ ಭದ್ರ ಕೋಟೆಯಾಗಿದ್ದು, ಅದೀಗ ಈ ಮೊದಲು ಭಾವಿಸಿದ್ದಂತೆ ಅಬೇಧ್ಯವೇನಲ್ಲ ಎಂಬುದು ಗೊತ್ತಾದಂತಾಗಿದೆ. ಇದಕ್ಕೆ ಬಿಜೆಪಿಯ ರಾಜ್ಯ ಮತ್ತು ಕೇಂದ್ರಾಡಳಿತಗಳ ಗುಣಮಟ್ಟ ಎಷ್ಟು ಕಾರಣವೋ, ಕಾಂಗ್ರೆಸ್ಸೂ ಸೇರಿದಂತೆ ಬಿಜೆಪಿ ವಿರೋಧಿ ರಾಜಕೀಯ ಶಕ್ತಿಗಳ ಸಂಘಟಿತ ಶಕ್ತಿ ಪ್ರದರ್ಶನವೂ ಷ್ಟೇ ಕಾರಣವಾಗಿದೆ. ಹಾರ್ದಿಕ್ ಪಟೇಲ್, ಜಿಗ್ನೇಶ್ ಮೆವಾನಿ ಮತ್ತು ಅಲ್ಪೇಶ್ ಠಾಕೂರ್‌ರಂತಹ ಯುವನಾಯಕರು ಕಾಂಗ್ರೆಸ್ಸಿಗೆ ಒದಗಿಸಿದ ಒಂದು ವಿಶಾಲ ವ್ಯಾಪ್ತಿಯ ಸಾಮಾಜಿಕ ಸಂಯೋಜನೆಯ ಬೆಂಬಲ ಈ ಚುನಾವಣೆಯ ಫಲಿತಾಂಶಗಳನ್ನು ನಿರ್ಧರಿಸುವಲ್ಲಿ ದೊಡ್ಡ ಪಾತ್ರ ವಹಿಸಿದೆ. ಅದೇನೇ ಇದ್ದರೂ, ಮೋದಿ-ಅಮಿತ್ ಶಾ ಜೋಡಿ ರೂಪಿಸಿ ದೇಶವನ್ನು ಮರುಳುಗೊಳಿಸಿದ್ದ ಮಹಾನ್ ಚುನಾವಣಾ ಪ್ರಚಾರ ತಂತ್ರವೀಗ ಕೆಲಸ ಮಾಡದಾಗಿದೆ ಎಂಬುದು ಸ್ಪಷ್ಟವಾಗಿದೆ. ಆದರ್ಶವಾದುದೆಂದು ಹೇಳಲಾಗುತ್ತಿದ್ದ ಗುಜರಾತ್ ಅಭಿವೃದ್ಧಿ ಮಾದರಿಯ ವಿಶ್ವಾಸಾರ್ಹತೆ ಕುಸಿದಿದೆ. ಬಂಡವಾಳಶಾಹಿ ಹಿತಾಸಕ್ತಿಗಳ ಪರವಾದ ಈ ಮಾದರಿ ವ್ಯಾಪಾರ-ವ್ಯವಹಾರ ಪ್ರಧಾನವಾದ ಗುಜರಾತ್‌ನಲ್ಲಿ ಮಾನ್ಯವಾದಂತೆ, ರಾಷ್ಟ್ರವ್ಯಾಪಿಯಾದ ಮಾದರಿಯಾಗಿ ಬೆಳೆದಾಗ ಗುಜರಾತ್ ಸಹ ಅದರ ದುಷ್ಪರಿಣಾಮಗಳಿಗೆ ಒಳಗಾಗಿ ಅದನ್ನು ವಿರೋಧಿಸುತ್ತದೆ ಎಂಬುದು ಈ ಚುನಾವಣಾ ಫಲಿತಾಂಶಗಳಿಂದ ಗೊತ್ತಾಗುವಂತಿದೆ. ಈ ಬಾರಿ ಆ ರಾಜ್ಯದ ಗ್ರಾಮಾಂತರ ಕ್ಷೇತ್ರಗಳಾದ್ಯಂತ ಕಾಂಗ್ರೆಸ್ ಜಯಭೇರಿ ಬಾರಿಸಿರುವುದೇ ಇದಕ್ಕೆ ಸಾಕ್ಷಿ.

ಮೊನ್ನೆ ಶಿವಮೊಗ್ಗದಲ್ಲಿ ;ಸ್ವರಾಜ್ ಇಂಡಿಯಾ' ಪಕ್ಷದ ಜಿಲ್ಲಾ ಶಾಖೆ ಉದ್ಘಾಟಿಸಿ ಮಾತನಾಡುತ್ತಿದ್ದ ದೇವನೂರ ಮಹಾದೇವ ಅವರು ಹೇಳಿದಂತೆ ಈಗ ಗುಜರಾತ್ ಮಾದರಿ ಎಂದರೆ ಜಿಗ್ನೇಶ್-ಹಾರ್ದಿಕ-ಅಲ್ಪೇಶ್ ಅವರಿಂದ ಕೂಡಿದ ರಾಜಕೀಯ ಪ್ರತಿರೋಧದ ಮಾದರಿ ಎಂಬ ಅರ್ಥ ಪಡೆದಿದೆ ಎಂದು ಹೇಳಿದ್ದು ಸರಿಯಾಗಿಯೇ ಇದೆ. ಆದರೆ ಈ ಮಾದರಿ ಸ್ವತಂತ್ರವಾಗಿರದೆ ಕಾಂಗ್ರೆಸ್ ಮೂಲ ಆಧಾರದ ಮೇಲೆ ನಿಂತಿದೆ ಎಂಬುದನ್ನು ಅವರು ಮರೆತಂತಿತ್ತು. ಜೊತೆಗೆ ಈ ಮಾದರಿಯೇನಾದರೂ ಚುನಾವಣೆಗಳಲ್ಲಿ ಬಹುಮತ ಗಳಿಸಿಬಿಟ್ಟಿದ್ದರೆ ಈ ಮಾದರಿ ಮಾದರಿಯಾಗಿ ಉಳಿಯುತ್ತಿತ್ತೇ ಎಂದೂ ಯೋಚಿಸುವ ಅವಶ್ಯಕತೆಯೂ ಇದೆ, ಏಕೆಂದರೆ, ಈ ಮಾದರಿಗೆ ಬಿಜೆಪಿ ವಿರೋಧದ ಹೊರತಾಗಿ ಇನ್ನಾವುದೇ ಸಾಮಾನ್ಯ ರಾಜಕೀಯ ಕಾರ್ಯಸೂಚಿ ಇದ್ದಂತಿಲ್ಲ. ಈ ಮೂವರ ಪೈಕಿ ಜಿಗ್ನೇಶ್ ಒಬ್ಬರಿಗೇ ಒಂದು ಸುಸಂಬದ್ಧ ರಾಜಕೀಯ ದೃಷ್ಟಿ ಇದ್ದಂತಿದ್ದು ಅದು ಇನ್ನಿಬ್ಬರ ಮತ್ತು ಕಾಂಗ್ರೆಸ್ಸಿನ (ಅಲ್ಪೇಶ್ ಈಗ ಕಾಂಗ್ರೆಸ್ ಸೇರಿರುವರಾದರೂ) ವ್ಯಾವಹಾರಿಕ ರಾಜಕಾರಣದೊಡನೆ ಎಷ್ಟು ದಿನ ಸಮರಸದಿಂದ ಇರಲು ಸಾಧ್ಯ? ಬಿಜೆಪಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಬೆಳೆದಿರುವುದೇ ವಿಶ್ವಾಸಾರ್ಹತೆ ಕಳೆದುಕೊಂಡ ಕಾಂಗ್ರೆಸ್‌ಗೆ ಒಂದು ಕಾರ್ಯಶೀಲ ಪರ್ಯಾಯ ಮೂಡದ ಕಾರದಿಂದಲೇ ಅಲ್ಲವೇ? ಹಾಗಾಗಿ ಚುನಾವಣೆ ಸಮಯಕ್ಕೆ ಅನುಕೂಲವಾದ ಮೈತ್ರಿಕೂಟಗಳು ಇಂದಿನ ಸಂದರ್ಭದಲ್ಲಿ ಮಾದರಿಗಳಾಗಬಲ್ಲವೆ ಎಂಬುದನ್ನು ಹಲವು ವರ್ಷಗಳಿಂದ ಪರ್ಯಾಯ ರಾಜಕಾರಣವನ್ನು ರೂಪಿಸಲು ಯತ್ನಿಸುತ್ತಾ ಇನ್ನೂ ಸುಸ್ತಾಗದಂತೆ ಕಾಣುವ ದೇವನೂರ ಮಹಾದೇವ ಅವರಂತಹವರು ಯೋಚಿಸಬೇಕು. ಅವರು ಮೊನ್ನೆ ಈ ಬಗ್ಗೆ ಮಾತಾಡುತ್ತಿದ್ದಾಗ ನನಗೆ ನೆನಪಿಗೆ ಬಂದದ್ದು ಕುವೆಂಪು ಅವರ 'ಒಕ್ಕೂಟ'ದ ಭಾಷಣದ ಈ ಮುಖ್ಯ ಸಾಲುಗಳು: ':...ಹುಲಿಗೆ ಸಣ್ಣಪುಟ್ಟ ಕಲ್ಲುಗಳನ್ನು ಎಸೆಯಬಾರದು.. ಅದು ನಮಗೇ ಅಪಾಯಕಾರಿ. ಅದಕ್ಕೆ ದೊಡ್ಡ ಗುಂಡು ಮದ್ದು ಬೇಕು.. ಆದರೆ ಅದು ಮೊದಲು ತಿರುಗಬೇಕಾದದ್ದು ನಿಮ್ಮ ತಲೆಯ ಕಡೆಗೇ ನಿಮ್ಮ ತಲೆ ಮೊದಲು ಕ್ಲೀನ್ ಆಗಬೇಕು...'

ಮಹಾದೇವ ಅವರು ಹೊಸ ಗುಜರಾತ್ ಮಾದರಿಯ ಬಗ್ಗೆ ಮಾತಾಡುವ ಮುನ್ನ ಇನ್ನೊಂದು ಮಾತು ಹೇಳಿದರು. ಅದೆಂದರೆ, 'ದ್ವೇಷ, ಸುಳ್ಳು ಮತ್ತು ಭ್ರಮೆ' ಇವುಗಳೇ ನಮ್ಮ ನಿಜವಾದ ಶತ್ರುಗಳು.' ಈ ಮಾತನ್ನು ಅವರು ಹೃದಯಾಂತರಾಳದಂದಲೇ ಆಡಿದ್ದರೆ, ಮೊದಲು ಅವರು ತಮ್ಮ ಪರ್ಯಾಯ ರಾಜಕಾರಣದ ಪ್ರಯತ್ನವನ್ನು ಒಂದು ಬಿಡಲಾಗದ ಚಟದಂತೆ, ಕೇವಲ ಒಂದು ಹವ್ಯಾಸದಂತೆ, ಚುನಾವಾಣಾ ಆಕಾಶದಲ್ಲಿ ಕಾಂಗ್ರೆಸ್ ಗಾಳಿಪಟ ಪಲ್ಟಿ ಹೊಡೆಯದಂತೆ ಅದರ ಬಾಲಂಗೋಚಿ ಮಾತ್ರವಾಗಿರುವಂತೆ ನಡೆಸದೆ ಜನ ತಮ್ಮ ಪ್ರಯತ್ನವನ್ನು ಗಂಭೀರವಾಗಿ ನಂಬುವಂತೆ ನಡೆಸಬೇಕು. ಇವರು ;'ಸರ್ವೋದಯ ಕರ್ನಾಟಕ'ದ ಮೂಲಕ ಹತ್ತು ವರ್ಷಗಳ ಕಾಲ ಮಾಡಲಾಗದ್ದನ್ನು ತಮ್ಮ ಈ ಹೊಸ ಪಕ್ಷದ ಮೂಲಕ ಹೇಗೆ ಮಾಡಿಯಾರು? ಎಂದು ಜನ ಸಹಜವಾಗಿ ಕೇಳಬಹುದಾದ ಪ್ರಶ್ನೆಗೆ ಉತ್ತರ ಕೊಡುವಂತೆ ಪಕ್ಷ ಕಟ್ಟಬೇಕಿದೆ. ಬಿಜೆಪಿ ನಿಧಾನವಾಗಿ ಬಿಚ್ಚುತ್ತಿರುವ ತನ್ನ ಗುಪ್ತ ರಾಜಕೀಯ ಕಾರ್ಯಸೂಚಿಯನ್ನು ನೋಡಿದಾಗ ಗಾಬರಿಯಾಗುತ್ತದೆ; ಅದನ್ನು ಮೊದಲು ನಿವಾರಿಸಿಕೊಳ್ಳಬೇಕಾದ ತುರ್ತು ಅಗತ್ಯವಿದೆ ಎಂಬುದೂ ನಿಜ. ಕರ್ನಾಟಕದ ಮಟ್ಟಿಗೆ ಅದು ಅನಂತಕುಮಾರ್ ಹೆಗ್ಗಡೆ ಎಂಬ ಉಗ್ರ ಹಿಂದುತ್ವವಾದಿಯನ್ನು ಕೇಂದ್ರ ಸಚಿವನನ್ನಾಗಿ ಮಾಡಿ ರಾಜ್ಯದಲ್ಲಿ ಚುನಾವಣಾ ಧೂಳನ್ನು ಎಬ್ಬಿಸುತ್ತಿರುವ ಅಸಭ್ಯ ರೀತಿಯನ್ನು ನೋಡಿದರೆ, ಕರ್ನಾಟಕದ ಜನ ಮಾತ್ರವಲ್ಲ, ಬಿಜೆಪಿಯಲ್ಲಿ ಇನ್ನೂ ಉಳಿದಿರುವ ಕೆಲವರಾದರೂ ಸಭ್ಯ ರಾಜ್ಯ ನಾಯಕರು ಎಚ್ಚೆತ್ತುಕೊಳ್ಳಬೇಕಿದೆ. ಆದರೆ ಇದೆಲ್ಲವೂ ತುಕ್ಕು ಹಿಡಿದ ಹಳೆಯ ಮಾದರಿ ರಾಜಕಾರಣದ ಚೌಕಟ್ಟಿನಾಚೆಗೆ ಬರಲಾದಷ್ಟು ಜಡವಾಗಿರುವ ಕಾಂಗ್ರೆಸ್‌ಗೆ ಲಾಭ ತರುವಂತಾದರೆ ಅದು ರಾಜಕಾರಣದ ಚಕ್ರವನ್ನು ಹಿಂದಕ್ಕೆ ಒಯ್ದಂತೆಯೇ.

ಈ ಕಾಂಗ್ರೆಸ್ ಕಳೆದ ಚುನಾವಣೆಯ ಮಹಾ ಸೋಲಿನ ನಂತರವೂ ಅದು ಬದಲಾಗುವ ಯಾವ ಸೂಚನೆಯೂ ಕಾಣುತ್ತಿಲ್ಲ. ಗುಜರಾತ್‌ನಲ್ಲಿ ಬಿಜೆಪಿಯ ಹಿಂದುತ್ವ ರಾಜಕಾರಣಕ್ಕೆ ಅದು ಪ್ರತಿಕ್ರಿಯಿಸಿದ ರೀತಿ ನೋಡಿ. ತಾನೂ ಹಿಂದತ್ವದಲ್ಲಿ ಹಿಂದೆ ಬಿದ್ದಿಲ್ಲ ಎಂದು ರಾಹುಲ್ ಗಾಂಧಿಯವರ ಜನಿವಾರವನ್ನು ಎತ್ತಿ ತೋರಿಸಿತು. ಮಹಾ ಪ್ರಗತಿಶೀಲ ಎಂದು ಹೊಗಳು ಭಟ್ಟರಿಂದ ಬಿಂಬಿಸಲ್ಪಟ್ಟ ರಾಜೀವ್ ಗಾಂಧಿ ಎಂಬ ಎಳಸು ವ್ಯಕ್ತಿ ಪ್ರಧಾನಿಯಾಗಿ ಶಾಬಾನು ಪ್ರಕರಣವನ್ನು ನಿರ್ವಹಿಸಿದ ರೀತಿ ಮತ್ತು ಅದರ ದುಷ್ಪರಿಣಾಮಗಳನ್ನು ಸರಿದೂಗಿಸಲು ಬಾಬ್ರಿ ಮಸೀದಿಯಲ್ಲಿ ರಾಮಲಲ್ಲಾನ ಪೂಜೆ ಆರಂಭಿಸಲು ಅನುಮತಿ ನೀಡಿದದ್ದರಿಂದ ಆರಂಭವಾದ ಸಾಲು ಸಾಲು ಅವಿವೇಕಿ ನಿರ್ಧಾರಗಳ

ರಾಜಕಾರಣದ ದುಷ್ಟ ಫಲಗಳನ್ನು ಇಂದು ಧೃವೀಕೃತ ಕೋಮುವಾದಿ ರಾಜಕಾರಣದ ರೂಪದಲ್ಲಿ ನಾವು ಅನುಭವಿಸುತ್ತಿದ್ದೇವೆ. ಈಗಲೂ ಈ ಪಕ್ಷ ತ್ರಿವಳಿ ತಲಾಖ್ ಮತ್ತು ಬಾಬ್ರಿ ಮಸೀದಿ ವಿವಾದದ ಪ್ರಕರಣದಲ್ಲಿ ಕಪಿಲ್ ಸಿಬ್ಬಲ್ ಎಂಬ ವಕೀಲನ ಮೂಲಕ ಪ್ರದರ್ಶಿಸುತ್ತಿರುವ ಇಬ್ಬಗೆಯ ಧೋರಣೆ ಇದೊಂದು ಬದಲಾಗಲು ನಿರಾಕರಿಸುತ್ತಿರುವ ಪಟ್ಟಭದ್ರ ಪಕ್ಷ ಎಂಬುದು ಸಾಬೀತಾಗುತ್ತಿದೆ. ಹೀಗಿರುವಾಗ ಧರ್ಮ ಸಂಸತ್ ಎಂಬ ಮತೀಯ ಸರ್ಕಸ್ ನಡೆದಾಗ ಕೆಲ ಸ್ವಘೋಷಿತ ಪ್ರಗತಿಪರರು ಹುಯ್ಲೆಬ್ಬಿಸದರೆ ಜನ ನಕ್ಕು ಮುಂದೆ ಸಾಗುತ್ತಾರೆ ಅಷ್ಟೆ.

ಕಾಂಗ್ರೆಸ್ ಹಿಮಾಚಲ ಪ್ರದೇಶದಲ್ಲಿ ಸೋತ ಪರಿ ನೋಡಿ. ಅದಕ್ಕಿಂತ ಮುಖ್ಯವಾಗಿ ಅದನ್ನು ಸೋಲಲು ಬಿಟ್ಟ ಪರಿ ನೋಡಿ. ಅಲ್ಲಿನ ವೀರಭದ್ರ ಸಿಂಗ್ ಸರ್ಕಾರ ಕಡು ಭ್ರಷ್ಟ ಸರ್ಕಾರವೆಂದು ಲೋಕಕ್ಕೇ ಗೊತ್ತಾಗಿದ್ದರೂ, ಕಾಂಗ್ರೆಸ್ ಅದನ್ನು ಹಾಗೇ ಬಿಟ್ಟಿತು. ಕಾರಣ, ಆ ಪಕ್ಷಕ್ಕೆ ಅಂತಹವರೇ ಮೂಲಾಧಾರ. ಸೋಲಿಗೆ ಕೊಡುತ್ತಿರುವ ಕಾರಣ: ಆ ರಾಜ್ಯ ಯಾವಾಗಲೂ ಆಡಳಿತ ಪಕ್ಷವನ್ನು ಸೋಲಿಸುವುದು ರೂಢಿಯಾಗಿಬಿಟ್ಟಿದೆ! ಅರೆ, ಒಳ್ಳೆಯ ಜನಪರ ಆಡಳಿತ ಕೊಟ್ಟರೆ ಅದನ್ನು ಸೋಲಿಸಲು ಜನರೇನು ಮೂರ್ಖರೇ? ನೆಹ್ರೂ ಕುಟುಂಬದ ನೆಚ್ಚಿಕೆಯ ಹೊರತಾಗಿ ಇನ್ನಾವ ತಾತ್ವಿಕ ಬಂಡವಾಳವನ್ನೂ ಹೂಡಲಾಗದಷ್ಟು ಬರಗೆಟ್ಟಿರುವ ಈ ಪಕ್ಷ ರಾಹುಲ್ ಗಾಂಧಿಯವರನ್ನು ತನ್ನ ಹೊಸ ಅಧ್ಯಕ್ಷರನ್ನಾಗಿ ಪಟ್ಟಕ್ಕೇರಿಸಿರುವುದು ಸಹಜವೇ ಆಗಿದೆ.

ಹಾಗಾಗಿ ಇನ್ನೂ ಹೆಬ್ಬಾವಿನಂತೆಯೇ ಜಡಸುಖದಲ್ಲಿ ನಿದ್ರಿಸುತ್ತಿರುವ ಈ ಪಕ್ಷವನ್ನು ಮೂಲಭೂತವಾಗಿ ಬದಲಾಯಿಸಿ ಹೊಸ ಪಕ್ಷವನ್ನಾಗಿ ಮಾಡಬಲ್ಲ ಛಾತಿ ಮತ್ತು ಬಿರುಸು ಇರುವ ಸಾಮಾಜಿಕ–ರಾಜಕೀಯ ಸಂಯೋಜನೆಗಳ ಮೈತ್ರಿಕೂಟಗಳಷ್ಟೇ ಇಂದಿನ ಅಗತ್ಯವಾಗಿದೆ. ಇನ್ನೈದು ತಿಂಗಳುಗಳಲ್ಲಿ ಚುನಾವಣೆಗೆ ಹೋಗಲು ಕಾಂಗ್ರೆಸ್ಸಿನ ನಮ್ಮ ಸಿದ್ಧರಾಮಯ್ಯ ನಡೆಸಿರುವ ರಾಜಕೀಯ ಸಿದ್ಧತೆಯ ಪರಿಯನ್ನೇ ನೋಡಿ. ಕರ್ನಾಟಕದ ಸಮಾಜವನ್ನು ಸಾಮಾಜಿಕ ನ್ಯಾಯ ರಾಜಕಾರಣದ ಹೆಸರಿನಲ್ಲಿ ಮತ್ತು ವಿವಿಧ ಜಾತಿ ಆಧಾರಿತ ಕಾರ್ಯಕ್ರಮಗಳ ಮೂಲಕ ಜಾತಿ ಜಾತಿಗಳಾಗಿ ಒಡೆದಿರುವ ಇವರ ಸರ್ಕಾರ ಈಗ ಜಾತಿ ಸಂಘಗಳಿಗೆ ಕಾರ್ಯಾಲಯಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಲು ಒಂದು ವಿಶಾಲ ಭೂಪ್ರದೇಶವನ್ನೇ ಮೀಸಲಿಡಲು ನಿರ್ಧರಿಸಿದೆ. ಸ್ವತಂತ್ರ ಲಿಂಗಾಯತ ಧರ್ಮವೆಂಬ ಧಾರ್ಮಿಕೇತರ ನೆಲೆಯ ಕೂಗಿಗೆ ಅದರ ಪರಿಶೀಲನೆಗಾಗಿ ಒಂದು ಸಮಿತಿ ರಚಿಸಿ ಅದಕ್ಕೆ ಈಗ ಅಧಿಕೃತ ಕುಮ್ಮಕ್ಕು ಕೊಟ್ಟಿದೆ. ಇದನ್ನೆಲ್ಲ ನೋಡುತ್ತಿರುವ ಜನ ಯಾರಿಗೆ ಮತ ಹಾಕಬೇಕು ಹೇಳಿ. ದೇವೇಗೌಡರ ಊಳಿಗದ ರಾಜಕಾರಣಕ್ಕೆ? ಜನ ಗೊಂದಲದಲ್ಲಿದ್ದಾರೆ, ಬಿಜೆಪಿ ಅದರ ಲಾಭ ಪಡೆಯಲು ತನ್ನ ಭಾವೋನ್ಮಾದದ ರಾಜಕಾರಣದ ಎಲ್ಲ ಅಸ್ತ್ರಗಳನ್ನೂ ಬಳಸಲು ತಯ್ಯಾರಿ ನಡೆಸಿದೆ. ಅದನ್ನು ಜನರಿಗೆ ತಿಳಿಸುವ ಬಗೆಯಾದರೂ ಹೇಗೆ? ಅಂತಹ ವಿಶ್ವಾಸಾರ್ಹತೆ ಉಳಿಸಿಕೊಂಡಿರುವ ಜನರಾದರೂ ಎಲ್ಲಿದ್ದಾರೆ, ಎಷ್ಟಿದ್ದಾರೆ ನಮ್ಮ ರಾಜ್ಯದಲ್ಲಿ? ಹಾಗಾಗಿ ಮುಂದಿನ ಐದಾರು ತಿಂಗಳು ರಾಜ್ಯಕ್ಕೆ ನಿಜವಾಗಿಯೂ ಪರೀಕ್ಷೆಯ ಕಾಲ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

–ಸಂಪಾದಕ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಹೊಸ ಮನುಷ್ಯ' ಮತ್ತೆ ಆರಂಭವಾಗಿರುವುದು ಬಹು ಸಂತೋಷದ ವಿಷಯ.

–ಚನ್ನವೀರ ಕಣವಿ, ಧಾರವಾಡ

ಪತ್ರಿಕೆಯನ್ನು ಪುನರಾರಂಭಿಸಲು ನೀವು ಕೈಗೊಂಡ ನಿರ್ಧಾರಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ, ಮತ್ತು ಈ ಮಾಸಿಕದ ಪ್ರಕಟನೆ ನಿರಂತರವಾಗಿ ಮುಂದುವರಿದುಕೊಂಡು ಹೋಗಲಿ ಎಂದು ಹಾರೈಸುತ್ತೇನೆ.

ಗಾಂಧಿ ಬದುಕು ಮತ್ತು ತತ್ವಗಳ ಚಿಂತನೆಗೆ ಪ್ರಸ್ತುತ ಸಂಚಿಕೆ ಒತ್ತುಕೊಟ್ಟಿರುವುದು ಯಥೋಚಿತವಾಗಿದೆ. ಗಾಂಧಿ ಯಾವತ್ತೂ ನಾವು ಪ್ರೀತಿಸಬಹುದಾದ ಮನುಷ್ಯ ಮತ್ತು ಆತನ ಮೌಲ್ಯಗಳು, ಮಾರ್ಗಗಳು ಇಂದಿನ ಪ್ರಕ್ಷುಬ್ಧ ಸಂದರ್ಭದಲ್ಲಿ ನಮಗೆ ಎಂದಿಗಿಂತ ಹೆಚ್ಚು ಅರ್ಥಪೂರ್ಣವಾಗಿ ತೋರುತ್ತವೆ. ಗಾಂಧಿ ಮೇಲೆ ಪ್ರಭಾವ ಬೀರಿದ ಪಾಶ್ಚಾತ್ಯ ಚಿಂತಕರ ಬಗೆಗಿನ ಪ್ರೊ. ನಾಗಭೂಷಣ ಸ್ವಾಮಿಯವರ ವಿಶ್ಲೇಷಣೆ ಒಂದು ಆಧಾರಪೂರ್ವಕ ಮಾಹಿತಿ. ವೈಯಕ್ತಿಕವಾಗಿ ಥೋರೋ ನನಗೆ ಆಪ್ತನಾದ ಚಿಂತಕ. ಸುಮಾರು ಅರ್ಧ ಶತಮಾನದ ಹಿಂದೆ ಬಿ. ಎಫ್. ಸ್ಕಿನ್ನರ್ ಬರೆದ 'ವಾಲ್ಡನ್ ಟು' ಕಾದಂಬರಿಯ ಮೂಲಕ ನನ್ನ ಗಮನಕ್ಕೆ ಬಂದ ಥೋರೋವಿನ 'ವಾಲ್ಡನ್' ಕೃತಿ ಅಗಿನಿಂದಲೂ ನನಗೆ ಪ್ರಿಯವಾದ ಪುಸ್ತಕವಾಗಿದೆ. ಥೋರೋ ಪ್ರತಿಪಾದಿಸುವ ಸರಳ ಬದುಕು, ಸ್ವಾವಲಂಬನೆ ತತ್ವಗಳು ಗಾಂಧಿ ಚಿಂತನೆಯಲ್ಲಿ ಮುಂದುವರಿದುಕೊಂಡು ಬಂದಿವೆ. ತಾನು ಪ್ರಭಾವಿತರಾದ ವ್ಯಕ್ತಿಗಳನ್ನು ಮೀರಿ ಬೆಳೆದದ್ದು ಗಾಂಧಿಯ ವಿಶಿಷ್ಟ ಹಿರಿಮೆ. ಈ ಸಂಚಿಕೆಯ ಇತರ ಹಲವು ಲೇಖನಗಳು ನನಗೆ ಇಷ್ಟವಾಗಿವೆ.

–ಡಾ. ಹೆಚ್. ಎಸ್. ಈಶ್ವರ, ಬೆಂಗಳೂರು

ಪತ್ರಿಕೆ ಮತ್ತೆ ಆರಂಭವಾಗಿರುವುದು ಸಂತೋಷದ ಸಂಗತಿ. ಅಕ್ಟೋ–ನವೆಂ. ಸಂಚಿಕೆಯಲ್ಲಿನ ಪ್ರೊ. ಓ.ಎಲ್ ನಾಗಭೂಷ ಸ್ವಾಮಿಯವರ ಲೇಖನ ಬಹಳ ಇಷ್ಟವಾಯಿತು. ಹೆಚ್ಚಿನ ಅಚ್ಚಿನ ತಪ್ಪುಗಳಿಂದಾಗಿ ಓದು ಸ್ವಲ್ಪ ತೊಡಕಾಗಿತ್ತು. ನಾಲ್ಕು ಪುಸ್ತಕ ಅವಲೋಕನಗಳು ಚೆನ್ನಾಗಿದ್ದವು. ಈ ಕೃತಿಗಳು ಎಲ್ಲಿ ಸಫಲವಾಗಿವೆ ಮತ್ತು ಎಲ್ಲಿ ವಿಫಲವಾಗಿವೆ ಎಂಬುದನ್ನು ಸಕಾರಣವಾಗಿ ಗುರುತಿಸಿರುವುದು ಮೆಚ್ಚುಗೆಯಾಯಿತು. ಸವಿತಾ ನಾಗಭೂಷಣ ಮತ್ತು ವಿವೇಕ ಶಾನಭಾಗರ ರಚನೆಗಳೂ ಖುಷಿ ಕೊಟ್ಟವು. ಪತ್ರಿಕೆಯ ಮುಂದಿನ ಸಂಚಿಕೆಗಳನ್ನು ಕಾತರದಿಂದ ಎದುರು ನೋಡುವಂತಾಗಿದೆ.

–ಗಿರೀಶ ವಾಘ್, ಬೆಂಗಳೂರು

ತಮ್ಮ (ಕ್ಷಮಿಸಿ, ನಮ್ಮ) 'ಹೊಸ ಮನುಷ್ಯ' ಪತ್ರಿಕೆಯ ಪುನರಾಗಮನ ಕಂಡು ಕಳೆದು ಹೋಗಿದ್ದ ಆತ್ಮೀಯರೊಬ್ಬರನ್ನು ಮತ್ತೆ ಆಕಸ್ಮಿಕವಾಗಿ ಪಡೆದುಕೊಂಡಷ್ಟೇ ಸಂತೋಷವಾಗಿದೆ.. 'ಅತಿ' ಎನಿಸಬಹುದಾದರೂ ಈ ಮಾತು ಸತ್ಯ. ಕಾರಣ, ಮನುಷ್ಯ ಸಂಬಂದಧಗಳು ಹಳಸಿ ಭ್ರಮನಿರಸನವಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗಳಲ್ಲಿ ಜಿಗುಪ್ಸೆ ಹುಟ್ಟಿಸುತ್ತಿರುವ ಮಾಧ್ಯಮಗಳು, ಅಸಹ್ಯ ಹುಟ್ಟಿಸುತ್ತಿರುವ ಸಾಂಸ್ಕೃತಿಕ□ಧಾರ್ಮಿಕ ರಾಜಕಾರಣಗಳ ನಡುವೆ ನಿಮ್ಮ ಪತ್ರಿಕೆ ಮನಸ್ಸಿಗೆ ತಂಪೆರೆದು ಭರವಸೆ ನೀಡುವಲ್ಲಿ ಯಶಸ್ವಿಯಾಗಿದೆ. 'ಹೊಸ ಮನುಷ್ಯ' ಕೇವಲ ಪತ್ರಿಕೆಯಾಗಿರದೆ, ಜಡ್ಡಗಟ್ಟಿ ನಿಂತಿರುವ ನಮ್ಮ ಮನಸ್ಸು–ಹೃದಯಗಳನ್ನು ಪುನಃಶ್ಚೇತನಗೊಳಿಸುವ ಸಂಗಾತಿಯಾಗಿ, ನಮ್ಮತನವನ್ನು ಉಳಿಸಿಕೊಂಡು ಬದುಕಲು ಸಹಾಯಕವಾಗಿದೆ. ಹಾಗಾಗಿ ನಿಮ್ಮ ಪ್ರಯತ್ನ ನಿರಂತರವಾಗಿರಲಿ ಎಂದು ಆಶಿಸುತ್ತೇನೆ.

–ಆರ್. ಶಾಂತಮೂರ್ತಿ, ತುಮಕೂರು

ಈ ಸಂಚಿಕೆಯಲ್ಲಿ ಅರ್ಥಪೂರ್ಣ ಲೇಖನಗಳಿವೆ. ಪತ್ರಿಕೆ ನಿರಂತರವಾಗಿ ಪ್ರಕಟವಾಗಲಿ ಎಂದು ಹಾರೈಸುವೆ. ಸ್ನೇಹಿತರಿಗೂ ಪತ್ರಿಕೆ ತರಿಸಿಕೊಳ್ಳಲು ಹೇಳುವೆ

–ಡಾ..ವಿ.ಎ. ಲಕ್ಷ್ಮಣ, ಬೆಂಗಳೂರು

ಕಪ್ಪು ಬಿಳುಪು ರಕ್ಷಾಪುಟದೊಂದಿಗೆ ಸಾಧಾರಣ ಕಾಗದದಲ್ಲಿ ಮುದ್ರಿತವಾಗಿರುವ ಪತ್ರಿಕೆ ಅನಾಕರ್ಷಣೀಯವಾಗಿದೆ. ಲೇಖನಗಳೂ ಇಷ್ಟವಾಗಲಿಲ್ಲ. ಇತಿಹಾಸ ಬೇಡ. ಸಾಹಿತ್ಯ ಬೇಕು. ಪತ್ರಿಕೆಯೊಂದನ್ನು ನಡೆಸುವುದು ಎಷ್ಟು ಕಷ್ಟವೆಂದು ಗೊತ್ತು. ಮುಂದೆ ಸುಧಾರಿಸುವುದೆಂದು ಭಾವಿಸುವೆ.

–ಸಿ.ಚೌಡಪ್ಪ, ಬೆಂಗಳೂರು

ಗಾಂಧಿ ಅರ್ಥಶಾಸ್ತ್ರಕ್ಕೆ ಒಂದು ತಾತ್ವಿಕ ಬೆನ್ನೆಲುಬು ಒದಗಿಸಿದ ಜೆ. ಸಿ. ಕುಮಾರಪ್ಪನವರನ್ನು ಕುರಿತ ಡಾ. ರಾಜೇಂದ್ರ ಚೆನ್ನಿವರ ಲೇಖನ ಗಾಂಧಿ ವಿಚಾರಗಳ ಅನ್ವೇಷಣೆ ನಮ್ಮಲ್ಲಿ ಇನ್ನೂ ಎಷ್ಟು ಆಳವಾಗಿ ನಡೆಯಬೇಕಿದೆ ಎಂಬುದನ್ನು ಸೂಚಿಸುತ್ತದೆ. ನೀವು ಹೇಳಿದಂತೆ ಅವರು ಗಾಂಧಿ ಕಥನದ ದುರಂತ ನಾಯಕರೇ.

–ಎಂ. ರವೀಂದ್ರಕುಮಾರ್, ಮೈಸೂರು

'ಹೊಸ ಮನುಷ್ಯ' ಜಡ್ಡುಗಟ್ಟಿದ ಹುಂಬ ಸಮುದಾಯದಲ್ಲಿನ ಕೆಲವರಲ್ಲಾದರೂ ಎಚ್ಚರವನ್ನುಂಟು ಮಾಡಬಲ್ಲುದಾಗಿದೆ. ಈ ಸಲದ ಸಂಚಿಕೆಯಲ್ಲಿ ಗಾಂಧಿ ಬಗೆಗಿರುವ ಎಲ್ಲ ಲೇಖನಗಳೂ ಮೆಚ್ಚುಗೆಯಾದವು.

–ಡಾ. ಅರುಣಾಚಲ, ತೀರ್ಥಹಳ್ಳಿ

ಪತ್ರಿಕೆಯನ್ನು ನಿಲ್ಲಿಸುತ್ತೇನೆಂದು ಹೇಳಿದಾಗ ಆದ ಬೇಸರ ಈಗ ನೀಗಿದೆ. ನಿಮ್ಮ ಸ್ವಭಾವಕ್ಕೆ ಪತ್ರಿಕೆ ನಿಲುವುದು ಅಸಾಧ್ಯವೆಂದೇ ನನ್ನ ಭಾವನೆ.

ಹೊಸ. ಸಂಚಿಕೆ ಎಂದಿನ ಸಂಚಿಕೆಗಳಂತೆ ಚಿಂತನ ಭರಿತವಾಗಿದೆ. ನಿಮ್ಮ ಸಂಪಾದಕೀಯ ಟಿಪ್ಪಣಿಗಳು, ಓಎಲ್‌ಎನ್, ತೋಳ್ಪಾಡಿ, ಚೆನ್ನಿಯವರ ಲೇಖನಗಳ ಜೊತೆ ವಿವೇಕ ಶಾನಭಾಗರ ಹೊಸ ನಾಟಕದ ಒಂದು ದೃಶ್ಯ ಸಂಚಿಕೆಗೆ ಒಂದು ವೈವಿಧ್ಯ ನೀಡಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪತ್ರಿಕೆಯ ಮೂಲಕ ಗಾಂಧಿ ಮತ್ತು ಸಮಾಜವಾದಿ ಚಿಂತನೆಗಳು ನಮ್ಮ ಮಧ್ಯೆ ಮರುಹುಟ್ಟು ಪಡೆಯಲು ಸಾಧ್ಯವಾಗಿದೆ.

–ಡಾ.ಎಂ.ಜಿ. ಈಶ್ವರಪ್ಪ, ದಾವಣಗೆರೆ

'ಹೊಸ ಮನುಷ್ಯ' ಮತ್ತೆ ಬರುತ್ತಿರುವುದು ಸಂತಸದ ಸಂಗತಿ. ಈ ಸಂಚಿಕೆಯಲ್ಲಿ ಲೋಹಿಯಾ–ಗಾಂಧಿ ಕುರಿತಂತೆ ಮೌಲಿಕ ಲೇಖನಗಳಿವೆ, ನಿಜ. ಆದರೆ. ವೈವಿಧ್ಯವೂ ಇದ್ದರೆ ಚೆನ್ನ ;ಹೊಸ ಮನುಷ್ಯ' ಮೊದಲಿನಂತೆ ಹೊಸ ಬೆಳಕಿನೊಂದಿಗೆ ಬರಲಿ.

–ವೆಂಕಟೇಶ ಮಾಚಕನೂರ, ಧಾರವಾಡ

ನಾನು ಶಾಂತವಾಗಿ ಕೂತು ಓದಬೇಕಾದ ಅಪರೂಪದ ಲೇಖನಗಳನ್ನೂ, ಗೆಳತಿ ಗೀತಾ ವಸಂತ ಅವರು ವಿಸ್ತೃತವಾಗಿ ಬರೆದಿರುವ ನನ್ನ ಪುಸ್ತಕದ ವಿಮರ್ಶೆಯನ್ನೂ ಒಳಗೊಂಡಿರುವ ಈ ಸಂಚಿಕೆ ನನಗೆ ಖುಷಿ ತಂದಿದೆ.

–ಎಂ. ಆರ್ ಕಮಲ, ಬೆಂಗಳೂರು

ಈ ಸಂಚಿಕೆ ನನ್ನಂಥಹ ಸಾಮಾನ್ಯನಿಗೆ ಸ್ವಲ್ಪ ಗಂಭೀರವಾಯಿತು..ತುಸು ರಂಜನೆಯ ಬೋಧನೆ ಬೇಕೇನೋ.

–ಕೊಟ್ರೇಶ್ ಟಿ.ಎ.ಎಂ., ಅರಸೀಕೆರೆ

ಅಕ್ಟೋಬರ್ ೧೯೧೭ರಲ್ಲಿ ರಷ್ಯಾದಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ರಾಜ್ಯಕ್ರಾಂತಿ ನಡೆದು, ಆಡಳಿತ ಬದಲಾವಣೆ ಜರುಗಿ ಇದೀಗ ನೂರು ವರ್ಷ ಸಂದಿವೆ. ಇದು ಐತಿಹಾಸಿಕವಾಗಿ ಒಂದು ಮುಖ್ಯ ಘಟನೆ ಹೌದಾದರೂ, ಅನೇಕರು ಆಗ ಮತ್ತು ಈಗಲೂ ಜಿ. ರಾಜಶೇಖರಂತಹವರು ಭಾವುಕವಾಗಿ ಭಾವಿಸಿದ ಹಾಗೆ (ನೋಡಿ; ಇದೇ ಪತ್ರಿಕೆಯ ಕಳೆದ ಸಂಚಿಕೆಯಲ್ಲಿನ ಅವರ ಲೇಖನ) ಅದು ಮಹಾಪರ್ವ, ಬಿಡುಗಡೆಯ ಯುಗಾರಂಭ, ಜನಪ್ರಭುತ್ವದ ಮಹಾನ್ ನಾಂದಿ– ಇತ್ಯಾದಿ ಏನೂ ಆಗಿರಲಿಲ್ಲ. ಬದಲಾಗಿ ದುರ್ದೈವವಶಾತ್ ಲೋಕ ಜನಾಂಗದ ಮೇಲೆ ನೂರುವರ್ಷಗಳ ಕಾಲ ಜರುಗಿದ ದೌರ್ಜನ್ಯ, ದುರಾಡಳಿತ, ಶೋಷಣೆಗಳ ಆರಂಭವಾದುದು ಖೇದಕರವಾದರೂ ಸತ್ಯ.

ಈ ಕ್ರಾಂತಿ ಬಳಿಕ ನಡೆದ ಪ್ರಭುತ್ವ ಸಂರಕ್ಷಣಾ ಹತ್ಯೆಗಳ ದಾಖಲೆಗಳು ಅತ್ಯಂತ ಭೀಕರವಾಗಿವೆ. ಲೆನಿನ್ ಕಾಲದಲ್ಲಿ ಮತ್ತು ಸ್ಟಾಲಿನ್ ಆಡಳಿತದಲ್ಲಿ ಸುಮಾರು ೨೦ ಮಿಲಿಯನ್ ಜನ ಸಾಮೂಹಿಕ, ರಹಸ್ಯ, ವ್ಯಕ್ತಿಗತ, ರಾಜಕೀಯ ಮತ್ತು ಸಿದ್ಧಾಂತ ಸಂಬಂಧೀ ಕೊಲೆಗೀಡಾದರು. Who killed more? Stalin or Hitler? ಎಂಬುದು ಕುಖ್ಯಾತವಾದೊಂದು ಚರ್ಚೆ. ಆರ್ಥಿಕ ನೀತಿಗಳನ್ನು ಬಿಟ್ಟರೆ ಸ್ಟಾಲಿನ್ ಮತ್ತು ಹಿಟ್ಲರ್‌ರಲ್ಲಿ ವ್ಯಕ್ತಿತ್ವ, ಆರಾಧನಾಪ್ರಿಯತೆ, ಕ್ರೌರ್ಯ, ಧಾರ್ಷ್ಟ್ಯಗಳಲ್ಲಿ ವ್ಯತ್ಯಾಸವೇನೂ ಇಲ್ಲ. ಅಂತೆಯೇ ೧೯೧೭ರಿಂದ ೧೯೯೦ರ ತನಕವೂ ರಷ್ಯವು ಅಭಾವ, ದಮನ, ಆಹಾರ ಹಾಹಾಕಾರಗಳಲ್ಲೆ ಸಾಗಿಬಂದಿದೆ. ತ್ಯಾಗ, ಜೀವಹಾನಿ ತೆತ್ತಾದರೂ ಈ ಮಾರ್ಕ್ಸ್–ಲೆನಿನ್ ಧರ್ಮದ ಸಮತಾ ರಾಜ್ಯ ಬಂತೆ? ಅದೂ ಇಲ್ಲ. ಫ್ಯಾಸಿಸಂ ವಿನಾಶದ ಬಗ್ಗೆ ಬಹಳಷ್ಟು ಘೋಷಿಸಿದ ರಷ್ಯಾ ತನ್ನ ಮೈಮೇಲೆ ಜರ್ಮನಿ ಬೀಳುವವರೆಗೂ ಮೂಕ ಬೆಂಬಲಿಗನಾಗಿಯೇ ಹಿಟ್ಲರನನ್ನು ಸಹಿಸಿತ್ತು. ಹಿಟ್ಲರನಂತೆಯೇ ಪೋಲೆಂಡಿನಿಂದ ತೊಡಗಿ ಮುಂದೆ ಆಫ್ಘಾನಿಸ್ತಾನದ ತನಕ ತಾನೂ ವಿಸ್ತಾರವಾದಿ ಆಕ್ರಮಣಗಳನ್ನು ನಡೆಸಿತು. ರಷ್ಯಾ ಕ್ರಾಂತಿಯ ಪ್ರಭಾವದ ವಿಸ್ತಾರವಾಗಿ ಜರ್ಮನಿ ದೇಶ ಎರಡಾಗಿ, ಪೂರ್ವ ಯೂರೋಪ್ (ವಾಸ್ತವತಃ ರಷ್ಯದ ಸಾಮ್ರಾಜ್ಯ ಭಾಗಗಳೆಂದೇ ಹೇಳಬಹುದು) ದೇಶಗಳು ಐವತ್ತು ವರ್ಷಕಾಲ, ಯೂರೋಪಿನ ಉಳಿದ ದೇಶಗಳಿಗಿಂತ ಹಿಂದೆ ಉಳಿದು, ಕಷ್ಟನಷ್ಟ ಹಿಂಸೆ ಅನುಭವಿಸಿದುವು. ಪೂರ್ವ–ಪಶ್ಚಿಮ ಯೂರೋಪ್‌ಗಳ ಆರ್ಥಿಕ ಪ್ರಗತಿ, ಕೈಗಾರಿಕೆ ಸ್ಥಿತಿ, ಉತ್ಪನ್ನ, ಮಾನವಾಧಿಕಾರ ಮೊದಲಾದ ಆಧಾರಗಳಲ್ಲಿ ಹೋಲಿಸಿ ನೋಡಲು ಈಗ ಬೇಕಾದಷ್ಟು ಸಾಮಗ್ರಿ ಲಭ್ಯವಿದೆ.

ರಷ್ಯಾದ ಕ್ರಾಂತಿಯಿಂದ ಪ್ರಭಾವಿತವಾದ ಚೀನಾದ ಕಮ್ಯೂನಿಸ್ಟ್ ಕ್ರಾಂತಿಯದೂ ಇದೇ ಕಥೆಯಾಗಿದೆ: ಆಂತರಿಕ ಹಿಂಸೆ, ಬಾಹ್ಯ ವಿಸ್ತರಣಾ ದಾಹ. ಇನ್ನು ಕೊರಿಯಾ ವಿಭಜನೆ ಮತ್ತು ಉತ್ತರ ಕೊರಿಯಾದ ಭಯಾನಕ ಸ್ಥಿತಿಗೂ ಪಾಲ್‌ಪಾಟ್(ಕಾಂಬೋಡಿಯಾ ಸರ್ವಾಧಿಕಾರಿ–ಕಮ್ಯುನಿಸ್ಟ್–ಹಿಟ್ಲರ್) ಗೈದ ಲಕ್ಷಾಂತರ ಹತ್ಯೆಗಳಿಗೂ ರಷ್ಯಾ ಕ್ರಾಂತಿಯೇ ಮೂಲ ಕಾರಣವೆನ್ನಬಹುದು.

ಹೀಗಾಗಿ ದೊಡ್ಡ ಕನಸು ಹೊತ್ತು ಬಂದ ರಷ್ಯಾದ ಅಕ್ಟೋಬರ್ ಕ್ರಾಂತಿಯು ಸೃಷ್ಟಿಸಿದ ಪರಿಣಾಮಗಳು ಹೃದಯವಿದ್ರಾವಕಗಳೆ ಹೊರತು ಹೃದಯವಿಸ್ತಾರಕಗಳಲ್ಲ.

–ಎಂ. ಪ್ರಭಾಕರ ಜೋಷಿ, ಮಂಗಳೂರು

ತುಮಕೂರಿನಲ್ಲಿ ವಚನ ಸಾಹಿತ್ಯದ ಸಾಮಾಜಿಕ ವಿಶ್ಲೇಷಣೆ



ವಚನ ಚಳುವಳಿ ಕೇವಲ ಅಧ್ಯಾತ್ಮಿಕ ಚಳುವಳಿಯಾಗಿರದೆ ತನ್ನದೇ ನೈತಿಕತೆಯುಳ್ಳ ಒಂದು ವಾಸ್ತವವಾದಿ ಚಳುವಳಿಯೂ ಆಗಿದ್ದು, ಅದು ಹರಿವ ನೀರಿನಂತೆ ಸದಾ ಕಾಲಕ್ಕೆ ಸೃಜನಶೀಲವಾಗಿ ಹೊಸ ಹೊಸ ಅರ್ಥಗಳನ್ನು ಸೂಸುತ್ತದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ. ಅರವಿಂದ ಮಾಲಗತ್ತಿ ಹೇಳಿದರು. ಅವರು ಡಿಸೆಂಬರ್ ೨೪ ರಂದು ಶಿವಮೊಗ್ಗ ಲೋಹಿಯಾ ಪ್ರತಿಷ್ಠಾನವು ಅಖಿಲ ಕರ್ನಾಟಕ ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ತುಮಕೂರಿನ ಶ್ರೀ ಶಿವಕುಮಾರಸ್ವಾಮೀಜಿ ಸಭಾಂಗಣದಲ್ಲಿ ಏರ್ಪಡಿಸಿದ್ದ 'ವಚನಗಳಲ್ಲಿ ಸಾಮಾಜಿಕತೆಯ ನೆಲೆಗಳು' ಎಂಬ ವಿಷಯ ಕುರಿತ ವಿಚಾರ ಸಂಕಿರಣವನ್ನು ಉದ್ಘಾಸಿ ಮಾತನಾಡುತ್ತಿದ್ದರು.

ಇದಕ್ಕೆ ಮುನ್ನ ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ಗುರು ಲಿಂಗ ಜಂಗಮವನ್ನು ನೆಚ್ಚಿದ ಲಿಂಗಯಾತ ಧರ್ಮವನ್ನು ಬುದ್ಧ, ಧರ್ಮ ಮತ್ತು ಸಂಘವನ್ನು ನೆಚ್ಚಿದ್ದ ನಾಸ್ತಿಕ ಬೌದ್ಧ ಧರ್ಮದ ಪುನರುಜ್ಜೀವತ ಆಸ್ತಿಕ ರೂಪವೆಂದು ನೋಡಿ ಅಧ್ಯಯನ ಮಾಡಿದರೆ ಆ ಧರ್ಮದ ಬಗ್ಗೆ ಹೊಸ ಒಳನೋಟಗಳು ದೊರೆಯಬಹುದೆಂದು ಅಭಿಪ್ರಾಯಪಟ್ಟರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಾ, ಬಸವರಾಜ ಸಾದರ ಅವರು ಅಲ್ಲಮ. ಬಸವ. ಅಕ್ಕ ಮುಂತಾದ ಮುಂಚೂಣಿ ವಚನಕಾರರಿಗಷ್ಟೇ ಅಧ್ಯಯನವನ್ನು ಸೀಮಿತಗೊಳಿಸದೆ ಒಕ್ಕಲಿಗ ಮುದ್ದಣ್ಣನಂತಹ ವಚನಕಾರರನ್ನು ಅಧ್ಯಯನ ಮಾಡಿದರೆ ವಚನಸಾಹಿತ್ಯದ ಮಹತ್ವ ಇನ್ನೂ ಹೆಚ್ಚಿಗೆ ಅರಿವಿಗೆ ಬರುವುದು ಎಂದರು.

ನಂತರ ನಡೆದ ಮೂರು ವಿಚಾರ ಗೋಷ್ಠಿಗಳಲ್ಲಿ ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿಯವರು 'ವಚನ ಸಾಹಿತ್ಯದ ತಾತ್ವಿಕತೆ' ಕುರಿತು, ಡಾ, ಗೀತಾ ವಸಂತ್ ಅವರು 'ವಚನಕಾರ್ತಿಯರ ವಚನಗಳಲ್ಲಿ ಸ್ತ್ರೀತ್ವದ ಶೋಧನೆ' ಕುರಿತು ಮತ್ತು ಡಾ. ಚಂದ್ರಶೇಖರ ನಂಗಲಿ ಅವರು 'ವಚನ ಸಾಹಿತ್ಯದಲ್ಲಿ ಜಾತಿ ವಿರೋಧಿ ಆಶಯಗಳು' ಕುರಿತು ಮಾತನಾಡಿದರು. ಇವರ ಉಪನ್ಯಾಸಗಳಿಗೆ ಕ್ರಮವಾಗಿ ಡಾ. ಎನ್. ಎಸ್. ಗುಂಡೂರ, ಎಂ.ಸಿ. ಲಲಿತಾ ಮತ್ತು ಡಾ, ಸುರೇಶ ನಾಗಲಮಡಿಕೆ ಪ್ರತಿಕ್ರಿಯೆ ನೀಡಿದರು. ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಕೆ.ಪಿ. ನಟರಾಜ, ಬಾ. ಹ. ರಮಾಕುಮಾರಿ, ಮಲ್ಲಿಕಾ ಬಸವರಾಜು, ಡಾ. ನಾಗಭೂಷಣ ಬಗ್ಗನಡು ಮತ್ತು ಹೊಸಕೆರೆ ರಿಜ್ವಾನ್ ಬಾಷಾ ಅವರು ತಮಗಿಷ್ಟವಾದ ಒಂದು ವಚನವನ್ನು ಓದಿ ಅದರ ಕಿರು ವಿಶ್ಲೇಷಣೆ ಮಾಡಿದರು.

ಸಮಾರೋಪದ ನುಡಿಗಳನ್ನಾಡಿದ ಹಿರಿಯ ಕವಿ. ಕೆ.ಬಿ. ಸಿದ್ಧಯ್ಯನವರು ವಚನಗಳು ಪ್ರಜಾಸತ್ತಾತ್ಮಕ ಸಮಾಜವೊಂದರ ಎಲ್ಲ ಆಶಯಗಳನ್ನೂ ಪ್ರತಿಬಿಂಬಿಸುತ್ತವೆ ಎಂದರು. ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ ಗೌ, ಸಲಹೆಗಾರರಾದ ಗೊ.ರು. ಚನ್ನಬಸಪ್ಪ ಅವರು ಲೋಹಿಯಾ ಮತ್ತು ಶರಣರ ವಿಚಾರಗಳಲ್ಲಿ ಬಹಳ ಸಾಮ್ಯತೆ ಇರುವುದರಿಂದ ಈ ವಿಚಾರ ಸಂಕಿರಣ ಪ್ರಸ್ತುತವಾಗಿದೆ ಎಂದರು.

ಸಮಾರಂಭದ ವಿವಿಧ ಗೋಷ್ಠಿಗಳನ್ನು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಟ್ರಸ್ಟೀಗಳಾದ ಎನ್,ಎಂ. ಕುಲಕರ್ಣಿ, ಎಂ. ರಾಜು, ಸವಿತಾ ನಾಗಭೂಷಣ ಮತ್ತು ಪ್ರೊ. ಜಿ.ಬಿ. ಶಿವರಾಜು ನಿರ್ವಹಿಸಿದರು.

(ವರದಿ : ಎನ್. ಎಂ. **ಕುಲಕರ್ಣಿ**)

(ಈ ಸಂಕಿರಣದ ಮುಖ್ಯ ಉಪನ್ಯಾಸಗಳನ್ನು 'ಹೊಸ ಮನುಷ್ಯ'ದಲ್ಲಿ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು–ಸಂ.)

ಚಂಪಾರಣ್ ಸತ್ಯಾಗ್ರಹ : ನೂರರ ನೆನಪು

ಚಂಪಾರಣ್ ತೋರಿದ ದಾರಿ......

ದ. ಆಫ್ರಿಕಾದಲ್ಲಿ ವರ್ಣಬೇಧ ವಿರೋಧಿ ನೀತಿ ವಿರುದ್ಧದ ಹೋರಾಟಕ್ಕಾಗಿ ಸತ್ಯಾಗ್ರಹವೆಂಬ ಅಹಿಂಸಾತ್ಮಕ ಅಸ್ತ್ರವೊಂದನ್ನು ರೂಪಿಸಿದ ಗಾಂಧಿ ಭಾರತಕ್ಕೆ ವಾಪಸಾದ ನಂತರ ಅದನ್ನು ಮೊದಲ ಬಾರಿಗೆ ಭಾರತದಲ್ಲಿನ ಬ್ರಿಟಿಷ್ ಪ್ರಭುತ್ವದ ವಿರುದ್ಧ ಪ್ರಾಯೋಗಿಕವಾಗಿ ಬಳಸಿ ಯಶಸ್ವಿಯಾದದ್ದು ಚಂಪಾರಣ್‌ನಲ್ಲಿ. ಮುಂದೆ ಮುವ್ವತ್ತು ವರ್ಷಗಳ ಕಾಲ ನಡೆದ ರಾಷ್ಟ್ರೀಯ ಹೋರಾಟಕ್ಕೆ ಚಾಲನೆ ನೀಡಿ, ಅದರ ಸ್ವರೂಪವನ್ನು ನಿರ್ಧರಿಸಿದ ಈ ಸತ್ಯಾಗ್ರಹ ಗಾಂಧಿ ಯುಗಪುರುಷನಂತೆ ಜನರ ಮಧ್ಯೆ ಬೆಳೆಯಲು ಇಲ್ಲಿ ಭೂಮಿಕೆ ಸಿದ್ಧವಾದ ಪರಿಯನ್ನು ಚಂಪಾರಣ್‌ಗೇ ಸೇರಿದ ಪತ್ರಕರ್ತರೊಬ್ಬರು 'ಪಯೊನೀರ್' ಪತ್ರಿಕೆಗಾಗಿ ಬರೆದ ಈ ಲೇಖನದಲ್ಲಿ ನಿರೂಪಿಸಿದ್ದಾರೆ–ಸಂಪಾದಕ



ಚಂಪಾರಣ್‌ನಲ್ಲಿ ಗಾಂಧಿ ಪ್ರವಾಸದ ಅಪರೂಪದ ಚಿತ್ರ ಗಾಂಧಿಯ ಎಡಗಡೆ ಇರುವವರೇ ಇಲ್ಲಿಗೆ ಗಾಂಧಿಯವರನ್ನು ಕರೆತಂದ ರಾಜ್‌ಕುಮಾರ್ ಶುಕ್ಲ

ಚಂಪಾರಣ್ ಎಂಬುದು ಒಂದು ಕಡೆ ಉತ್ತರ ಪ್ರದೇಶದ ಪೂರ್ವಗಡಿಯನ್ನೂ ತನ್ನ ಉತ್ತರದಲ್ಲಿ ನೇಪಾಳದ ಗಡಿಯನ್ನೂ ಹೊಂದಿರುವ ಬಿಹಾರದ ಉತ್ತರ ತುದಿಯಲ್ಲಿರುವ ಒಂದು ಪ್ರದೇಶ. ಮೋಹನದಾಸ ಕರಮಚಂದ ಗಾಂಧಿ, ಈ ಪ್ರಯೋಗ ಭೂಮಿಯಿಂದಲೇ ಅವರ ಲಕ್ಷಾಂತರ ಅನುಯಾಯಿಗಳಿಗೆ ಪ್ರೀತಿಯ ಬಾಪೂ ಅಥವಾ ಗಾಂಧೀಜಿ ಆದದ್ದು. ಈ ಜಿಲ್ಲೆಯಲ್ಲಿ ಅವರು ನಡೆಸಿದ ಸತ್ಯಾಗ್ರಹದಿಂದಾಗಿಯೇ ಸಾಮಾನ್ಯನಾಗಿದ್ದ ಗಾಂಧಿ 'ಮಹಾತ್ಮ'ನಾದದ್ದು. ಕುತೂಹಲದ ಸಂಗತಿ ಎಂದರೆ, ೧೯೧೭ರ ಏಪ್ರಿಲ್‌ನಲ್ಲಿ ಅಲ್ಲಿಗೆ ಭೇಟಿ ನೀಡುವವರೆಗೂ ಗಾಂಧಿ, ಚಂಪಾರಣ್‌ನ ಹೆಸರನ್ನೇ ಕೇಳಿರಲಿಲ್ಲವಂತೆ! ಹಾಗೆಂದು ಅವರೇ ತಮ್ಮ ಆತ್ಮಚರಿತ್ರೆ 'ನನ್ನ ಸತ್ಯಾನ್ವೇಷಣೆ'ಯಲ್ಲಿ ಬರೆದುಕೊಂಡಿದ್ದಾರೆ.

ಕಳೆದ ಶತಮಾನದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಉಪಯೋಗಿಸಲಾದ ಅತ್ಯಂತ ಶಕ್ತಿಯುತವಾದ ಹತಾರವೆಂದರೆ, ಸತ್ಯಾಗ್ರಹ ಅಥವಾ ಅನ್ಯಾಯದ ಆಡಳಿತಕ್ಕೊಡ್ಡಿದ ಅಹಿಂಸಾತ್ಮಕ ಪ್ರತಿರೋಧ. ಚಂಪಾರಣ್‌ನಲ್ಲಿ ಅದನ್ನು ಮೊಟ್ಟಮೊದಲ ಬಾರಿಗೆ ಬಹಳ ದೊಡ್ಡಮಟ್ಟದಲ್ಲಿ ಪ್ರಾಯೋಗಿಕವಾಗಿ ಬಳಸಲಾಯಿತು. ಬೌದ್ಧಾವಶೇಷಗಳಿಗೆ, ಕಾಡುಗಳಿಗೆ, ಮಾವಿನ ತೋಪುಗಳಿಗೆ ಮತ್ತು ಫಲವತ್ತಾದ ಕೃಷಿ ಭೂಮಿಗೆ ಹೆಸರಾಗಿದ್ದ ಚಂಪಾರಣ್ ಹೊಸದಾಗಿ ಐತಿಹಾಸಿಕ ಮಹತ್ವ ಪಡೆದದ್ದೇ ಗಾಂಧೀಜಿ ತಮ್ಮ ಸತ್ಯಾಗ್ರಹವೆಂಬ ಅತ್ಯಂತ ಶಕ್ತಿಯುತವಾದ ಹತಾರವನ್ನು ತುಂಬ ದೊಡ್ಡ ಪ್ರಮಾಣದಲ್ಲಿ ಒರೆಗೆ ಹಚ್ಚಿದ್ದು ಇಲ್ಲೇ ಎಂಬ ಕಾರಣದಿಂದಾಗಿ. ಇಂದು ಅನೇಕ ಗಾಂಧಿವಾದಿಗಳು ಇದನ್ನು ಅಣುಬಾಂಬಿಗಿಂತ ಹೆಚ್ಚು ಶಕ್ತಿಯುತವಾದದ್ದೆಂದು ಬಣ್ಣಿಸುತ್ತಾರೆ. ಸತ್ಯಾಗ್ರಹವೆಂಬ ಹತಾರವೇ, ಮಧ್ಯಮಾವಧಿ ಮತ್ತು ದೀರ್ಘಾವಧಿಯವರೆಗೆ ಆಡಳಿತ ನಡೆಸಲು ಹಾಕಿಕೊಂಡ ಸಾಮ್ರಾಜ್ಯಶಾಹಿಯ ನೈತಿಕ ಚೌಕಟ್ಟನ್ನು ನಾಶಮಾಡಿದ್ದು ಎಂದು ಗಾಂಧಿವಾದಿಗಳು ಪ್ರತಿಪಾದಿಸುತ್ತಾರೆ. ಚಂಪಾರಣ್‌ನಲ್ಲಿ ಆರಂಭಗೊಂಡ ಈ ಪ್ರತಿರೋಧದ ಅಲೆ ಮಿಂಚಿನಂತೆ ಹರಡಿ ತಿಂಗಳೊಪ್ಪತ್ತಿನಲ್ಲೇ ೧೯೧೮ರಲ್ಲಿ ಗುಜರಾತ್‌ನ ಖೇಡಾ ಎಂಬಲ್ಲಿ ಪ್ರತಿಧ್ವನಿಸಿತು. ಅಷ್ಟೇ ಅಲ್ಲ, ೧೯೪೭ರ ತನಕ ಇಡೀ ಸ್ವಾತಂತ್ರ್ಯ ಹೋರಾಟದುದ್ದಕ್ಕೂ ದೇಶದ ನಾನಾ ಭಾಗಗಳಲ್ಲಿ ಅದು ಮುಂದುವರೆಯಿತು.

ಇಂಡಿಗೋ (ನೀಲಿ) ಬೆಳೆಯನ್ನು ಬೆಳೆಯುತ್ತಿದ್ದ ಬ್ರಿಟಿಷ್ ಭೂಮಾಲೀಕರ ವಿರುದ್ಧ, ೧೯೧೭ರ ಬಿರುಬೇಸಿಗೆಯ ಏಪ್ರಿಲ್ ತಿಂಗಳಿನಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ನಡೆಸಿದ ಚಂಪಾರಣ್ ಸತ್ಯಾಗ್ರಹಕ್ಕೀಗ ನೂರರ ಸಂಭ್ರಮ. ಇಂಥ ಹೊತ್ತಿನಲ್ಲಿ ಈ ಜಿಲ್ಲೆಗೆ ಸಂಬಂಧಿಸಿದಂತೆ ನನಗೆ ನನ್ನ ಬಾಲ್ಯದ ನೆನಪುಗಳು ನುಗ್ಗಿಬರತೊಡಗಿವೆ.

ನಾನು ಇದೇ ಜಿಲ್ಲೆಯವನೇ. ಶುಕ್ಲ ಮನೆತನದವನು. ಆದರೆ ರಾಜ್ ಕುಮಾರ್ ಶುಕ್ಲಾರ ಕುಟುಂಬದವನಲ್ಲ. ವಾಸ್ತವವಾಗಿ ರಾಜ್ ಕುಮಾರ್ ಶುಕ್ಲಾರ ನಿರಂತರ ಪ್ರಯತ್ನವೇ ಮಹಾತ್ಮ ಗಾಂಧಿಯನ್ನು ಈ ಜಿಲ್ಲೆಗೆ ಕರೆತಂದಿದ್ದು. ರಾಜ್ ಕುಮಾರ್ ಶುಕ್ಲಾ ಒಬ್ಬ ರೈತ ಮತ್ತು ಲೇವಾದೇವಿದಾರರಾಗಿದ್ದರು. ಇಂದು ಪಶ್ಚಿಮ ಚಂಪಾರಣ್‌ನ ಕೇಂದ್ರವಾಗಿರುವ ಬೆಟಿಯಾದ ಹತ್ತಿರವಿರುವ ಚನ್‌ಪಟಿಯಾದ ಸಮೀಪದ ಒಂದು ಸಣ್ಣ ಹಳ್ಳಿಯಲ್ಲಿ ಬದುಕಿದ್ದ ಅವರು ಪಟ್ಟುಬಿಡದೆ ಗಾಂಧಿಯವರ ಹಿಂದೆಬಿದ್ದದ್ದರಿಂದ 'ಕಲ್ಕತ್ತಾದ ಈ ಜಿಲ್ಲೆಗೆ ಬರುತ್ತೇನೆ' ಎಂದು ಕೊನೆಗೆ ಗಾಂಧಿ ಮಾತು ಕೊಡಲೇಬೇಕಾಯಿತು. "ನಿರಕ್ಷರಿಯಾದ ಆದರೆ ದೃಢನಿರ್ಧಾರದ ಈ ರೈತ ನನ್ನ ಮನಸ್ಸನ್ನು ಗೆದ್ದರು" ಎಂದು, ಕಾನ್ಪುರದಲ್ಲಿ ನಡೆದ ೧೯೧೬ರ ಲಕ್ನೋ ಕಾಂಗ್ರೆಸ್ ಸಮಾವೇಶದಲ್ಲಿ ಶುಕ್ಲಾರೊಂದಿಗಿನ ಭೇಟಿಯನ್ನು ನೆನೆಯುತ್ತಾ, ತಮ್ಮ ಆತ್ಮಕತೆ 'ನನ್ನ ಸತ್ಯಾನ್ವೇಷಣೆ'ಯಲ್ಲಿ ಬರೆಯುತ್ತಾರೆ. ಲಕ್ನೋ ಸಮಾವೇಶದ ನಂತರ ಕಲ್ಕತ್ತಾಗೆ ಹೋದ ಗಾಂಧಿ ಅಲ್ಲಿಂದ ರೈಲಿನಲ್ಲಿ ಪಾಟ್ನಾಗೆ ಬಂದು ನಂತರ ಚಂಪಾರಣ್ ಜಿಲ್ಲೆಯ ಮೋತಿಹಾರಿ ಎಂಬಲ್ಲಿಗೆ ಬರುತ್ತಾರೆ. ಈ ಎಲ್ಲಾ ಭೇಟಿಗಳಲ್ಲೂ ಶುಕ್ಲಾ ಅವರದ್ದು ಒಂದೇ ಕೋರಿಕೆ–ಗಾಂಧಿ ಚಂಪಾರಣ್‌ಗೆ ಬರಬೇಕು, ಶೋಷಿತ ರೈತರ ನಾಡಿಮಿಡಿತವನ್ನು ಗ್ರಹಿಸಬೇಕು ಮತ್ತು ಏನಾದರೂ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಅದಕ್ಕೆ ಒಪ್ಪಿದ ಗಾಂಧಿ, ಪ್ರಮುಖ ನಾಯಕರುಗಳಾಗಿದ್ದ ರಾಜೇಂದ್ರ ಪ್ರಸಾದ್, ಅನುರಾಗ್ ನಾರಾಯಣ್ ಸಿನ್ಹಾ, ಜೆ.ಬಿ.ಕೃಪಲಾನಿ ಮತ್ತಿತರರೊಂದಿಗೆ ಚಂಪಾರಣ್‌ಗೆ ಬಂದರು. ಅಲ್ಲಿ ಗೇಣಿದಾರರಾಗಿದ್ದ ರೈತರನ್ನು ಶೋಷಿಸುತ್ತಿದ್ದ ತೀನ್‌ಕಥಿಯಾ ವ್ಯವಸ್ಥೆ ಮತ್ತು ಬೇರೆ ಬೇರೆ ರೀತಿಯ ತೆರಿಗೆ ಮತ್ತು ಸೇವಾ ತೆರಿಗೆಗಳನ್ನು ವಿಧಿಸುತ್ತಿದ್ದ ಆಗಿನ ಸರ್ಕಾರದ ಕ್ರಮಗಳನ್ನು ವಿರೋಧಿಸಬೇಕಿತ್ತು. ತೀನ್‌ಕಥಿಯಾ ವ್ಯವಸ್ಥೆಯ ಶೋಷಣೆ ಏನೆಂದರೆ, ಆಗ್ಗೆ ಸುಮಾರು ೬೦ವರ್ಷಗಳಿಂದಲೂ, ತಮ್ಮ ಪ್ರತಿ ೨೦ ಭಿಗಾ ಭೂಮಿಯಲ್ಲಿ ೩ ಭಿಗಾ ಜಮೀನಿನಷ್ಟು ಭಾಗದಲ್ಲಿ ಪ್ರತಿಯೊಬ್ಬ ರೈತನೂ ಇಂಡಿಗೋ ಬೆಳೆಯನ್ನು ಬೆಳೆಯಲೇಬೇಕೆಂಬ ನಿಯಮವನ್ನು ಹೇರಲಾಗಿತ್ತು. ಆ ಇಂಡಿಗೋ ಗಿಡಗಳನ್ನು ಸ್ವಚ್ಛಗೊಳಿಸುವುದೇ ಸಾಕಷ್ಟು ಸಮಯವನ್ನು ತಿನ್ನುತ್ತಿತ್ತು ಮತ್ತು ಅದನ್ನು ಒಣಗಿಸಿ ಕೊನೆಗೆ ಕೈಗಾರಿಕೀಕರಣಗೊಂಡ ಯೂರೋಪ್‌ನ ಉಪಯೋಗಕ್ಕಾಗಿ ವ್ಯವಸ್ಥಿತವಾಗಿ ಕಟ್ಟಿಡಬೇಕಾಗಿತ್ತು. ಇದೆಲ್ಲವನ್ನೂ ಬಲಾತ್ಕಾರದಿಂದ ಅಕ್ಷರಶಃ ಮುಕ್ಕಟೆಯಾಗಿ

ದುಡಿಸಿಕೊಳ್ಳಲಾಗುತ್ತಿತ್ತು. ಹಿಂದೆ ಆ ಶತಮಾನದ ಆರಂಭದಲ್ಲಿ ತಮಗೆ ತಾವೇ ಸ್ವಲ್ಪಮಟ್ಟಿಗೆ ಸಂಘಟನೆಗೊಂಡ ರೈತರು ಒಂದೆರಡು ಬಾರಿ ಪ್ರತಿಭಟನೆ ಮಾಡಿದ್ದರಾದರೂ, ಪೊಲೀಸ್ ಬಲವನ್ನು ಬಳಸಿಕೊಂಡು ಅವರನ್ನು ಹತ್ತಿಕ್ಕಲಾಗಿತ್ತು.

ಈ ಸಂದರ್ಭದಲ್ಲಿ ಎರಡು ವಿದ್ಯಮಾನಗಳು ಒಮ್ಮೆಗೇ ಜರುಗಿದವು. ಇತ್ತ ಗಾಂಧೀಜಿಯ ಸತ್ಯಾಗ್ರಹದ ಒತ್ತಡದಿಂದಾಗಿ ಬ್ರಿಟಿಷ್ ಆಡಳಿತವು ತನ್ನ ಪಟ್ಟು ಸಡಿಲಿಸಿ ತೀನ್‌ಕಥಿಯಾ ವ್ಯವಸ್ಥೆಯನ್ನು ರದ್ದುಪಡಿಸಬೇಕಾಯಿತು. ಅದೇ ಸಮಯಕ್ಕೆ ಅತ್ತ ಕೈಗಾರಿಕೀಕರಣಗೊಂಡ ಪಶ್ಚಿಮದಲ್ಲಿ ರೈತರ ಶೋಷಣೆಯಿಂದ ಮುಕ್ತವಾದ ಅಗ್ಗದ ಕೃತಕ ಬಣ್ಣಕಾರಕವನ್ನು ವ್ಯಾಪಕವಾಗಿ ಬಳಕೆಗೆ ತರಲಾಯಿತು. ಸುಮಾರು ೧೯೩೦ರ ಹೊತ್ತಿಗೆ, ಬೇಡಿಕೆಯೇ ಇಲ್ಲದೇ ಚಂಪಾರಣ್‌ನಲ್ಲಿ ಇಂಡಿಗೋ ಬೆಳೆ ಬೆಳೆಯುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಆದರೆ, ಇಂಡಿಗೋ ಬೆಳೆಯುತ್ತ ಅದರ ಉಸ್ತುವಾರಿಗಾಗಿ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ಅಲ್ಲೇ ನೆಲೆಸಿದ್ದ 'ಬಿಳಿ' ಬೆಳೆಗಾರರನ್ನು ತೃಪ್ತಿಪಡಿಸುವುದಕ್ಕಾಗಿ ಬ್ರಿಟಿಷರು ಮತ್ತೆ ಒಂಬತ್ತು ಸಕ್ಕರೆ ಗಿರಣಿಗಳನ್ನು ಆರಂಭಿಸಿದರು. ಪ್ರತಿ ಬಂಗಲೆಗೂ ಒಬ್ಬ ಪರಿವಾರ ಸಮೇತನಾದ ಬ್ರಿಟಿಷ್ ಯಜಮಾನನಿರುತ್ತಿದ್ದು, ಅವರಿಗೆ ಸ್ಥಳೀಯ ಪೊಲೀಸ್ ಬೆಂಬಲವೂ ಇತ್ತು. ಪ್ರತಿ ಬಂಗಲೆಗೂ ನೂರಾರು ಎಕರೆ ಭೂಮಿಯ ಒಡೆತನವಿತ್ತು. ಇಂಡಿಗೋ ಬೆಳೆ ನಿಂತ ಮೇಲೆ ಅಲ್ಲೆಲ್ಲ ಕಬ್ಬಿನ ವಾಣಿಜ್ಯ ಕೃಷಿ ಆರಂಭಿಸಲಾಯಿತು.

೧೯೧೭ ರ ಏಪ್ರಿಲ್‌ನಲ್ಲಿ ಚಂಪಾರಣ್‌ನಲ್ಲಿ ಉಳಿದಿದ್ದ ಗಾಂಧೀಜಿ ಭಿತಿಹರ್ವಾದಲ್ಲಿ ಆಶ್ರಮವೊಂದನ್ನು ಕಟ್ಟಿದರು. ಆ ಮೂಲಕ ಅಲ್ಲಿದ್ದ ಅಸ್ಪೃಶ್ಯತೆಯ ವಿರುದ್ಧ ಅಭಿಯಾನವನ್ನು ಹಮ್ಮಿಕೊಂಡರು. ಹಾಗೆಯೇ ಶಿಕ್ಷಣ, ಶುಚಿತ್ವ ಮತ್ತು ಆರೋಗ್ಯಕ್ಕೆ ಒತ್ತು ನೀಡಿದರು. ಹೆಂಡತಿ ಕಸ್ತೂರಬಾರ ಸಹಾಯದೊಂದಿಗೆ ಗಾಂಧೀಜಿ ಅಲ್ಲಿ ಅನೇಕ ತಳಮಟ್ಟದ ಅಗತ್ಯ ಶಿಕ್ಷಣದ ಬೋಧನಾ ಶಾಲೆಗಳನ್ನು ತೆರೆದರು. ಇಲ್ಲೇ ಮೊಟ್ಟಮೊದಲ ಬಾರಿಗೆ ಕೆಲ ಶ್ರೀಮಂತ ರೈತರು ದಾನವಾಗಿ ಕೊಟ್ಟ ಜಾಗದಲ್ಲಿ ಜೀವನ ಕೌಶಲಗಳನ್ನು ಕಲಿಸುವ ಶಾಲೆಗಳನ್ನು ತೆರೆದದ್ದು. ಗಾಂದಿಯವರ 'ರಚನಾತ್ಮಕ' ಚಟುವಟಿಕೆ ಎಂದು ಕರೆಸಿಕೊಳ್ಳುವ ಎಲ್ಲವೂ ಇಲ್ಲಿಯೇ ಆರಂಭವಾದದ್ದು ಮತ್ತು ಅದರ ಹಿಂದಿನ ವಿಚಾರಗಳು ಗಟ್ಟಿಗೊಂಡದ್ದು. ಮುಂದಿನ ದಿನಗಳಲ್ಲಿ ಅದು ರಾಷ್ಟ್ರಪಿತನ ವಿಶಿಷ್ಟಲಕ್ಷಣವಾಗಿ ಜನಮಾನಸದಲ್ಲಿ ಅಚ್ಚೊತ್ತಿತು.

ಗಾಂಧೀಜಿಯವರು ರೈತರ ಹೊಲಗದ್ದೆಗಳಿಗೇ ತೆರಳಿ ಅಲ್ಲಿಯೇ ಅವರ ಶೋಷಣೆಯ ಬಗೆಗೆ ಅಂದಾಜಿಸುತ್ತಾ, ರೈತರೊಂದಿಗೆ ಮಾತುಕತೆ ನಡೆಸಿ ಅವರನ್ನು ಸಂಘಟಿಸುತ್ತಿದ್ದಾಗ, ಅವರ ಮೇಲೆ ಪ್ರಭುತ್ವವು ಅಶಾಂತಿ ನಿರ್ಮಾಣದ ಆರೋಪ ಹೊರಿಸಿತು. ಬ್ರಿಟಿಷರು ಗಾಂಧೀಜಿಯವರನ್ನು ಬಂಧಿಸುತ್ತಾರೆ ಎನ್ನುವ ಸುದ್ದಿಯು ಬಾಯಿಂದ ಬಾಯಿಗೆ ಹರಡಿ, ಜಿಲ್ಲೆಯ ಮೂಲೆಮೂಲೆಗಳಿಂದ ರೈತರು ಪ್ರವಾಹದೋಪಾದಿಯಲ್ಲಿ ಹರಿದುಬಂದು ಜಿಲ್ಲಾ ಕೋರ್ಟ್ ಮುಂಭಾಗದಲ್ಲಿ ಜಮಾಯಿಸಿದ್ದರು. ಹಾಗೆ ಮೋತಿಹಾರಿಯಲ್ಲಿ ಗಾಂಧೀಜಿಯವರನ್ನು ಬೆಂಬಲಿಸಿ ನಡೆದ ಬೃಹತ್ ಪ್ರದರ್ಶನವು, ಅಲ್ಲಿನ ನ್ಯಾಯಾಂಗ ಅಧಿಕಾರಿಯು ಗಾಂಧೀಜಿಯ ವಿರುದ್ಧದ ಪ್ರಕರಣವನ್ನು ಕೈಬಿಡುವಂತೆ ಮಾಡಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ರೌಲತ್ ಕಾಯಿದೆ ವಿರುದ್ಧದ ಪ್ರತಿಭಟನೆಯ ವೇಳೆ ಬಹಳಷ್ಟು ಬಾರಿ ಸತ್ಯಾಗ್ರಹದ ಮಾತು ಬಂದಿದ್ದರೂ, ಚಂಪಾರಣ್ ಸತ್ಯಾಗ್ರಹವೇ ದೊಡ್ಡಮಟ್ಟದಲ್ಲಿ ನಡೆದ ವಿಶ್ವದ ಮೊದಲ ಅಹಿಂಸಾತ್ಮಕ ಹೋರಾಟಕ್ಕೆ ನಾಂದಿ ಹಾಡಿದ್ದು.

ಚಂಪಾರಣ್‌ಗೆ ಗಾಂಧೀಜಿಯನ್ನು ಕರೆತಂದ ರಾಜ್ ಕುಮಾರ್ ಶುಕ್ಲಾ, ಗಾಂಧಿ ಅಲ್ಲಿಂದ ತೆರಳಿದ ನಂತರವೂ ಬ್ರಿಟಿಷ್ ಆಡಳಿತದ ವಿರುದ್ಧ ಜನರನ್ನು ಸಂಘಟಿಸುವ ತಮ್ಮ ಪ್ರಯತ್ನವನ್ನು ಮುಂದುವರಿಸಿದ್ದರು. ಅವರು ೧೯೧೯ರ ರೌಲತ್ ಕಾಯಿದೆ ವಿರುದ್ಧದ ಪ್ರತಿಭಟನೆಯಲ್ಲೂ ಮತ್ತು ೧೯೨೦ರಲ್ಲಿ ನಡೆದ ಅಸಹಕಾರ ಚಳುವಳಿಯಲ್ಲೂ ಪಾಲ್ಗೊಂಡಿದ್ದರು. ೧೯೨೯ರಲ್ಲಿ ಚಿಕ್ಕ ವಯಸ್ಸೆಂದೇ ಹೇಳಬಹುದಾದ ತಮ್ಮ ೫೪ರ ಹರೆಯದಲ್ಲೇ ನಿಧನರಾದರು. ಚಂಪಾರಣ್ ಜಿಲ್ಲೆಗೆ ಒಂದು ಶ್ರೀಮಂತ ಪರಂಪರೆಯನ್ನೇ ಬಿಟ್ಟುಕೊಟ್ಟು, ಜನ ಇಂದಿಗೂ ಬಹಳ ಪ್ರೀತಿಯಿಂದ ಅವರನ್ನು ನೆನೆಯುವಂತೆ ಮಾಡಿಹೋದರು.

ಗಾಂಧೀಜಿಯವರು ಚಂಪಾರಣ್‌ನಲ್ಲಿ ಬ್ರಿಟಿಷ್ ಇಂಡಿಗೋ ಬೆಳೆಗಾರರ ವಿರುದ್ಧ ಯಶಸ್ವಿಯಾಗಿ ಸತ್ಯಾಗ್ರಹ ನಡೆಸಿ ಅಲ್ಲಿಂದ ತೆರಳಿ ಬಹುಕಾಲವಾದರೂ ಹಲವು ವರ್ಷಗಳು, ದಶಕಗಳ ತನಕ ಅವರು ಆ ಜಿಲ್ಲೆಗೆ ಮಾಡಿದ ಉಪಕಾರವನ್ನು ಬಣ್ಣಬಣ್ಣವಾಗಿ ಚಿತ್ರಿಸುತ್ತಾ ಸಾಗಿತ್ತು ಅಲ್ಲಿನ ಮೌಖಿಕ ಪರಂಪರೆ. ಗಾಂಧಿಯವರನ್ನು ಒಬ್ಬ 'ಉದ್ಧಾರಕ'ನನ್ನಾಗಿ ಕಂಡರು ಅಲ್ಲಿಯವರು. ಅವರ ಉಪಸ್ಥಿತಿಯು ಆ ಜಿಲ್ಲೆಯ ಮತ್ತು ರಾಜ್ಯದ ರಾಜಕೀಯದಲ್ಲಿ ಮಾದರಿ ಬದಲಾವಣೆಗಳನ್ನು ತಂದಿತು.

ಈ ಮೌಖಿಕ ಪರಂಪರೆಯಿಂದಾಗಿಯೇ ನನ್ನ ಮುತ್ತಜ್ಜ ಪಂಡಿತ್ ಭೋಲಾ ಶುಕ್ಲಾ ಮತ್ತು ನನ್ನ ಅಜ್ಜ ಸತ್ಯನಾರಾಯಣ್ ಶುಕ್ಲಾರ ಮೂಲಕ ಹಲವಾರು ಕತೆಗಳು ನನ್ನ ಕಿವಿಗೆ ಬಿದ್ದದ್ದು. ಅದರಲ್ಲಿ ಕೆಲವು ಐತಿಹಾಸಿಕ ಸತ್ಯಗಳಿವೆ, ರೈತರು ಕಂಡ ಮತ್ತು ಸಾಕ್ಷಿಯಾಗಿದ್ದ ಘಟನೆಗಳ ಕೆಲ ಕಥನಗಳಿವೆ. ೧೯೧೭ರ ಏಪ್ರಿಲ್‌ನಲ್ಲಿ ಚಂಪಾರಣ್ ಸತ್ಯಾಗ್ರಹವಾದಾಗ ನನ್ನ ಮುತ್ತಜ್ಜ ಇನ್ನೂ ಮೀಸೆ ಮೂಡದ ಎಳೆಯ ಯುವಕನಾಗಿದ್ದರೂ, ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿಲ್ಲದಿದ್ದರೂ, ಪ್ರತ್ಯಕ್ಷದರ್ಶಿಗಳ ವಿವರಣೆಗಳು ಎಷ್ಟು ತೀವ್ರವಾಗಿತ್ತೆಂದರೆ, ದಶಕಗಳ ನಂತರವೂ ಆ ಕಥೆಗಳನ್ನು ಹೇಳುತ್ತಾಹೋದರು ನನ್ನ ಮುತ್ತಜ್ಜ. ಗಾಂಧೀಜಿ ಯಾವ ಬಟ್ಟೆ ತೊಟ್ಟಿದ್ದರು, ಏನು ತಿಂದರು, ಆನೆಯ ಮೇಲೆ, ಎತ್ತಿನ ಮತ್ತು ಕುದುರೆ ಗಾಡಿಯ ಮೇಲೆ ಹೇಗೆ ಪಯಣಿಸಿದರು, ಮೋತಿಹಾರಿಗೆ ಬಂದಮೇಲೆ ಬೆಟಿಯಾದಲ್ಲಿ ಹಜಾರಿಮಲ್ ಧರ್ಮಶಾಲೆಯಲ್ಲಿ ಹೇಗೆ ತಂಗಿದ್ದರು ಇತ್ಯಾದಿ ಇತ್ಯಾದಿ.

ನನ್ನ ಮುತ್ತಜ್ಜನ ಮತ್ತು ಅಜ್ಜನ ಮೌಖಿಕ ಕಥನ ಸಂಪ್ರದಾಯದಲ್ಲಿ ಗಾಂಧೀಜಿಯವರ ಮಾಂತ್ರಿಕವೆಂದು ಕರೆಯಲ್ಪಡುತ್ತಿದ್ದ ಶಕ್ತಿಗಳನ್ನು ಕುರಿತ ಕತೆಗಳೂ ಇದ್ದವು. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟುಹೋಗುತ್ತಾರೆ ಎಂದು ಚಂಪಾರಣ್‌ನ ಹಳ್ಳಿಗಾಡಿನ ಜನ ಹೇಗೆ ನಂಬಿದ್ದರು ಮತ್ತು ಹೇಗೆ ಅವರೆಲ್ಲಾ ಗಾಂಧೀಜಿಯ ಲಾಠಿಯ ಬಗ್ಗೆ ಭಯಭೀತರಾಗಿದ್ದರು(ಚಂಪಾರಣ್‌ಗೆ ಬಂದಾಗ ಮಹಾತ್ಮಾ ಗಾಂಧಿಗೆ ಇನ್ನೂ ೪೮ವರ್ಷ ವಯಸ್ಸು ಮತ್ತು ಆಗ ಅವರು ಕೈಯಲ್ಲಿ ಕೋಲನ್ನು ಹಿಡಿಯುತ್ತಿರಲಿಲ್ಲವಾದರೂ...!), ಕೆಲ ಹೆಣ್ಣು ಮಕ್ಕಳು ಹೇಗೆ ಅವರನ್ನು ತಮ್ಮ ಕಷ್ಟಗಳನ್ನು ನೀಗಿಸುವ, ರೋಗರುಜಿನಗಳಿಂದ ಪಾರುಮಾಡುವ, ದುರ್ನಡತೆಗಳನ್ನು ನಿವಾರಿಸುವ, ತಮ್ಮ ಕುಟುಂಬಗಳಿಗೆ ಮತ್ತು ಇಡೀ ಆ ಪ್ರದೇಶಕ್ಕೇ ಸಮೃದ್ಧಿಯನ್ನು ತಂದುಕೊಡುವ ಸಂತನೆಂದು ಭಾವಿಸಿದ್ದರು ಇತ್ಯಾದಿ.

ಒಂದು ಕಾಲಾವಧಿಯಲ್ಲಿ ಗಾಂಧಿ ಮಹಾತ್ಮನಾಗಿ ರೂಪಾಂತರ ಹೊಂದುವಲ್ಲಿ ಈ ದಂತ ಕಥೆಗಳು ಮತ್ತು ಮೌಖಿಕ ಕಥನಗಳ ಪಾತ್ರ ಬಹಳ ಮುಖ್ಯವಾದದ್ದು. ಯಾವುದೇ ಸಾಮಾಜಿಕ ಚಳುವಳಿಯಲ್ಲಿ ಇದು ಬಹಳ ಮುಖ್ಯ. ಚಂಪಾರಣ್‌ನ ಜನರು ಸ್ವಯಂಸ್ಫೂರ್ತಿಯಿಂದ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಲು ಸಾಧ್ಯವಾದದ್ದು ಇದರಿಂದಾಗಿಯೇ. ಮುಂದೆ ಕಾಂಗ್ರೆಸ್ಸಿನ ಮತ್ತು ಗಾಂಧೀಜಿಯವರ ಎಲ್ಲ ಪ್ರತಿಭಟನೆಗಳಲ್ಲಿ – ೧೯೨೦ರ ಅಸಹಕಾರ ಚಳುವಳಿ ಇರಬಹುದು, ೧೯೩೦ರ ನಾಗರಿಕ ಕಾನೂನುಭಂಗ ಚಳುವಳಿ ಇರಬಹುದು, ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಇರಬಹುದು– ಬಹಳ ಬೇಗ ಕಾವು ಏರುತ್ತಿದ್ದುದು ಚಂಪಾರಣ್‌ನಲ್ಲಿ ಮತ್ತು ಅವುಗಳಲ್ಲಿ ಅತಿಹೆಚ್ಚು ಬಂಧನಕ್ಕೊಳಗಾಗುತ್ತಿದ್ದುದು ಇಲ್ಲಿನವರೇ. ನನ್ನ ಮುತ್ತಜ್ಜ ಭೋಲಾ ಶುಕ್ಲಾ ಬಂಧನಕ್ಕೊಳಗಾಗಿ ವರ್ಷಾನುಗಟ್ಟಲೆ ಜೈಲುವಾಸ ಅನುಭವಿಸಿದ್ದು ೧೯೩೦ರಲ್ಲಿ ಮತ್ತು ನಂತರ ೧೯೪೨ರಲ್ಲಿ. ನನ್ನ ಅಜ್ಜ ಸತ್ಯನಾರಾಯಣ್ ಶುಕ್ಲಾ ತಮ್ಮ ಮೂವರು ತಮ್ಮಂದಿರೊಂದಿಗೆ ತಿಂಗಳುಗಳ ಕಾಲ ಜೈಲುವಾಸ ಅನುಭವಿಸಿದ್ದು ೧೯೪೨ರಲ್ಲಿ. ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಒಮ್ಮೆ ತಂದೆ ಮತ್ತು ನಾಲ್ವರು ಮಕ್ಕಳೂ ಬಂಧನಕ್ಕೊಳಗಾಗಿ ಕುಟುಂಬದ ವೃತ್ತಿಯಾಗಿದ್ದ ಕೃಷಿಕಾರ್ಯಗಳನ್ನು ಮನೆಯ ಹೆಣ್ಣುಮಕ್ಕಳೇ ನಿಭಾಯಿಸಬೇಕಾದ ಸಂದರ್ಭವೂ ಬಂದಿತ್ತು.

ಕೊನೆಯ ಮಾತು: ೧೯೪೦ರ ಸುಮಾರಿಗೆ ನನ್ನ ಮುತ್ತಜ್ಜ ಚಂಪಾರಣ್ ಜಿಲ್ಲೆಯ ಸಬಯಾ ಎಂಬ ಹಳ್ಳಿಯಲ್ಲಿ ಬೆನ್ಸನ್ ಎಂಬ ಬ್ರಿಟಿಷನಿಂದ ೬೦ ಭಿಗಾ ಜಮೀನನ್ನು ಖರೀದಿಸಿದರು(ಸುಮಾರು ೯೦ ಎಕರೆ ಭೂಮಿ). ಸತ್ಯಾಗ್ರಹ ಪೂರ್ವದಲ್ಲಿ ಬೆನ್ಸನ್ನನು ಆ ಜಮೀನಿನಲ್ಲಿ ಇಂಡಿಗೋ ಬೆಳೆಯನ್ನು ಬೆಳೆಯುತ್ತಿದ್ದನು ಮತ್ತು ನಂತರದಲ್ಲಿ ಮೊದಲ ಸಕ್ಕರೆ ಗಿರಣಿ ಆರಂಭವಾದಾಗ ಕಬ್ಬನ್ನು ಬೆಳೆಯುತ್ತಿದ್ದನು. ಬ್ರಿಟಿಷ್ ಮಾನದಂಡಗಳಿಗೆ ತಕ್ಕಂತೆ ಬೆಳೆಯು ಲಾಭದಾಯಕವಾಗದೇ ಹೋದಾಗ, ಬೆನ್ಸನ್ನನು ಆ ಜಮೀನನ್ನು ಬೇರೆ ಬೇರೆಯವರಿಗೆ ಮಾರಿ ಇಂಗ್ಲೆಂಡಿಗೆ ಮರಳಿದನು. ಹಲವಾರು ಕುಟುಂಬ ವಿಭಜನೆಗಳ ನಂತರ ನನ್ನ ಪಾಲಿಗೆ ಬಂದಿದ್ದ ಐದು ಎಕರೆ ಜಮೀನನ್ನು ಇನ್ನೂ ಉಳಿಸಿಕೊಂಡಿದ್ದೇನೆ. ಆ ಕಾಲದ ಜಮೀನಿನ ಮೂಲ ಕಡತಗಳ ಪ್ರತಿಗಳಲ್ಲಿ ಇನ್ನೂ ಇಂಡಿಗೋ ಬೆಳೆಗಾರನಾಗಿದ್ದ ಬೆನ್ಸನ್ನನ ಹೆಸರಿದೆ.

(ಕನ್ನಡಾನುವಾದ : ಟಿ.ಎಲ್. ರೇಖಾಂಬ)

ಪ್ರಶ್ನಿಸೋಣ, ಪ್ರತಿಭಟಿಸೋಣ, ತಿಳಿಯೋಣ, ಮತ್ತು ಹುಡುಕಿಕೊಳ್ಳೋಣ.

—ಟಿ.ಎಂ. ಕೃಷ್ಣ

ನಮ್ಮಸಂಗೀತಗಾರರಲ್ಲಿ ಸಾಮಾನ್ಯವಾಗಿ ಕಾಣದ ಸಾಮಾಜಿಕ ವೈಚಾರಿಕತೆಯನ್ನು ಬಹು ಬಿರುಸಾಗಿಯೇ ಪ್ರದರ್ಶಿಸುತ್ತಿರುವ ಕರ್ನಾಟಕ ಸಂಗೀತ ಗಾಯಕ ಟಿ.ಎಂ.ಕೃಷ್ಣ, ೨೦೧೫-೧೬ನೇ ಸಾಲಿನ ಇಂದಿರಾ ಗಾಂಧಿ ರಾಷ್ಟ್ರೀಯ ಐಕ್ಯತಾ ಪ್ರಶಸ್ತಿಯನ್ನು ಪಡೆದವರು. ಪ್ರಶಸ್ತಿ ಸ್ವೀಕಾರ ಸಂದರ್ಭದಲ್ಲಿ ಅವರು ಆಡಿದ ಮಾತುಗಳ ಕನ್ನಡ ಅನುವಾದವನ್ನು ಇಲ್ಲಿ ನೀಡುತ್ತಿದ್ದೇವೆ. -ಸಂ.



ರಾಷ್ಟ್ರೀಯ ಐಕ್ಯತೆಗೆ ನನ್ನ ಕೊಡುಗೆಗೆ ನೀಡುತ್ತಿರುವ ಪ್ರಶಸ್ತಿ ಪಡೆಯಲು ಇಂದು ನಾಟಿಣ ನಿಮ್ಮ ಮುಂದೆ ನಿಂತಿದ್ದೇನೆ. ಅದರ ಸಂಭ್ರಮದಲ್ಲಿ ಹಿಗ್ಗುವ ಮೊದಲು, ನನ್ನ ಪೌರತ್ವದಲ್ಲೇ ಇರುವ ಅಸಮಾನತೆಗಳನ್ನು ಹಾಗೂ ಅಸಮಗ್ರವಾಗಿರುವ ಅಂಶಗಳನ್ನು ಹೇಳಬೇಕೆಂದೆನಿಸಿದೆ. ನಾನೊಬ್ಬ ಸಾಧಾರಣ ಭಾರತೀಯ ಅಂತ ನಂಬಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಅದು ವಾಸ್ತವ ಅಲ್ಲ, ಖಂಡಿತಾ ಅಲ್ಲ. ನಾನು ಒಂದು ಅನುಕೂಲಸ್ಥ ಜಾತಿ ಹಾಗೂ ವರ್ಗದಲ್ಲಿ ಹುಟ್ಟಿದವನು. ಈ ದೇಶದ ಇಂಗ್ಲಿಷ್ ಮಾತನಾಡುವ, ಸಾಂಸ್ಕೃತಿಕವಾಗಿ ಸಬಲನಾಗಿರುವ ವ್ಯಕ್ತಿ ನಾನು. ನಾನಿದನ್ನು ಅರ್ಥಮಾಡಿಕೊಳ್ಳುತ್ತೇನೋ ಇಲ್ಲವೋ ಮತ್ತು ಅದರ ವಾಸ್ತವವನ್ನು ಒಪ್ಪಿಕೊಳ್ಳುತ್ತೇನೆಯೋ ಇಲ್ಲವೋ, ಆದರೆ ಅದು ಸತ್ಯ. ಈ ಎಲ್ಲವೂ ಸೇರಿ ಆಗಿರುವ ಸಂಸ್ಕೃತಿಯಲ್ಲಿನ ಒಬ್ಬ ಗಾಯಕ ನಾನು. ಹಾಗಾಗಿ ಇಂದು ಯಾವುದನ್ನು ಭಾರತೀಯ ಸಂಸ್ಕೃತಿ ಎಂದು ಕರೆಯುತ್ತಾರೋ ಅದರ ಸಂಕೇತ ನಾನಾಗಿದ್ದೇನೆ. ನಾನೊಬ್ಬ ಮನ್ನಣೆ ಪಡೆದಿರುವ ನಾಗರಿಕ. ಒಬ್ಬ ದಲಿತನಾಗುವುದು ಎಂದರೇನು, ಒಬ್ಬ ಮುಸ್ಲಿಂ ಅಥವಾ ಒಬ್ಬ ಬುಡಕಟ್ಟು ಜನಾಂಗದವನು ಆಗುವುದು ಎಂದರೇನು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನಾನು ಪ್ರಯತ್ನಿಸಬಹುದು. ಆದರೆ ಅದು ಎಂದಿಗೂ ಸಾಧ್ಯವಾಗುವುದಿಲ್ಲ. ನಾನೆಂದಿಗೂ ಒಬ್ಬ ಸಾಮಾನ್ಯ ವ್ಯಕ್ತಿಯಾಗುವುದಕ್ಕೆ ಸಾಧ್ಯವಿಲ್ಲ.

ಆದರೆ ನನ್ನ ಕಲೆ, ಕರ್ನಾಟಕ ಸಂಗೀತ ನನಗೊಂದು ಕೊಡುಗೆ ನೀಡಿದೆ. ಆ ಕಲೆಯಿಂದಾಗಿ ನನಗಿರುವ ಮಿತಿಗಳನ್ನು ದಾಟಿಕೊಂಡು ಬದುಕನ್ನು ಅರಿಯುವುದಕ್ಕೆ ನನಗೆ ಸಾಧ್ಯವಾಗಿದೆ. ಅದು ನನಗೆ ಕಾರುಣ್ಯ, ಪರಾನುಭೂತಿ ಮತ್ತು ಬದುಕನ್ನು ಕುರಿತ ಅರಿವನ್ನು ದಯಪಾಲಿಸಿದೆ. ನನ್ನನ್ನು ರೂಪಿಸಿರುವ ನನ್ನ ಕಲೆ, ನನ್ನ ಬದುಕಿನ ಕ್ರಮ, ನನ್ನ ನಂಬಿಕೆಗಳು, ಧರ್ಮ, ಆಚರಣೆ ಹಾಗೂ ಉಳಿದೆಲ್ಲವುಗಳಿಂದ ಆಗಿರುವ ನಾನು ಭಾರತ ಎಂಬ ಮಹಾನ್ ವಿಶ್ವದ ಒಂದು ಕಣ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದರಿಂದಾಗಿ ನನಗೆ ಸಾಧ್ಯವಾಗಿದೆ. ಕಲೆಯ ಉದಾರತೆಯಿಂದಾಗಿ ಇಂದು ನಾನು ನಿಮ್ಮ ಮುಂದಿದ್ದೇನೆ. ಮಾನವ ತೀರಾ ಸಂಕೀರ್ಣವಾದ ಜೀವಿ. ಮಾನವನ ಒಂದು ಭಾಗ ಬೇಕಾದ್ದನ್ನು ತನ್ನದು ಮಾಡಿಕೊಳ್ಳುವುದಕ್ಕೆ, ನಿಯಂತ್ರಿಸುವುದಕ್ಕೆ, ನಿಗ್ರಹಿಸುವುದಕ್ಕೆ, ಶಿಸ್ತಿಗೆ ಒಳಪಡಿಸುವುದಕ್ಕೆ ಹಾಗೂ ಆಜ್ಞಾಪಿಸುವುದಕ್ಕೆಂದು ವಿನ್ಯಾಸಗೊಂಡಿದೆ. ಆದರೆ ಮಾನವನೆಂದರೆ ಇಷ್ಟೇ ಅಲ್ಲ. ಮಾನವನಿಗೆ ಸಂವೇದನಾಶೀಲವಾದ, ಸಹಾನುಭೂತಿಯ ಮತ್ತು ಪರಾನುಭೂತಿಯುಳ್ಳ ಇನ್ನೊಂದು ಸುಂದರವಾದ ಆಯಾಮವೂ ಇದೆ.

ಜೀವನದುದ್ದಕ್ಕೂ ಮನುಷ್ಯ ಇವೆರಡರ ನಡುವೆ ಹೊಯ್ದಾಡುತ್ತಿರುತ್ತಾನೆ. ಕೆಲವೊಮ್ಮೆ ಈ ಮುಖ ಮೇಲುಗೈ ಪಡೆದರೆ ಕೆಲವೊಮ್ಮೆ ಆ ಮುಖ ಮೇಲುಗೈ ಸಾಧಿಸುತ್ತದೆ. ಆದರೆ ಇನ್ನೂ ಆಳದಲ್ಲಿ ನಾವು ನಮಗಾಗಿ ಸೃಷ್ಟಿಸಿಕೊಂಡಿರುವ ಪರಿಸರವೊಂದಿದೆ. ಅದು ನಮ್ಮೊಳಗಿನ ಮನುಷ್ಯತ್ವವನ್ನು ರೂಪಿಸುತ್ತಿರುತ್ತದೆ. ಪ್ರಜಾಪ್ರಭುತ್ವವೆನ್ನುವುದು ಮಹತ್ವಪೂರ್ಣವೂ, ರಾಜಿಮಾಡಿಕೊಳ್ಳಲಾಗದ, ಮಾನವತೆಯ ಸಾಧನ ಎನಿಸಿಕೊಳ್ಳುವುದು ಇಂತಹ ಸನ್ನಿವೇಶಗಳಲ್ಲೇ. ಪ್ರಜಾಪ್ರಭುತ್ವದ ಉದ್ದೇಶವೇ ನಮ್ಮೆಲ್ಲರನ್ನೂ ಇನ್ನೂ ಹೆಚ್ಚೆಚ್ಚು ಮನುಷ್ಯರನ್ನಾಗಿ ಮಾಡುವುದು. ಪ್ರತಿಯೊಬ್ಬ ಪ್ರಜೆ, ಸಮುದಾಯ ಮತ್ತು ಸರ್ಕಾರ ಮಾನವೀಯವಾಗಿರಬೇಕೆಂದು ಪ್ರಜಾಪ್ರಭುತ್ವ ಬಯಸುತ್ತದೆ ಮತ್ತು ಹಾಗಾಗಿಯೇ ಪ್ರಜಾಪ್ರಭುತ್ವವೆನ್ನುವುದು ಸುಲಭವಲ್ಲ. ಅದು ಈ ಹಿಂದೆಯೂ ಸುಲಭವಾಗಿರಲಿಲ್ಲ ಮತ್ತು ಮುಂದೆಯೂ ಸುಲಭವಾಗಿರುವುದಿಲ್ಲ. ಪ್ರಜಾಪ್ರಭುತ್ವವನ್ನು ದಮನಿಸಲು ಪ್ರಯತ್ನಿಸಿದ ಕಾಲಘಟ್ಟದಲ್ಲಿಯೂ ನಾವಿದ್ದೆವು. ೧೯೭೬ರ ಜನವರಿಯಲ್ಲಿ ಹುಟ್ಟಿದ ನಾನು ಅಂತಹ ಸಂಕಷ್ಟದ ದಿನಗಳ ಕೂಸು. ಆದರೇನಂತೆ ನಾವೆಲ್ಲರೂ ಆ ಕಷ್ಟದ ದಿನಗಳನ್ನು ದಾಟಿ, ಮುಂದೆ ಸಾಗಿಬಂದಿದ್ದೇವೆ.

೧೯೮೦ ಮತ್ತು ೯೦ರ ನನ್ನ ಬಾಲ್ಯ ಮತ್ತು ಹರೆಯದ ದಿನಗಳಲ್ಲಿ ರಾಷ್ಟ್ರೀಯ ಐಕ್ಯತೆ ಎನ್ನುವುದು ನನ್ನ ಶಬ್ದಭಂಡಾರದ ಒಂದು ಮಹತ್ತರ ಭಾಗವಾಗಿತ್ತು. ದೇಶದ ವಿಭಿನ್ನ ಪಕ್ಷಗಳ ರಾಜಕೀಯ ಧುರೀಣರು ರಾಷ್ಟ್ರೀಯ ಐಕ್ಯತೆಯನ್ನು ಕುರಿತು ತುಂಬಾ ಉತ್ಸಾಹದಿಂದ ಮಾತನಾಡುತ್ತಿದ್ದರು ಮತ್ತು ಭಾರತಕ್ಕೆ ಅದೆಷ್ಟು ಮುಖ್ಯ ಎನ್ನುವುದನ್ನು ಒತ್ತಿಹೇಳುತ್ತಿದ್ದರು. ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಅಪರಿಮಿತ ಹಿಂಸೆ ಹೊರಚಿಮ್ಮಿದ ನಂತರವೂ ನಾವು ಮತ್ತೆ ಚೇತರಿಸಿಕೊಂಡೆವು. ನಮ್ಮ ನಾಗರಿಕ ಸಮಾಜದಲ್ಲಿನ ಆಂತರಿಕ ಪ್ರಜ್ಞೆ ನಾವೆಲ್ಲರೂ ಒಂದು ಎಂದು ಮತ್ತೆ ಮತ್ತೆ ಹೇಳುತಿತ್ತು. ೧೯೮೪ರಲ್ಲಿ ನಡೆದ ಸಿಖ್ ನರಹತ್ಯೆ ಕುರಿತು ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ಕ್ಷಮಾಯಾಚನೆಯನ್ನು ಈ ಹೊತ್ತಿನಲ್ಲಿ ಉಲ್ಲೇಖಿಸಲೇಬೇಕು. ಅದು ತುಂಬಾ ಚಿಂತನಶೀಲವಾದ ಮತ್ತು ಅಗತ್ಯವಾದ ಹೇಳಿಕೆಯಾಗಿತ್ತು. ಇಂತಹ ಮಾತುಗಳು ಏನನ್ನೂ ಬದಲಾಯಿಸುವುದಿಲ್ಲ ಎಂದು ಕೆಲವರು ಲಘುವಾಗಿ ಹೇಳಬಹುದು. ಹೌದು ಅದು ನೆನ್ನೆಗಳನ್ನು ಬದಲಿಸುವುದಿಲ್ಲ ಆದರೆ ಅದು ನಾಳೆಗಳನ್ನು ಖಂಡಿತವಾಗಿಯೂ ಬದಲಿಸುತ್ತದೆ. ತನ್ನ ಅಧಿಕಾರದ ಅವಧಿಯಲ್ಲಿ ನಡೆದ ನರಹತ್ಯೆಯ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿ ಕ್ಷಮೆಯಾಚಿಸುವ ವಿನಯವಿಲ್ಲದ ನಾಯಕನಿಗೆ ಎಂದೂ ಜನರನ್ನು ಒಂದುಗೂಡಿಸುವುದಕ್ಕೆ ಸಾಧ್ಯವಿಲ್ಲ. ಆದರೆ ನಾವು ಹೊಸ ಸಹಸ್ರಮಾನಕ್ಕೆ ಕಾಲಿಡುತ್ತಿರುವ ಈ ಕಾಲಘಟ್ಟದಲ್ಲಿ ರಾಷ್ಟ್ರೀಯ ಐಕ್ಯತೆಯ ಕಲ್ಪನೆ ತನ್ನ ಹೊಳಪನ್ನು ಕಳೆದುಕೊಂಡಿದೆ. ಇದನ್ನು ತುಂಬಾ ವಿಷಾದದಿಂದ ಹೇಳುತ್ತಿದ್ದೇನೆ. ಇದು ಯಾರನ್ನು ಆಕರ್ಷಿಸುತ್ತಿಲ್ಲ. ಈಗ ಇದು ಯಾರಿಗೂ ಮುಖ್ಯವಾಗಿಲ್ಲ. ಬಹುಶಃ ನಮ್ಮ ಸಮನ್ವಯ ಸಂಸ್ಕೃತಿ ಅಭೇಧ್ಯವಾದುದು ಎನ್ನುವ ಬಗ್ಗೆ ನಮ್ಮ ಅಹಂಕಾರ ಮತ್ತು ನಂಬಿಕೆ ಸ್ವಲ್ಪ ಅತಿಯಾಯಿತೆಂದು ನನಗನಿಸುತ್ತದೆ.

ಅಭಿವೃದ್ಧಿಯನ್ನು ಕುರಿತು ನಮ್ಮ ಕಾಳಜಿ ಸ್ವಲ್ಪ ಹೆಚ್ಚಾಯಿತು ಅನ್ನಿಸುತ್ತದೆ. ರಾಷ್ಟ್ರೀಯ ಐಕ್ಯತೆಯೆನ್ನುವುದು ಬಲು ಬೇಗ ಹಳತಾಗಿಬಿಟ್ಟಿತು. ನೇಪಥ್ಯಕ್ಕೆ ಸೇರಿಬಿಟ್ಟಿತು. ಸಾಮಾಜಿಕ ಸಮಾನತೆಯ ತುಡಿತವುಳ್ಳ ೨೦೦೫ರ ಮಾಹಿತಿ ಹಕ್ಕು ಕಾಯ್ದೆ ಅಥವಾ ನರೇಗಾದಂತಹ ಕಾನೂನುಗಳು ಜಾರಿಗೊಂಡಿವೆ. ಆದರೂ ನಮ್ಮ ಜನರ ಬಗ್ಗೆ ಕಾಳಜಿ ವಹಿಸದೇ ಹೋದರೆ, ತೆರೆಯ ಮರೆಯಲ್ಲಿ ಅಡಗಿರುವ ಅಪಾಯಗಳ ಬಗ್ಗೆ ಎಚ್ಚರವಹಿಸದೇ ಹೋದರೆ ನಾವು ಒಂದು ದೇಶವಾಗಿ ಗಂಭೀರವಾದ ಅಪಾಯ ಎದುರಿಸಬೇಕಾಗುತ್ತದೆ. ಇಂದು ನಾವು ಆ ಸ್ಥಿತಿಯನ್ನು ತಲುಪಿದ್ದೇವೆ.


ರಾಷ್ಟ್ರೀಯ ಐಕ್ಯತೆಗೆ ಬದಲಾಗಿ ಅಸಹ್ಯಕರ ಸ್ವರೂಪದ, ಅಬ್ಬರದ ದೇಶಪ್ರೇಮದ ರಾಷ್ಟ್ರೀಯತೆಯನ್ನು ಜಪಿಸುತ್ತಿರುವ ಕಾಲದಲ್ಲಿ ನಾವಿಂದು ಬದುಕುತ್ತಿದ್ದೇವೆ. ನಾವು ಏನನ್ನು ತಿನ್ನಬೇಕು, ಏನನ್ನು ತೊಡಬೇಕು, ಏನನ್ನು ಯೋಚಿಸಬೇಕು ಮತ್ತು ಹೇಗಿರಬೇಕು ಎನ್ನುವುದನ್ನು ನಮಗೆ ಆಜ್ಞಾಪಿಸಲಾಗುತ್ತಿದೆ. ಏಕಶಿಲಾಕೃತಿಯ ವ್ಯವಸ್ಥೆಯೊಂದನ್ನು ಭಾರತೀಯ ಸಂಸ್ಕೃತಿ ಎಂದು ನಮ್ಮ ಮೇಲೆ ಹೇರಲಾಗುತ್ತಿದೆ. ಒಂದು ಭಾರತೀಯ ಸಂಸ್ಕೃತಿ ಎನ್ನುವುದು ಇಲ್ಲ. ಹಲವು ಭಾರತೀಯ ಸಂಸ್ಕೃತಿಗಳಿವೆ, ಬಹುತ್ವವೇ ಐಕ್ಯತೆಯ ಲಕ್ಷಣ ಎಂದು ನಾನು ಈ ಸಂಸ್ಕೃತಿಯೊಳಗಿನ ಸುಸಂಸ್ಕೃತ ವ್ಯಕ್ತಿಯಾಗಿ ಸ್ಪಷ್ಟವಾಗಿ, ನಿಸ್ಸಂದಿಗ್ಧವಾಗಿ ಹೇಳಬಯಸುತ್ತೇನೆ. ಏಕರೂಪತೆ ಎನ್ನುವುದು ವೈವಿಧ್ಯಯಯಯಯತೆಗಳನ್ನೆಲ್ಲ ಸವರಿ ಹಾಕಿ ಸಮತಟ್ಟುಗೊಳಿಸಿಬಿಡುತ್ತದೆ. ಆದರೆ ರಾಷ್ಟ್ರೀಯ ಭಾವೈಕ್ಯತೆಯಿಂದ ರೂಪುಗೊಳ್ಳುವ ಐಕ್ಯತೆಯು ಗೌರವವನ್ನು ಹುಟ್ಟು ಹಾಕುತ್ತದೆ. ನಮ್ಮ ಪ್ರಜಾಪ್ರಭುತ್ವ, ಸಂವಿಧಾನ, ಬಹುತ್ವ, ಪೌರತ್ವ ಮತ್ತು ಸಮಾಜವಾದ ಇಂದು ಬಹುದೊಡ್ಡ ಸವಾಲನ್ನು ಎದುರಿಸುತ್ತಿದೆ. ಭಾರತದ ಆಧಾರಸ್ತಂಭಗಳಾದ ಇವುಗಳನ್ನು ನಮ್ಮ

(೧೧ನೇ ಪುಟಕ್ಕೆ

ಇತಿಹಾಸದ ಕೋಮುವಾದೀಕರಣದ ಅನಾಹುತಗಳು

-ಇರ್ಫಾನ್ ಇಂಜಿನಿಯರ್

'ಹಿಂದೂ ಪರಿಕಲ್ಪನೆ ಬಂದಿದ್ದೇ ಹೊರಗಡೆಯವರ ಮೂಲಕ. ಇಸ್ಲಾಂಪೂರ್ವದ ರಾಜರುಗಳೇನೂ ತಮ್ಮನ್ನು ಹಿಂದೂ ಧರ್ಮದವರು ಎಂದು ಕರೆದುಕೊಂಡಿದ್ದಿಲ್ಲ. ನಿಜವಾಗಿಯೂ ಬ್ರಿಟಿಷ್ ವಸಾಹತುಶಾಹಿಯ ಪ್ರಭುತ್ವವು ಹಿಂದೂ ಪದಕ್ಕಿರುವ ಭೂಪ್ರದೇಶದ ಹಿನ್ನಲೆಯನ್ನು ಮರೆಸಿ ಅದನ್ನೊಂದು ಧರ್ಮವಾಗಿ ಕಂಡಿತು. ಅನೇಕ ಇತಿಹಾಸಕಾರರು ಈ ವಸಾಹತುಶಾಹಿ ಪರಿಕಲ್ಪನೆ ನಿರ್ಮಿಸಿದ ಹಿಂದೂ ಮುಸ್ಲಿಂ ಮುಂತಾದ ಗಡಿರೇಖೆಗಳನ್ನು ನಿರಾಕರಿಸುತ್ತಾರೆ. ಏಕೆಂದರೆ ಆ ಕಾಲದಲ್ಲಿ ಭಿನ್ನ ರಾಜರುಗಳು ಭಿನ್ನ ಭಿನ್ನ ಧರ್ಮಗಳನ್ನು ಪಾಲಿಸುತ್ತಿದ್ದರು.(ಜೈನ ಮತ್ತು ಬೌದ್ಧ ಧರ್ಮವನ್ನು ಒಳಗೊಂಡು) ಬ್ರಿಟಿಷರ ಜನಗಣತಿಯ ಮಾಪಕವು ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರನ್ನು ಹೊರತುಪಡಿಸಿದವರನ್ನು ಹಿಂದೂ ಎಂದು ಪರಿಗಣಿಸಿತ್ತು. ಈ ಏಲಿಯಟ್ ಹಾಗೂ ಡಾಸನ್ ನಿರ್ಮಿಸಿದ ಕೃತಕ ಇತಿಹಾಸ ಲೇಖನ ಶಾಸ್ತ್ರವನ್ನು ಸರಿಯಾಗಿ ವಿಮರ್ಶೆ ಮಾಡದೆ ಹಿಂದುತ್ವವಾದಿಗಳು ಇದನ್ನೇ ಒಪ್ಪಿದ್ದಾರೆ. ಈ ಕಲ್ಪಿತ ಹಿಂದೂ ಕಾಲವನ್ನು ವೈಭವೀಕರಿಸಲಾಗಿದೆ ಮತ್ತು ಇಸ್ಲಾಂ ಕಾಲವನ್ನು ಹಿಂದೂ ಧರ್ಮದ ಅವನತಿಯಂತೆ ಗ್ರಹಿಸಲಾಗಿದೆ.'



ಉತ್ತರಪ್ರದೇಶದ ಬಿಜೆಪಿ ಶಾಸಕ ಸಂಗೀತಾ ಸೋಮ್ ಅವರ ತಾಜಮಹಲ್ ಕುರಿತಾದ ವಿವಾದಾತ್ಮಕ ಹೇಳಿಕೆ ಆಶ್ಚರ್ಯವೇನಲ್ಲ. ಹಿಂದುತ್ವವಾದಿಗಳು ಹೇಳುವ ಚರಿತ್ರೆ ಕಲ್ಪಿತ ಕಾದಂಬರಿಗಳಿಗಿಂತಲೂ ಹೆಚ್ಚು ವಿಚಿತ್ರವಾಗಿರುತ್ತದೆ. ಈ ಚರಿತ್ರೆ ಎಂಬುದು ಅವರಿಗೆ ತಮ್ಮ ನಂಬಿಕೆಗಳನ್ನು ಅಂದರೆ ಕ್ರಿಶ್ಚಿಯನ್ನರು ಹಾಗೂ ಮುಸ್ಲಿಂರು ಹೊರಗಿನವರು ಎಂದು ಸಾಧಿಸಲು ಬೇಕಾಗಿರುವ ಒಂದು ಉಪಕರಣ ಅಷ್ಟೆ. ಭಾರತದ ಸಂವಿಧಾನ ಇವರನ್ನು ನಮ್ಮದೇ ನಾಗರೀಕರೆಂದು ಒಪ್ಪಿಕೊಳ್ಳಬಹುದು. ಆದರೆ ಹಿಂದೂತ್ವವಾದಿಗಳಿಗೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರು ಯಾವಾಗಲೂ ಎರಡನೇ ದರ್ಜೆಯ ನಾಗರೀಕರು. ಹಿಂದುತ್ವವಾದಿಗಳು ಹೀಗೆ ಹೊರಗಡೆಯಿಂದ ಬಂದ ಸಾಂಸ್ಥಿಕ ಧರ್ಮಗಳ ವಿರುದ್ಧ ಸಂಘಟನೆಗೊಳ್ಳಲು ಮತ್ತು ಯುದ್ಧ ಸಾರಲು ಎಲ್ಲಾ ಹಿಂದುಗಳಿಗೆ ಕರೆಕೊಡುತ್ತಾರೆ.

ಕಠೋರ ಹಿಂದೂವಾದಿಯಾದ ವಿನಾಯಕ ದಾಮೋದರ ಸಾವರ್ಕರ್ 'ಎಲ್ಲಾ ಬಗೆಯ ರಾಜಕೀಯವನ್ನು ಹಿಂದುತ್ವಗೊಳಿಸಬೇಕು ಮತ್ತು ಹಿಂದುತ್ವವು ಇನ್ನೂ ಆಕ್ರಮಣಕಾರಿಯಾಗಿರಬೇಕು' ಎಂದು ಕರೆಕೊಟ್ಟಿದ್ದರು. ರಾಜಕೀಯವನ್ನು ಹಿಂದೂಕರಿಸುವುದೆಂದರೆ ಮೇಲ್ಜಾತಿಯ ಹಿಂದೂಗಳ ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಭುತ್ವವನ್ನು ಸ್ಥಾಪಿಸುವುದು ಎಂದರ್ಥ. ಇಂಥಹ ಉಗ್ರ ಹಿಂದುತ್ವವನ್ನು ಸ್ಥಾಪಿಸಲು ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ತುಚ್ಛೀಕರಿಸುವುದು ಇವರಿಗೆ ಮುಖ್ಯವಾಗುತ್ತದೆ. ಹೀಗೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ಹೀಗಳೆಯಲು ಉಪಯೋಗಿಸುವ ಒಂದು ಉಪಕರಣ ಎಂದರೆ ಚರಿತ್ರೆ. ಈ ಹಿಂದುತ್ವವಾದಿಗಳು ಒಂದು ಬಗೆಯ ಚರಿತ್ರೆಯನ್ನು ಕಲ್ಪಿಸಿಕೊಳ್ಳುತ್ತಾರೆ ಮತ್ತು ಕಲ್ಪಿಸಿಕೊಂಡ ಚರಿತ್ರೆಯನ್ನು ಅಧಿಕೃತಗೊಳಿಸುತ್ತಾರೆ. ಇವರಿಗೆ ಇತಿಹಾಸವನ್ನು ಅರಿಯಲು ಬೇಕಾದ ವೈಜ್ಞಾನಿಕ ಶಾಸ್ತ್ರ ಮತ್ತು ತರ್ಕದ ಬಗ್ಗೆ ಯಾವುದೇ ಗೌರವವಿಲ್ಲ.

ಹೀಗೆ ಇತಿಹಾಸವನ್ನು ತಮಗೆ ಬೇಕಾದಂತೆ ಕಲ್ಪಿಸಿಕೊಂಡಿರುವುದರಿಂದ ಹಿಂದುತ್ವವಾದಿಗಳು ತಾಜಮಹಲ್ ಕುರಿತು ಭಿನ್ನ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ಯೋಗಿ ಆದಿತ್ಯನಾಥ್ ತಾಜ್‌ಮಹಲ್ ಭಾರತದ ಸಂಪ್ರದಾಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿಲ್ಲ ಎಂದು ಹೇಳಿ, ಅದನ್ನು ಉತ್ತರಪ್ರದೇಶದ ಪ್ರವಾಸೋದ್ಯಮ ಇಲಾಖೆಯ ವಿವರಣಾ ಕೈಪಿಡಿಯಿಂದ ಕೈಬಿಡುವಂತೆ ಮಾಡಿದ್ದರು.



ವಿ.ಡಿ. ಸಾವರ್ಕರ್ ಪಿ.ಎನ್. ಓಕ್ ಸಂಗೀತ್ ಸೋಮ್

ಬಿಜೆಪಿ ಶಾಸಕ ಸಂಗೀತ್ ಸೋಮ್ ತಾಜಮಹಲ್‌ನ್ನು ಕಟ್ಟಿದ್ದು ದ್ರೋಹಿಗಳು ಆದ್ದರಿಂದ ಇದು ನಮ್ಮ ಸಂಸ್ಕೃತಿಗೆ ಕಪ್ಪುಚುಕ್ಕೆ ಎಂದು ಹೇಳಿದ. ವಿನಯ್ ಕಟಿಯಾರ್ ಪ್ರಕಾರ ತಾಜಮಹಲ್ ಮೊದಲಿಗೆ ಶಿವನ ದೇವಸ್ಥಾನವಾಗಿತ್ತು. ಮಾಧ್ಯಮಗಳಲ್ಲಿ ಇದು ಗುಲ್ಲಾದ ನಂತರ ಆದಿತ್ಯನಾಥ್ ತಾಜಮಹಲ್ ಭಾರತದ ಹೆಮ್ಮೆ ಎಂದು ತಿಳಿಸಿ ಅದನ್ನು ಕಟ್ಟಲು ಬೆವರು ಸುರಿಸಿದ್ದು ಭಾರತೀಯರು ಎಂದು ಸಾರಿದರು!

ಈ ಬಗೆಯ ಹಿಂದುತ್ವದ ನೆಲೆಯ ಚರಿತ್ರೆಯನ್ನು ಮೂಲಭೂತವಾಗಿ ವಸಾಹತುಶಾಹಿ ಇತಿಹಾಸಶಾಸ್ತ್ರದಿಂದ ಎರವಲು ಪಡೆಯಲಾಗಿದೆ. ಜೆ.ಎಸ್. ಮಿಲ್ ಅವರ 'ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಹಾಗೂ ಹೆಚ್ ಎಂ ಏಲಿಯಟ್ ಮತ್ತು ಜಾನ್ ಡಾಸನ್ ಮುಂತಾದವರು ಭಾರತದ ಇತಿಹಾಸವನ್ನು ಕುರಿತು ವಸಾಹತುಶಾಹಿ ಪ್ರಭುತ್ವದ ದೃಷ್ಟಿಕೋನದ ಮೂಲಕ ಪುಸ್ತಕಗಳನ್ನು ರಚಿಸಿದ್ದರು. ಇವರು ತಮ್ಮ ಧರ್ಮವನ್ನು ಆಧಾರವಾಗಿಟ್ಟುಕೊಂಡು ಭಾರತದ ಗತಕಾಲವನ್ನು 'ಹಿಂದೂಕಾಲ', 'ಮುಸ್ಲಿಂಕಾಲ' ಮುಂತಾಗಿ ಪ್ರತ್ಯೇಕಿಸಿದ್ದರು. ಈ ವಸಾಹತುಶಾಹಿ ದೃಷ್ಟಿಕೋನವು ಇಸ್ಲಾಂಪೂರ್ವ ಭಾರತವನ್ನು 'ಹಿಂದೂ' ಎಂದು ಕರೆದಿದ್ದರೂ, ಆಗಿನ ಎಲ್ಲಾ ರಾಜರುಗಳು ಹಿಂದೂ ಧರ್ಮವನ್ನು ಪಾಲಿಸುತ್ತಿರಲಿಲ್ಲ. ಹಿಂದೂ ಪದವನ್ನು ಸಿಂಧೂ ನದಿಯ ಪೂರ್ವದ ಭೂಪ್ರದೇಶವನ್ನು ಗುರುತಿಸಲು ಬಳಸಲಾಗುತ್ತಿತ್ತು. ಪರ್ಶಿಯನ್ನರು ಸಿಂಧೂ ಪದವನ್ನು 'ಹಿಂದೂ' ಎಂದು ಉಚ್ಚರಿಸಿದ್ದರು. ಇತಿಹಾಸಕಾರ ಹೆರೋಟಾಟಸ್, ಪರ್ಶಿಯನ್ನರು ಮತ್ತು ಅರಬ್ಬರು ಸಿಂಧೂ ನದಿಯ ಪೂರ್ವದ ಭೂಪ್ರದೇಶದಲ್ಲಿ ವಾಸಿಸುವ ಎಲ್ಲರನ್ನು ಹಿಂದೂ ಎಂದು ಹೆಸರಿಸಿದ್ದರು.

ಆದ್ದರಿಂದ ಹಿಂದೂ ಪರಿಕಲ್ಪನೆ ಬಂದಿದ್ದೇ ಹೊರಗಡೆಯವರ ಮೂಲಕ. ಇಸ್ಲಾಂಪೂರ್ವದ ರಾಜರುಗಳೇನೂ ತಮ್ಮನ್ನು ಹಿಂದೂ ಧರ್ಮದವರು ಎಂದು ಕರೆದುಕೊಂಡಿದ್ದಿಲ್ಲ. ನಿಜವಾಗಿಯೂ ಬ್ರಿಟಿಷ್ ವಸಾಹತುಶಾಹಿಯ ಪ್ರಭುತ್ವವು ಹಿಂದೂ ಪದಕ್ಕಿರುವ ಭೂಪ್ರದೇಶದ ಹಿನ್ನಲೆಯನ್ನು ಮರೆಸಿ ಅದನ್ನೊಂದು ಧರ್ಮವಾಗಿ ಕಂಡಿತು. ಅನೇಕ ಇತಿಹಾಸಕಾರರು ಈ ವಸಾಹತುಶಾಹಿ ಪರಿಕಲ್ಪನೆ ನಿರ್ಮಿಸಿದ ಹಿಂದೂ ಮುಸ್ಲಿಂ ಮುಂತಾದ ಗಡಿರೇಖೆಗಳನ್ನು ನಿರಾಕರಿಸುತ್ತಾರೆ. ಏಕೆಂದರೆ ಆ ಕಾಲದಲ್ಲಿ ಭಿನ್ನ ರಾಜರುಗಳು ಭಿನ್ನ ಭಿನ್ನ ಧರ್ಮಗಳನ್ನು ಪಾಲಿಸುತ್ತಿದ್ದರು.(ಜೈನ ಮತ್ತು ಬೌದ್ಧ ಧರ್ಮವನ್ನು ಒಳಗೊಂಡು) ಬ್ರಿಟಿಷರ ಜನಗಣತಿಯ ಮಾಪಕವು ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರನ್ನು ಹೊರತುಪಡಿಸಿದವರನ್ನು ಹಿಂದೂ ಎಂದು ಪರಿಗಣಿಸಿತ್ತು. ಈ ಏಲಿಯಟ್ ಹಾಗೂ ಡಾಸನ್ ನಿರ್ಮಿಸಿದ

ಕೃತಕ ಇತಿಹಾಸ ಲೇಖನ ಶಾಸ್ತ್ರವನ್ನು ಸರಿಯಾಗಿ ವಿಮರ್ಶೆ ಮಾಡದೆ ಹಿಂದುತ್ವವಾದಿಗಳು ಇದನ್ನೇ ಒಪ್ಪಿದ್ದಾರೆ. ಈ ಕಲ್ಪಿತ ಹಿಂದೂ ಕಾಲವನ್ನು ವೈಭವಿಕರಿಸಲಾಗಿದೆ ಮತ್ತು ಇಸ್ಲಾಂ ಕಾಲವನ್ನು ಹಿಂದೂ ಧರ್ಮದ ಅವನತಿಯಂತೆ ಗ್ರಹಿಸಲಾಗಿದೆ.

ಇದರಂತೆಯೆ ಕೋಮುವಾದಿ ಮುಸ್ಲಿಮರು ಕೂಡಾ ಇಸ್ಲಾಂ ಧರ್ಮದ ಕಾಲವನ್ನು ವೈಭವೀಕರಿಸಿ ತಮ್ಮ ಭವಿಷ್ಯತ್ತನ್ನು ಈ ವೈಭವೀಕರಣದಲ್ಲಿ ಕಾಣುತ್ತಾರೆ. ಎರಡೂ ಪಂಥದವರು ತಮ್ಮ ತಮ್ಮ ಕಾಲವನ್ನು ವೈಭವೀಕರಿಸಿ ವಿಜೃಂಭಿಸಲು ಚರಿತ್ರೆಯನ್ನು ಬಳಸಿಕೊಳ್ಳುತ್ತಾರೆ. ರೋಮಿಲ್ಲಾ ಥಾಪರ್ ಅವರು ಹೇಳುವಂತೆ 'ಇತಿಹಾಸದ ವ್ಯಾಖ್ಯಾನ ಎರಡು ಬಗೆಯ ವಿಭಿನ್ನ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ಒಂದು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಗತವನ್ನು ಕಾಣುವುದು ಮತ್ತೊಂದು ಗತಕಾಲದ ಪ್ರತಿಮೆಗಳನ್ನು ವರ್ತಮಾನಕ್ಕೆ ಬಲವಂತವಾಗಿ ತರುವುದು'. ಇ.ಹೆಚ್. ಕಾರ್ ಅವರು ಕೂಡಾ "ಇತಿಹಾಸ ಎಂದರೆ ಏನು ಎಂಬ ಪ್ರಶ್ನೆಗೆ ಉತ್ತರಿಸುವಾಗ 'ನಾವು ನಮ್ಮ ಕಾಲದ ಅಗತ್ಯಗಳನ್ನು ಗೊತ್ತಿದ್ದೂ, ಗೊತ್ತಿಲ್ಲದೆಯೋ ತರುತ್ತಿರುತ್ತೇವೆ' ಎಂದು ಅಭಿಪ್ರಾಯ ಪಡುತ್ತಾರೆ. (ಇ.ಹೆಚ್.ಕಾರ್. ೧೯೮೭)

ಕೋಮುವಾದಿ ಹಿಂದೂ ದೃಷ್ಟಿಕೋನದ ಇತಿಹಾಸದ ಪ್ರಕಾರ ಮುಸ್ಲಿಮ್ಮರ ಆಕ್ರಮಣದ ನಂತರ ಹಿಂದೂ ಧರ್ಮದ ಸುವರ್ಣಯುಗ ಕೊನೆಗೊಂಡಿತು. ಇವರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಸ್ತಿತ್ವಕ್ಕೆ ಪೆಟ್ಟು ಕೊಟ್ಟಿದ್ದೆ ಮುಸ್ಲಿಂ ದೊರೆಗಳ ಆಕ್ರಮಣ. ಈ ದೊರೆಗಳು ಹಿಂದೂ ಸಂಸ್ಕೃತಿಯ ಎಲ್ಲಾ ಪ್ರತಿಮೆಗಳನ್ನು ಆಕ್ರಮಿಸಿ ಇಸ್ಲಾಂ ಧಾರ್ಮಿಕ ವಾಸ್ತುಗಳನ್ನು ಬಲವಂತವಾಗಿ ಸ್ಥಾಪಿಸಿದರು. ಬಲವಂತವಾಗಿ ಮತಾಂತರಿಸಿದರೂ ಕೂಡಾ. ಹಿಂದೂಗಳು ಇದನ್ನು ಉಗ್ರವಾಗಿ ಪ್ರತಿಭಟಿಸಿದ್ದರಿಂದ ಹಿಂದೂ/ಮುಸ್ಲಿಂರ ನಡುವೆ ಯುದ್ಧ ಇಂದಿಗೂ ನಿರಂತರವಾಗಿ ನಡೆಯುತ್ತಿದೆ.

ಇಸ್ಲಾಂ ಆಕ್ರಮಣಕಾರರು ಅವರ ದೊರೆಗಳ ಮೂಲಕ ಹಿಂದೂಗಳನ್ನು ಅಪವಿತ್ರಗೊಳಿಸಿ ಗುಲಾಮರನ್ನಾಗಿಸಿಕೊಂಡಿತು. ಈ ದೊರೆಗಳು ಹಿಂದೂ ದೇವಾಲಯಗಳನ್ನು ಕೆಡವಿ ಮಸೀದಿಗಳನ್ನು ಕಟ್ಟಿದರು. ಹಿಂದೂವಾದಿಗಳ ಪ್ರಕಾರ ಇಂತಹ ೩೦೦೦ ದೇವಾಲಯಗಳು ಮಸೀದಿಗಳಾಗಿ ಪರಿವರ್ತಿತವಾಗಿವೆ. ಇವುಗಳಲ್ಲಿ ಅಯೋಧ್ಯಾ, ಬಾಬರೀ ಮಸೀದಿ, ಮಥುರಾ ಮತ್ತು ವಾರಣಾಸಿಗಳಲ್ಲಿನ ದೇವಾಲಯಗಳ ಸನಿಹದ ಮಸೀದಿಗಳೂ ಸೇರುತ್ತವೆ. ಆದರೆ ಈ ೩೦೦೦ ದೇವಾಲಯಗಳ ಪಟ್ಟಿಯನ್ನು ಇವರು ನೀಡಿಲ್ಲ. ಇಂತಹ ಇತಿಹಾಸ ನಿರೂಪಣೆಯ ಮುಖ್ಯ ಉದ್ದೇಶವೆಂದರೆ ಎಲ್ಲಾ ಮುಸ್ಲಿಂರನ್ನು ಅಪರಾಧಿಗಳಂತೆ, ಆಕ್ರಮಣಕಾರರಂತೆ ನೋಡುವಂತೆ ಮಾಡುವುದು. ಹಾಗೆಯೇ ಈಗ ಎಲ್ಲಾ ಹಿಂದೂಗಳು ಒಟ್ಟಾಗುವುದಕ್ಕೂ ಈ ಬಗೆಯ ವ್ಯಾಖ್ಯಾನ ಅಗತ್ಯವಾಗಿದೆ. ಈಗ ಮುಸ್ಲಿಂರ ಮೇಲೆ ಪ್ರತಿಕಾರ ತೆಗೆದುಕೊಳ್ಳಲು ಮತ್ತು ಭಾವನಾತ್ಮಕವಾಗಿ ಸಂಘಟನೆಗೊಳ್ಳಲು ಈ ಬಗೆಯ ನಿರೂಪಣೆಗಳು ಸಹಾಯಕ. ಆದರೆ ಹಿಂದೂಧರ್ಮ ಜಾತಿ ಶ್ರೇಣಿಕರಣದ ಮೇಲೆ ರಚಿತವಾಗಿದೆ. ಎಲ್ಲಾ ಹಿಂದೂಗಳು ಒಗ್ಗಟ್ಟಾಗಿರಬೇಕಾದರೆ ಈ ಜಾತಿ ನಿರ್ಮಿತ ರಚನೆಗಳು ಮುರಿದು ಬೀಳಬೇಕಾಗುತ್ತದೆ. ದಲಿತರನ್ನು ಕೇಂದ್ರಕ್ಕೆ ತರಬೇಕಾಗುತ್ತದೆ. ಇದು ಸುಲಭವಲ್ಲ. ಆದ್ದರಿಂದ ಹಿಂದೂಗಳು ಒಗ್ಗಟ್ಟಾಗಿಯೇ ಇತರೇ ಸಮುದಾಯಗಳನ್ನು ದ್ವೇಷಿಸುವಂತೆ ಮಾಡಲಾಗುತ್ತಿದೆ. ಇವರೊಂದಿಗಿನ ದ್ವೇಷ, ಹೊಡೆದಾಟಕ್ಕೆ ಇತಿಹಾಸದ ಪುರಾವೆಗಳನ್ನು ಸೃಷ್ಟಿಸಲಾಗುತ್ತದೆ. ಹೀಗೆ ಐತಿಹಾಸಿಕ ಪುರಾವೆಗಳ ಮೂಲಕ ವರ್ತಮಾನದ ರಾಜಕಾರಣ ಮುಂದುವರೆಯುತ್ತದೆ. ಇತಿಹಾಸವನ್ನು ತಿರುಚುವ ಎರಡನೇ ಮುಖ್ಯ ಉದ್ದೇಶವೆಂದರೆ 'ಶತ್ರು' ಸಮುದಾಯಗಳು ಒಡೆತನ ಹೊಂದಿರುವ ಭೂ ಪ್ರದೇಶ, ಸಂಸ್ಥೆಗಳು ಹಾಗೂ ರಚನೆಗಳ ಮೇಲೆ ತಮ್ಮ ಒಡೆತನ ಮತ್ತು ನಿಯಂತ್ರಣವನ್ನು ಸಾಧಿಸುವುದು. ನಿಮಗೆ ಕಟ್ಟಲಾಗದಿದ್ದರೆ ಅವರಿಂದ ಕಸಿದುಕೊಳ್ಳಿ ಎಂಬ ತತ್ವ ಇದು. ಮೂರನೆಯ ಉದ್ದೇಶವೆಂದರೆ ತಮ್ಮ ಧಾರ್ಮಿಕ ವಿಸ್ತರಣೆಯನ್ನು ಇತಿಹಾಸ ತಿರಚುವುದರ ಮೂಲಕ ನಡೆಸುವುದು. ಹಿಂದುತ್ವವಾದಿಗಳ ಅಖಂಡ ಭಾರತದ ಪರಿಕಲ್ಪನೆ ಪಾಕಿಸ್ತಾನ, ಬಾಂಗ್ಲಾದೇಶ, ದಕ್ಷಿಣ ಚೈನಾ, ಮಯನ್ಮಾರ್ ಮತ್ತು ಶ್ರೀಲಂಕಾಗಳನ್ನು ವಶಪಡಿಸಿಕೊಳ್ಳುವುದು/ವಾಪಾಸ್ ಪಡೆಯುವುದು ಎಂದು ಹೇಳುತ್ತವೆ. ಮತ್ತೊಂದು ಉದ್ದೇಶವೆಂದರೆ ವರ್ತಮಾನ ಕಾಲದ ಎಲ್ಲ ಬಗೆಯ ತಾಂತ್ರಿಕತೆ ಹಾಗೂ ವೈಜ್ಞಾನಿಕ ಆವಿಷ್ಕಾರಗಳನ್ನು ಹಿಂದೂಗಳು ಸಾವಿರಾರು ವರ್ಷಗಳ ಮೊದಲೇ ವೇದಗಳ ಕಾಲದಲ್ಲಿ ಸಾಧಿಸಿದ್ದರು ಎಂಬುದನ್ನು ಸ್ಥಾಪನೆಗೊಳಿಸುವುದು ಅಥವಾ ಗತವನ್ನು ವಿಜೃಂಭಿಸುವುದು. ಪುಷ್ಪಕ ವಿಮಾನ, ಪ್ಲಾಸ್ಟಿಕ್ ಸರ್ಜರಿ, ನ್ಯೂಕ್ಲಿಯರ್ ಮಿಸೈಲ್, ಜೆನೆಟಿಕ್ ತಂತ್ರಜ್ಞಾನ ಇವೆಲ್ಲವುಗಳನ್ನು ವೇದಗಳಲ್ಲಿ, ಮಹಾಭಾರತದ ಕಾಲದಲ್ಲಿ ಕಾಣಲಾಗುತ್ತದೆ. ಗತಕಾಲದ ಈ ಬಗೆಯ ಒಣ ಹೆಮ್ಮೆಗೆ ಖಚಿತ ಉದ್ದೇಶ ಇದೆ. ಅದೆಂದರೆ ಹಿಂದೂ ಸಮುದಾಯವು ಆಕ್ರಮಣಕಾರಿ ಹಿಂದೂ ಪ್ರಭುತ್ವ ಸ್ಥಾಪಿಸುವುದು ತಪ್ಪೇನಲ್ಲ ಎಂಬ ತೀರ್ಮಾನ ಇದರ ಹಿಂದಿನ ನಿಜದ ಉದ್ದೇಶ.

ಶ್ರೀಯುತ ಪುರುಷೋತ್ತಮ್ ನಾಗೇಶ್ ಓಕ್ ಇವರು ಹಿಂದೂತ್ವಾವಾದಿ ದೃಷ್ಟಿಕೋನದ ಮೂಲಕ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತ ಪುರುಷೋತ್ತಮ್ ಅವರ ತೀರ್ಮಾನಗಳು ಹೀಗಿವೆ:

೧. ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳಿಗೆ ಮೂಲವೇ ವೇದಗಳು. ಕ್ರಿಶ್ಚಿಯಾನಿಟಿ ಎಂಬ ಪದ 'ಕೃಷ್ಣ ನೀತಿ' ಎಂಬುದರಿಂದ ಬಂದಿದೆ. ವ್ಯಾಟಿಕನ್ ಪದ ವಾಟಿಕಾ ಸಗ್ರಿ ಪದದಿಂದ ಬಂದದ್ದು. ಅಬ್ರಹಾಂ ಪದ ಬ್ರಹ್ಮ ಪದದಿಂದ ಬಂದಿದೆ. ಜೀಸಸ್ ಎಂದರೆ ವೇದಗಳ ಕಾಲದ ಒಬ್ಬ ರಾಜ. ಡಿಸಿಪಲ್ ಎಂಬುದು ದೀಕ್ಷಾಪಾಲ್ ಪದದಿಂದ ಉದ್ಭವಿಸಿದೆ.


೨. ಅರೇಬಿಯಾ ದೇಶಕ್ಕೆ ಮೂಲವೇ ವೇದಗಳು. ಕಾಬಾ ನಿಜಕ್ಕೂ ಹಿಂದೂ ಮಂದಿರವಾಗಿತ್ತು. ಭಾರತದ ಶಿವಲಿಂಗ ಮತ್ತು ರಾಜಾ ವಿಕ್ರಮನ ಶಾಸನವು ಕಾಬಾದ ಒಳಾಂಗಣದ ಪಾತ್ರೆಯಲ್ಲಿ ಇದೆ. ಮೊಹಮ್ಮದ ಒಬ್ಬ ಹಿಂದೂ ಮತ್ತು ಅರಬ್ಬರು ಪೂಜಿಸುವುದು ಮಹಾದೇವನನ್ನು.

೩. ಮುಸ್ಲಿಮರು ಭಾರತದ ಐತಿಹಾಸಿಕ ನಿರ್ಮಿತಿಗಳನ್ನು ನಾಶ ಮಾಡಿದರು. ಕುತುಬ್ ಮಿನಾರ್, ತಾಜಮಹಲ್ , ಕೆಂಪುಕೋಟೆ , ಆಗ್ರ ಕೋಟೆ ಮುಂತಾದವು ಮುಂಚೆ ಹಿಂದೂ ನಿರ್ಮಾಣವಾಗಿದ್ದವು. ಇವುಗಳನ್ನು ಮುಸ್ಲಿಂ ದೊರೆಗಳು ತಮ್ಮದೆಂದು ಹಕ್ಕು ಸಾಧಿಸಿದರು. ಇವಕ್ಕೆ ಪುರುಷೋತ್ತಮ್ ಓಕ್ ನೀಡುವ ಆಧಾರಗಳು ಹಾಸ್ಯಾಸ್ಪದ. ಇವರ ಪ್ರಕಾರ ತಾಜಮಹಲ್ ಶಿವನ ದೇವಸ್ಥಾನವಾಗಿತ್ತು. ಏಕೆಂದರೆ ತಾಜ್ ಮತ್ತು ಮಹಲ್ ಪದ ಸಂಸ್ಕೃತ ಮೂಲದ್ದು. ತಾಜ್ ಶಬ್ದದ ಮೂಲ ತೇಜ್ (ಭವ್ಯ) ಮಹಲ್ ಅಂದರೆ ಭವ್ಯ ಕಟ್ಟಡ.

೪. ಇವರ ಇನ್ನೊಂದು ವಾದವೆಂದರೆ ಮಧ್ಯಕಾಲೀನ ಐತಿಹಾಸಿಕ ಆಧಾರಗಳನ್ನು ನಂಬಬಾರದು. ಮೊಗಲ್ ಕಲೆ ಮತ್ತು ಮೊಗಲ್ ವಾಸ್ತುಶಿಲ್ಪ ಸುಳ್ಳು. ಮೊಘಲ್ ಕಾಲದ ಸಂಗೀತ ಕೂಡಾ ಮಿಥ್ಯೆ. ಭಾರತದ ರಾಜ ಪೋರಸ್ ಅಲೆಕ್ಸಾಂಡರ್‌ನಿಗೆ ಸೋಲಲಿಲ್ಲ.(ಕ್ರಿ.ಪೂ. ೩೨೬) ಸಂಸ್ಕೃತ ಪ್ರಾಚೀನ ಕಾಲದಲ್ಲಿ ಇಡೀ ಪ್ರಪಂಚದ ಭಾಷೆಯಾಗಿತ್ತು!

ಇಂತಹ ಪೊಳ್ಳು ಐತಿಹಾಸಿಕ ರಚನೆಗಳನ್ನು ಸಾಧಾರಣ ವಿವೇಕವಿರುವ ಎಲ್ಲರೂ ಪ್ರಶ್ನಿಸಬೇಕು. ಹಿಂದುತ್ವವಾದಿ ಶಿಬಿರಗಳಲ್ಲಿ ಇಂತಹದ್ದನ್ನು ತಲೆಗೆ ತುಂಬಿ ಇತರ ಸಮುದಾಯದವರನ್ನು ದ್ವೇಷಿಸುವಂತೆ ಮಾಡಲಾಗುತ್ತದೆ. ಎಲ್ಲಾ ಹಿಂದೂಗಳು ಒಗ್ಗಟ್ಟಿನಿಂದ ಇರಬೇಕೆಂದು ಕರೆ ನಿಡಲಾಗುತ್ತದೆ. ಹಿಂದುತ್ವ ಇತಿಹಾಸವೆಂದರೆ ಇತರರನ್ನು ದ್ವೇಷಿಸುವ ಮತ್ತು ತಮ್ಮವರನು ಆಕ್ರಮಣಕಾರಿಯಾಗಿ ಒಗ್ಗೂಡಿಸುವ ಒಂದು ತಂತ್ರ. ಇಂತಹ ಹಲವು ಸಂಕಥನಗಳನ್ನು ಕಲ್ಪಿಸಿಕೊಂಡು ಬೋಧಿಸಲಾಗುತ್ತದೆ. ಹೊರಗಡೆಯಿಂದ ಬಂದವರ ಮೇಲೆ ಹಲ್ಲೆ ನಡೆಸುವಂತೆ ಪ್ರಚೋದಿಸಲಾಗುತ್ತದೆ.

ಹೀಗೆ ಕಲ್ಪಿತ ಇತಿಹಸವನ್ನು ತಲೆಗೆ ತುಂಬಿಕೊಂಡಿರುವ ಮತ್ತು ನಂಬಿರುವ ಹಿಂದೂತ್ವದ ಕಾಲಾಳುಗಳು ತಾರ್ಕಿಕವಾಗಿ ಯೋಚಿಸಲು ಸಾಧ್ಯವಿಲ್ಲ. ಅವರ ನಾಯಕರೂಗಳು ಪದೇ ಪದೇ ಇಂತಹದನ್ನೇ ಹೇಳುತ್ತಾರೆ. ಇತರರು ನಂಬುತ್ತಾರೆ. ಹೀಗೆ ಸಾಕಷ್ಟು ಜನ ನಂಬಿದ ಮೇಲೆ ಅದೇ ಸತ್ಯ ಆಗುತ್ತದೆ. ಇಂತದ್ದೇ ದೃಷ್ಟಿಕೋನದಿಂದ ಟಿಪ್ಪುವನ್ನು ನೋಡಲಾಗಿಈದೆ.ಈತನ ಮೂಲ ಹೊರಗಡೆಯಿಂದ ಬಂದಿದ್ದರಿಂದ ಇದೂ ಹಿಂದೂ ವಿರೋಧೀ!!! ಈಗಾಗಲೆ ಬಾಬರಿ ಮಸೀದಿ ಕಡವಿರುವ ಇಂತಹ ಹಿಂದೂ ದಳದವರಿಗೆ ಅಗತ್ಯದ ಶಿಕ್ಷಣ ಮತ್ತು ಮಾನವೀಯತೆ ಕಲಿಸಬೇಕಿದೆ.



(ಖ್ಯಾತ ಇಸ್ಲಾಂ ಸಮಾಜ ಸುಧಾರಕ ಅಸ್ಘರ್ ಅಲಿ ಇಂಜಿನಿಯುರ್ ಅವರ ಪುತ್ರರಾದ ಇರ್ಫಾನ್ ಇಂಜಿನಿಯರ್ ಮುಂಬೈನಲ್ಲಿ ತಮ್ಮ ತಂದೆ ಸ್ಥಾಪಸೊ ಸಮಾಜ ಮತ್ತು ಜಾತ್ಯತೀತತೆಗಳ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದು ತಮ್ಮ ತಂದೆಉವರ ಅಧ್ಯಯನ ಮತ್ತು ಸಾಮಾಜಿಕ ಕಾರ್ಯಗಳನ್ನು ಮುಂದುವರೆಸಿದ್ದಾರೆ)

(ಕನ್ನಡಾನುವಾದ :ಅವಿನಾಶ್ ಟಿ.)

ಬ್ರಿಟಿಷ್ ಸಾಮ್ರಾಜ್ಯದ ಮೇಲಿನ ಪ್ರೇಮವೂ, ತಾಜ್ ಮೇಲಿನ ದ್ವೇಷವೂ

-ರಾಜೇಶ್ ರಾಮಚಂದ್ರನ್


'ಭಾರತದಲ್ಲಿನ ಬ್ರಿಟಿಷ್ ಅಧಿಕಾರದ ಈ ಮಹಾನ್ ಸಂಕೇತವನ್ನು ನಿರ್ಮಿಸಲು ರೈಸಿನಾ ಮತ್ತು ಮಾಲ್ಚಾ ಎಂಬೆರೆಡು ಹಳ್ಳಿಗಳನ್ನು ಧ್ವಂಸ ಮಾಡಲಾಯಿತು. ಆಗ್ರಾದಲ್ಲಿನ ಆ ಬಿಳಿ ಅಮೃತಶಿಲೆಯ ಸುಂದರ ರಚನೆಯನ್ನು ದ್ವೇಷಿಸಲು ಕಾರಣಗಳನ್ನು ಹುಡುಕುವ ಬದಲು ಸೋಮ್‌ನಂತಹವರು ರೈಸಿನಾ ಹಳ್ಳಿಯಲ್ಲಿ ತಮ್ಮ ನೂರು ಎಕರೆ ಜಮೀನು ಕಳೆದುಕೊಂಡೂ, ಅದಕ್ಕಾಗಿ ಯಾವುದೇ ಪರಿಹಾರವನ್ನು ಸ್ವೀಕರಿಸಲು ನಿರಾಕರಿಸಿ ಸದ್ದಿಲ್ಲದೆ ಈಗಿನ ಹರ್ಯಾಣಾದ ಪಾಲ್‌ವಾಲ್‌ಗೆ ವಲಸೆ ಹೋದ ಕಲ್ಲು ಮತ್ತು ನಾಥು ಎಂಬ ರೈತಮಕ್ಕಳ ವಂಶಸ್ಥರನ್ನು ಹುಡುಕಿ ಅವರಿಗೆ ಏನಾದರೂ ಸಹಾಯ ಮಾಡುವ ಬಗ್ಗೆ ಯೋಚಿಸುವುದು ಒಳಿತು.'



ಸಿಕ್ಸರ ಪಟಕಾದ ಧಾರ್ಮಿಕತೆ ಮತ್ತು ದೀಪಾವಳಿಯ ದಿನ ಜನರ ಉಸಿರುಗಟ್ಟಿಸುವ ತಮ್ಮ ಹಕ್ಕಿನ ಬಗ್ಗೆ ಸಣ್ಣ ತರಲೆ ಎಬ್ಬಿಸಿದ ನಂತರ ಈಗ ತಾಜ್, ಹೌದು ಅಮರ ಪ್ರೇಮದ(ಅಥವಾ ಒಡಲಿಚ್ಛೆಯ) ಆ ಮನಮೋಹಕ ಸ್ಮಾರಕದ ಸರದಿ ಬಂದಿದೆ. ಈ ಹಿಂದೆ ಕೋಮು ದಂಗೆ ಎಬ್ಬಿಸಿದ ಆರೋಪದ ಮೇಲೆ ಬಂಧಿತನಾಗಿದ್ದ ಸಂಗೀತ್ ಸೋಮ್ ಎಂಬ ಬಿಜೆಪಿ ಶಾಸಕ ಈ ತಾಜ್ ದೇಶದ್ರೋಹಿಗಳಿಂದ ನಿರ್ಮಿತವಾದದ್ದು ಎನ್ನುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ, ಬಿಜೆಪಿಗೇ ಸೇರಿದ ಉ.ಪ್ರ. ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಇಲ್ಲ, ಅದನ್ನು ಭಾರತ ಮಾತೆಯ ಸುಪುತ್ರರು ತಮ್ಮ ಬೆವರು-ರಕ್ತ ಸುರಿಸಿ ಕಟ್ಟಿದ್ದಾರೆ ಎನ್ನುತ್ತಿದ್ದಾರೆ. ಇರಲಿ, ನಾನು ಅಜಂಖಾನನ ಅಭಿಮಾನಿ ಎಂದೂ ಆಗಿರಲಿಲ್ಲ. ವಾಸ್ತವವಾಗಿ ನಾನು ಮುಸ್ಲಿಂ ಮತ ವ್ಯಾಪಾರಿಗಳನ್ನು ಕಂಡರೆ ದೂರ ಸರಿಯುವವನು. ಅವರೆಲ್ಲರೂ ಸಮಾಜದ ಅಂಚಿಗೆ ತಳ್ಳಲ್ಪಟ್ಟು ತಮ್ಮದೇ ಕೊಳಕು ಕೇರಿಗಳನ್ನು ಸೇರಿಬಿಟ್ಟಿರುವ ಅಲ್ಪಸಂಖ್ಯಾತರ ಅಭದ್ರತೆಯನ್ನು ಬಂಡವಾಳ ಮಾಡಿಕೊಂಡು ಬದುಕುವ ಜನ. ಇವರು ಅಕ್ಲಾಖ್‌ಗಳನ್ನು ಗುಂಪು ಜಜ್ಜಿ ಕೊಂದಾಗಾಗಲೀ, ಮುಜಾಫರ್‌ಪುರ ಬೆಂಕಿಯಲ್ಲಿ ಉರಿಯುತ್ತಿರುವಾಗಾಗಲೀ ಏನೂ ಮಾಡುವುದಿಲ್ಲ. ಈ ಖಾನ್ ಮಂತ್ರಿಯಾಗಿದ್ದಾಗ ತನ್ನೆರೆಡು ಎಮ್ಮೆಗಳು ಕಳೆದುಹೋದಾಗ ಆತಂಕಗೊಂಡು ಅವನ್ನು ಹುಡುಕಿ ತರಲು ಪೋಲೀಸರನ್ನು ಕಳಿಸಿದ್ದ. ಅವರು ಅವನ್ನು ಹುಡುಕಿ ತಂದರೋ ಅಥವಾ ಎರಡು ಮೇಕೆಗಳನ್ನು ತಂದು ಇವೇ ನಿಮ್ಮ ಎಮ್ಮೆಗಳು ಎಂದು ಖಾನ್‌ನನ್ನು ಮನವೊಲಿಸುವಲ್ಲಿ ಯಶಸ್ವಿಯಾದರೋ ನನಗೆ ಗೊತ್ತಿಲ್ಲ. ಆದರೆ ಈ ಖಾನ್ ಈ ಬಾರಿ ಮಾತ್ರ ಆ ಬಿಜೆಪಿ ಶಾಸಕನಿಗೆ ವೈಸ್‌ರಾಯ್ ಭವನವನ್ನು ನೆನಪಿಸಿ, ಸ್ವಲ್ಪ ಬುದ್ಧಿ ಇದ್ದವನಂತೆ ಮಾತಾಡಿದ್ದಾನೆ. ಹಲವು ಶತಮಾನಗಳ ಹಿಂದಕ್ಕೆ ಹೋಗಿ ತಾಜ್ ಬಗ್ಗೆ ಮಾತಾಡುವುದೇಕೆ, ಬದಲಿಗೆ (ಈಗ ರಾಷ್ಟ್ರಪತಿ ಭವನವೆಂದು ಕರೆಯಲಾಗುವ) ಈ ವೈಸ್‌ರಾಯ್ ಭವನದ ಬಗ್ಗೆ ಚರ್ಚಿಸೋಣ ಎಂದಿದ್ದಾನೆ ಆತ. ಮೊಘಲರಾದರೋ ಕನಿಷ್ಠ ಭರತವರ್ಷವೆಂಬ ಈ ಭೌಗೋಳಿಕ ಗಡಿಯಾಚೆಗೆ ಏನನ್ನೂ ಒಯ್ಯಲಿಲ್ಲ. ಅವರು ಇಲ್ಲಿಗೆ ಬಂದು ಈ ನಾಡಿನ ಬಗ್ಗೆ ಪ್ರೀತಿ ಬೆಳೆಸಿಕೊಂಡರು, ಇಲ್ಲಿನ ಸ್ಥಳೀಯ ಆಳುವ ಮನೆತನಗಳ ಹೆಣ್ಣುಮಕ್ಕಳನ್ನು ಮದುವೆಯಾದರು ಮತ್ತು ಯಾರಾದರೂ ಬಾಯಿ ಮೇಲೆ ಬೆರಳಿಟ್ಟುಕೊಂಡು ನೋಡುವಂತೆ ಮಾಡುವ ಸುಂದರ ಮತ್ತು ಭವ್ಯ ಸ್ಮಾರಕಗಳನ್ನು ನಿರ್ಮಿಸಿದರು. ಇದೆಲ್ಲ ಸೋಮ್ ಮತ್ತು ಖಾನ್ ಅಂತಹವರಿಗೆ ಅರ್ಥವಾಗದ ಸಂಗತಿಗಳು. ಪಶ್ಚಿಮ ಉ.ಪ್ರ.ದ ಬುದ್ಧಿಜೀವಿಯೊಬ್ಬರು ನಮ್ಮದೊಂದು ಸಭೆಯೊಂದರಲ್ಲಿ ಪ್ರೇಮವೆಂಬುದು ಬಾಲಿವುಡ್‌ನಲ್ಲಿ ಮಾತ್ರ ಸಂಭವಿಸಬಲ್ಲ ಸಂಗತಿಯೆಂದು ಹೇಳಿದ್ದು ನನಗೆ ಚೆನ್ನಾಗಿ ನೆನಪಿದೆ. ಅವರು ಆಗ ಖಾಪ್ ಪಂಚಾಯ್ತ್‌ಗಳ ಬಗ್ಗೆ ವಿವರಿಸುತ್ತಿದ್ದರು. ಆದರೆ ಹಿಂದುತ್ವದ ಬಹಳಷ್ಟು ನಾಯಕರಲ್ಲಿನ ಮೊಘಲರ ಬಗೆಗಿನ ದ್ವೇಷ ಮತ್ತು ಬ್ರಿಟಿಷರ ಬಗೆಗಿನ ದೈನೇಸಿ ಅಭಿಮಾನ ನಿಜವಾಗಿಯೂ ವಿವರಣೆಗೆ ನಿಲುಕದಂತಹದ್ದು. ಇದಕ್ಕೂ, ವಿ.ಡಿ. ಸಾವರ್ಕರ್ ಅವರು ಬ್ರಿಟಿಷ್ ಸಾಮ್ರಾಜ್ಯದ ಸೇವೆ ಮಾಡುವುದಾಗಿ ಬರೆದು ಕೊಟ್ಟ ಆ ಕುಪ್ರಸಿದ್ಧ ಕ್ಷಮಾಪಣಾ ಪತ್ರದ ಹಿಂದಿನ ದೈನ್ಯತೆಗೂ ಏನಾದರೂ ಸಂಬಂಧವಿರಬಹುದೇ? ಹೇಗೂ ಈತ ಹಿಂದುತ್ವ ಸಿದ್ಧಾಂತದ ಪಿತಾಮಹನೇ ಅಲ್ಲವೇ? ಕಾರಣ ಏನೇ ಇರಲಿ, ಯಾವ ಬಾಯಿಬಡುಕ ತೀವ್ರವಾದಿಯೂ ಎಂದೂ ವೈಸ್‌ರಾಯ್ ಭವನವನ್ನು ಉರುಳಿಸುವ ಮಾತನಾಡಿಲ್ಲ. ಭಾರತದಲ್ಲಿನ ಬ್ರಿಟಿಷ್ ಅಧಿಕಾರದ ಈ ಮಹಾನ್ ಸಂಕೇತವನ್ನು ನಿರ್ಮಿಸಲು ರೈಸಿನಾ ಮತ್ತು ಮಾಲ್ಚಾ ಎಂಬೆರೆಡು ಹಳ್ಳಿಗಳನ್ನು ಧ್ವಂಸ ಮಾಡಲಾಯಿತು. ಆಗ್ರಾದಲ್ಲಿನ ಆ ಬಿಳಿ ಅಮೃತಶಿಲೆಯ ಸುಂದರ ರಚನೆಯನ್ನು ದ್ವೇಷಿಸಲು ಕಾರಣಗಳನ್ನು ಹುಡುಕುವ ಬದಲು ಸೋಮ್‌ನಂತಹವರು ರೈಸಿನಾ ಹಳ್ಳಿಯಲ್ಲಿ ತಮ್ಮ ನೂರು ಎಕರೆ ಜಮೀನು ಕಳೆದುಕೊಂಡೂ, ಅದಕ್ಕಾಗಿ ಯಾವುದೇ ಪರಿಹಾರವನ್ನು ಸ್ವೀಕರಿಸಲು ನಿರಾಕರಿಸಿ ಸದ್ದಿಲ್ಲದೆ ಈಗಿನ ಹರ್ಯಾಣಾದ ಪಾಲ್‌ವಾಲ್‌ಗೆ ವಲಸೆ ಹೋದ ಕಲ್ಲು ಮತ್ತು ನಾಥು ಎಂಬ ರೈತಮಕ್ಕಳ ವಂಶಸ್ಥರನ್ನು ಹುಡುಕಿ ಅವರಿಗೆ ಏನಾದರೂ ಸಹಾಯ ಮಾಡುವ ಬಗ್ಗೆ ಯೋಚಿಸುವುದು ಒಳಿತು.

ಈ ಸೋಮ್ ನಂತಹ ತಂಟೆಕೋರರು, ಈ ಬ್ರಿಟಿಷ್ ಅಧಿಕಾರ ಪೀಠವನ್ನು ಸ್ಥಾಪಿಸಲು ಆ ಎರಡು ಹಳ್ಳಿಗಳಲ್ಲಿದ್ದ ದೇವಾಲಯಗಳನ್ನು ಧ್ವಂಸ ಮಾಡಿದ್ದರ ಬಗ್ಗೆ ಎಂದೂ ಮಾತಾಡುವುದಿಲ್ಲ. ಅಥವಾ ಇವರು ನವದೆಹಲಿಯನ್ನು ನಿರ್ಮಿಸುತ್ತಿರುವಾಗ ವ್ಯಾಪಾರ ಕುದುರಿಸಲು ಮತ್ತು ಬಿರುದು ಬಾವಲಿಗಳನ್ನು ಸಂಪಾದಿಸಲು ಭಗತ್‌ಸಿಂಗ್ ವಿರುದ್ಧ ಸುಳ್ಳು ಸಾಕ್ಷ್ಯ ನೀಡಿದ ಕಂಟ್ರಾಕ್ಟರುಗಳ ವಿರುದ್ಧವೂ ಮಾತನಾಡುವುದಿಲ್ಲ. ನೂರು ವರ್ಷಗಳ ನಂತರ ಆ ಕಲ್ಲು ಮತ್ತು ನಾಥು ಅವರ ಮರಿಮೊಮ್ಮಕ್ಕಳು (ಆ ವೈಸ್‌ರಾಯ್ ಭವನವಿರುವ) ರೈಸಾನಾ ದಿಣ್ಣೆಯ ಬಳಿ ಬಂದಾಗ ಅವರಲ್ಲಿ ದ್ವೇಷಭಾವವೇನೂ ಕಾಣಲಾರದು. ಹೆಚ್ಚೆಂದರೆ, ಅವರು ಈಗಿನ ತಮ್ಮ ಬಡತನದ ಕಾರಣದಿಂದಾಗಿ ಈ ಹಿಂದೆ ಕಳಕೊಂಡದ್ದರ ಬಗ್ಗೆ ವಿಷಾದಪಡಬಹುದಷ್ಟೆ. ಆದರೆ ಖಂಡಿತ ಅವರು ತಮ್ಮ ನೆನಪನ್ನು ಯಾವ ರೀತಿಯಲ್ಲೂ ಕಾಡದ ೪೭೦ ವರ್ಷಗಳ ಹಿಂದಿನ ತಾಜ್ ಎಂಬ ಆ ಭವ್ಯ ಕಟ್ಟಡದ ಬಗ್ಗೆ ಸೃಷ್ಟಿಸಲಾಗುತ್ತಿರುವ ದ್ವೇಷದಲ್ಲಿ ಭಾಗಿಯಾಗಲಾರರು.

ಇಲ್ಲಿದೆ ಗಾಂಧಿಯವರ ರಾಷ್ಟ್ರೀಯತೆಗೂ ಹಿಂದುತ್ವದ ರಾಷ್ಟ್ರೀಯತೆಗೂ ಇರುವ ವ್ಯತ್ಯಾಸ. ಗಾಂಧಿ ಬ್ರಿಟಿಷ್ ಜನರನ್ನು ದ್ವೇಷಿಸದೆ, ಬ್ರಿಟಿಷ್ ಸಾಮ್ರಾಜ್ಯವನ್ನು ತನ್ನ ನಿಜ ಶತ್ರುವೆಂದು ಗುರುತಿಸಿ ಅದರ ವಿರುದ್ಧ ಹೋರಾಡಿ ಅವರು ೨೦೦ ವರ್ಷಗಳ ವಸಾಹತುಶಾಹಿಯ ನಂತರ ಈ ದೇಶ ಬಿಟ್ಟು ಹೋಗುವಂತೆ ಮಾಡಿದರು. ಸಾವರ್ಕರರೋ ಬ್ರಿಟಿಷ್ ಪ್ರಭುತ್ವವನ್ನು ಬೆಂಬಲಿಸುತ್ತಲೇ ತನ್ನ ಶಿಷ್ಯಗಣದಲ್ಲಿ ದ್ವೇಷದ ಬೀಜ ಬಿತ್ತಿ ಹುಸಿ ಶತ್ರುವೊಬ್ಬನನ್ನು ನಿರ್ಮಿಸಿ ಹೋದರು. ಬಹುಶಃ ಹಾಗಾಗಿಯೇ ಸೋಮ್‌ನಂತಹ ಜನರಿಗೆ ಈಗ ತನ್ನ ನಾಯಕರು ಆರಾಮವಾಗಿ ವಾಸವಾಗಿರುವ ಬ್ರಿಟಿಷ್ ಶೈಲಿಯಲ್ಲಿ ಲುಟ್ಯೆನ್ (ಎಂಬ ವಾಸ್ತುಶಿಲ್ಪಿ) ಕಟ್ಟಿದ ಬಂಗಲೆಗಳು ಮತ್ತು ವೈಸ್‌ರಾಯ್ ಭವನ ಹಾಗೂ ಪಾರ್ಲಿಮೆಂಟ್ ಭವನಗಳು ಅಧಿಕಾರ ಮತ್ತು ಪ್ರತಿಷ್ಠೆಯ ಜಾಗಗಳಾಗಿದ್ದರೆ, ತಾಜ್ ಕಣ್ಣುರಿಯ ಕೇಂದ್ರವಾಗಿದೆ.



(ಇದು ಲೇಖಕರು ತಾವು ಸಂಪಾದಕರಾಗಿರುವ 'ಔಟ್‌ಲುಕ್' ಪತ್ರಿಕೆಯ ಅಕ್ಟೋಬರ್ ೩೦ರ ಸಂಚಿಕೆಗಾಗಿ ಬರೆದ ಸಂಪಾದಕೀಯ ಲೇಖನ)

(ಕನ್ನಡ ಅನುವಾದ : ಡಿಎಸ್ಸೆನ್)

ಭಾರತದಲ್ಲಿ ಆರಂಭವಾಗಿರುವ ಉದ್ಯೋಗ ನಷ್ಟ ಪರ್ವ : ಒಂದು ವಿಶ್ಲೇಷಣೆ

-ಎಂ. ರಾಜು

ಮೋದಿ ನೇತೃತ್ವದ ಸರ್ಕಾರ ಏನೇ ಹೇಳಿದರೂ, ದೇಶದಲ್ಲಿ ಉದ್ಯೋಗ ನಿರ್ಮಾಣ ಕುಂಠಿತವಾಗಿದೆಯಲ್ಲದೆ, ಉದ್ಯೋಗ ನಷ್ಟವೂ ಗಮನಾರ್ಹವಾಗಿ ಹೆಚ್ಚುತ್ತಿದೆ ಎಂಬುದು ವಾಸ್ತವಾಂಶಗಳು ಸಾಬೀತುಪಡಿಸುತ್ತಿವೆ. ಇದಕ್ಕೆ ಸರ್ಕಾರದ ಸುಸಂಬದ್ಧವಲ್ಲದ ಆರ್ಥಿಕ ನೀತಿ ಮತ್ತು ಕಾರ್ಯಕ್ರಮಗಳು ಒಂದು ಕಾರಣವಾಗಿದ್ದರೆ ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರಗಳಿಂದಾಗಿ ಬದಲಾಗುತ್ತಿರುವ ಜಾಗತಿಕ ಉದ್ಯೋಗ ಸ್ವರೂಪ ಮತ್ತು ಅದು ಒಡ್ಡುತ್ತಿರುವ ಸವಾಲುಗಳಿಗೆ ಸಜ್ಜಾಗದ ನಮ್ಮ ಶಿಕ್ಷಣ ಕ್ರಮ ಮತ್ತು ಸಂಶೋಧನೆಗಳೂ ಕಾರಣವಾಗಿವೆ ಎನ್ನುತ್ತದೆ ವಿವಿಧ ಮೂಲಗಳ ಮಾಹಿತಿಯನ್ನು ಆಧರಿಸಿ ಸಂಯೋಜಿತವಾಗಿರುವ ಈ ಲೇಖನ.-ಸಂ.

ಒಂದು ದೇಶದ ಆ ರ್ಥಿಕ ಸ್ವಾಸ್ಥ್ಯದ ಸೂಚ್ಯಂಕವೇ ಆ ದೇಶದ ಉದ್ಯೋಗದ ಮಟ್ಟ ಎನ್ನುವುದಾದರೆ ಭಾರತದ ಆರ್ಥಿಕ ಸ್ವಾಸ್ಥ್ಯವು ಕ್ಷೀಣಿಸುತ್ತಿರುವ ಲಕ್ಷಣಗಳು ನಮ್ಮ ಕಣ್ಣೆದುರು ಸ್ಪಷ್ಟವಾಗಿ ಮೂಡುತ್ತಿವೆ. ೧೯೯೦ರಲ್ಲಿ ನಮ್ಮ ಜನಸಂಖ್ಯೆಯ ಶೇ. ೬೦.೩ರಷ್ಟು ಮಂದಿ ಉದ್ಯೋಗಸ್ಥರಾಗಿದ್ದರೆ ೨೦೧೫-೧೬ರ ಹೊತ್ತಿಗೆ ಉದ್ಯೋಗಸ್ಥರ ಶೇಕಡಾವಾರು ಪ್ರಮಾಣ ೫೦.೫ಕ್ಕೆ ಇಳಿದಿದೆ. ಭಾರತದ ರಿಸರ್ವ್ ಬ್ಯಾಂಕಿನ ಅಂಕಿ ಅಂಶಗಳ ಪ್ರಕಾರ ಈ ವರ್ಷದ ಆರ್ಥಿಕ ಬೆಳವಣಿಗೆಯ ಪ್ರಮಾಣ ಕಳೆದ ಏಳು ವರ್ಷಗಳಲ್ಲೇ ಅತ್ಯಂತ ಕನಿಷ್ಠ ಮಟ್ಟವನ್ನು ತಲುಪಿದೆ. ೨೦೦೯-೧೦ ರಲ್ಲಿ ಶೇ. ೧೨.೯ರಷ್ಟು ಇದ್ದ ಬೆಳವಣಿಗೆಯ ದರ ೨೦೧೫-೧೬ರಲ್ಲಿ ಶೇ. ೩.೭ಕ್ಕೆ ಇಳಿಕೆಯಾಗಿದೆ. ಬೆಳವಣಿಗೆಯ ದರ ಇಳಿಕೆಯಾಗಿರುವುದು ಮಾತ್ರವಲ್ಲದೆ, ಭಾರತದ ಔದ್ಯೋಗಿಕ ಸ್ಥಿತಿಸ್ಥಾಪಕತ್ವವೂ ಕೂಡ (ದೇಶದ ಔದ್ಯೋಗಿಕ ಬೆಳವಣಿಗೆಯು ಆ ದೇಶದ ನಿವ್ವಳ ಉತ್ಪನ್ನ(ಜಿಡಿಪಿ) ಬೆಳವಣಿಗೆಗೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದರ ಮಾಪಕ) ಇಳಿಮುಖವಾಗಿದೆ. ೧೯೯೧ ಮತ್ತು ೨೦೦೭ರ ನಡುವೆ ಈ ಅನುಪಾತ ಶೇ.೦.೩ರ ಆಸುಪಾಸಿನಲ್ಲಿತ್ತು. ಅಂದರೆ ಸುಮಾರು ೧% ನಷ್ಟು ಆರ್ಥಿಕ ಬೆಳವಣಿಗೆಯು ೦.೩% ನಷ್ಟು ಔದ್ಯೋಗಿಕ ಬೆಳವಣಿಗೆಗೆ ಕಾರಣವಾಗುತ್ತಿತ್ತು. ಪ್ರಸ್ತುತ ಅದು ಶೇ. ೦.೧೫ಕ್ಕೆ ಇಳಿದಿದೆ ಎಂಬುದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಅಂದಾಜು. ಇದರರ್ಥ ಇಂದು ಭಾರತದಲ್ಲಿ ೧% ಜಿಡಿಪಿಯ ಅಭಿವೃದ್ಧಿಯು ಸುಮಾರು ೦.೧೫% ನಷ್ಟು ಔದ್ಯೋಗಿಕ ಅಭಿವೃದ್ಧಿಗೆ ಮಾತ್ರ ಕಾರಣವಾಗಬಹುದು. ಇಂದು ಉದ್ಯೋಗ ಕಡಿತವೆಂಬುದು ಯಾವುದೋ ಒಂದು ವಲಯಕ್ಕೆ ಮಾತ್ರ ಸೀಮಿತವಾಗದೆ ಅದು ಸರ್ವವ್ಯಾಪಿಯಾಗಿದೆ. ಬ್ಯಾಂಕ್‌ಗಳು, ಬಳಕೆದಾರ ವಸ್ತುಗಳ ಉತ್ಪಾದಕರು, ಸಾರ್ವಜನಿಕ ಸೇವಾವಲಯದ ಸಂಸ್ಥೆಗಳು, ಕಾರ್ಖಾನೆಗಳು, ಇಂಜಿನಿಯರಿಂಗ್ ಕಂಪನಿಗಳು ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಉದ್ಯೋಗ ಕಡಿತವೆಂಬುದು ಇಂದು ಸಾಮಾನ್ಯ ಲಕ್ಷಣವಾಗಿದೆ. ಉದ್ಯೋಗ ಕಡಿತದಂತಹ ಕ್ರಮಗಳಿಗೆ ಮುಂದಾಗಿರುವ ಕಂಪನಿಗಳು ಎದುರಿಸುತ್ತಿರುವ ಸಮಸ್ಯೆಗಳು ಸಹ ಹಲವಾರು.

ವಾಸ್ತವದಲ್ಲಿ ಭಾರತದಲ್ಲಿ ಕಳೆದ ವರ್ಷ ನೋಟುಗಳ ಅಮಾನ್ಯೀಕರಣದ ನಂತರದ ಮೊದಲನೆ ತ್ರೈಮಾಸಿಕದಲ್ಲೇ ಅಸಂಘಟಿತ ವಲಯದಲ್ಲಿ ೧.೫ ದಶಲಕ್ಷದಷ್ಟು ಕೆಲಸಗಳು ನಷ್ಟವಾಗಿರಬಹುದೆಂಬ ಅಂದಾಜಿದೆ. ಭಾರತದ ಮಧ್ಯಮ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳು ಬಹುಸಂಖ್ಯಾತ ಭಾರತೀಯರಿಗೆ ಉದ್ಯೋಗದ ನೆಲೆಯಾಗಿದ್ದು, ಈ ಕ್ಷೇತ್ರವು ದೇಶದ ಜಿಡಿಪಿಗೆ ನೀಡುತ್ತಿರುವ ಕೊಡುಗೆ ಶೇ.೩೭.೫ರಷ್ಟು, ೮ ಕೋಟಿಗಿಂತಲೂ ಹೆಚ್ಚಿನ ಸಂಖ್ಯೆಯ ಜನ ತಮ್ಮ ಜೀವನಾಧಾರಕ್ಕಾಗಿ ಈ ಕ್ಷೇತ್ರವನ್ನು ಅವಲಂಬಿಸಿದ್ದಾರೆಂದರೆ ಇದರ ಮಹತ್ವ ಎಂಥದು ಎಂಬುದು ಯಾರಿಗಾದರೂ ಅರ್ಥವಾಗಬೇಕು. ನೋಟುಗಳ ಅಮಾನ್ಯೀಕರಣದಿಂದ ಅತಿ ಹೆಚ್ಚು ಸಂಕಷ್ಟಕ್ಕೊಳಗಾದ ವಲಯ ಇದುವೆ. ಲಾರ್ಸನ್ ಅಂಡ್ ಟೂಬ್ರೋದಂತಹ ಬೃಹತ್ ನಿರ್ಮಾಣ ಕಂಪನಿಯೂ ಕೂಡ ೨೦೧೬-೧೭ರಲ್ಲಿ ೧೪ ಸಾವಿರದಷ್ಟು ಕೆಲಸಗಾರರನ್ನು ಉದ್ಯೋಗದಿಂದ ಹೊರಹಾಕಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಸುಸ್ಥಾಪಿತ ಬೃಹತ್ ಕಂಪನಿಗಳದ್ದೇ ಒಂದು ಕಥೆಯಾದರೆ ನವೋದ್ಯಮಗಳದ್ದು (Start up) ಮತ್ತೊಂದು ಕಥೆ, ಈ ಕ್ಷೇತ್ರ ಕೂಡ ಭಾರತದಲ್ಲಿ ವೃತ್ತಿಪರರಿಗೆ ಉದ್ಯೋಗ ನೀಡುವ ಬಹುಮುಖ್ಯ ಕ್ಷೇತ್ರವಾಗಿದ್ದು ಈ ಕ್ಷೇತ್ರದ ಸಾಧನೆಯೂ ಕೂಡ ನಿರಾಶಾದಾಯಕವಾಗಿದೆ. ಸದ್ಯ ಭಾರತದಲ್ಲಿ ೧೯ ಸಾವಿರ ನವೋದ್ಯಮಗಳಿದ್ದು ಬಳಕೆದಾರರ ಸೇವೆ ಮತ್ತು ವಸ್ತುಗಳ ಪೂರೈಕೆ ಈ ಕ್ಷೇತ್ರದ ಆದ್ಯತೆಯಾಗಿದೆ. ಈ ನವೋದ್ಯಮಗಳೂ ಕೂಡ ಸಮಸ್ಯೆಗಳಿಂದ ಹೊರತಾಗಿಲ್ಲ. ಕಳೆದ ವರ್ಷ ಪ್ರಾರಂಭವಾದ ೬೦೦೦ ನವೋದ್ಯಮಗಳಿಗೆ ಹೋಲಿಸಿದರೆ ಈ ವರ್ಷ ಪ್ರಾರಂಭವಾದ ಕೇವಲ ೮೦೦ ನವೋದ್ಯಮಗಳು ಈ ಕ್ಷೇತ್ರ ಎದುರಿಸುತ್ತಿರುವ ಸಂಕಷ್ಟದ ಸೂಚನೆಗಳಾಗಿವೆ.

ತೈಲರಾಷ್ಟ್ರಗಳು ಎದುರಿಸುತ್ತಿರುವ ಬಿಕ್ಕಟ್ಟು ಭಾರತದ ಔದ್ಯೋಗಿಕ ಕ್ಷೇತ್ರದ ಮೇಲೆ ಗಣನೀಯವಾದ ಪರಿಣಾಮವನ್ನು ಬೀರತೊಡಗಿದೆ. ಹೊರ ದೇಶಗಳಲ್ಲಿ ಉದ್ಯೋಗದಲ್ಲಿರುವ ೧ ಕೋಟಿ ೧೪ ಲಕ್ಷ ಭಾರತೀಯರ ಪೈಕಿ ಸುಮಾರು ೫೦ಲಕ್ಷದಷ್ಟು ಜನ ಕೊಲ್ಲಿ ರಾಷ್ಟ್ರಗಳಲ್ಲಿದ್ದಾರೆ. ತೈಲಬೆಲೆ ಇಳಿಕೆಯಿಂದ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿರುವ ಸೌದಿ ಅರೇಬಿಯಾದಂತಹ ರಾಷ್ಟ್ರಗಳು, ವಿದೇಶಿ ಕೆಲಸಗಾರರನ್ನು ಹೊರದೂಡುವ ಉದ್ದೇಶದೊಂದಿಗೆ ಜಾರಿಮಾಡುತ್ತಿರುವ ವಲಸೆ ನೀತಿಗಳು ಭಾರತದ ಕೆಲಸಗಾರರಿಗೆ ಹೊಸ ಹೊಸ ಸಂಕಷ್ಟಗಳನ್ನು ತಂದೊಡ್ಡಿ ಅವರು ಸ್ವದೇಶಕ್ಕೆ ಮರಳುವ ನಿರ್ಧಾರಕ್ಕೆ ಬರಲು ಪ್ರೇರೇಪಿಸುತ್ತಿವೆ. ಸೌದಿ ಅರೇಬಿಯಾ ದೇಶವು ವಲಸಿಗ ಕಾರ್ಮಿಕರ ಅವಲಂಬಿತರ ಮೇಲಿನ ತೆರಿಗೆಯನ್ನು ಹಲವು ಪಟ್ಟು ಹೆಚ್ಚಿಸಿರುವುದು ಇದಕ್ಕೊಂದು ನಿದರ್ಶನ.

ಉದ್ಯೋಗ ನಷ್ಟದ ಸಮಸ್ಯೆ ಇತರ ಕ್ಷೇತ್ರಗಳಿಗೆ ಹೋಲಿಸಿದಲ್ಲಿ ಭಾರತದ ಅತಿದೊಡ್ಡ ಔದ್ಯೋಗಿಕ ಕ್ಷೇತ್ರವಾದ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಬಹು ಗಂಭೀರವಾದ ಪರಿಣಾಮಗಳನ್ನು ಉಂಟು ಮಾಡುತ್ತಿದೆ. ತನಗಿದ್ದ ಇಂಗ್ಲೀಷ್ ಭಾಷೆ ಮತ್ತು ವ್ಯಾಪಕ ತಾಂತ್ರಿಕ ಶಿಕ್ಷಣದ ಕಾರಣದಿಂದ ಕಳೆದ ಎರಡು ಮೂರು ದಶಕಗಳಲ್ಲಿ ಪ್ರಪಂಚದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಆರ್ಥಿಕ ಲಾಭದಲ್ಲಿ ಗಣನೀಯ ಪಾಲನ್ನು ಪಡೆಯುತ್ತಿದ್ದ ಭಾರತವು ಮಾಹಿತಿ ತಂತ್ರಜ್ಞಾನದ ಸೇವೆಗಳನ್ನು ಒದಗಿಸುವ ಬೃಹತ್ ಖಾಸಗಿ ಕಂಪನಿಗಳ ಹುಟ್ಟು ಮತ್ತು ಬೆಳವಣಿಗೆಗಳನ್ನು ಕಂಡಿತು. ಈ ಕ್ಷೇತ್ರವು ಇಂದು ೧೫೦ ಬಿಲಿಯನ್ ಡಾಲರ್‌ಗಳ ದೈತ್ಯ ಉದ್ಯಮವಾಗಿ ಬೆಳೆದು ಲಕ್ಷ ಯುವಜನರಿಗೆ ಉದ್ಯೋಗ ಒದಗಿಸಿದೆ.

ಇಂತಹ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಇಂದು ಹಲವಾರು ಸವಾಲುಗಳನ್ನು ಎದುರಿಸಬೇಕಾಗಿದೆ. ಆಧುನಿಕ ಜಗತ್ತಿನ ಪ್ರಧಾನ ಲಕ್ಷಣವಾದ ವೇಗಕ್ಕೆ ಒತ್ತಾಸೆ ನೀಡಿದ ಮಾಹಿತಿ ತಂತ್ರಜ್ಞಾನ ಕ್ಷೇತ್ರವು ತಾನು ಸೃಷ್ಟಿಸಿದ ವೇಗಕ್ಕೆ ತಾನೇ ಬಲಿಯಾಗುವಂತೆ ಕಾಣುತ್ತಿದೆ. ೨೦೧೬-೧೭ರಲ್ಲಿ ಭಾರತದ ತಂತ್ರಜ್ಞಾನ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಉದ್ಯೋಗ ನಷ್ಟವು ಕಳೆದ ಇಪ್ಪತ್ತೈದು ವರ್ಷಗಳಲ್ಲೇ ಅತಿ ಹೆಚ್ಚು ಎಂಬುದು ತಜ್ಞರ ಅಭಿಪ್ರಾಯ. ಮುಂದಿನ ಮೂರು ವರ್ಷಗಳಲ್ಲಿ ೧.೫ ರಿಂದ ೨ ಲಕ್ಷಗಳಷ್ಟು ಉದ್ಯೋಗ ನಷ್ಟದ ಸಾಧ್ಯತೆಯನ್ನು ಊಹಿಸಲಾಗುತ್ತಿದೆ. ಆದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಗಳ ಸಂಘಟನೆಯಾದ Forum of IT employeesನ ಪ್ರಕಾರ ೨೦೧೬-೧೭ ಒಂದೇ ವರ್ಷದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ನಷ್ಟವಾಗಬಹುದು. ಒಂದು ಅಂದಾಜಿನ ಪ್ರಕಾರ ೨೦೨೧ರ ಹೊತ್ತಿಗೆ ಕನಿಷ್ಟ ಕ ೬.೪ ಲಕ್ಷದಷ್ಟು ಕುಶಲ ಹುದ್ದೆಗಳು ಮರೆಯಾಗಲಿವೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಈ ಪರಿಯ ಆತಂಕಕಾರಿ ಬೆಳವಣಿಗೆಗೆ ಹಲವಾರು ಕಾರಣಗಳಿವೆ. ಅಮೆರಿಕ, ಆಸ್ಟ್ರೇಲಿಯ ಮತ್ತು ಯು.ಕೆ ಸರ್ಕಾರಗಳು ವಲಸೆಗಾರ ಕೆಲಸಗಾರರ ವೀಸಾಗಳ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಿದ್ದು, ಯು.ಕೆ. ಐರೋಪ್ಯ ಒಕ್ಕೂಟದಿಂದದಿಂದ ಹೊರಬಂದಿದ್ದು, ಪಾಶ್ಚಿಮಾತ್ಯ ಆರ್ಥಿಕತೆಗಳು ಸ್ಥಗಿತಗೊಂಡಿದ್ದು, ಹೀಗೆ ಈ ಎಲ್ಲಾ ಕಾರಣಗಳು ಒಂದಾಗಿ ಭಾರತದ ಮಾಹಿತಿ ತಂತ್ರಜ್ಞಾನದ ಬೇಡಿಕೆ ಕಡಿಮೆಯಾಗುವಂತೆ ಮಾಡಿವೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳ


ಫಲವಾಗಿ ಸೃಷ್ಟಿಯಾಗುತ್ತಿರುವ ಕೃತಕ ಬುದ್ಧಿಮತ್ತೆ (Artificial Intelligence) ಮತ್ತು ಈ ಬಗೆಯ ಕೃತಕ ಬುದ್ಧಿಮತ್ತೆಯು ಸಾಧ್ಯವಾಗಿಸಿರುವ ಸ್ವಯಂಚಾಲನೆ (Automation) ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಾಥಮಿಕ ಹಂತದ ಹೆಚ್ಚಿನ ಕೌಶಲ್ಯದ ಅಗತ್ಯವಿಲ್ಲದ ಲಕ್ಷಾಂತರ ಹುದ್ದೆಗಳನ್ನು ನಿರುಪಯುಕ್ತಗೊಳಿಸುವುದರಿಂದ, ಕಂಪನಿಗಳು ತಮ್ಮ ಸಿಬ್ಬಂದಿಯ ಗಾತ್ರವನ್ನು ಕಡಿಮೆ ಮಾಡುವುದು ನಿಸ್ಸಂಶಯ. ಈ ಕೃತಕ ಬುದ್ಧಿಮತ್ತೆ ಮತ್ತು ಸ್ವಯಂಚಾಲನೆಯು ಕಾರ್ಯಗತಗೊಳ್ಳುವ ಕಾಲ ಇನ್ನೂ ಬಹಳದೂರದಲ್ಲಿದೆ ಎಂಬ ನಂಬಿಕೆಗಳನ್ನು ಹುಸಿಗೊಳಿಸುವ ಬೆಳವಣಿಗೆಗಳು ಈಗಾಗಲೇ ನಮ್ಮ ಕಣ್ಣೆದುರಿಗಿವೆ. ಉದಾಹರಣೆಗೆ ಜೆ.ಪಿ. ಮಾರ್ಗನ್ ಎಂಬ ಸಂಸ್ಥೆಯಲ್ಲಿ ವಾಣಿಜ್ಯ ಸಾಲದ ಒಪ್ಪಂದಗಳನ್ನು ವಕೀಲರು ಸಹಸ್ರಾರು ಗಂಟೆಗಳ ಕಾಲ ಶ್ರಮವಹಿಸಿ ಪರಿಶೀಲನೆ ನಡೆಸುತ್ತಿದ್ದು ಇದೀಗ ಆ ಕೆಲಸವನ್ನು ಕೃತಕ ಬುದ್ಧಿಮತ್ತೆಯ ಸಹಾಯದಿಂದ ನಿರಾಯಾಸವಾಗಿ ನಿರ್ವಹಿಸಲಾಗುತ್ತಿದೆ. ಭಾರತದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ICICI ಬ್ಯಾಂಕ್‌ನಲ್ಲಿ ಪ್ರತಿದಿನ ಲಕ್ಷಾಂತರ ವ್ಯವಹಾರಗಳನ್ನು ರೋಬೋಗಳೇ ನಿರ್ವಹಿಸುತ್ತವೆ. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ ಸೌಲಭ್ಯಗಳನ್ನು ಬಳಸುವ ಸಣ್ಣ ಸಣ್ಣ ಸಂಸ್ಥೆಗಳು ಸಹ ಈ ಸೌಲಭ್ಯವಿಲ್ಲದ ಬೃಹತ್ ಸಂಸ್ಥೆಗಳಿಗೆ ಪೈಪೋಟಿ ನೀಡಬಲ್ಲವು. ಹಾಗಾಗಿ ಇಂದಿನ ಬೃಹತ್ ಸಾಫ್ಟ್‌ವೇರ್ ಕಂಪನಿಗಳು ಕೃತಕ ಬುದ್ಧಿಮತ್ತೆಯ ಸೌಲಭ್ಯಗಳನ್ನು ಸೃಷ್ಟಿಸಿಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನಗಳನ್ನು ನಡೆಸುತ್ತಿವೆ. ಆದರೆ ಕೃತಕ ಬುದ್ಧಿಮತ್ತೆ ಮತ್ತು ರೋಬೋಟಿಕ್ ತಂತ್ರಾಧಾರಿತ ಅಭಿವೃದ್ಧಿಯಲ್ಲಿ ನಾವು ಹಿಂದುಳಿದಿದ್ದೇವೆ. ತನ್ನ ಪಾಶ್ಚಿಮಾತ್ಯ ಬಳಕೆದಾರರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವುದರಲ್ಲೇ ಮುಳುಗಿ ಹೋಗಿದ್ದ ನಮ್ಮ ಐಟಿ ಕಂಪನಿಗಳು ಹೊಸ ಕೌಶಲಗಳ ಅಭಿವೃದ್ಧಿಗೆ ಸಂಶೋಧನೆಗೆ ಸಾಕಷ್ಟು ಗಮನ ನೀಡದೇ ತಂತ್ರಜ್ಞಾನದ ಪೈಪೋಟಿಯಲ್ಲಿ ಹಿಂದೆ ಬೀಳುವ ಸೂಚನೆಗಳು ಸ್ಪಷ್ಟವಾಗಿವೆ.

ಭಾರತದ ಜನಸಂಖ್ಯೆ ಅಪಾರವಾಗಿದೆ. ಉನ್ನತ ಶಿಕ್ಷಣ ಪಡೆದ ಯುವಕರ ಭಾರೀ ದೊಡ್ಡ ದಂಡು ನಮ್ಮಲ್ಲಿ ಲಭ್ಯವಿದೆ. ಆದರೆ ಗುಣಮಟ್ಟದ ವಿಷಯದಲ್ಲಿ ನಮ್ಮದು ನಿರಾಶಾದಾಯಕ ಸ್ಥಿತಿ. 'ಆಸ್ಪೈರಿಂಗ್ ಮೈಂಡ್ಸ್' ಎಂಬ ಸಂಸ್ಥೆಯು ೨೦೧೬ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಎಂಜಿನಿಯರಿಂಗ್ ಶಿಕ್ಷಿತರ ಉದ್ಯೋಗಾರ್ಹತೆಯ (Employability) ಮಟ್ಟ ಕೇವಲ ಶೇ. ೪. ಇದೇ ಸಂಸ್ಥೆಯು ೨೦೧೫ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಭಾರತದ ೬೫೦ ಇಂಜಿನಿಯರಿಂಗ್ ಕಾಲೇಜುಗಳಿಂದ ಪದವಿ ಪಡೆದ ಯುವಕರಲ್ಲಿ ಶೇ. ೮೦ರಷ್ಟು ಮಂದಿ ನಿರುದ್ಯೋಗಿಗಳಾಗಿಯೇ ಉಳಿದಿದ್ದು ಕಂಡು ಬಂತು.

ಭಾರತದ ವಿಶಿಷ್ಠ ಸಾಮಾಜಿಕ ರಚನೆಯ ಕಾರಣದಿಂದ ಯಾವುದೇ ಆರ್ಥಿಕ ಸಮಸ್ಯೆಯೂ ನಮ್ಮ ಜನರನ್ನು ಬಾಧಿಸುವ ಮಾದರಿಯೂ ಕೂಡ ವಿಶಿಷ್ಠವಾಗೇ ಇರುತ್ತದೆ. ಭಾರತವು ಕೃಷಿಯಿಂದ ಕೈಗಾರಿಕೆಯ ಕಡೆಗೆ ಹೊರಳುವ ಸಂಧಿಕಾಲ ಇದಾಗಿದ್ದು ಕೃಷಿಯನ್ನು ಅವಲಂಬಿಸಿ ಜೀವಿಸುತ್ತಿರುವವರ ಸ್ಥಿತಿ ದಯನೀಯವಾಗಿದೆ. ಅದು ಉತ್ತಮಗೊಳ್ಳುವ ಲಕ್ಷಣಗಳು ಕಂಡು ಬರುತ್ತಿಲ್ಲ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಖಐಓ) ಯ ಸಮೀಕ್ಷೆಯ ಪ್ರಕಾರ ೧೯೯೪ರಲ್ಲಿ ಕೃಷಿಯಲ್ಲಿ ತೊಡಗಿದ್ದವರ ಪ್ರಮಾಣ ಭಾರತದ ಜನಸಂಖ್ಯೆಯ ಶೇ. ೬೦.೫ ಇದ್ದದ್ದು ೨೦೧೨ರ ಹೊತ್ತಿಗೆ ಶೇ. ೪೭.೨ಕ್ಕೆ ಇಳಿಕೆಯಾಗಿತ್ತು. ಆದರೆ ಕೈಗಾರಿಕಾ ಕ್ಷೇತ್ರದ ಪಾಲು ೧೯೯೪ರಲ್ಲಿ ಶೇ. ೧೫.೬ ಇದ್ದದ್ದು ೨೦೧೨ರ ಹೊತ್ತಿಗೆ ಶೇ. ೨೪.೭ಕ್ಕೆ ಏರಿಕೆಯಾಗಿತ್ತು.

ವಿದ್ಯಾರ್ಹತೆಯ ಮಟ್ಟಕ್ಕೂ ನಿರುದ್ಯೋಗದ ಮಟ್ಟಕ್ಕೂ ವಿಶಿಷ್ಟವಾದ ಸಂಬಂಧವಿರುವುದು ಕೂಡ ಸಮೀಕ್ಷೆಗಳಿಂದ ಬೆಳಕಿಗೆ ಬಂದಿದೆ. ಅವಿದ್ಯಾವಂತರಲ್ಲಿ ಶೇ. ೦.೬ ಇರುವ ನಿರುದ್ಯೋಗದ ಪ್ರಮಾಣವು ಪದವೀಧರರಲ್ಲಿ ಶೇ.೬.೬ ರಷ್ಟು ಹೆಚ್ಚಿನ ಪ್ರಮಾಣದಲ್ಲಿದೆ. ೧೫ ರಿಂದ ೨೯ ವರ್ಷ ವಯೋಮಾನದವರಲ್ಲಿ ಯಾವುದೇ ರೀತಿಯ ವಿದ್ಯಾಭ್ಯಾಸದಲ್ಲಿ ತೊಡಗದೆ ಯಾವುದೇ ವೃತ್ತಿಯನ್ನೂ ಅವಲಂಬಿಸದೆ ಇರುವವರ ಪ್ರಮಾಣ ಶೇ.೩೦.೮೩ರಷ್ಟು ಇರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಏಕೆಂದರೆ ಇಂದು ನಾವು ಕಾಣುತ್ತಿರುವ ಸಮಾಜವಿರೋಧಿ ಅಹಿತಕರ ಬೆಳವಣಿಗೆಗಳಿಗೆ ಬಹುತೇಕ ಈ ವರ್ಗವೇ ಕಾರಣವಾಗಿರುತ್ತದೆ. ಹೀಗೆ ಉಂಡಾಡಿಗಳಾಗಿರುವವರ ಪ್ರಮಾಣ ದಕ್ಷಿಣ ಆಫ್ರಿಕಾದಲ್ಲಿ ಶೇ. ೩೬.೬೫ ಇದ್ದು ಭಾರತ ಎರಡನೇಯ ಸ್ಥಾನದಲ್ಲಿದೆ. ಜಾತಿ ಆಧಾರಿತ ಸಾಮಾಜಿಕ ಶ್ರೇಣೀಕರಣ ಭಾರತದ ವಿಶಿಷ್ಠ ಲಕ್ಷಣವಾಗಿದ್ದು ಔದ್ಯೋಗಿಕ ವಲಯಕ್ಕೂ ಕೂಡ ಈ ಶ್ರೇಣೀಕರಣ ವಿಸ್ತರಣೆಯಾಗಿರುವುದು ಅಂಕಿ ಅಂಶಗಳಿಂದ ಕಂಡು ಬರುತ್ತದೆ. ಅಧಿಕೃತ ಸಮೀಕ್ಷೆಯೊಂದರ ಪ್ರಕಾರ ಖಾಸಗಿ ವಲಯದಲ್ಲಿ ಮೇಲ್ಜಾತಿಗಳ ಪ್ರಮಾಣ ಅತಿ ಹೆಚ್ಚು ಅಂದರೆ ಶೇ.೪೫ ಆದರೆ ಸಾರ್ವಜನಿಕ ವಲಯದಲ್ಲಿ ಮೇಲ್ಜಾತಿಯವರ ಪ್ರಮಾಣ ಶೇ. ೩೭.೨ ಮಾತ್ರ. ಉನ್ನತ ವರ್ಗದ ಮುಸ್ಲಿಮರ ಪ್ರಮಾಣ ಖಾಸಗಿ ಕ್ಷೇತ್ರದಲ್ಲಿ ಶೇ.೨.೪ ಇದ್ದು ಸಾರ್ವಜನಿಕ ವಲಯದಲ್ಲಿ ಅದು ಶೇ.೩.೨ ಆಗಿದೆ. ಪರಿಶಿಷ್ಟ ಜಾತಿಗಳ ಪಾಲು ಖಾಸಗಿ ವಲಯದಲ್ಲಿ ಶೇ. ೧೦.೨ ಆದರೆ ಸಾರ್ವಜನಿಕ ವಲಯದಲ್ಲಿ ಶೇ.೧೬.೩. ಪರಿಶಿಷ್ಟ ಪಾಲು ಖಾಸಗಿ ವಲಯದಲ್ಲಿ ಶೇ.೨.೨; ಸಾರ್ವಜನಿಕವಲಯದಲ್ಲಿ ಶೇ.೮.೧. ವಿವಿಧ ಕ್ಷೇತ್ರಗಳಲ್ಲಿ ಉಂಟಾಗುವ ಉದ್ಯೋಗ ನಷ್ಟದಂತಹ ಆಘಾತಗಳು ಇತರೆ ಆರ್ಥಿಕ ಸಂಕಷ್ಟಗಳಂತೆ ಸಮಾಜದ ಎಲ್ಲ ಶ್ರೇಣಿಗಳನ್ನೂ ಏಕರೀತಿಯಲ್ಲಿ ಬಾಧಿಸುವುದಿಲ್ಲ ಎಂಬುದು ಈ ಅಂಕಿ ಅಂಶಗಳಿಂದ ನಾವು ತಿಳಿಯಬಹುದಾದ ಸಂಗತಿ.

(ಭದ್ರಾವತಿಯ ವಿಶ್ವೇಶರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ನಿವೃತ್ತ ತಂತ್ರಜ್ಞರಾದ ಲೇಖಕ ರಾಜು ಅವರು ಸಮಕಾಲೀನ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಬೆಳವಣಿಗೆಗಳ ಗಂಭೀರ ವೀಕ್ಷಕ-ವಿಶ್ಲೇಷಕರೂ ಹೌದು)



೬ನೇ ಪುಟದಿಂದ)

ಕಣ್ಣಮುಂದೆಯೇ ಬುಡಮೇಲು ಮಾಡಿ, ಕೆಡವಿ, ನಿಂದಿಸಿ, ಅವುಗಳ ಸ್ವರೂಪವನ್ನೇ ಬದಲಿಸಿಬಿಡಲಾಗುತ್ತಿದೆ. ಅದಕ್ಕಾಗಿ ಅವರು ಬಳಸುತ್ತಿರುವ ಕ್ರಮಗಳು ಈಗ ರಹಸ್ಯವಾಗೇನು ಉಳಿದಿಲ್ಲ. ವಿರೋಧಿಗಳನ್ನು ಅವರು ಕೊಲ್ಲುತ್ತಿದ್ದಾರೆ. ಪ್ರತಿರೋಧ ವ್ಯಕ್ತಪಡಿಸುತ್ತಿರುವ ನಮ್ಮಂತಹವರಿಗೆ ಮುಂದೆ ನಿಮಗೆ ಗ್ರಹಚಾರ ಕಾದಿದೆ ನೋಡಿ ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ಸಾರ್ವಜನಿಕ ಚಿಂತನೆಯಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಪುನರ್‌ಸ್ಥಾಪಿಸಬೇಕೆನ್ನುವುದಾದರೆ ಆ ಕೆಲಸವವನ್ನು ಖಂಡಿತವಾಗಿಯೂ ಇಂದೇ ಮಾಡಬೇಕು. ವ್ಯರ್ಥಮಾಡಲು ಸಮಯವೇ ಉಳಿದಿಲ್ಲ. ಇದು ಕೇವಲ ಧಾರ್ಮಿಕ ಅಲ್ಪಸಂಖ್ಯಾತರ ನಡುವಿನ ಐಕ್ಯತೆಯಲ್ಲ. ಇದು ದಲಿತರು, ಬುಡಕಟ್ಟು ಜನಾಂಗ, ಜನಾಂಗೀಯ ಮತ್ತು ಭಾಷಾ ಅಲ್ಪಸಂಖ್ಯಾತರು ಇವರ ನಡುವಿನ ಭಾವೈಕ್ಯತೆಯೂ ಹೌದು. ಭಾರತ ಮೂಲಭೂತವಾಗಿ ರೂಪುಗೊಂಡಿರುವುದೇ ತನ್ನ ಸಂಸ್ಕೃತಿಗಳಿಂದಾಗಿ. ಮತ್ತು ಒಂದುವೇಳೆ ಅದನ್ನು ವಿಷಪೂರಿತವಾಗಲು ಅವಕಾಶ ಮಾಡಿಕೊಟ್ಟರೆ, ಆಗ ನಮ್ಮ ಸಮಗ್ರ ನಾಗರಿಕ ಪ್ರಜ್ಞೆಯನ್ನೇ ಬಲಿಪೀಠದ ಮೇಲೆ ಇಟ್ಟುಬಿಟ್ಟಂತೆ. ಸೋಲು ನಮ್ಮದಾಗುತ್ತದೆ. ಹಾಗಾಗಲು ನಾವು ಬಿಡಬಾರದು.

ಪ್ರಶ್ನಿಸೋಣ, ಪ್ರತಿಭಟಿಸೋಣ, ತಿಳಿಯೋಣ, ಮತ್ತು ಹುಡುಕಿಕೊಳ್ಳೋಣ.

ಈ ಪ್ರಶ್ನಿಸುವ, ಪ್ರತಿಭಟಿಸುವ, ಅರಿಯುವ ಮತ್ತು ಅರಸುವ ಪಯಣವನ್ನು ನಾನು ಮುಂದುವರೆಸುತ್ತೇನೆ. ಈ ಪ್ರಶಸ್ತಿಯನ್ನು ಸ್ವೀಕರಿಸುವ ನಾನು, ಒಂದು ದೇಶವಾಗಿ ನಾವು ಯಾರು, ನಾವು ಏನಾಗಬೇಕೆಂದು ಬಯಸಿದ್ದೇವೆ? ಎನ್ನುವುದಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಸಂವಾದವನ್ನು ಹುಟ್ಟುಹಾಕುವ ಒಂದು ವಾಹಕ ಅಷ್ಟೇ. ಈ ಹಾದಿಯಲ್ಲಿ ಸಾಗಿರುವ, ಈಗಲೂ ನನಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡುತ್ತಿರುವ ಎಲ್ಲರಿಗೂ ನಾನು ಋಣಿ. ನಮ್ಮ ಒಳ್ಳೆಯತನವನ್ನು ನಂಬಿರುವ ಭಾರತದ ಪ್ರಜಾಸತ್ತಾತ್ಮಕ ಚಿಂತಕರ ಪರಂಪರೆಯನ್ನು ನಾನು ಮುಂದೆ ಒಯ್ಯುತ್ತಿದ್ದೇನೆ ಅಷ್ಟೆ.

ಮುಗಿಸುವುದಕ್ಕೆ ಮುನ್ನ ಗಾಂಧೀಜಿಯವರ ಆಶ್ರಮದಲ್ಲಿ ಹಾಡುತ್ತಿದ್ದ ಹಾಡಿನ ಕೆಲವು ಸಾಲುಗಳನ್ನು ಇಲ್ಲಿ ಹಾಡಬಯಸುತ್ತೇನೆ. ನಾವು ಈ ಸಾಲುಗಳನ್ನು ಮನದಲ್ಲಿಟ್ಟುಕೊಂಡು ಅದರ ದಿಗಂತಗಳನ್ನು ಮತ್ತಷ್ಟು ವಿಸ್ತರಿಸಬೇಕು.

ಓಂ ತತ್ ಸತ್ ಶ್ರೀ ನಾರಾಯಣ ತೂ
ಸ್ಕಂದ ವಿನಾಯಕ ಸವಿತಾ ಪಾವಕ ತೂ
ಬ್ರಹ್ಮ ಮಜ್ದಾ ತೂ, ಯಹ್ವಾ ಶಕ್ತಿ ತೂ
ಈಸು ಪಿತಾ ಪ್ರಭು ತೂ, ರುದ್ರ ವಿಷ್ಣು ತೂ
ರಾಮಕೃಷ್ಣ ತೂ, ರಹೀಮ ತಾ ಓ ತೂ
ವಿಶ್ವರೂಪ ತೂ, ಅದ್ವಿತೀಯ ತೂ
ಓಂ ತತ್ ಸತ್

(ಕನ್ನಡಕ್ಕೆ.: **ಶೈಲಜಾ ವೇಣುಗೋಪಾಲ್**)

ಕಥೆ

ದಯಾ ಎಂಬ ನದಿಯ ಮಾತು

-ಜಿ.ವಿ. ಆನಂದಮೂರ್ತಿ



ನಾನು ದಯಾ. ಆಕಾರವೇ ಇಲ್ಲದೆ ಹರಿಯುತ್ತಿದ್ದ ನನಗೆ ಎಲ್ಲಿಲ್ಲದ ಹೊಳಪಿತ್ತು. ಆಕಾಶ ಮತ್ತು ಭೂಮಿಯ ಎಲ್ಲ ಚೈತನ್ಯವನ್ನೂ ನನ್ನೊಳಗೆ ಕರಗಿಸಿಕೊಂಡು, ದೌಲಗಿರಿ ಬೆಟ್ಟದ ತಟದಲ್ಲಿ ತುಳುಕಾಡುತ್ತಾ, ತಿಟ್ಟು- ತೇವರ ದಾಟಿಕೊಂಡು ಮೌನವಾಗಿ ಹರಿಯುತ್ತಿದ್ದೆ. 'ದೌಲಗಿರಿ ಬೆಟ್ಟದಿಂದ ನಿಂತು ನೋಡಿದರೆ ನಮ್ಮೆಲ್ಲರ ಪ್ರೀತಿಯ ನದಿ, ಭೂಮಿಗೆ ತೊಡಿಸಿದ ಸರದಂತೆ ಕಾಣುತ್ತದೆ' ಎಂದು ಇಲ್ಲಿನ ದನಗಾಹಿಗಳು ಹೇಳುತ್ತಿದ್ದುದು ನನ್ನ ಕಿವಿಗೂ ಬಿದ್ದಿದೆ. ಬೆಟ್ಟದ ಬುಡದವರೆಗೆ ಗೆರೆ ಎಳೆದಂತೆ ಕಾಣುವ ಒಂದು ಕಾಲುದಾರಿ. ಕೈಗೆ ತಾಗುವಂತೆ ತೇಲಾಡುತ್ತಿದ್ದ ಮೋಡಗಳು.ನಿಂತವರ ಭುಜ ಸವರಿಕೊಂಡೇ ಹಾರುವ ಹಕ್ಕಿಗಳು. ನನ್ನ ಎಡಬಲದಲ್ಲಿ ಕಡಲಿನಂತೆ ಹಬ್ಬಿದ್ದ ಹಸುರು ಬಯಲು; ನೋಡಿದರೆ ಭೂಮಂಡಲದ ತಪೋಭೂಮಿ ಎನ್ನುವಂತಿದ್ದ ಈ ತಾಣದಲ್ಲಿ, ಮಳೆ ಮೋಡಗಳೇ ನನ್ನನ್ನು ಇಲ್ಲಿ ಸೃಷ್ಟಿಸಿವೆ ಎಂದು ಭಾಸವಾಗುತ್ತಿದೆ. ಎಲ್ಲರನ್ನೂ ಪೊರೆಯುವ ಭೂಮಿ ನನ್ನನ್ನು ತೆರೆದ ಮನಸ್ಸಿನಿಂದ ಸ್ವೀಕರಿಸಿತ್ತು. ಹುಟ್ಟಿದ ಎಷ್ಟೋ ಕಲ್ಪಗಳ ತರುವಾಯ ನಾನು ಹರಿಯುವ ಈ ಭೂಮಿಗೆ 'ಕಳಿಂಗ' ಎನ್ನುವ ಹೆಸರು ಬಂತು.

ಹೊಲಗಳಲ್ಲಿ ಕಠಿಣ ದುಡಿಮೆ ಮಾಡುತ್ತಿದ್ದವರು, ಮನಸ್ಸಿನ ತುಮುಲಗಳಿಂದ ಬಳಲಿದವರು, ಸುತ್ತಮುತ್ತಲ ದನಗಾಹಿಗಳು, ಕುರಿ ಕಾಯುವವರು ತಮ್ಮ ಮಂದೆಗಳೊಂದಿಗೆ ಬಂದು, ತಿಳಿಹಸುರಿನ ನನ್ನ ತಟದಲ್ಲಿಯೇ ವಿರಮಿಸುತ್ತಿದ್ದರು. ನನ್ನ ಮಡಿಲಿಗೆ ಬಂದವರನ್ನೆಲ್ಲಾ ನಾನು ಉಪಶಮನಗೊಳಿಸಿ, ಅವರ ದಾಹವನ್ನು ತಣಿಸುತ್ತಿದ್ದೆ. ಬಹುಕಾಲದಿಂದ ನನ್ನನ್ನು ಕಂಡ ಇಲ್ಲಿನ ಹಿರೀಕರು 'ಒಂದು ಸಲ ಈ ನದಿಯ ತಿಳಿನೀರನ್ನು ತುದಿಬೆರಳುಗಳಿಂದ ಮುಟ್ಟಿದರೆ ಸಾಕು, ನಮ್ಮ ಆಯಾಸವೆಲ್ಲಾ ಮಾಯವಾಗುತ್ತದೆ. ಅಂತಹ ದಯಾಮಯಿ ಇವಳು' ಎಂದು 'ನನ್ನ ಬಗ್ಗೆ ಹೇಳುತ್ತಿದ್ದನ್ನು ಕೇಳಿದ್ದೇನೆ. ಆದ್ದರಿಂದಲೆ ಇಲ್ಲಿನವರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಕರೆಯುವಂತೆ ನನ್ನನ್ನು 'ದಯಾ' ಎಂದು ಕರೆದರು. ನನಗೆ ನನ್ನ ವಯಸ್ಸಿನ ನೆನಪಿಲ್ಲ. ಈ ದೌಲಗಿರಿಯ ಬಂಡೆಗಳಿಗೆ ಹೋಲಿಸಿದರೆ ನಾನು ಬಲು ಚಿಕ್ಕವಳು, ಮನುಷ್ಯರಿಗಿಂತ ಹಿರಿಯವಳು. ಸುತ್ತಮುತ್ತಲ ಹಳ್ಳಿಗಳ ಜನರ ನಿಷ್ಕಳಂಕ ಮನಸ್ಸಿನ ಒತ್ತಾಸೆಯಂತೆ ಮೈಯೆಲ್ಲ ಕಾಲಾಗಿ ಇಲ್ಲಿ ಹರಿಯುತ್ತಿದ್ದೇನೆ.

ದೌಲಗಿರಿಯಿಂದ ಒಂದೆರೆಡು ಗಾವುದ ದೂರದಲ್ಲಿದ್ದ ಗಂಧಕುಟಿಯಲ್ಲಿ ಬೌದ್ಧ ಬಿಕ್ಕುವೊಬ್ಬ ವಾಸವಾಗಿದ್ದಾನೆ. ಅವನ ಧರ್ಮ ಬೋಧನೆ ಕೇಳಲು ನೆರೆಹೊರೆಯ ಹಳ್ಳಿಗಳಿಂದ ಜನ ನಿತ್ಯವೂ ಗಂಧಕುಟಿಗೆ ಹೋಗುತ್ತಾರೆ. ಕೆಲವು ಸಲ ಬಿಕ್ಕುವೇ ಅವರ ಕೇರಿಗಳಿಗೆ ಪಿಂಡಪಾತಕ್ಕೆ ಹೋದಾಗ ಅಲ್ಲಿಯೇ ಧರ್ಮ ಪ್ರವಚನವನ್ನು ನೀಡುತ್ತಿದ್ದ. ಬಿಕ್ಕುವಿನ ಇರುವಿಕೆಯಿಂದಲೇ ಇಲ್ಲಿನ ಬೀಸುವ ಗಾಳಿಯಲ್ಲಿ, ಹರಿಯುವ ನೀರಿನಲ್ಲಿ, ಮಣ್ಣಕಣದಲ್ಲಿ ಕರುಣೆ, ದಯೆ ಮತ್ತು ಔದಾರ್ಯದ ಗುಣಗಳು ಬೆರೆತುಹೋಗಿದ್ದವು.ಇಲ್ಲಿನ ಜನರ ಹಾಗೂ ಪ್ರಕೃತಿಯ ಮನಸ್ಸಿನ ಬಹುಕಾಲದ ಪ್ರಾರ್ಥನೆಯಂತೆ ಅವನು ಇಲ್ಲಿಗೆ ಬಂದು ನೆಲಸಿದ್ದಂತಿತ್ತು. ಉಪಗುಪ್ತ ಎಂಬುದು ಅವನ ಹೆಸರು.

ಬಿಕ್ಕು ದಿನವೂ ಮುಂಜಾನೆ ಗಂಧಕುಟಿಯಿಂದ ನನ್ನ ತಟಕ್ಕೆ ಬಂದು ಹರಿಯುತ್ತಿದ್ದ ನನ್ನ ಮೈಯನ್ನು ಮೃದು ಬೆರಳುಗಳಿಂದ ಸ್ಪರ್ಶಿಸುತ್ತಿದ್ದ. ಅವನ ಕೋಮಲ ಸ್ಪರ್ಶದಿಂದ ಹೆತ್ತ ತಾಯಿಯೇ ನನ್ನನ್ನು ಮುಟ್ಟಿದಂತಾಗುತ್ತಿತ್ತು. ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ಧ್ಯಾನದಲ್ಲಿ ಮುಳುಗುತ್ತಿದ್ದ. ಧ್ಯಾನದಲ್ಲಿ ಮುಳುಗಿದ್ದ ಅವನ ಮಂದಸ್ಮಿತ ಮುಖದ ಸುತ್ತ ಹೊಳೆಯುವ ಸೂರ್ಯನ ಪ್ರಭಾವಳಿಯೊಂದು ನಿರ್ಮಾಣವಾಗುತ್ತಿತ್ತು. ಕನ್ನಡಿಯಂಥ ನನ್ನ ಕಣ್ಣೊಳಗೆ ಬಿಕ್ಕುವಿನ ಬಿಂಬ ಕಾಣುತ್ತಿತ್ತು. ನಾನು ಹೊರಲೋಕಕ್ಕೆ ಹರಿಯುತ್ತಿದ್ದಂತೆ ಕಂಡರೂ ನನ್ನ ಮನಸ್ಸೂ ಕೂಡ ಧ್ಯಾನದ ಲೋಕಕ್ಕೆ ಇಳಿಯುತ್ತಿತ್ತು. ಹೀಗೆ ಧ್ಯಾನಕ್ಕೆ ಪ್ರವೇಶಿಸಿದರೆ, ನಮ್ಮ ಮನಸ್ಸಿನ ದೀಪ ಇನ್ನಷ್ಟು ಪ್ರಕಾಶಮಾನವಾಗಿ ಬೆಳಗುತ್ತದೆ ಎನ್ನುವುದನ್ನು ಬೌದ್ಧ ಬಿಕ್ಕು ನನಗೆ ಕಲಿಸಿದ.

****

ಅದೊಂದು ದುಃಸ್ವಪ್ನದ ಕಾಳರಾತ್ರಿ. ಚಂದ್ರನಿಲ್ಲದ ಆಕಾಶದಲ್ಲಿ ಕಾರ್ಗತ್ತಲೆಯೇ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿತ್ತು. ನಕ್ಷತ್ರಗಳು ಕತ್ತಲೆಯ ಪ್ರಪಾತದಲ್ಲಿ ಮುಳುಗಿಹೋಗಿದ್ದವು. ಎಲ್ಲೆಡೆ ನೀರವ ಮೌನ ಆವರಿಸಿತ್ತು. ನಾನೂ ಕೂಡ ಮಂಪರು ನಿದ್ದೆಯಲ್ಲಿದ್ದೆ. ಏಕೋ ನಿದ್ದೆ ಹತ್ತಲಿಲ್ಲ. ಮನಸ್ಸಿನಲ್ಲಿ ಎಂದೂ ಇಲ್ಲದ ಒಂದು ಅವ್ಯಕ್ತ ಕಳವಳ ನನ್ನನ್ನು ಇಡಿಯಾಗಿ ಕುಗ್ಗಿಸಿತು. ಇದ್ದಕ್ಕಿದ್ದಂತೆ ಎಲ್ಲಿಂದಲೋ ಬೀಸಿಬಂದ ರಭಸದ ಗಾಳಿಗೆ ನಾನು ಹರಿಯುತ್ತಿದ್ದ ವೇಗವೂ ನನಗರಿವಿಲ್ಲದಂತೆ ತೀವ್ರವಾಯಿತು. ನೀರ್ಗಲ್ಲೂ ಕರಗುವಂತೆ ನನ್ನ ಏದುಸಿರು ಹೆಚ್ಚಾಯಿತು. ಕ್ಷಣಮಾತ್ರದಲ್ಲಿ ನನ್ನ ಪಾಸಾಲೆಯೊಳಗಿದ್ದ ಸಹನೆಯ ಮೌನ ಕದಡಿಹೋಗಿತ್ತು. ಅಸ್ಪಷ್ಟವಾಗಿ ಶಬ್ದ ಕೇಳಿಬಂದ ದಿಕ್ಕಿನತ್ತ ಕಣ್ಣುಹೊರಳಿಸಿ ನೋಡಿದೆ. ಕತ್ತಲೆಯನ್ನುಳಿದು ಏನೂ ಗೋಚರಿಸಲಿಲ್ಲ.

ರಾತ್ರಿಯೆಲ್ಲಾ ಹೀಗೆಯೇ ಚಡಪಡಿಕೆಯಲ್ಲಿಯೇ ಕಾಲ ಕಳೆದೆ. ಆ ದಿನ ಸೂರ್ಯ ಮೂಡುವ ಮುನ್ನವೇ ಎಚ್ಚರಗೊಂಡೆ. ಆ ಶೀತಲ ನೀರವದಲ್ಲಿ ತಣ್ಣಗೆ ನಿದ್ರಿಸುತ್ತಿದ್ದ ಹಕ್ಕಿಗಳೆಲ್ಲ ಇದ್ದಕ್ಕಿದ್ದ ಹಾಗೆ ಕರ್ಕಶವಾಗಿ ಅರಚುತ್ತಾ ಮುಗಿಲ ಕಡೆ ಮುಖಮಾಡಿ ದಿಕ್ಕಾಪಾಲಾಗಿ ಹಾರಾಡತೊಡಗಿದವು. ಆದರೆ ಆಕಾಶದ ಕೆಳಗೆ ನೇತು ಬಿದ್ದಿರುವ ಮೋಡಗಳು ಯಾವ ಹಕ್ಕಿಗೆ ತಾನೆ ಆಸರೆಯಾಗಬಲ್ಲವು! ಗಾಢ ಮಬ್ಬಿನಲ್ಲಿ ಸ್ಪಷ್ಟವಾಗಿ ಏನೂ ಕಾಣುತ್ತಿರಲಿಲ್ಲ. ಹೀಗೆಯೇ ಇಡೀ ರಾತ್ರಿ ರೆಪ್ಪೆ ಒಂದುಮಾಡದೆ ಕಳೆದೆ. ಮುಂಜಾನೆ ಕಗ್ಗತ್ತಲ ಒಡಲಿನಿಂದ ಉದಿಸಿದ ಸೂರ್ಯನ ಎಳೆ ಕಿರಣಗಳು ಕವಿದಿದ್ದ ಮಬ್ಬನ್ನು ನಿಧಾನವಾಗಿ ಬೆಳಗಿಸಿದವು. ನಾನು ಕಣ್ಣು ಹೊರಳಿಸಿ ನೋಡಿದಾಗ ನನ್ನ ಸುತ್ತ ಇದ್ದ ಪ್ರಶಾಂತವಾದ ಲೋಕ ಇದ್ದಕ್ಕಿದ್ದಂತೆ ಯುದ್ಧಭೂಮಿಯಾಗಿ ಬದಲಾಗಿತ್ತು.

ಮಗಧದಿಂದ ದಂಡೆತ್ತಿ ಬಂದಿದ್ದ ಮೌರ್ಯ ಸಾಮ್ರಾಟ ಅಶೋಕನ ಅಗಾಧವಾದ ಸೇನೆ ಬಯಲಿನುದ್ದಕ್ಕೂ ಬೀಡುಬಿಟ್ಟಿತ್ತು. ಈ ಸೇನೆಯನ್ನು ನೋಡಿ ಕಳಿಂಗದ ನೆಲ ಬೆಚ್ಚಿಬಿದ್ದಿತ್ತು. ಹೆಣ್ಣಿನ ಬಗೆಗಿನ ಮೋಹ ಮತ್ತು ಸಾಮ್ರಾಜ್ಯ ವಿಸ್ತರಣೆಯ ದಾಹ ರಾಜರುಗಳಿಗಿರುವ ದೊಡ್ಡ ದೌರ್ಬಲ್ಯ ಎಂದು ಕೇಳಿದ್ದೆ.



ಈಗ ಅದನ್ನೇ ನನ್ನ ಕಣ್ಣುಗಳಿಂದ ನೋಡುವಂತಾಯಿತು! ನಾನು ಪ್ರೀತಿಸುವ ಈ ಕಳಿಂಗದ ದೊರೆ ಅಶೋಕನಿಗೆ ಯಾವ ಕೇಡನ್ನೂ ಮಾಡಿರಲಿಲ್ಲ! ಆದರೂ ಮೌರ್ಯ ಸಾಮ್ರಾಟರು ಈ ಪುಟ್ಟ ನಾಡಿನ ಮೇಲೆ ಏಕೆ ಯುದ್ಧ ಸಾರಿದರೊ ಗೊತ್ತಿಲ್ಲ! ಸೇನೆ ಮತ್ತು ಶಸ್ತ್ರಗಳನ್ನು ಹೊಂದಿರುವ ಯಾವ ರಾಜ ತಾನೆ ತನ್ನ ನೆರೆಹೊರೆಯವರನ್ನು ನೆಮ್ಮದಿಯಾಗಿ ಇಡಬಲ್ಲ? ಮಗಧದ ರಾಜ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಯುದ್ಧಕ್ಕೆ ಬಂದಿರಬೇಕು! ನಾನು ನೋಡಿದಂತೆ ಈ ಭೂಮಿ ರೈತನ ಬೆವರಿಗೆ ಮಣಿದಂತೆ; ಯುದ್ಧ, ಹಿಂಸೆಯ ಮೂಲಕ ತನ್ನನ್ನು ಜಯಿಸಬಂದ ಚಕ್ರವರ್ತಿಗಳಿಗೆ ಎಂದೂ ಮಣಿದಿಲ್ಲ. ಮನುಕುಲಕ್ಕೆ ಈ ಸತ್ಯ ತಿಳಿದಿದ್ದರೆ, ಈ ಭೂಮಿ ಇಷ್ಟೊಂದು ಯುದ್ಧವನ್ನು ತನ್ನ ನತದೃಷ್ಟ ಕಣ್ಣುಗಳಿಂದ ನೋಡುತ್ತಿರಲಿಲ್ಲ.

ಸೈನಿಕರು ತಮ್ಮ ಈಟಿ, ಖಡ್ಗ, ಕಠಾರಿಗಳನ್ನು ಮಸೆಗಲ್ಲಿನ ಮೇಲೆ ಮಸೆಯುತ್ತಿದ್ದನ್ನು ನೋಡಿ ನನ್ನ ಹೃದಯ ತಲ್ಲಣಿಸಿತು. ಆಯುಧಗಳು ರಕ್ತದ ರುಚಿ ನೋಡಲು ಹಾತೊರೆಯುತ್ತಿದ್ದವು. ನಾಳೆ ನಡೆಯಲಿರುವ ಯುದ್ಧದಲ್ಲಿ ಎಷ್ಟು ಜನ ಮಕ್ಕಳು ತಮ್ಮ ತಂದೆಯನ್ನು ಕಳೆದುಕೊಳ್ಳುತ್ತಾರೋ! ಎಷ್ಟು ಜನ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕಳೆದುಕೊಳ್ಳುತ್ತಾರೋ! ಎಷ್ಟು ಜನ ವಿಧವೆಯಾರಾಗುತ್ತಾರೋ! ಯಾರ ಹೆಸರಿನಲ್ಲಿ ವೀರಗಲ್ಲು ನೆಡುತ್ತಾರೋ! ಎಷ್ಟು ಜನ ಮಹಿಳೆಯರು ಸತ್ತ ತಮ್ಮ ಗಂಡಂದಿರ ದೇಹದೊಡನೆ ಕೊಂಡ ಹಾಯುತ್ತಾರೋ! ಯುದ್ಧದಿಂದ ಉಂಟಾಗುವ ಸರಣಿ ದುರಂತಗಳನ್ನು ನೆನೆದು ನನ್ನ ಮನಸ್ಸು ಕದಡಿಹೋಯಿತು.

*****

ಇಂದಿಗೆ ಎಲ್ಲವೂ ಮುಗಿದಂತಾಯಿತು. ದುರಂತ ಯುದ್ಧದ ಕೊನೆಯ ಅಂಕ ಇದು. ಕಳಿಂಗದ ಬೀದಿಗಳು ಇಷ್ಟುಬೇಗ ಬರಿದಾಗುತ್ತವೆಂದು ನಾನು ಎಣಿಸಿರಲಿಲ್ಲ! ಕಳೆದ ಐದಾರು ದಿನಗಳಿಂದ ನಡೆದ ಯುದ್ಧದಲ್ಲಿ ಎರಡೂ ಬಣಗಳ ಸೇನೆಯಲ್ಲಿ ಸತ್ತವರ ಲೆಕ್ಕ ಸಿಗುತ್ತಿಲ್ಲ. ಇತ್ತ ಬದುಕುಳಿದವರ ನೆರಳೂ ಕಾಣುತ್ತಿಲ್ಲ! ಎಲ್ಲವೂ ಅಯೋಮಯವಾಗಿ ಕಾಣುತ್ತಿತ್ತು. ಸ್ಫಟಿಕದಂತೆ ಹರಿಯುತ್ತಿದ್ದ ನಾನು ಈಗ ಮುಟ್ಟಿದವರ ಕೈಗೂ ಮೆತ್ತಿಕೊಳ್ಳುವಷ್ಟು ಕೆಂಪಾಗಿ ಹರಿಯುತ್ತಿದ್ದೇನೆ. ಕಳಿಂಗ ಮತ್ತು ಮಗಧ ಎರಡೂ ಕಡೆಯ ಸೇನೆ ಭೀಕರವಾಗಿ ಕಾದಾಡಿ ಹರಿಸಿದ ರಕ್ತದಲ್ಲಿ ನಾನು ಅನಾಮತ್ತಾಗಿ ತೋಯ್ದುಹೋಗಿದ್ದೇನೆ. ನನ್ನ ಕಣ್ಣಮುಂದಿದ್ದ ಮಾನಾಡು ಹಸುರು ಇದೀಗ ರಕ್ತ ಕುಡಿದು ಕೆಂಪಾಗಿದೆ. ಈ ಭೀಕರ ಹತ್ಯೆಗಳನ್ನು ನೋಡಿ ಸುತ್ತಮುತ್ತ ಇದ್ದ ಮರಗಿಡಗಳ ಕಣ್ಣುಗಳಲ್ಲಿ ನೀರು ತುಂಬಿರುವುದನ್ನು ಕಂಡೆ.

ಯುದ್ಧ ಮುಗಿದಿದ್ದರೂ ಸಾವುನೋವುಗಳು ಇನ್ನೂ ಮುಂದುವರೆದಿದ್ದವು.ಇಡೀ ಯುದ್ಧಭೂಮಿ ಸಾವಿನ ಅಂಗಡಿಯಂತೆ ಗೋಚರಿಸುತ್ತಿತ್ತು! ಎತ್ತ ನೋಡಿದರೂ ಕಾಲೂರಲು ನೆಲವೇ ಕಾಣದಷ್ಟು ಹೆಣಗಳ ರಾಶಿ. ತಲೆಕಡಿದ ಮುಂಡಗಳು, ಕೈಕಾಲು ಮೊಂಡಾದ ಶವಗಳು, ಕೈಯಲ್ಲಿ ಕತ್ತಿ ಹಿಡಿದೇ ಪ್ರಾಣಬಿಟ್ಟ ದೇಹಗಳು, ತಮ್ಮ ಕಣ್ಣೀರನ್ನು ಒರೆಸಿಕೊಳ್ಳಲು ಕೈಗಳೇ ಇಲ್ಲದ ನಾಡಾಡಿಗಳ ನೋವಿನ ಧ್ವನಿ ಮುಗಿಲುಮುಟ್ಟಿತ್ತು. ಕೈಕಾಲು ಕಳೆದುಕೊಂಡು ನೋವಿನಿಂದ ಸಹಾಯಕ್ಕಾಗಿ ಅಂಗಲಾಚುತ್ತಿದ್ದವರು, ಗಾಯಗಳಿಂದ ಸೋರುವ ರಕ್ತವನ್ನು ಅದುಮಿಕೊಂಡು ಪಟ್ಟು ಹಾಕಿಸಿಕೊಳ್ಳಲು ಪರಿತಪಿಸುತ್ತಿದ್ದವರು, ಹೀಗೆ ಹಿಂಸಾತ್ಮಕ ದೃಶ್ಯಗಳಿಂದ ಯುದ್ಧಭೂಮಿ ತುಂಬಿಹೋಗಿತ್ತು.ಇವೆಲ್ಲವೂ ನನ್ನ ಸಂಕಟವನ್ನು ಹೆಚ್ಚುಮಾಡಿದವು.

ಗೆದ್ದವರ ಮತ್ತು ಸೋತವರ ಎರಡೂ ಕಡೆಯ ಪಾಳಯದಲ್ಲಿ ಊಹಿಸಲಾರದಷ್ಟು ಸಾವುನೋವು ಸಂಭವಿಸಿದ್ದನ್ನು ನನ್ನ ಕಣ್ಣಾರೆ ನೋಡಿದೆ. ಮಗಧ ಮತ್ತು ಕಳಿಂಗದ ಯೋಧರೇ ಪರಸ್ಪರ ತಮ್ಮೊಳಗೆ ಒಬ್ಬರಿಗೊಬ್ಬರು ಶತ್ರುಗಳೆಂಬ ಬೇಧಭಾವವಿಲ್ಲದೆ ಆರೈಕೆಮಾಡಿಕೊಳ್ಳುತ್ತಿದ್ದ ದೃಶ್ಯ ಕರುಳು ಹಿಂಡುವಂತಿತ್ತು. ನನ್ನ ಕಣ್ಣು ಮುಂದೆಯೇ ನಡೆದ ಈ ಯುದ್ಧದಲ್ಲಿ ಗೆದ್ದವರು ಯಾರೋ?ಸೋತವರು ಯಾರೋ? ನನಗೆ ತಿಳಿಯಲಿಲ್ಲ! ಆದರೆ ಎರಡೂ ಪಾಳಯಗಳಲ್ಲಿ ರೋದನ ಮಾತ್ರ ಕೇಳಿ ಬರುತ್ತಿತ್ತು. ಕಳಿಂಗ ನಾಡಿನ ಪ್ರತಿ ಮನೆಯೂ ಸಾವಿನ ಮನೆಯಾಗಿ ಕಣ್ಣೀರು ಸುರಿಸುತ್ತಿತ್ತು. ಅತ್ತ ಮಗಧದ ಕೇರಿಗಳಲ್ಲೂ ಸಾವಿನ ಹೆಜ್ಜೆ ಗುರುತುಗಳು ಹೀಗೆಯೇ ಹೊರಲಾರದ ದುಃಖದ ಭಾರವನ್ನು ಎಲ್ಲರ ಮನೆಗಳ ಮೇಲೂ ಹೊರಿಸಿರಬಹುದು! ಅಂತಿಮವಾಗಿ ಸಾವು ಮಾತ್ರ ತಾರತಮ್ಯವಿಲ್ಲದೆ ಎಲ್ಲರ ಕಣ್ಣಿನಲ್ಲೂ ನೀರು ತರಿಸಿತ್ತು.

'ಈ ಯುದ್ಧ ನಡೆಯದಿದ್ದರೆ ಕೈನೆರೆಗೆ ಬಂದ ಮಗ ನನ್ನ ಕಣ್ಣಮುಂದಿರುತ್ತಿದ್ದ! ಯಾರು ಕೊಂದರೋ ನನ್ನ ಮಗನನ್ನು? ಅಯ್ಯೋ ಈ ಯುದ್ಧದ ಮನೆ ಹಾಳಾಗ. ನಮಗೆ ಇನ್ನಾರು ದಿಕ್ಕು?'

'ಈ ಯುದ್ಧ ನಡೆಯದಿದ್ದರೆ, ನನ್ನ ಗಂಡ ಮಕ್ಕಳ ಜೊತೆ ಮನೆಯಲ್ಲಿರುತ್ತಿದ್ದ! ನನ್ನ ಸಂಸಾರ ಇವೊತ್ತಿಗೆ ಬೀದಿ ಪಾಲಾಯಿತು.'

ಇಂಥವೆ ಕರುಳು ಹಿಂಡುವ ಮಾತುಗಳು ಎರಡೂ ಕಡೆಯಿಂದಲೂ ನನಗೆ ಕೇಳಿಬರುತ್ತಿತ್ತು.

ಕತ್ತಿ ಏಟಿನಿಂದ ಜರ್ಜರಿತರಾದ ಇಬ್ಬರು ಯೋಧರು.ಒಬ್ಬ ದೂರದ ಮಗಧದಿಂದ ಬಂದವನು, ಅವನ ಹೆಸರು ನನಗೆ ನೆನಪಿರುವಂತೆ ಚಂಡಕ ಎಂದು. ಇನ್ನೊಬ್ಬ ಇದೇ ಕಳಿಂಗ ನಾಡಿನವನು ತಿಸ್ಯ. ನಡೆಯಲು ತ್ರಾಣವಿಲ್ಲದೆ ಪರಸ್ಪರ ಆತುಕೊಂಡು ತೆವಳುತ್ತಾ ದಾಹ ಹಿಂಗಿಸಿಕೊಳ್ಳಲು ನನ್ನ ತಟಕ್ಕೆ ಬಂದರು. ಇಬ್ಬರೂ ಸಹಿಸಲಾರದ ನೋವಿನಿಂದ ನರಳುತ್ತಿದ್ದುದನ್ನು ನಾನು ನೋಡಿದೆ. ಮಗಧದ ಯೋಧನ ಒಂದು ಕೈಯೇ ತುಂಡಾಗಿ ನೇತಾಡುತ್ತಿತ್ತು. ಆ ನೇತಾಡುತ್ತಿದ್ದ ಕೈಗೆ ಕಳಿಂಗದ ಯೋಧ ತಿಸ್ಯ ತಾನು ತೊಟ್ಟ ಅಂಗಿಯನ್ನೇ ಹರಿದು ಪಟ್ಟು ಬಿಗಿದಿದ್ದ. ತಿಸ್ಯನ ಎಡಗಾಲಿಗೆ ಬಲವಾದ ಪೆಟ್ಟುಬಿದ್ದು ರಕ್ತ ಹೆಪ್ಪುಗಟ್ಟಿದ ಕಲೆ ಇನ್ನೂ ಹಸಿಯಾಗಿತ್ತು. ಚಂಡಕ ಅವನ ಗಾಯಕ್ಕೆ ಆಪತ್ತಿಗೆಂದು ತನ್ನಲ್ಲಿಟ್ಟುಕೊಂಡಿದ್ದ ಮದ್ದು ಸವರಿ ಪಟ್ಟು ಹಾಕಿದ್ದ. ಇಬ್ಬರೂ ಬಹುಕಾಲದ ಗೆಣೆಕಾರರೋ ಎಂಬಂತೆ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರು. ಇಬ್ಬರ ಮಾತುಕತೆಯಲ್ಲೂ ಯುದ್ಧದ ಬಗ್ಗೆ ಅಸಹನೆ ಮತ್ತು ತಿರಸ್ಕಾರ ವ್ಯಕ್ತವಾಗುತ್ತಿತ್ತು.

'ನಾವು ಕೇಳಬಾರದ ಮತ್ತು ನುಡಿಯಲಾಗದ ಕೆಲವು ವಿಷಯಗಳಿವೆ; ಅವುಗಳಲ್ಲಿ ದೊರೆಗಳು ಯಾರಿಗೋಸ್ಕರ ಯುದ್ಧ ಮಾಡುತ್ತಾರೆ? ಎಂಬುದು ಒಂದು ಒಗಟು! ಹಾಗೆಯೇ ಭೂಮಿಯನ್ನು ಜಯಿಸುವುದು ಎಂದರೇನು?ಭೂಮಿಯನ್ನು ಜಯಿಸಲು ಯುದ್ಧವನ್ನೇ ಮಾಡಬೇಕೆ? ಹಾಗಾದರೆ ಈ ಭೂಮಿಯೆಂಬುದು ಮನುಷ್ಯನೊಬ್ಬನಿಗೆ ಮಾತ್ರ ಸೇರಿದ್ದೆ?' ಎಂದು ಚಂಡಕ ಕೇಳಿದ. ಅವನ ಮಾತು ಉತ್ತರವಿಲ್ಲದ ಪ್ರಶ್ನೆಯಂತಿತ್ತು. 'ಯಾವ ರಾಜನೂ ತನ್ನ ಪ್ರಜೆಗಳನ್ನು ಕೇಳಿ ಯುದ್ಧ ಮಾಡಿದ್ದನ್ನು ಮತ್ತು ಯುದ್ಧ ನಿಲ್ಲಿಸಿದ್ದನ್ನು ನಾನು ಇದುವರೆಗೂ ಕೇಳಿಲ್ಲ. 'ಈ ಯುದ್ಧ ತಾಯ್ನಾಡಿಗೋಸ್ಕರ' ಎಂಬ ಸವಕಲು ಮಾತಿನಿಂದ ನೆಶೆ ಏರಿಸಿ ನಮ್ಮನ್ನೆಲ್ಲಾ ಯುದ್ಧಭೂಮಿಗೆ ಕಳುಹಿಸಿದ್ದಾರೆ. ನಾನು ಇದುವರೆಗೂ ನೋಡಿದಂತೆ, ತಾಯ್ನಾಡಿನ ಬಗ್ಗೆ ದಿನಗಟ್ಟಲೆ ಉಪದೇಶ ನೀಡುವ ನಮ್ಮ ರಾಜ್ಯದಲ್ಲಿರುವ ಪುರೋಹಿತರು, ಶ್ರೀಮಂತರು ಹಾಗೂ ವ್ಯಾಪಾರಿಗಳ ಮಕ್ಕಳು ಸೈನ್ಯಕ್ಕೆ ಸೇರಿ ಯುದ್ಧ ಮಾಡಿದ್ದನ್ನು ನಾನು ಇದುವರೆಗೂ ಕಂಡಿಲ್ಲ! ಎಲ್ಲ ರಾಜ್ಯದಲ್ಲೂ ಹೀಗೆ ಇರಬಹುದು. ನಮ್ಮ ಜೀವಬಲಿಯ ಮೇಲೆ

ರಾಜನ ಕಿರೀಟ ಮತ್ತು ಬಿರುದು ಬಾವಲಿಗಳು ನಿಂತಿರುತ್ತವೆ. ನಾವೆಲ್ಲಾ ಯುದ್ಧ ಮಾಡಲೆಂದೇ ನೇಮಿಸಿಕೊಂಡಿರುವ ಕೂಲಿಯಾಳುಗಳು. ಆಳುಗಳಿಗೆ ದಣಿಗಳ ಎದುರಿಗಿರುವವರನ್ನು ಕೊಲ್ಲುವುದು, ಇಲ್ಲವೇ ಎದುರಾಳಿಗಳ ಖಡ್ಗಕ್ಕೆ ನಾವೇ ಬಲಿಯಾಗುವುದು. ಇದಿಷ್ಟೇ ನಮಗೆ ಗೊತ್ತಿರುವುದು. ನನ್ನ ಅಪ್ಪ ರೇತ ಇಂತಹುದೇ ಯುದ್ಧವೊಂದರಲ್ಲಿ ಕಾಡು ಹೆಣವಾದ. ನನ್ನ ಅಣ್ಣ ದಿಂಡ, ಮದುವೆಯಾಗಿ ಮೂರು ತಿಂಗಳೂ ಕಳೆದಿರಲಿಲ್ಲ. ದಂಡನಾಯಕನ ಜೊತೆ ಒಂದು ದಿನ ಯುದ್ಧಕ್ಕೆಂದು ಹೋದವನು ಇಂದಿಗೂ ಮರಳಿ ಬಂದಿಲ್ಲ! ನಾಳೆ ನನ್ನ ಪಾಡು ಏನಾಗುತ್ತದೊ ಗೊತ್ತಿಲ್ಲ!" ಎಂದು ತಿಸ್ಯ ನೋವು ಮತ್ತು ನಿರಾಶೆ ಬೆರೆತ ಮಾತಿನಲ್ಲಿ ಉಸುರಿದ. ನಿಟ್ಟುಸಿರುಬಿಟ್ಟ ಆ ಯೋಧರು ಪರಸ್ಪರ ಭುಜ ಹಿಡಿದುಕೊಂಡು ನರಳುತ್ತಾ ನಡೆದರು.

ಇವರ ಮಾತುಗಳನ್ನು ತಣ್ಣಗೆ ಕೇಳುತ್ತಿದ್ದೆ. ಅವರನ್ನು ನೋಡುತ್ತಿದ್ದ ನನ್ನ ಕಣ್ಣುಗಳಲ್ಲಿ ನೀರಾಡಿತು. ರಕ್ತದ ಕಲೆಯಂಟಿದ ಸೂರ್ಯ ಪಶ್ಚಿಮದ ಕಣಿವೆಯಲ್ಲಿ ಇಳಿಯತೊಡಗಿದ್ದ.

****

ಇಷ್ಟಾದರೂ ಬದುಕುಳಿದವರ ಕಣ್ಣೀರನ್ನು ಒರೆಸುವ ಒಂದು ಜೀವ ಅಲ್ಲಿತ್ತು.ಅವನೇ ಬೌದ್ಧ ಬಿಕ್ಕು ಉಪಗುಪ್ತ. ಯುದ್ಧಭೂಮಿಯಲ್ಲಿ ಬರಿಗಾಲಿನಿಂದ ಸಂಚರಿಸುತ್ತಾ ಗಾಯಗೊಂಡವರನ್ನು ಸಂತೈಸುತ್ತಿದ್ದ. ದಯೆ ಮತ್ತು ಔದಾರ್ಯದಿಂದ ಅವನ ಮುಖ ಬೇಸಗೆಯ ಕೊಳದಂತೆ ಪ್ರಶಾಂತವಾಗಿತ್ತು. ಅವನ ಕಣ್ಣುಗಳು ಕರುಣೆಯಿಂದ ಹೊಳೆಯುತ್ತಿದ್ದವು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಯೋಧರನ್ನು ಹೊರಗೆಳೆದು, ಅವರ ಗಾಯಗಳನ್ನು ನೀರಿನಲ್ಲಿ ತೊಳೆದು ಮುಲಾಮು ಹಚ್ಚುತ್ತಾ ಶುಶ್ರೂಷೆ ಮಾಡುತ್ತಿದ್ದ. ಕೈಕಾಲುಗಳನ್ನು ಕಳೆದುಕೊಂಡು ನಡೆಯಲಾಗದವರನ್ನು, ರಣಗಾಯವಾದವರನ್ನು, ರೋಗಿಗಳನ್ನು ತನ್ನ ಗಂಧಕುಟಿಗೆ ಕರೆದುಕೊಂಡು ಹೋಗಿ ಆರೈಕೆ ಮಾಡುತ್ತಿದ್ದ. ಬಿಕ್ಕುವಿನ ಹೂ ಸ್ಪರ್ಶವೇ ಗಾಯಗೊಂಡವರ ಶೋಕದ ಹಿಮದ ಗಡ್ಡೆಗಳನ್ನು ಕರಗಿಸುವಂತಿರುತ್ತಿತ್ತು. ಅವನ ಸಾಂತ್ವನದ ಮೃದುವಚನಗಳು ಗಾಯದ ಮೇಲೆ ಮದ್ದು ಸವರಿದಂತೆ ಮನಸ್ಸಿನ ಮೇಲಾದ ಗಾಯಗಳನ್ನೂ ವಾಸಿಮಾಡುವಂತಿದ್ದವು.

ಉಪಗುಪ್ತ ಹೀಗೆಯೇ ಗಾಯಗೊಂಡವರಿಗಾಗಿ ಹುಡುಕುತ್ತಾ ನಡೆದುಬರುತ್ತಿದ್ದಾಗ, ಅನಾಥವಾಗಿ ಬಿದ್ದಿದ್ದ ರಕ್ತಸಿಕ್ತವಾದ ಕತ್ತಿಯೊಂದನ್ನು ಎಡವಿದ.ಮತ್ತೆ ಚೇತರಿಸಿಕೊಂಡು, ತನ್ನಿಂದಾಗಿ ಖಡ್ಗಕ್ಕೆ ಎಲ್ಲಿ ನೋವಾಯಿತೋ ಎನ್ನುವಂತೆ, ಕಣ್ಣಿನಷ್ಟೇ ಹರಿತವಾಗಿದ್ದ ಆ ಕತ್ತಿಯನ್ನು ಪಕ್ಕಕ್ಕಿಟ್ಟು ಮುಂದೆ ನಡೆದ. ಅವನ ಕೈ ನಡುಗುತ್ತಿತ್ತು, ದೇಹ ಕಂಪಿಸುತ್ತಿತ್ತು. ಎರಡು ಹೆಜ್ಜೆ ನಡೆಯುವಷ್ಟರಲ್ಲೇ ಕ್ಷೀಣವಾದ ನೋವಿನ ಧ್ವನಿಯೊಂದು ಅವನನ್ನು ಕೂಗಿ ಕರೆಯಿತು. ಉಪಗುಪ್ತ ಧ್ವನಿ ಬಂದ ಕಡೆ ಹಿಂತಿರುಗಿ ನೋಡಿದ. ನೆಲದ ಮೇಲೆ ಬಿದ್ದಿದ್ದ ಕತ್ತಿಯೇ ಅವನನ್ನು ಹತ್ತಿರ ಕರೆದು 'ನನಗೂ ಈ ಯುದ್ಧದಿಂದ ನಿನ್ನಷ್ಟೇ ನೋವಾಗಿದೆ. ಯಾವ ತಪ್ಪೂ ಮಾಡದ ನಿರ್ಭಾಗ್ಯ ಸೈನಿಕರ ರಕ್ತದ ಕಲೆ ನನ್ನ ಮೈಗಂಟಿ, ದೇಹ ತುಕ್ಕು ಹಿಡಿಯುತ್ತಿದೆ. ಯುದ್ಧದಲ್ಲಿ ಸಾಯುವವರು ಯಾವ ತಪ್ಪೂ ಮಾಡದ ನಿರ್ಭಾಗ್ಯ ಸೈನಿಕರೆ ಹೊರತು; ಯುದ್ಧಕ್ಕೆ ಮನಸ್ಸು ಮಾಡಿದ ರಾಜನಲ್ಲ! ಸತ್ತ ಸೈನಿಕರ ವೃದ್ಧ ತಂದೆತಾಯಿಗಳು ಹಾಗೂ ಅವರ ಮಡದಿ ಮಕ್ಕಳ ನಿಟ್ಟುಸಿರು ನನಗೂ ತಟ್ಟಿದೆ. ಇದೇ ದಯಾ ನದಿಯ ನೀರಿನಲ್ಲಿ ನನ್ನ ಮೈಗಂಟಿರುವ ಹಿಂಸೆಯ ಕಲೆಯನ್ನು ತೊಳೆದು ನಿನ್ನ ಗಂಧಕುಟಿಗೆ ಕರೆದೊಯ್ಯಿ. ನಿನ್ನ ಧರ್ಮಶ್ರವಣದಿಂದ ನನ್ನ ಹೃದಯವನ್ನು ತೊಳೆದುಕೊಳ್ಳುತ್ತೇನೆ. ಯುದ್ಧ, ಹಿಂಸೆ, ರಕ್ತಪಾತ ಇಲ್ಲದ ಜಗತ್ತು ಮನುಕುಲಕ್ಕೆ ಬರಲಿ ಎಂದು ನಾನೂ ನಿನ್ನೊಂದಿಗೆ ಪ್ರಾರ್ಥಿಸುತ್ತೇನೆ. ಧರೆಗೆ ದೊಡ್ಡವರು ನೀವು. ಕರುಣೆದೋರು' ಎಂದು ಅಂಗಲಾಚಿತು. ಉಪಗುಪ್ತ ಹೂಮರಿಯನ್ನು ಎತ್ತಿಕೊಳ್ಳುವಂತೆ ಆ ನಗ್ನ ಖಡ್ಗವನ್ನು ಎತ್ತಿಕೊಂಡು ನನ್ನ ಬಳಿಬಂದ. ಹಸುಮಗುವನ್ನು ಕೆಳಗಿಳಿಸುವಂತೆ ಖಡ್ಗವನ್ನು ಕೆಳಗಿಳಿಸಿ ಅದರ ಮೈಯನ್ನು ತೊಳೆದ. 'ಯುದ್ಧೋನ್ಮತ್ತರಾದ ಭೂಮಂಡಲದ ಎಲ್ಲ ಮನುಷ್ಯರ ಆತ್ಮವನ್ನೂ ಹೀಗೆಯೇ ತೊಳೆಯಲಾರೆಯಾ ಗುರುವೆ' ಎಂದು ಮಗುವಿನಂತೆ ಖಡ್ಗ ಉಸುರಿತು. ಉಪಗುಪ್ತ ಮೌನವಾಗಿದ್ದ.

ರಾಜರುಗಳ ರಾಜ್ಯದಾಹದಿಂದ ಉಂಟಾಗುವ ಜೀವ ಹಿಂಸೆಯನ್ನು ಕಂಡು ಅವನ ಮನಸ್ಸು ವ್ಯಾಕುಲಗೊಂಡಿತ್ತು. ಈ ಭೀಕರ ಯುದ್ಧದಿಂದ ಹತರಾದ ಯೋಧರ ಬಂಧುಗಳು, ವಿಧವೆಯರಾದ ಅಸಂಖ್ಯಾತ ಹೆಣ್ಣುಗಳು ಹಾಗೂ ತಬ್ಬಲಿಯಾದ ಮಕ್ಕಳು ಹರಿಸಿದ ಕಣ್ಣೀರು ಈ ನದಿಗಿಂತಲೂ ದೊಡ್ಡದು ಎಂದು ಬಿಕ್ಕುವಿಗೆ ಅನಿಸಿರಬೇಕು. 'ದೇಹದ ಮೇಲಾಗಿರುವ ಗಾಯಗಳನ್ನು ವಾಸಿಮಾಡಬಹುದು! ಆದರೆ ಮನುಷ್ಯನ ಮನಸ್ಸಿನ ಮೇಲೆ ಆಸೆ ಮತ್ತು ಮೋಹ ಎಂಬ ಅಲಗು ಮಾಡಿರುವ ಗಾಯವನ್ನು ಮೊದಲು ಗುಣಪಡಿಸಬೇಕು' ಎಂದು ಬಿಕ್ಕು ತನ್ನೊಳಗೆ ತಾನೆ ಹೇಳಿಕೊಂಡ.ಅವನ ಮನದ ಮಾತುಗಳು ಗಾಳಿಯಲ್ಲಿ ತೇಲಿಬಂದು ನನ್ನ ಕಿವಿಗೂ ತಾಕಿತು.

****

ಯುದ್ಧದ ಪರಿಣಾಮಗಳನ್ನು ನೋಡಿ ದಿಕ್ಕೆಟ್ಟುಹೋಗಿದ್ದ ಅಶೋಕನ ಮನಸ್ಸು ಕದಡಿಹೋಗಿತ್ತು. ಈ ಎಲ್ಲ ಸಾವು–ನೋವುಗಳಿಗೆ ನಾನೇ ಕಾರಣನಾದೆನಲ್ಲಾ ಎಂದು ಪರಿತಪಿಸುತ್ತಾ, ಯುದ್ಧವನ್ನು ನಿಲ್ಲಿಸಿ, ಧೌಲಗಿರಿಯ ಬಂಡೆಗಳ ನಡುವೆ ಹೋಗಿ ಏಕಾಂತವಾಗಿ ಕುಳಿತ. ಧಗಧಗಿಸುವ ಕೊಂಡದಂತೆ ಅವನ ಮನಸ್ಸು ಬೇಯುತ್ತಿತ್ತು. ಸಾಂತ್ವನದ ಹೊಳೆಯೇ ಹರಿದರೂ ನಿವಾರಿಸಲಾರದಂಥ ಯಾತನೆಯದು! ಅಲ್ಲಿದ್ದ ಗಿಡಮರಗಳು, ಹೆಬ್ಬಂಡೆಗಳು ತಮ್ಮ ಕಣ್ಣಮುಂದೆ ನಡೆದ ಸಾಮೂಹಿಕ ಜೀವಹತ್ಯೆಯನ್ನು ನೋಡಿ ಕಳಾಹೀನವಾಗಿದ್ದವು. ಅಲ್ಲಿನ ಮಣ್ಣಿನ ಹೊಳಪು ಬಾಡಿತ್ತು. ಹೂಗಳು ಅರಳಿರಲಿಲ್ಲ. ಹಕ್ಕಿಗಳು ತಮ್ಮ ಕಲರವವನ್ನು ನಿಲ್ಲಿಸಿದ್ದವು. ಈ ಹಿಂದೆ ಇಂತಹ ಅನೇಕ ಯುದ್ಧಗಳನ್ನು ಮಾಡಿದ್ದರೂ, ಈ ಯುದ್ಧ ಮಾತ್ರ ದೊರೆಯ ಹೃದಯವನ್ನು ಆಳವಾಗಿ ಕಲಕಿತ್ತು. ಯುದ್ಧಭೂಮಿಯಲ್ಲಿ ಉಪಗುಪ್ತ ಮಾಡುತ್ತಿದ್ದ ಗಾಯಾಳುಗಳ ಶುಶ್ರೂಷೆ, ದುಃಖಿತಪ್ತರನ್ನು ಶಮನಗೊಳಿಸುವ ಕಾರುಣ್ಯದ ನಡವಳಿಕೆ ಮಸುಕಾಗಿದ್ದ ಅಶೋಕನ ಕಣ್ಣುಗಳನ್ನು ಸ್ವಚ್ಛಗೊಳಿಸಿತು.


ದೊರೆ ಅಶೋಕ ಬದಲಾಗಿದ್ದ. ಯುದ್ಧದ ಗೆಲುವಿನಿಂದಾಗಿ ಲಭಿಸಿದ್ದ ಜಯ, ಇನ್ನೊಬ್ಬರನ್ನು ಯುದ್ಧದಲ್ಲಿ ಗೆಲ್ಲಬೇಕು ಎಂಬ ಅಹಂಕಾರ ಮತ್ತು ಬಲಹೀನರ ಬಗೆಗಿನ ತಿರಸ್ಕಾರಗಳು ಅವನಲ್ಲಿ ಕರಗಿಹೋಗಿದ್ದವು.ನಾನು ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದೆ, ಅಲ್ಲಿ ಕರುಣೆ ಮತ್ತು ಔದಾರ್ಯತೆಯಿತ್ತು. ಜೊತೆಗೆಇನ್ನೆಂದೂ ಇಂಥ ಹೇಯವಾದ ಕೃತ್ಯ ಎಸಗುವುದಿಲ್ಲ ಎನ್ನುವ ದೃಢ ನಿರ್ಧಾರವಿತ್ತು. ಅಂತಿಮವಾಗಿ ಜೀವದಯೆ ಅವನನ್ನು ಮಣಿಸಿತು.

ಅದೇ ಸಮಯಕ್ಕೆ ಉಪಗುಪ್ತ ಅಶೋಕನ ಬಳಿ ನಡೆದುಬಂದು, ಯುದ್ಧದ ಗೆಲುವಿನಿಂದ ದುಃಖಿತನಾದ ಅವನನ್ನು ಸಂತೈಸಿದ. ನನ್ನೊಡನೆ ಯುದ್ಧಭೂಮಿಗೆ ಬಂದು ಗಾಯಗೊಂಡವರನ್ನು ಆರೈಕೆ ಮಾಡುವಂತೆ ಹೇಳಿದ. ಬಿಕ್ಕುವಿನ ಮಾತು ಮತ್ತು ನಡವಳಿಕೆಗಳು ಅಶೋಕನನ್ನು ಹಿಂಸೆಯ ಮಾರ್ಗದಿಂದ ಪಾರುಮಾಡಿ, ಕರುಣೆಯ ಬೆಳಕಿನೆಡೆಗೆ ನಡೆಸಿತು. ಕಿರೀಟ ಮತ್ತು ಖಡ್ಗದ ಒರೆಯನ್ನು ಕಳಚಿಟ್ಟ ಅಶೋಕ ತನ್ನ ದೇಹ ಮತ್ತು ಮನಸ್ಸಿಗಂಟಿದ್ದ ರಕ್ತದ ಕಲೆಗಳನ್ನು ತೊಳೆದುಕೊಳ್ಳಲು ನನ್ನ ಬಳಿಗೆ ಬಂದು ನೀರಿಗಿಳಿದ.

****

ಇದ್ದಕ್ಕಿದ್ದಂತೆ ಆ ಸಂಜೆ ಮಳೆ ಆರಂಭವಾಯಿತು. ಎಂದಿನಂತಲ್ಲದ ಭಾರಿ ಮಳೆ ಅದು. ಭೂಮಿಗಂಟಿದ ರಕ್ತದ ಕಲೆಯನ್ನು ತೊಳೆಯುವಂತಹ ಬಿರುಸುಮಳೆ. ನನ್ನ ಹೊರಮೈಯಲ್ಲಿ ವಾರಗಟ್ಟಲೆ ಹರಿದ ರಕ್ತಬೆರೆತ ನೀರೆಲ್ಲವೂ ಮಳೆಯ ರಭಸಕ್ಕೆ ಸಂಪೂರ್ಣವಾಗಿ ಕೊಚ್ಚಿಹೋಗಿ, ಗಾಜಿನಂತೆ ಹೊಳೆಯುವ ಹೊಸ ನೀರು ನಿಚ್ಚಳವಾಗಿ ಹರಿಯತೊಡಗಿತು. ನೀರುಹಕ್ಕಿಗಳೆಲ್ಲ ಮತ್ತೆ ಉಲಿಯತೊಡಗಿದವು. ಮಳೆಯ ಸ್ಪರ್ಶದಿಂದಾಗಿ ನನ್ನ ಸುತ್ತಲಿನ ಮಣ್ಣಿಗೆ ವಿಚಿತ್ರ ಕಂಪು ಬಂದಿತ್ತು. ನೆತ್ತರಿನಿಂದ ಕೆಂಪಾಗಿದ್ದ ನೆಲವೆಲ್ಲ ಈಗ ಹಸುರಿನ ಉಡುಗೆತೊಟ್ಟು ನಲಿಯತೊಡಗಿತು. ಧೌಲಗಿರಿಯ ಮೇಲೆ ಹಸುರಾಡಿ ಇಡೀ ಬೆಟ್ಟವೇ ಚಿಗುರಿತು. ಯುದ್ಧಕ್ಕೆ ವಿದಾಯ ಹೇಳಿದ ಕಳಿಂಗದ ಬೀದಿಗಳ ಮೇಲೆ ಈಗ ವಸಂತದ ಹರ್ಷದ ಗಾಳಿ ಬೀಸುತ್ತಿದೆ.


ಮಳೆಹೊಯ್ದು ಮರುದಿನ ತೆಳು ಮೋಡಗಳ ನಡುವಿನಿಂದ ಹೊಂಬಣ್ಣದ ಸೂರ್ಯ ಉದಯಿಸಿದ. ಅದರ ಮೊದಲ ಕಿರಣಗಳು ತಾಕುತ್ತಿದ್ದಂತೆಯೇ ನನ್ನ ಮೈಯಿಂದ ಮಿರಿ ಮಿರಿ ಮಿಂಚುವ ಚಿನ್ನದ ಅಲೆಗಳು ಮೇಲೇಳತೊಡಗಿದವು. ಮತ್ತೊಂದು ದಿಕ್ಕಿನಿಂದ ಕರುಣೆಯ ಸಾಕಾರ ಮೂರ್ತಿಯಂತಿದ್ದ ಉಪಗುಪ್ತ ಮತ್ತು ಯುದ್ಧದ ಕ್ರೌರ್ಯ ಮತ್ತು ಹಿಂಸೆಯನ್ನು ಕಂಡು ಪರಿವರ್ತನೆಗೊಂಡಿದ್ದ ಅಶೋಕ, ಇಬ್ಬರೂ ಜೋಡಿ ಸೂರ್ಯರಂತೆ ಉದಯಿಸಿ ನನ್ನ ನನ್ನ ಕಣ್ಣ ಮುಂದೆ ನಡೆದು ಹೋದರು.



(ನಿವೃತ್ತ ಕನ್ನಡ ಉಪನ್ಯಾಸಕರಾದ ಜಿ.ವಿ. ಆನಂದಮೂರ್ತಿ ಬೌದ್ಧ ಧರ್ಮದ ಶ್ರದ್ಧಾಳು ಮತ್ತು ನಮ್ಮ ನಡುವಿನ ಒಳ್ಳೆಯ ಲಲಿತ ಪ್ರಬಂಧಕಾರ ಹಾಗೂ ಕಥೆಗಾರರು.)

ಶ್ರೀ ರಮಣ ದರ್ಶನ

ಧರ್ಮ ವಿಚಾರ



ಆಧುನಿಕ ಭಾರತದಲ್ಲಿ ಉದಯಿಸಿದ ಸಂತಶ್ರೇಷ್ಠರಲಿ ಒಬ್ಬರಾದ ಶ್ರೀ ರಮಣ ಮಹರ್ಷಿಗಳು ಪಂಡಿತರ ಹಂಗಿಲ್ಲದೆ, ಧರ್ಮಗ್ರಂಥಗಳ ಗೋಜಿಲ್ಲದೆ, ಧಾರ್ಮಿಕ ವಿಧಿ ವಿಧಾನಗಳ ಮಡಿ-ಮೈಲಿಗೆಗಳಿಲ್ಲದೆ ಮತ್ತು ಜಾತಿ ಬೇಧಗಳ ನಿರ್ಬಂಧಗಳಿಲ್ಲದೆ 'ನಾನು ಯಾರು?' ಎಂಬ ಸರಳ ಪ್ರಶ್ನೆಯನ್ನು ರೂಪಿಸಿ ಕೊಡುವ ಮೂಲಕ ಜನ ಸಾಮಾನ್ಯರಿಗೂ ಜ್ಞಾನ ಪ್ರದಾನ ಮಾಡಿದವರು. ಸ್ವಸ್ವರೂಪ ದರ್ಶನವಾದರೆ ಎಲ್ಲದರ ದರ್ಶನವೂ ತಂತಾನೇ ಆಗುತ್ತದೆ ಎಂದೆನ್ನುವ ರಮಣರು ಆ ಸ್ವಸ್ವರೂಪ ದರ್ಶನಾಕಾಂಕ್ಷಿಗಳಾಗಿ, ಹೂವಿನ ಪರಿಮಳದಿಂದ ಸೆಳೆಯಲ್ಪಟ್ಟ ದುಂಬಿಗಳಂತೆ ಧರ್ಮ ಭೇದವಿಲ್ಲದೆ, ಆಸ್ತಿಕ-ನಾಸ್ತಿಕರೆನ್ನದೆ, ಗಂಡು-ಹೆಣ್ಣೆನ್ನದೆ, ಚಿಕ್ಕವರು-ದೊಡ್ಡವರೆನ್ನದೆ ಜಗತ್ತಿನ ಮೂಲೆ ಮೂಲೆಗಳಿಂದ ಬಂದ ಜ್ಞಾನ ಪಿಪಾಸುಗಳ ಹಲವು ನೆಲೆಗಳ ಪ್ರಶ್ನೆಗಳಿಗೆ ನೀಡಿದ ಉತ್ತರಗಳು ಪುಸ್ತಕಗಳ ರೂಪದಲ್ಲಿ ದಾಖಲಾಗಿದ್ದು, ಅವುಗಳಿಂದಾಯ್ದ ಕೆಲ ಪ್ರಶ್ನೋತ್ತರಗಳ ಕನ್ನಡ ಅನುವಾದವನ್ನು ಇಲ್ಲಿ ನೀಡುತ್ತಿದ್ದೇವೆ.-ಸಂ.

ಆತ್ಮ ವಿಚಾರವೆಲ್ಲ ಏಕೆ ಬೇಕು?

ಆತ್ಮ ವಿಚಾರ ಮಾಡದಿದ್ದಲ್ಲಿ ಲೋಕ ವಿಚಾರ ನುಸುಳುವುದು. ನಿಜವಾಗಿ ಇರುವುದನ್ನು ಬಿಟ್ಟು ನಿಜವಾಗಿ ಇಲ್ಲದ್ದನ್ನು ಅರಸತೊಡಗಿದಾಗ ಅಶಾಂತಿ ಆರಂಭವಾಗುತ್ತದೆ. ಯಾವುದು ನಿಜವಾಗಿ ಇರುವುದೋ ಅದನ್ನು ಕಂಡಾಗ, ಆ ಕಾಣುವಿಕೆಯಲ್ಲಿ ನೀವು ಶಾಂತಿ ಪಡೆಯುವಿರಿ.

ಸಂತೋಷ ದುಃಖಗಳೆಂಬುವು ಅಹಂಕಾರದ ಸ್ವಭಾವಗಳು. ಆತ್ಮವಿಚಾರದ ಮೂಲಕ ನೀವು ನಿಜವಾಗಿ ಆ ಅಹಂಕಾರವಲ್ಲ ಎಂಬ ಅರಿವು ಉಂಟಾದಾಗ ನಿಮಗೆ ಬಂದು ಹೋಗುತ್ತಾ ಕಾಡುವ ಸಂತೋಷವಾಗಲಿ ದುಃಖವಾಗಲಿ ಎಲ್ಲಿರುತ್ತದೆ? ನಿಮ್ಮ ನಿಜ ಸ್ವರೂಪ ಈ ಎಲ್ಲ ಭಾವಗಳ ಆಚೆಯದು. ಆತ್ಮ ವಿಚಾರದ ಲಾಭ ನಿಮ್ಮ ಅರಿವಿಗೆ ಬರುವುದು ಬದುಕಿನ ಎಲ್ಲ ಕಷ್ಟ ದುಃಖಗಳಿಂದ ಬಿಡುಗಡೆ ಪಡೆಯುವ ರೂಪದಲ್ಲಿ. ನಿಮಗೆ ಇದ್ದಕ್ಕಿಂತ ಹೆಚ್ಚಿಗೆ ಇನ್ನೇನು ಬೇಕು? ತ್ಮದ ಅರಿವಿನಲ್ಲಿರುವವನಿಗೆ ಮಾಡಬೇಕಾದದ್ದು ಏನೂ ಉಳಿದಿರುವುದಿಲ್ಲ, ಯಾವ ಆಲೋಚನೆಗಳೂ ಇರುವುದಿಲ್ಲ. ಆಗ ಅನಂತಶಕ್ತಿಯು CªÀ¤UÉ ಅಗತ್ಯವೆನಿಸುವ ಎಲ್ಲ ಕೆಲಸಗಳನ್ನೂ ತಾನೇ ಮಾಡುತ್ತಾ ಹೋಗುತ್ತದೆ. ಶಾಂತಿ ಎಂಬುದು ಮನುಷ್ಯನ ಆಂತರಿಕ ಸ್ವಭಾವ. ಅದನ್ನು ನೀವು ನಿಮ್ಮೊಳಗೆ ಕಾಣತೊಡಗಿದರೆ ಅದನ್ನು ನೀವು ಎಲ್ಲದರಲ್ಲಿಯೂ ಕಾಣತೊಡಗುವಿರಿ.

ಆತ್ಮಜ್ಞಾನ ಪಡೆಯುವುದು ಹೇಗೆ?

ಆತ್ಮ ನಿತ್ಯಸ್ಥವಾಗಿರುವುದರಿಂದ ಅದರ ಜ್ಞಾನವನ್ನು ಪಡೆಯುವುದೆಂಬುದಿಲ್ಲ. ಅದು ಹೊಸತಾಗಿ ಪಡೆಯುವಂತಹ ಜ್ಞಾನವಲ್ಲ. ಅದರ ಜ್ಞಾನಕ್ಕೆ ಅಜ್ಞಾನವೆಂಬ ತಡೆಯಿದ್ದು, ಅದು ಸರಿದುಹೋದಾಗ ಜ್ಞಾನ ತಾನೇ ತಾನಾಗಿ ಹೊಳೆಯುತ್ತದೆ. ಆದರೆ ಒಂದು ವಿಷಯ: ಈ ಜ್ಞಾನ-ಅಜ್ಞಾನಗಳೆಂಬುವು ಆತ್ಮದಲ್ಲಿಲ್ಲ. ಅವು ಸ್ವಚ್ಛಗೊಳಿಸಿಕೊಳ್ಳಬೇಕಾದ ಆಂತರಿಕ ಸ್ರಾವಗಳಿದ್ದಂತೆ. ಹಾಗಾಗಿ ಆತ್ಮ ಎಂಬುದು ಅಜ್ಞಾನ ಮತ್ತು ಜ್ಞಾನಗಳ ಆಚಿನದು. ಅದು 'ಸ್ವ'ವಾಗಿ ತಾನಿರುವಂತೆ ಇದೆ-ಅಷ್ಟೆ.

ಆತ್ಮ ವಿಚಾರ ಮತ್ತು ಧ್ಯಾನಕ್ಕೂ ಇರುವ ವ್ಯತ್ಯಾಸಗಳೇನು?

ಅಹಂಕಾರವನ್ನು ಉಳಿಸಿಕೊಂಡಿದ್ದಾಗ ಮಾತ್ರ ಧ್ಯಾನ ಸಾಧ್ಯ. ಅಲ್ಲಿ ಅಹಂಕಾರ ಮತ್ತು ಯಾವುದರ ಮೇಲೆ ಧ್ಯಾನ ಮಾಡಲಾಗುವುದೋ ಆ ವಸ್ತು ಇರುತ್ತವೆ. ಈ ವಿಧಾನ ಪರೋಕ್ಷವಾದದ್ದು. ಆದರೆ ನಾವು ಅಹಂನ ಮೂಲ ಹುಡುಕಹೊರಟಾಗ ಅಹಂ ಕಾಣೆಯಾಗತೊಡಗುತ್ತದೆ. ಆಗ ಉಳಿಯುವುದೇ ಆತ್ಮ.

ಮನಸ್ಸು ಚಂಚಲ.ಅಲ್ಲಿಲ್ಲಿ ಅಲೆದಾಡುತ್ತಿರುತ್ತದೆ. ಅದನ್ನು ನಿಯಂತ್ರಿಸುವುದು ಹೇಗೆ?

ಈ ಅಲೆದಾಟ ಯಾರದ್ದು ಎಂಬ ಪ್ರಶ್ನೆಯ ಕಡೆ ನಿಮ್ಮ ಮನಸ್ಸನ್ನು ಏಕಾಗ್ರಗೊಳಿಸಿದರೆ ಮನಸ್ಸು ಅಲೆದಾಟವನ್ನು ನಿಲ್ಲಿಸುತ್ತದೆ.

ಹಾಗಾದರೆ ಆಲೋಚನೆಗಳೆಂಬುವು ನಿಜವಲ್ಲವೆ?

ಹೌದು, ನಿಜವಲ್ಲ. ಮನಸ್ಸು ಎಂಬುದು ಪ್ರಜ್ಞೆ ಅಥವಾ ಆತ್ಮದಲ್ಲಿ ಹುಟ್ಟುವ ಆಲೋಚನೆಗಳ ಸಮೂಹವಷ್ಟೆ. ಆಲೋಚನೆಗಳಿಗೆ ನಿಜತ್ವವಿಲ್ಲ. ನಿಜವಾದುದು ಆತ್ಮ ಮಾತ್ರ.

ಮನಸ್ಸು ಎನ್ನುವುದು ಒಂದು ಹುಸಿ ರಚನೆ. ಅದು 'ನಾನು' ಎಂಬ ಭಾವನೆ ಅಥವಾ ಆಲೋಚನೆಯಿಂದ ಉದಿಸುತ್ತದೆ ಇದರ ಹಿಂದೆ ಸದಾ ಉಳಿದಿರುವ-ಅಂದರೆ ಆಲೋಚನೆಗಳಿಂದ ಮುಕ್ತವಾದ-ಹಿನ್ನೆಲೆಯೇ ಆತ್ಮ. ಆಲೋಚನೆಗಳಿಲ್ಲದ ಪರಿಶುದ್ಧತೆಯಲ್ಲಿರುವ ಮನಸ್ಸೇ ಆತ್ಮ. ಕರ್ಪೂರ ಉರಿದಾಗ ಏನೂ ಉಳಿದಿರುವುದಿಲ್ಲ. ಮನಸ್ಸು ಕರ್ಪೂರ. ಅದು ಚೂರೂ ಅವಶೇಷವಿಲ್ಲದಂತೆ ಉರಿದು ಆತ್ಮವಾಗಿ ಕರಗಿ ಹೋಗುವುದೇ ಆತ್ಮ ಸಾಕ್ಷಾತ್ಕಾರ.

ಈ ವಿಶ್ವದ ಹುಟ್ಟಿಗೆ ಕಾರಣವೇನು?

ಏಕೆ, ನಿಮಗೆ ನಿಮ್ಮದೇ ಚಿಂತೆಗಳಿಲ್ಲವೇ?

ಓ! ಇದೆ. ಹಾಗಾಗಿಯೇ ನಾನು ಜೀವ, ಜಗತ್ತು, ಸಾವು, ಪ್ರಜ್ಞೆ ಇತ್ಯಾದಿಗಳ ಬಗ್ಗೆ ತಿಳಿಯಬಯಸಿರುವುದು.

ಆರಂಭದಿಂದ ಆರಂಭಿಸಿ. ಜೀವ, ಪ್ರಜ್ಞೆ ಇವೆಲ್ಲ ಇರುವುದು ಯಾರಿಗೆ? ಉದಾಹರಣೆಗೆ ನಿಮಗೆ ಜೀವ ಇದೆಯೆ?

ಮತ್ತೆ! ನನ್ನ ದೇಹ ನನಗೆ ಕಾಣಿಸುತ್ತಿದ್ದು ನಾನು ಜೀವಿಸಿರುವುದು ನನಗೆ ಗೊತ್ತಿದೆ.

ನೀವು ಯಾವಾಗಲೂ ನಿಮ್ಮ ದೇಹವನ್ನು ಕಾಣುತ್ತಿರುವಿರಾ? ಉದಾಹರಣೆಗೆ, ನೀವು ನಿದ್ದೆಗೆ ಸರಿದಾಗ ದೇಹಕ್ಕೆ, ವಿಶ್ವಕ್ಕೆ ಏನಾಗುತ್ತದೆ?

ನನಗೆ ಗೊತ್ತಿಲ್ಲ. ಅದೊಂದು ರಹಸ್ಯ.

ಅವಕ್ಕೆ ಏನಾಗುತ್ತದೆಂಬುದು ನಿಮಗೆ ಗೊತ್ತಾಗದಿರಬಹುದು. ಆದರೆ ನಿಮ್ಮ ಇರವು ಇರುವುದಿಲ್ಲವೆ?

ನನಗೆ ಗೊತ್ತಿಲ್ಲ.

ಆಯಿತು. ಈಗ ನೀವು ಇರುವುದು ನಿಮಗೆ ಹೇಗೆ ಗೊತ್ತು?

ನನಗೆ ಈಗ ಅರಿವಿದ್ದು ನನ್ನ ದೇಹ ಚಲಿಸುತ್ತಿರುವುದು, ಚಿಂತಿಸುತ್ತಿರುವುದು ಗೊತ್ತಾಗುತ್ತಿದೆ.

ಹಾಗೇ ನೀವು ಈಗ ತಿರುವಣ್ಣಾಮಲೈನಲ್ಲಿ ನಿದ್ರಿಸುತ್ತಿರುವಾಗ ಕನಸಿನಲ್ಲಿ ನಿಮ್ಮ ದೇಹ ಎಲ್ಲೆಲ್ಲೋ ಓಡಾಡುತ್ತಾ ಏನೇನನ್ನೋ ಚಿಂತಿಸುತ್ತಿರುವುದೂ ಗೊತ್ತಾಗುತ್ತದೆ ಅಲ್ಲವೇ?

ನಿಜವಾಗಲೂ ಅದೊಂದು ರಹಸ್ಯ. ಹೀಗೆ ಹೇಳಬಹುದೇ: ಎಂದಿಗೂ ಇರುವಂತಹ ಶಾಶ್ವತವಾದ ನಾನು ಎಂಬುದು ಅಹಂ ರೂಪದಲ್ಲಿ ಬದಲಾಗುತ್ತಿರುತ್ತದೆ?

ಹಾಗಾದರೆ ನೀವು ಇಬ್ಬರು ವ್ಯಕ್ತಿಗಳೆಂದು ಹೇಳುತ್ತಿರುವಿರಿ? ಶಾಶ್ವತವಾದ ನಾನು ಮತ್ತು ಅಹಂ ರೂಪದ ನಾನು?

ದಯವಿಟ್ಟು ನನಗೆ ಸತ್ಯದರ್ಶನದ ದಾರಿ ತೋರಿಸಿರಿ.

ಸತ್ಯವಾದದ್ದು ಎಂದರೆ ಎಂದೆಂದಿಗೂ ಇರುವಂತಹದ್ದು. ಸಿನಿಮಾ ಚಿತ್ರಗಳು ಮೂಡುವ ತೆರೆಯಂತೆ. ಚಿತ್ರಗಳು ಬೀಳುತ್ತಿರುವಾಗ ಅದು ಕಾಣುವುದಿಲ್ಲ. ಚಿತ್ರ ಬಿಡುವುದನ್ನು ನಿಲ್ಲಿಸಿ, ಯಾವಾಗಲೂ ಇರುವ-ವಾಸ್ತವವಾಗಿ ಎಂದೆಂದಿಗೂ ಇರುವ ಏಕ ಮಾತ್ರ ವಸ್ತು-ಸ್ಪಷ್ಟವಾಗಿ ಕಾಣತೊಡಗುತ್ತದೆ. ಈ ವಿಶ್ವ, ಈ ಜೀವಗಳು, ಆಲೋಚನೆಗಳು ಮತ್ತು ಘಟನೆಗಳು ಆತ್ಮವೆಂಬ ತೆರೆಯ ಮೇಲೆ ಮೂಡಿ ಹೋಗುವ ಚಿತ್ರಗಳು.

ನಿಮ್ಮ ಪ್ರಕಾರ ಕಾಲ ದೇಶಗಳೆಂದರೇನು?

ಈ ಪ್ರಶ್ನೆಯನ್ನು ಕೇಳುತ್ತಿರುವವರು ಯಾರು?

ನಾನೇ ಸ್ವಾಮಿ.

ಆ ನಾನು ಎಂದರೇನೆಂದು ನಿಮಗೆ ಗೊತ್ತಾ?

ಅದನ್ನು ತತ್ವಶಾಸ್ತ್ರಜ್ಞರಿಗೆ ಬಿಡಿ. ನನ್ನ ಪ್ರಶ್ನೆಗೆ ಉತ್ತರ ಕೊಡಿ.

ಏನು ನಿಮ್ಮನ್ನು ಕುರಿತ ಅರಿವಿಗಿಂತ ಈ ಕಾಲ ದೇಶಗಳೇನೆಂಬುದು ನಿಮಗೆ ಮುಖ್ಯವೇ? ಅದು ಸಾಧ್ಯವೇ? ನಿಮಗೆ ಒಂದು ವಿಷಯ ಗೊತ್ತಿರಲಿ: ಆತ್ಮಜ್ಞಾನವಿಲ್ಲದೇ ಯಾವುದೇ ಪ್ರಶ್ನೆಯನ್ನು ಪರಿಹರಿಸಿಕೊಳ್ಳಲಾಗುವುದಿಲ್ಲ. ಆತ್ಮಾನುಭವವಾದಾಗ ಎಲ್ಲವೂ ಸ್ಪಷ್ಟವಾಗುತ್ತದೆ. ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ.

ಆತ್ಮವಿಚಾರಕ್ಕೆ ಏಕಾಂತ ಅಗತ್ಯವೇ?

ಏಕಾಂತತೆ ಎಲ್ಲ ಕಡೆ ಇದೆ. ವ್ಯಕ್ತಿ ಯಾವಾಗಲೂ ಏಕಾಂಗಿಯೇ...ಅದನ್ನು ನಮ್ಮೊಳಗೇ ಕಂಡುಕೊಳ್ಳಬೇಕೇ ಹೊರತು ಹೊರಗಲ್ಲ. ಏಕಾಂತ ಇರುವುದು ಮನಸ್ಸಿನಲ್ಲಿ.

ಜಗತ್ತೇಕೆ ಇಷ್ಟು ದುಃಖಮಯವಾಗಿ ಸೃಷ್ಟಿಯಾಗಿದೆ?

ಜಗತ್ತಿನ ಸುದ್ದಿ ಇರಲಿ, ನೀವು ಸುಖಿಯೇ? ನಿಮ್ಮ ಕಣ್ಣುಗಳು ತಮ್ಮನ್ನು ತಾವು ನೋಡಿಕೊಳ್ಳಲಾರವು. ಹಾಗೆ ನೋಡಿಕೊಳ್ಳಲು ಕನ್ನಡಿ ಬೇಕು. ಜಗತ್ತು ನಿಮ್ಮ ಕನ್ನಡಿ ಇದ್ದಂತೆ. ನಿಮ್ಮ ದುಃಖ ಜಗತ್ತಿನಲ್ಲಿ ಪ್ರತಿಫಲಿತವಾಗುತ್ತಿದೆಯಷ್ಟೆ. ಹಾಗಾಗಿ ಜಗತ್ತು ಹೀಗೆ ಕಾಣುವುದು, ನಿಮ್ಮ ದುಃಖದ ಕಡೆ ನಿಮ್ಮ ಗಮನ ಸೆಳೆಯಲೆಂದು

ಸಾವಿನ ಭಯಂಕರ ಭಯವನ್ನು ನಿವಾರಿಸಿಕೊಳ್ಳುವುದು ಹೇಗೆ?

ಆ ಭಯ ನಿಮ್ಮನ್ನು ಯಾವಾಗ ಆವರಿಸುತ್ತದೆ? ಅದು ನೀವು ನಿಮ್ಮ ದೇಹವನ್ನು ನೋಡಲಾಗದಿದ್ದಾಗ, ಉದಾಹರಣೆಗೆ ನೀವು ಗಾಢ ನಿದ್ರೆಯಲ್ಲಿದ್ದಾಗ ಅಥವಾ ಅರವಳಿಕೆಯಲ್ಲಿದ್ದಾಗ ಆವರಿಸುತ್ತದೆಯೇ? ಅದು ನೀವು ಸಂಪೂರ್ಣ 'ಎಚ್ಚರ'ದಲ್ಲಿದ್ದು ನಿಮ್ಮ ದೇಹವೂ ಸೇರಿದಂತೆ ಲೋಕವನ್ನು ನೋಡುವಂತಿರುವಾಗ ಮಾತ್ರ ಕಾಡುತ್ತದೆ. ನೀವು ಇದನ್ನು ನೋಡದಿದ್ದರೆ, ಕನಸುಗಳಿಲ್ಲದ ಗಾಢ ನಿದ್ರೆಯಲ್ಲಿರುವಂತೆ ಶುದ್ಧ ಆತ್ಮರೂಪದಲ್ಲಿದ್ದರೆ, ಯಾವ ಭಯವೂ ನಿಮ್ಮನ್ನು ಮುಟ್ಟಲಾರದು

ಯಾವ ವಸ್ತುವಿನ ಇಲ್ಲದಿರುವಿಕೆ ಈ ಭಯದ ಮೂಲವಾಗಿದೆಯೋ ಅದನ್ನು ನೀವು ಪತ್ತೆ ಮಾಡುವಿರಾದರೆ, ಆ ವಸ್ತು ದೇಹವಲ್ಲ;ಬದಲಿಗೆ ಅದರೊಳಗಿರುವ–ನೋಟ, ಶಬ್ದ, ವಾಸನೆ ಮುಂತಾದವುಗಳ ಮೊತ್ತವಾದ ಆಕರ್ಷಕ ಜಗತ್ತನ್ನು ಗ್ರಹಿಸುವ–ಮನಸ್ಸು ಎಂಬುದು ನಿಮಗೆ ಗೊತ್ತಾಗುತ್ತದೆ. ನಿರಂತರ ಅರಿವಿನ ಖಚಿತ ಭರವಸೆ ಇದ್ದಲ್ಲಿ ರೋಗಬಾಧೆಗಳಿಗೆ ಒಳಗಾಗುವ ಈ ದೇಹದಿಂದಲೂ, ಅದರಿಂದ ಉಂಟಾಗುವ ಸಮಸ್ಯೆ ಮತ್ತು ಅಸುಖಗಳಿಂದಲೂ ಮುಕ್ತರಾಗಲು ಬಹಳ ಜನ ಬಯಸಿಯಾರು. ಆದ್ದರಿಂದ ಅವನು ಭಯಪಡುವುದು ದೇಹ ಕಳೆದುಕೊಳ್ಳುವೆನೆಂದಲ್ಲ;ಇರವಿನ ಅರಿವನ್ನು, ಪ್ರಜ್ಞೆಯನ್ನು ಕಳೆದುಕೊಳ್ಳುವೆನೆಂದು. ಹಾಗಾಗಿ ಈಗಲೇ ಈ ದೇಹದಲ್ಲಿರುವಾಗ ಶುದ್ಧ ಈ ಇರವಿನ ಅರಿವನ್ನು ಗಟ್ಟಿಯಾಗಿ ಹಿಡಿದು ಎಲ್ಲ ಭಯಗಳಿಂದ ಯಾಕೆ ಮುಕ್ತವಾಗಬಾರದು?

ಸಾವು ಮತ್ತು ಪುನರ್ಜನ್ಮಗಳ ನಡುವೆ ಐವತ್ತರಿಂದ ಹತ್ತು ಸಾವಿರ ವರ್ಷಗಳ ಅಂತರ ಇರುವುದೆಂದು ಥಿಯೋಸಫಿಸ್ಟರು ಹೇಳುತ್ತಾರಲ್ಲಾ?

ಪ್ರಜ್ಞೆಯ ಒಂದು ಮತ್ತು ಇನ್ನೊಂದು ಅವಸ್ಥೆಗಳಿಗೆ ಸಂಬಂಧಿಸಿದಂತೆ ಅಳತೆಯ ಒಂದೇ ಮಾನದಂಡವಿಲ್ಲ. ಅಂತಹ ಎಲ್ಲ ಅಳತೆಗಳೂ ಊಹಾತ್ಮಕವು. ಕೆಲವು ಜೀವಿಗಳು ಹೆಚ್ಚು ಕಾಲ ಮತ್ತು ಇನ್ನು ಕೆಲವು ಜೀವಿಗಳು ಕಡಿಮೆ ಕಾಲ ತೆಗೆದುಕೊಳ್ಳುತ್ತವೆಂಬುದು ನಿಜ. ಆದರೆ ಮುಖ್ಯವಾಗಿ ಅರಿತಿರಬೇಕಾದುದು ಏನೆಂದರೆ, ಹೋಗುವುದು ಬರುವುದನ್ನು ಮಾಡುವುದು ಆತ್ಮವಲ್ಲ, ಯಾವದೇ ಪಾತಳಿಯಲ್ಲಿ ಮನಸ್ಸು ಕೆಲಸ ಮಾಡಲಿ, ಅದು ತನಗಾಗಿ ದೇಹವೊಂದನ್ನು ಸೃಷ್ಟಿಸಿಕೊಳ್ಳುತ್ತದೆ–ಭೌತ ಜಗತ್ತಿನಲ್ಲಿ ಭೌತ ದೇಹವನ್ನು, ಕನಸಿನ ಲೋಕದಲ್ಲಿ ಕನಸಿನ' ಕನಸಿನ ದೇಹವನ್ನು. ಭೌತಿಕ ದೇಹದ ಸಾವಿನ ನಂತರ ಮನಸ್ಸು ಸ್ವಲ್ಪ ಕಾಲ ಕನಸಿಲ್ಲದ ನಿದ್ರೆಯಲ್ಲಿರುವಂತೆ ಲೋಕರಹಿತವಾಗಿ;ಹಾಗಾಗಿ ದೇಹರಹಿತವಾಗಿ ನಿಷ್ಕ್ರಿಯವಾಗಿರುತ್ತದೆ. ಆದರೆ ಯಾವುದನ್ನು ಪುನರ್ಜನ್ಮ ಎಂದು ಕರೆಯಲಾಗುವುದೋ ಅದರಲ್ಲಿ ದೇಹವೊಂದನ್ನು ಆವಾಹಿಸಿಕೊಳ್ಳುವವರೆಗೆ ಅದು ಬೇಗ ಹೊಸದೊಂದು ಲೋಕದಲ್ಲಿ ಮತ್ತು ಹೊಸದೊಂದು ದೇಹದಲ್ಲಿ–ಸೂಕ್ಷ್ಮ ಪಾತಳಿಯದ್ದು–ಕ್ರಿಯಾತ್ಮಕವಾಗುತ್ತದೆ. ಆದರೆ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಜ್ಞಾನಿಯ ಮನಸ್ಸು ಕೆಲಸ ಮಾಡುವುದನ್ನು ನಿಲ್ಲಿಸಿರುವುದರಿಂದ ಸಾವು ಅದನ್ನು ಏನೂ ಮಾಡಲಾಗದು: ಹುಟ್ಟು ಸಾವುಗಳನ್ನು ಉಂಟು ಮಾಡಲು ಉದಯವಾಗದಂತೆ ಮನಸ್ಸು ಅಸ್ತಮಿಸಿ ಹೋಗಿರುತ್ತದೆ.

ಈಗ ನಿಜವಾದ ಹುಟ್ಟೂ ಇಲ್ಲ, ನಿಜವಾದ ಸಾವೂ ಇಲ್ಲವೆಂಬುದು ಸ್ಪಷ್ಟ. ಈ ಪ್ರಕ್ರಿಯೆಯಲ್ಲಿ ನಿಜತ್ವದ ಭ್ರಮೆಯನ್ನು ಉಂಟು ಮಾಡುವುದು ಆತ್ಮ ಸಾಕ್ಷಾತ್ಕಾರವಿಲ್ಲದೆ ನಾಶವಾಗದಿರುವ ಮನಸ್ಸೇ.

ಬದುಕುವ, ಮತ್ತೆ ಹುಟ್ಟಲು ಬಯಸುವ ಈ ತನ್ಹಾ(ತೃಷ್ಣೆ–ದಾಹ)ಕ್ಕೆ ಕಾರಣವೇನು?

ನಿಜವಾದ ಪುನರ್ಜನ್ಮವೆಂದರೆ ಅಹಂ–ಭಾವದಿಂದ ಮಹಾ ಚೈತನ್ಯದೊಳಕ್ಕೆ ಸಾಯುವುದು. ಏಸುವಿನ ಶಿಲುಬೆಗೇರಿದ್ದರ ಗೂಢಾರ್ಥವೂ ಇದೇ. ದೇಹದೊಡನೆ ಗುರುತಿಸಿಕೊಳ್ಳುವ ಬಯಕೆ ಇದ್ದಲ್ಲಿ, ಒಂದಲ್ಲ ಒಂದು ಪಾತಳಿಯಲ್ಲಿ ಒಂದಲ್ಲ ಒಂದು ದೇಹ ಸಿಕ್ಕೇ ಸಿಗುತ್ತದೆ. ದೇಹ ಭಾವ ಮೂಲದಲ್ಲಿ, ಮಹಾಚೈತನ್ಯದಲ್ಲಿ ಅಥವಾ ಆತ್ಮದಲ್ಲಿ ಲೀನವಾಗುವವರೆಗೆ. ಮೇಲಕ್ಕೆ ಎಸೆಯಲ್ಪಟ್ಟ ಕಲ್ಲು ತನ್ನ ಮೂಲ ಭೂಮಿಗೆ ಬಂದು ವಿರಮಿಸುವವರೆಗೆ ನಿರಂತರ ಚಲನೆಯಲ್ಲಿರುತ್ತದೆ. ತಲೆನೋವು, ತಲೆನೋವುಪೂರ್ವ ಅವಸ್ಥೆಯನ್ನು ಮರಳಿಪಡೆಯುವವರೆಗೆ ತೊಂದರೆ ಕೊಡುತ್ತಲೇ ಇರುತ್ತದೆ.

ಬದುಕುವ ದಾಹ ಬದುಕಿನ, ಅಂದರೆ ನಿರಪೇಕ್ಷ ಅಸ್ತಿತ್ವದ–'ಸತ್'ನ–ಮೂಲ ಸ್ವಭಾವ. ಅದು ಸ್ವಭಾವತಃ ಅವಿನಾಶಿಯಾದರೂ, ನಶ್ವರವಾದ ಸಾಧನ ಅಂದರೆ ದೇಹದೊಂದಿಗೆ ತಪ್ಪಾಗಿ ಗುರುತಿಸಿಕೊಳ್ಳುವ ಮೂಲಕ ನಾಶ ಹೊಂದುವ ಹುಸಿ ಆತಂಕದಲ್ಲಿದ್ದು ಆ ಗುರುತನ್ನು ಶಾಶ್ವತ ಮಾಡಿಕೊಳ್ಳಲು ಹೆಣಗುತ್ತಾ ಹುಟ್ಟು–ಮರುಹುಟ್ಟುಗಳ ಸರಣಿಗೇ ಕಾರಣವಾಗುತ್ತದೆ. ಈ ದೇಹಗಳು ಎಷ್ಟೇ ಕಾಲವಿರಲಿ, ಅವು ಒಂದಲ್ಲ ಒಂದು ದಿನ ಮುಗಿತಾಯ ಕಂಡು, ಯಾವುದು ಏಕೈಕವಾಗಿ ಅನವರತ ಇರುವುದೋ ಆ ಆತ್ಮನಿಗೆ ದಾರಿ ಮಾಡಿಕೊಡಲೇಬೇಕು.

ನೀವು ಸತ್ತವರನ್ನು ತೋರಿಸಬಲ್ಲಿರಾ?

ನಿಮ್ಮ ಬಂಧುಗಳನ್ನು ಸತ್ತ ಮೇಲೆ ನೋಡಬಯಸುವ ನೀವು ಅವರನ್ನು ಅವರು ಹುಟ್ಟುವ ಮುನ್ನ ತಿಳಿದಿದ್ದಿರಾ?

ದೇವರನ್ನು ಕಾಣುವುದು ಹೇಗೆ?

ನಮ್ಮೊಳಗೇ. ಮನಸ್ಸನ್ನು ಒಳಕ್ಕೆ ತಿರುಗಿಸಿದರೆ ದೇವರು ಒಳಪ್ರಜ್ಞೆಯಲ್ಲಿ ಕಾಣಿಸಿಕೊಳ್ಳುತ್ತಾನೆ.

ಆದರೆ ದೇವರು ನಮ್ಮ ಸುತ್ತ ಕಾಣುವ ಪ್ರತಿಯೊಂದರಲ್ಲೂ ಇರುವುದಿಲ್ಲವೇ?

ದೇವರು ಎಲ್ಲದರಲ್ಲೂ, ಅದನ್ನು ನೋಡುವವನಲ್ಲೂ ಇರುವನು. ದೇವರನ್ನು ಎಲ್ಲಿ ಕಾಣಲು ಸಾಧ್ಯ? ಆತನನ್ನು ಹೊರಗೆ ಕಾಣಲಾಗುವುದಿಲ್ಲ. ಆತನ ಅನುಭವ ಒಳಗಷ್ಟೇ ಆಗಲು ಸಾಧ್ಯ. ಏಕೆಂದರೆ, ವಸ್ತುಗಳನ್ನು ನೋಡಲು ಮನಸ್ಸು ಅಗತ್ಯ ಮತ್ತು ಅವುಗಳಲ್ಲಿ ದೇವರನ್ನು ಕಾಣುವುದು ಎಂದರೆ ಅದು ಮಾನಸಿಕ ಕೆಲಸವೇ ಆಗುತ್ತದೆ. ಆದರೆ ಮನಸ್ಸು ನಿಜವಲ್ಲದ್ದು. ಹಾಗಾಗಿ ಮನಸ್ಸಿನಿಂದ ಮುಕ್ತಗೊಂಡ ನಮ್ಮೊಳಗಿನ ಪ್ರಜ್ಞೆಯೇ ದೇವರಾಗಿ ಅನುಭವಕ್ಕೆ ಬರುವುದು.

ಈ ದೇವರುಗಳು ಅನ್ನುತ್ತೇವಲ್ಲ, ಆತ್ಮಕ್ಕೆ ಸಂಬಂಧಿಸಿದಂತೆ ಅವುಗಳ ಸ್ಥಾನಮಾನವೇನು?

ಶಿವ, ಗಣಪತಿ ಇತ್ಯಾದಿ ದೇವರುಗಳು ಬ್ರಹ್ಮನಂತೆ, ಮಾನವ ಪಾತಳಿಯಲ್ಲಿ ಅಸ್ತಿತ್ವ ಪಡೆದಿವೆಯಷ್ಟೆ. ಅಂದರೆ ನಿಮ್ಮ ವೈಯುಕ್ತಿಕ ಆತ್ಮವನ್ನು ನಿಜ ಮತ್ತು ಇದೆಯೆಂದು ಭಾವಿಸಿದಲ್ಲಿ ಅವು ಕೂಡಾ ಇರುತ್ತವೆ. ಸರ್ಕಾರವೊಂದಕ್ಕೆ ತನ್ನ ಆಡಳಿತ ನಡೆಸಲು ಹಲವು ಉನ್ನೋತನ್ನತ ಕಾರ್ಯನಿರ್ವಾಹಕ ಅಧಿಕಾರಿಗಳಿದ್ದಂತೆ ಸೃಷ್ಟಿಕರ್ತನಿಗೂ ಇರುವರು. ಆದರೆ ಆತ್ಮಾನುಭವದಲ್ಲಿರುವವನಿಗೆ ಈ ದೇವರುಗಳೆಲ್ಲ ಮಾಯಾ ಕಲ್ಪನೆಗಳಾಗಿದ್ದು ಅವು ಏಕೈಕ ಸತ್ಯದಲ್ಲಿ ಲೀನವಾಗುವುವು.

ಇಷ್ಟೊಂದು ದೇವರಗಳೇಕಿವೆ?

ನಿಮಗಿರುವುದು ಒಂದೇ ದೇಹವಾದರೂ ಅದು ಎಷ್ಟು ಕೆಲಸಗಳನ್ನು ನಿರ್ವಹಿಸುತ್ತದೆ? ಆದರೆ ಈ ಎಲ್ಲ ಕೆಲಸಗಳ ಮೂಲ ಶಕ್ತಿ ಒಂದೇ. ಹಾಗೇ ದೇವರುಗಳಿಗೂ. ಏಕೈಕವನ್ನು ಸಾಕ್ಷಾತ್ಕರಿಸಿಕೊಳ್ಳುವ ಮೂಲಕ ಎಲ್ಲ ದೇವರುಗಳನ್ನೂ ಅರಿಯಬಹುದು.

ಈಶ್ವರ ಮತ್ತು ವಿಷ್ಣುವಿನಂತಹ ದೇವರುಗಳು ಮತ್ತು ಕೈಲಾಸ, ವೈಕುಂಠಗಳಂತಹ ಅವರುಗಳ ಲೋಕಗಳು ಇರುವುದು ನಿಜವೇ?

ನೀವು ನಿಮ್ಮ ದೇಹದಲ್ಲಿರುವುದು ಎಷ್ಟು ನಿಜವೋ ಅಷ್ಟೇ ಅವೂ ನಿಜ.

ಅಂದರೆ ಅವು ನನ್ನ ದೇಹದಂತೆ ಐಂದ್ರಿಯಿಕ ಅಸ್ತಿತ್ವ ಪಡೆದಿವೆಯೇ? ಅಥವಾ ಬರೀ ಕಟ್ಟು ಕಥೆಗಳೋ?

(೧೯ನೇ ಪುಟಕ್ಕೆ

ಮಾನವ ಇತಿಹಾಸ ಕುರಿತ ಹೊಸ ನೋಟ

'ಕಥೆ'ಯ ಮೇಲೆ ನಾಗರೀಕತೆಯ ಕಟ್ಟಡ ಕಟ್ಟುತ್ತಿರುವ ಮಾನವ ಕುಲ!



ಪ್ರೊ. ಯುವಾಲ್ ನೋಹ ಹರಾರಿ ಮೂಲತಃ ತಮ್ಮ ಮಾತೃ ಭಾಷೆ ಹಿಬ್ರೂನಲ್ಲಿ ಬರೆದ ೨೦೧೧ರ 'ಸೇಪಿಯನ್ಸ್ ಎ ಬ್ರೀಫ್ ಹಿಸ್ಟರಿ ಆಫ್ ಹ್ಯೂಮನ್‌ಕೈಂಡ್' ಪುಸ್ತಕದ ಮೂಲಕ ಮಾನವ ಕುಲದ ಇತಿಹಾಸವನ್ನು ಅರಿಯುವ ಹೊಸದೊಂದು ಮಾರ್ಗವನ್ನೇ ತೆರೆದುತೋರಿದವರು. ಮುಖ್ಯವಾಗಿ ನಿಸರ್ಗ ವಿಜ್ಞಾನದ ನೆಲೆಯಲ್ಲಿ, ಜೀವಶಾಸ್ತ್ರದ ಮಿತಿಗಳಲ್ಲಿ ಮಾತ್ರ ಮನುಷ್ಯ ಕುಲದ ವರ್ತನೆಯನ್ನು 'ವೈಜ್ಞಾನಿಕ'ವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ ಎನ್ನುವ ಈ ಇಸ್ರೇಲಿ ವಿದ್ವಾಂಸ ಮನುಷ್ಯ ತಾನು ಒಂದು ಕುಲವಾಗಿ ಉಳಿದುಕೊಳ್ಳಲು ನಡೆಸಿದ ಪ್ರಯೋಗಗಳೇ ಸಂಸ್ಕೃತಿ ಎನಿಸಿದ್ದು ಈವರೆಗಿನ ಇತಿಹಾಸವೆಂಬುದು ಅದರ ಒಂದು ದಾಖಲೆ ಎನ್ನುತ್ತಾರೆ.

ಈ ಕೆಳಗೆ ಕನ್ನಡಾನುವಾದದಲ್ಲಿ ಪ್ರಕಟವಾಗಿರುವ ತನ್ನ ಇತ್ತೀಚಿನ ಸಾರ್ವಜನಿಕ ಭಾಷಣದಲ್ಲಿ ಪ್ರಾಣಿಗಳಿಗೆ ಹೋಲಿಸಿದಂತೆ ಮನುಷ್ಯನ ಸಾಮೂಹಿಕ ಸಾಹಸಗಳ ಅನನ್ಯತೆಯ ಬಗ್ಗೆ ಹೊಸ ಒಳನೋಟವೊಂದನ್ನು ನೀಡಿದ್ದು, ನಾಗರೀಕತೆಯ ಹೆಸರಿನಲ್ಲಿ ನಾವು ನಡೆಯುತ್ತಿರುವ ದಾರಿ ಎಷ್ಟು ಮಾರಕವಾಗಿದೆ ಎಂಬುದರ ಸೂಚನೆಯನ್ನೂ ನೀಡಿದ್ದಾರೆ. –ಸಂ.

ಎಪ್ಪತ್ತು ಸಾವಿರ ವರ್ಷಗಳ ಹಿಂದೆ ಮನುಷ್ಯ ಒಬ್ಬ ಕ್ಷುಲ್ಲಕ ಪ್ರಾಣಿಯಾಗಿದ್ದ. ಇತಿಹಾಸ ಪೂರ್ವದಲ್ಲಿ ಅವನು ತುಂಬಾ ಅಮುಖ್ಯನಾಗಿದ್ದ. ಪೂರ್ವೇತಿಹಾಸಿಕ ಕಾಲದ ಮನುಷ್ಯನ ಬಗ್ಗೆ ನೀವು ತಿಳಿದುಕೊಳ್ಳಬೇಕಾದ ಬಹು ಮುಖ್ಯವಾದ ವಿಷಯ ಅಂದರೆ, ಆಗ ಅವರಿಗೆ ಅಂತಹ ಯಾವುದೇ ಮಹತ್ವವೂ ಇರಲಿಲ್ಲಿ. ಜಗತ್ತಿನ ಮೇಲೆ ಅವರ ಪ್ರಭಾವ ತುಂಬಾ ಕಡಿಮೆ. ಜೆಲ್ಲಿ ಮೀನು, ಮರುಕುಟುಕ ಅಥವಾ ಜೇನುನೊಣಗಳೆ ಎಷ್ಟೋ ಪರವಾಗಿರಲಿಲ್ಲ.

ಆದರೆ ಇಂದು ಮನುಷ್ಯರು ಇಡೀ ಈ ಗ್ರಹವನ್ನು ನಿಯಂತ್ರಿಸುತ್ತಿದ್ದಾರೆ. ಹಾಗಿದ್ದವರು ಈಗ ಹೀಗೆ ಹೇಗೆ ಆದರು? ಆಫ್ರಿಕಾದ ಯಾವುದೋ ಒಂದು ಮೂಲೆಯಲ್ಲಿ ತನ್ನ ಕೆಲಸ ಮಾಡಿಕೊಂಡಿದ್ದ ನಗಣ್ಯ ಕಾಡುಮನುಷ್ಯರಾಗಿದ್ದ ನಾವು ಇಂದು ಹೀಗೆ ಆಗಿದ್ದೇವೆ. ನಮ್ಮ ಈ ಯಶಸ್ಸಿನ ಗುಟ್ಟೇನು?

ನಮಗೂ ಹಾಗೂ ಇತರ ಪ್ರಾಣಿಗಳಿಗೂ ನಡುವೆ ಇರುವ ವ್ಯತ್ಯಾಸವನ್ನು ನಾವು ಸಾಮಾನ್ಯವಾಗಿ ವೈಯಕ್ತಿಕ ನೆಲೆಯಲ್ಲಿ ನೋಡುತ್ತೇವೆ. ಮನುಷ್ಯರ ದೇಹದಲ್ಲಿ, ಮೆದುಳಿನಲ್ಲಿ ಏನೋ ವಿಶೇಷವಾದದ್ದು ಇದೆ. ಅದರಿಂದಾಗಿ ನಾವು ಒಂದು ನಾಯಿಗಿಂತ, ಒಂದು ಹಂದಿಗಿಂತ, ಅಥವಾ ಒಂದು ಚಿಂಪಾಜಿಗಿಂತ ಉತ್ತಮರಾಗಿದ್ದೇವೆ ಅಂತ ನಂಬಿಕೊಂಡಿದ್ದೇವೆ. ಆದರೆ ವಾಸ್ತವ ಅಂದರೆ ಮನುಷ್ಯರು ಎಲ್ಲಾ ವಿಷಯದಲ್ಲೂ ಚಿಂಪಾಂಜಿಯ ಹಾಗೆ ಇರುವುದು. ನೀವು ನನ್ನನ್ನು ಹಾಗೂ ಒಂದು ಚಿಂಪಾಂಜಿಯನ್ನು ಒಂದು ನಿರ್ಜನ ದ್ವೀಪದಲ್ಲಿ ಬಿಟ್ಟು, ಯಾರು ಚೆನ್ನಾಗಿ ಬದುಕುತ್ತಾರೆ ಅಂತ ಪರೀಕ್ಷಿಸಿದರೆ, ನನ್ನ ಪ್ರಕಾರ ಚಿಂಪಾಂಜಿಯೇ ಗೆಲ್ಲುತ್ತದೆ.

ನಮಗೂ ಇತರ ಪ್ರಾಣಿಗಳಿಗೂ ನಿಜವಾಗಿ ವ್ಯತ್ಯಾಸ ಇರುವುದು ಸಾಮೂಹಿಕ ಮಟ್ಟದಲ್ಲಿ. ಮನುಷ್ಯರಿಗೆ ದೊಡ್ಡ ಸಂಖ್ಯೆಯಲ್ಲಿ, ಸಮಯಕ್ಕೆ ತಕ್ಕ ಹಾಗೆ, ಪರಸ್ಪರ ಸಹಕರಿಸಿಕೊಂಡು ಹೋಗುವ ಸಾಮರ್ಥ್ಯ ಇದೆ. ಆ ಸಾಮರ್ಥ್ಯದಿಂದಾಗಿಯೇ ಇಂದು ಮನುಷ್ಯರಿಗೆ ಜಗತ್ತನ್ನು ನಿಯಂತ್ರಿಸುವುದಕ್ಕೆ ಸಾಧ್ಯವಾಗಿರುವುದು. ಈ ಸಾಮರ್ಥ್ಯ ಇಡೀ ಜಗತ್ತಿನಲ್ಲಿ ಮನುಷ್ಯರಿಗೆ ಮಾತ್ರ ಇರುವುದು. ಇರುವೆಗಳು ಹಾಗು ಜೇನುನೊಣಗಳು ದೊಡ್ಡ ಸಂಖ್ಯೆಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತವೆ. ಆದರೆ ತುಂಬಾ ನಿರ್ದಿಷ್ಟ ಕ್ರಮದಲ್ಲಿ ಮಾಡುತ್ತವೆ. ಜೇನುಗೂಡಿಗೆ ಹೊಸ ಆತಂಕ ಅಥವಾ ಒಂದು ಹೊಸ ಅವಕಾಶ ಎದುರಾದರೆ, ಅವುಗಳಿಗೆ ದಿಢೀರನೆ ಒಂದು ಸಾಮಾಜಿಕ ವ್ಯವಸ್ಥೆಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಅವುಗಳಿಗೆ ರಾಣಿಜೇನನ್ನು ಕೊಂದು ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತೋಳಗಳು ಹಾಗೂ ಚಿಂಪಾಂಜಿಗಳು ಇರುವೆಗಳಿಗಿಂತ ಪರವಾಗಿಲ್ಲ. ಅವು ಹೆಚ್ಚು ನಮ್ಯವಾದ ರೀತಿಯಲ್ಲಿ ತಮ್ಮಲ್ಲೇ ಪರಸ್ಪರ ಸಹಕರಿಸಿಕೊಳ್ಳುತ್ತವೆ. ಆದರೆ ಅವುಗಳಿಗೆ ಒಂದು ಸಣ್ಣ ಗುಂಪಿನಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ. ಜೊತೆಗೆ ಅವು ಪರಸ್ಪರ ಪರಿಚಿತವಾಗಿರಬೇಕು.

ಈಗ ನಾನು ಚಿಂಪಾಂಜಿಯಾಗಿದ್ದು ನಿಮ್ಮೊಂದಿಗೆ ಸಹಕರಿಸಬೇಕೆಂದಿದ್ದರೆ, ನನಗೆ ನೀವು ವೈಯಕ್ತಿಕವಾಗಿ ಗೊತ್ತಿರಬೇಕು. ನೀವು ಎಂತ ಚಿಂಪಾಂಜಿ? ನೀವು ಒಳ್ಳೆಯ ಚಿಂಪಾಂಜಿಯಾ? ಅಥವಾ ಕೆಟ್ಟ ಚಿಂಪಾಂಜಿಯ? ನೀವು ಯಾರು ಅನ್ನುವುದೇ ಗೊತ್ತಿಲ್ಲದೇ ಹೋದರೆ ನಿಮ್ಮೊಂದಿಗೆ ಸಹಕರಿಸುವುದಕ್ಕೆ ಹೇಗೆ ಸಾಧ್ಯ?

ಕೇವಲ ಹೋಮೊಸೆಪಿಯನ್ಸ್ ಅಂದರೆ ಮನುಷ್ಯರಿಗೆ ಮಾತ್ರ ಅಸಂಖ್ಯಾತ ಅಪರಿಚಿತರೊಂದಿಗೆ ಸಮಯಕ್ಕೆ ಬೇಕಾದ ಹಾಗೆ ಸಹಕರಿಸಿಕೊಂಡು ಹೋಗುವುದಕ್ಕೆ ಸಾಧ್ಯ. ಒಬ್ಬ ಮನುಷ್ಯನ ಮುಂದೆ ಒಂದು ಚಿಂಪಾಂಜಿ ನಿಂತಾಗ, ಅಥವಾ ಹತ್ತು ಜನರನ್ನು ಹತ್ತು ಚಿಂಪಾಂಜಿಗಳು ಎದುರಿಸಬೇಕಾಗಿ ಬಂದಾಗ ಚಿಂಪಾಂಜಿ ಮನುಷ್ಯನನ್ನು ಮೀರಿಸಬಹುದು. ಆದರೆ ಸಾವಿರ ಜನ ಸಾವಿರ ಚಿಂಪಾಂಜಿಗಳನ್ನು ಎದುರಿಸಿ ನಿಂತಾಗ ಮನುಷ್ಯ ಸುಲಭವಾಗಿ ಗೆಲ್ಲುತ್ತಾನೆ. ಸಾವಿರ ಚಿಂಪಾಂಜಿಗಳಿಗೆ ಸಾಮೂಹಿಕವಾಗಿ ಪರಸ್ಪರ ಸಹಕರಿಸುವುದಕ್ಕೆ ಸಾಧ್ಯವೇ ಇಲ್ಲ. ಒಂದು ಲಕ್ಷ ಚಿಂಪಾಂಜಿಗಳನ್ನು ವಾಲ್ ಸ್ಟ್ರೀಟಿನಲ್ಲೋ, ಯಾಂಕಿ ಸ್ಟೇಡಿಯಂನಲ್ಲೋ ಒಟ್ಟಿಗೆ ಬಿಟ್ಟರೆ ತುಂಬಾ ಗೊಂದಲವಾಗಿಬಿಡುತ್ತದೆ. ಅದೇ ಒಂದು ಲಕ್ಷ ಮನುಷ್ಯರನ್ನು ಬಿಡಿ. ಒಟ್ಟಿಗೆ ವ್ಯಾಪಾರವನ್ನೋ, ಆಟದ ಸ್ಪರ್ಧೆಗಳನ್ನು ಅವರ ನಡುವೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ.

ಪರಸ್ಪರ ಸಹಕಾರ ಅನ್ನೋದು ಯಾವಾಗಲೂ ಒಳ್ಳೆಯದಕ್ಕೆ ಆಗಬೇಕಾಗಿಲ್ಲ. ಮನುಷ್ಯ ಚರಿತ್ರೆಯುದ್ದಕ್ಕೂ ಮಾಡಿಕೊಂಡು ಬಂದಿರುವ ಎಲ್ಲಾ ಭಯಂಕರ ಕೆಲಸಗಳೂ ಅತಿದೊಡ್ಡ ಸಾಮೂಹಿಕ ಸಹಕಾರದ ಉತ್ಪನ್ನಗಳೆ. ಜೈಲುಗಳು, ವಧಾಸ್ಥಾನಗಳು, ಶ್ರಮ ಶಿಬಿರಗಳು ಇವೆಲ್ಲವೂ ಸಾಮೂಹಿಕ ಸಹಕಾರದ ವ್ಯವಸ್ಥೆಗಳೇ. ಚಿಂಪಾಂಜಿಗಳ ರಾಜ್ಯದಲ್ಲಿ ಜೈಲುಗಳಿಲ್ಲ, ವಧಾಸ್ಥಾನಗಳಿಲ್ಲ ಅಥವಾ ಶ್ರಮ ಶಿಬಿರಗಳಿಲ್ಲ.

ಮನುಷ್ಯರಿಗೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ, ಬೇಕಾದ ರೀತಿಯಲ್ಲಿ ಸಹಕರಿಸಿಕೊಂಡು ಹೋಗುವುದಕ್ಕೆ ಹೇಗೆ ಸಾಧ್ಯವಾಯಿತು? ಅದು ಆಟದಲ್ಲಿ ಇರಲಿ, ಅಥವಾ ವ್ಯಾಪಾರಕ್ಕೆ ಇರಲಿ ಅಥವಾ ಕೊಚ್ಚಿಹಾಕುವುದಕ್ಕೆ ಇರಲಿ? ಅದಕ್ಕೆ ಮನುಷ್ಯನ ಕಲ್ಪನೆಗಳೇ ಕಾರಣ. ನಮಗೆ ಕಾಲ್ಪನಿಕ ಕಥೆಗಳನ್ನು ಕಟ್ಟುವುದಕ್ಕೆ, ಅವುಗಳನ್ನು ಸುತ್ತ ಹರಡುವುದಕ್ಕೆ ಹಾಗು ಅವನ್ನುಅಸಂಖ್ಯಾತ ಅಪರಿಚಿತರನ್ನು ನಂಬುವಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರಿಂದಾಗಿಯೇ ನಮಗೆ ಅಸಂಖ್ಯಾತ ಅಪರಿಚಿತರೊಂದಿಗೆ ಸಹಕರಿಸಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾವೆಲ್ಲಾ ಎಲ್ಲಿಯುವರೆಗೆ ಒಂದೇ ಕಥೆಯನ್ನು ನಂಬಿಕೊಂಡಿರುತ್ತೇವೋ ಅಲ್ಲಿಯವರೆಗೆ ಒಂದೇ ನಿಯಮವನ್ನು ಒಪ್ಪಿಕೊಳ್ಳುತ್ತೇವೆ. ಹಾಗೂ ಅಲ್ಲಿಯವರೆಗೆ ಪರಸ್ಪರ ಸಹಕರಿಸಕೊಂಡು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೂ ನಮಗೆ ಸಾಧ್ಯವಾಗುತ್ತದೆ.

ಇದನ್ನು ನೀವು ಮನುಷ್ಯರ ನಡುವೆ ಮಾತ್ರ ಮಾಡುವುದಕ್ಕೆ ಸಾಧ್ಯ. ಚಿಂಪಾಂಜಿಗೆ, 'ನನಗೆ ಒಂದು ಬಾಳೆಹಣ್ಣು ಕೊಡು, ನೀನು ಸತ್ತ ಮೇಲೆ ಚಿಂಪಾಂಜಿಗಳ ಸ್ವರ್ಗದಲ್ಲಿ ನೀನು ಮಾಡಿದ ಒಳ್ಳೆಯ ಕೆಲಸಕ್ಕೆ ನಿನಗೆ ಅಸಂಖ್ಯಾತ ಬಾಳೆಹಣ್ಣುಗಳು ಸಿಗುತ್ತದೆ' ಅಂತ ಹೇಳಿನೋಡಿ. ಅದನ್ನು ಒಪ್ಪಿಸುವುದಕ್ಕೆ ಸಾಧ್ಯವಿಲ್ಲ. ಯಾವುದೇ ಚಿಂಪಾಂಜಿಯೂ ಅಂತಹ ಕಥೆಯನ್ನು ನಂಬುವುದಿಲ್ಲ. ಮಾನುಷ್ಯರು ಮಾತ್ರ ಅಂತಹ ಕಥೆಯನ್ನು ನಂಬುವುದು. ಹಾಗಾಗಿಯೇ ನಾವು ಇಂದು ಜಗತ್ತನ್ನು ಆಳುತ್ತಿದ್ದೇವೆ. ಚಿಂಪಾಂಜಿಗಳು ಮೃಗಾಲಯಗಳಲ್ಲಿ.

ಸಂಶೋದನಾ ಪ್ರಯೋಗಾಲಯಗಳಲ್ಲಿ ಬಂಧಿಗಳಾಗಿವೆ.

ಧಾರ್ಮಿಕ ಸಹಕಾರ ವಲಯಗಳು ಕಾಲ್ಪನಿಕ ಕಥೆಗಳನ್ನು ಆಧರಿಸಿರುತ್ತವೆ ಅಂತ ಹೆಚ್ಚು ಸಲೀಸಾಗಿ ಒಪ್ಪಿಕೊಂಡುಬಿಡಬಹುದು. ಜನ ಸ್ವರ್ಗ ಹಾಗೂ ದೇವರನ್ನು ಕುರಿತಂತೆ ಒಂದೇ ಕಥೆಯನ್ನು ನಂಬಿಕೊಂಡಿರುತ್ತಾರೆ. ಅದರಿಂದ ಒಟ್ಟಿಗೆ ಗುಡಿಗಳನ್ನು ಕಟ್ಟುತ್ತಾರೆ ಅಥವಾ ಧಾರ್ಮಿಕ ಯುದ್ಧಕ್ಕೆ ಹೋಗುತ್ತಾರೆ ಅಂತ ಒಪ್ಪಿಕೊಳ್ಳುವುದು ಸಾಪೇಕ್ಷವಾಗಿ ಸುಲಭ. ಆದರೆ ಅಲ್ಲಿ ಮಾತ್ರವಲ್ಲ, ಎಲ್ಲಾ ಬೃಹತ್ ಪ್ರಮಾಣದ ಮಾನವ ಸಹಕಾರ ಪ್ರಯತ್ನಗಳ ವಿಷಯದಲ್ಲೂ ಇದು ನಿಜ. ಉದಾಹರಣೆಗೆ, ನಮ್ಮ ಕಾನೂನು ವ್ಯವಸ್ಥೆಯನ್ನೇ ತೆಗೆದುಕೊಳ್ಳಿ, ಇಂದು ಹೆಚ್ಚಿನ ಕಾನೂನು ವ್ಯವಸ್ಥೆಗಳು ಮಾನವಹಕ್ಕುಗಳ ನಂಬಿಕೆಯನ್ನು ಆಧರಿಸಿ ರೂಪುಗೊಂಡಿವೆ. ಆದರೆ ಮಾನವ ಹಕ್ಕುಗಳು ಅನ್ನುವುದು ದೇವರು, ಸ್ವರ್ಗದಂತಯೇ ಕಾಲ್ಪನಿಕವಾದದ್ದು ಅಥವಾ ಮಾನಸಿಕ ರಚನೆಗಳು. ಚಿಂಪಾಂಜಿ ಹಾಗೂ ತೋಳಗಳಂತೆಯೇ ವಾಸ್ತವದಲ್ಲಿ ಮನುಷ್ಯನಿಗೂ ಯಾವುದೇ ಹಕ್ಕುಗಳಿಲ್ಲ. ಮನುಷ್ಯನ ದೇಹವನ್ನು ಕುಯ್ದು ನೋಡಿ. ನಿಮಗೆ ಹಕ್ಕುಗಳು ಅನ್ನೋದು ಎಲ್ಲೂ ಸಿಗುವುದಿಲ್ಲ. ನಾವು ಕಟ್ಟಿದ ಹಾಗೂ ಇತರರೊಂದಿಗೆ ಹಂಚಿಕೊಳ್ಳುವ ಕಥೆಗಳಲ್ಲಿ ಮಾತ್ರ ಮಾನವ ಹಕ್ಕುಗಳು ಇರುವುದಕ್ಕೆ ಸಾಧ್ಯ. ಮಾನವ ಹಕ್ಕುಗಳು ಅನ್ನುವುದು ತೀರಾ ಆಕರ್ಷಕ ಕಥೆಯಿರಬಹುದು. ಆದರೆ ಅದು ಕೇವಲ ಒಂದು ಕಥೆ ಅನ್ನೋದು ಸತ್ಯ.

ರಾಜಕೀಯದಲ್ಲೂ ಇದೇ ವ್ಯವಸ್ಥೆ ಕೆಲಸ ಮಾಡುತ್ತಿರುತ್ತದೆ. ದೇವರುಗಳು, ಮಾನವ ಹಕ್ಕುಗಳ ರೀತಿಯಲ್ಲಿ ರಾಷ್ಟ್ರಗಳು ಅನ್ನೋದು ಕೂಡ ಕಲ್ಪನೆಗಳೆ. ಒಂದು ಬೆಟ್ಟ ಅನ್ನುವುದು ವಾಸ್ತವ. ನೀವು ಅದನ್ನು ನೋಡಬಹುದು, ಮುಟ್ಟಬಹುದು, ಮೂಸಬಹುದು. ಆದರೆ ಅಮೇರಿಕಾ ಅಥವಾ ಇಸ್ರೇಲ್ ಇವೆಲ್ಲಾ ಭೌತಿಕ ವಾಸ್ತವಗಳಲ್ಲ. ನೀವು ಅವುಗಳನ್ನು ನೋಡಲಾಗುವುದಿಲ್ಲ, ಮುಟ್ಟಲಾಗುವುದಿಲ್ಲ ಅಥವಾ ಮೂಸುವುದಕ್ಕೂ ಆಗುವುದಿಲ್ಲ. ಅವು ಕೂಡ ಕೇವಲ ಮನುಷ್ಯ ಕಟ್ಟಿದ ಕಥೆಗಳೆ. ನಂತರ ಮನುಷ್ಯ ಅದನ್ನು ತುಂಬಾ ಹಚ್ಚಿಕೊಂಡಿದ್ದಾನೆ.

ಸಹಕಾರವನ್ನು ಆಧರಿಸಿದ ಆರ್ಥಿಕ ವ್ಯವಸ್ಥೆಗಳ ವಿಷಯದಲ್ಲೂ ಇದು ನಿಜ. ಉದಾಹರಣೆಗೆ ಡಾಲರನ್ನೇ ತೆಗೆದುಕೊಳ್ಳಿ. ಡಾಲರಿಗೆ ಅದರದೇ ಆದ ಯಾವ ಬೆಲೆಯೂ ಇಲ್ಲ. ಅದನ್ನು ತಿನ್ನುವುದಕ್ಕಾಗಲಿ, ಕುಡಿಯುವುದಕ್ಕಾಗಲಿ, ಧರಿಸುವುದಕ್ಕಾಗಲಿ ಸಾಧ್ಯವಿಲ್ಲ. ಆದರೆ ಫೆಡರಲ್ ರಿಸರ್ವನ ಛೇರ್ಮನ್ ಅಥವಾ ಅಮೇರಿಕೆಯ ಅಧ್ಯಕ್ಷರಂತಹ ಒಬ್ಬ ಕಥೆಗಾರ ನಮಗೆ ಒಂದು ಡಾಲರ್ ಅಂದರೆ ಐದು ಬಾಳೆಹಣ್ಣಿಗೆ ಸಮ ಅಂತ ನಂಬಿಸಿದ್ದಾರೆ. ಲಕ್ಷಾಂತರ ಜನ ಅದೇ ಕಥೆಯನ್ನು ನಂಬಿಕೊಂಡಿರುವವರಿಗೆ ಒಂದು ಡಾಲರಿಗೆ ನಿಜವಾಗಿ ಐದು ಬಾಳೆಹಣ್ಣುಗಳಷ್ಟು ಬೆಲೆ ಇರುತ್ತದೆ. ನಾನು (ಡಾಲರ್ ಎಂದು ಕರೆಯಲಾಗುವ) ಹಾಳೆಯ ಚೂರನ್ನು ನನಗೆ ಪರಿಚಯವೇ ಇಲ್ಲದವನಿಗೆ ಕೊಟ್ಟು ಮಾರುಕಟ್ಟೆಯಲ್ಲಿ ಐದು ಬಾಳೆ ಹಣ್ಣು ಪಡೆಯಬಹುದು. ಇದನ್ನೇ ಚಿಂಪಾಂಜಿಯ ಹತ್ತಿರ ಮಾಡಿನೋಡಿ!

ಬಹುಷಃ ಹಣ ಅನ್ನುವುದು ಮನುಷ್ಯ ಈವರೆಗೆ ರೂಪಿಸಿಕೊಂಡಿರುವ ಅತ್ಯಂತ ಯಶಸ್ವಿಯಾದ ಕಲ್ಪನೆ. ದೇವರನ್ನು ನಂಬದೇ ಇರುವವರು ಇದ್ದಾರೆ, ಮಾನವ ಹಕ್ಕುಗಳನ್ನು ಒಪ್ಪದೇ ಇರುವವರು ಇದ್ದಾರೆ ಅಥವಾ ಅಮೇರಿಕೆಯನ್ನು ಒಪ್ಪದೇ ಇರುವವರೂ ಇದ್ದಾರೆ. ಆದರೆ ಡಾಲರನ್ನು ನಂಬದೇ ಇರುವವರು ಮಾತ್ರ ನಿಮಗೆ ಸಿಗುವುದಿಲ್ಲ. ಒಸಾಮ ಬಿನ್ ಲ್ಯಾಡನ್ ಕೂಡ ಅದನ್ನು ನಂಬುತ್ತಾನೆ. ಅವನು ಅಮೇರಿಕೆಯ ಧರ್ಮವನ್ನು ದ್ವೇಷಿಸುತ್ತಿದ್ದ, ಅಮೇರಿಕೆಯ ರಾಜಕೀಯವನ್ನು ಹಾಗೂ ಅಮೇರಿಕೆಯ ಸಂಸ್ಕೃತಿಯನ್ನು ದ್ವೇಷಿಸುತ್ತಿದ್ದ. ಆದರೆ ಅವನು ಅಮೇರಿಕೆಯ ಡಾಲರನ್ನು ತುಂಬಾ ಇಷ್ಟಪಡುತ್ತಿದ್ದ. ಆ ಕಥೆಯ ಬಗ್ಗೆ ಅವನಿಗೆ ಯಾವುದೇ ತಕರಾರು ಇರಲಿಲ್ಲ.

ಕೊನೆಯದಾಗಿ, ಪ್ರತಿಯೊಂದು ಪ್ರಾಣಿಯೂ ನದಿ, ಮರ ಹಾಗು ಸಿಂಹ ಮೊದಲಾದ ವಾಸ್ತವಿಕ ಜಗತ್ತಿನಲ್ಲಿ ಬದುಕುತ್ತಿರುತ್ತದೆ. ಆದರೆ ಮನುಷ್ಯ ಎರಡು ಜಗತ್ತಿನಲ್ಲಿ ಬದುಕುತ್ತಿರುತ್ತಾನೆ. ಆ ವಾಸ್ತವ ಜಗತ್ತಿನ ಆಚೆಗೆ ನಾವು ನಂಬಿಕೊಳ್ಳಬೇಕಾದ ವಾಸ್ತವದ ಮತ್ತೊಂದು ಪದರವನ್ನು ನಿರ್ಮಿಸಿಕೊಂಡಿದ್ದೇವೆ. ಅದರಲ್ಲಿ ಕಾಲ್ಪನಿಕ ಅಸ್ತಿತ್ವಗಳಾದ ಯೂರೂಪಿಯನ್ ಯೂನಿಯನ್, ದೇವರು, ಡಾಲರ್ ಹಾಗು ಮಾನವಹಕ್ಕುಗಳು ಇವೆಲ್ಲಾ ಬರುತ್ತವೆ.

ಸಮಯ ಕಳೆದಂತೆ ಈ ಕಾಲ್ಪನಿಕ ಅಸ್ತಿತ್ವಗಳೇ ಹಿಂದೆಂದಿಗಿಂತ ಹೆಚ್ಚು ಪ್ರಬಲವಾಗುತ್ತಿವೆ. ಅವೇ ಇಂದು ಜಗತ್ತಿನಲ್ಲಿ ಅತ್ಯಂತ ಪ್ರಬಲ ಶಕ್ತಿಗಳಾಗಿಬಿಟ್ಟಿವೆ. ಮರಗಳು, ನದಿಗಳು ಹಾಗೂ ಪ್ರಾಣಿಗಳ ಉಳಿವು ಅಮೇರಿಕಾ, ಜಾಗತಿಕ ಬ್ಯಾಂಕು ಮೊದಲಾದ ನಮ್ಮ ಕಲ್ಪನೆಯಲ್ಲಿ ಮಾತ್ರ ಇರುವ ಕಾಲ್ಪನಿಕ ಅಸ್ತಿತ್ವಗಳ ಮರ್ಜಿಯನ್ನು ಹಾಗೂ ನಿರ್ಧಾರಗಳನ್ನು ಅವಲಂಬಿಸಿವೆ.

(ಕನ್ನಡಾನುವಾದ ; ಟಿ.ಎಸ್. ವೇಣುಗೋಪಾಲ್)

(೧೭ನೇ ಪುಟದಿಂದ)

ಅವೆಲ್ಲ ಇವೆ.

ಹಾಗಿದ್ದರೆ ಅವು ಎಲ್ಲಿಯೋ ಇರಬೇಕು; ಎಲ್ಲಿವೆ ಅವು?

ನಿಮ್ಮೊಳಗೆ.

ಅಂದರೆ ಅವೆಲ್ಲ ಕಲ್ಪನೆಗಳು! ನಾನು ಸೃಷ್ಟಿಸಿಕೊಂಡು ನಿಯಂತ್ರಿಸುವ ಕಲ್ಪನೆಗಳು?

ಪ್ರತಿಯೊಂದೂ ಅಷ್ಟೆ.

ವೈಯುಕ್ತಿಕ ದೇವರೆಂಬುವನು ಇದ್ದಾನೆಯೇ?

ಹೌದು, ಈಶ್ವರ.

(ಆಶ್ಚರ್ಯದಿಂದ): ಏನು? ಕಣ್ಣು, ಮೂಗು, ಕಿವಿ ಇತ್ಯಾದಿಗಳೊಂದಿಗೆ?

ಹೌದು, ಅವು ನಿಮಗೆ ಇರುವುದಾದರೆ ದೇವರಿಗೆ ಕೂಡಾ ಯಾಕೆ ಇರಬಾರದು?

ಪುರಾಣಗಳಲ್ಲಿ ದೇವರಿಗೆ ಈ ಅಂಗಗಳು ಇವೆ ಎಂದು ಓದಿದಾಗ ನನಗೆ ನಗು ಬರುತ್ತದೆ.

ನಿಮಗೂ ಅವಿರುವುದರಿಂದ ನಿಮ್ಮನ್ನು ನೋಡಿಕೊಂಡೇ ನೀವೇಕೆ ನಗಬಾರದು?

ಕಷ್ಟದಲ್ಲಿರುವ ಜಗತ್ತಿಗೆ ನಾನೇನಾದರೂ ಸಹಾಯ ಮಾಡಬಹುದಲ್ಲವೇ?

ನಿಮ್ಮನ್ನು ಸೃಷ್ಟಿಸಿದ ಶಕ್ತಿ ಜಗತ್ತನ್ನೂ ಸೃಷ್ಟಿಸಿದೆ. ದೇವರು ಜಗತ್ತನ್ನು ಸೃಷ್ಟಿಸಿರುವುದಾದರೆ, ಅದರ ಉಸಾಬರಿ ಅವನದೇ ಹೊರತು ನಿಮ್ಮದಲ್ಲ.

ಒಬ್ಬ ಮನುಷ್ಯ ಹಸಿದಿದ್ದಾನೆ ಎಂದರೆ ಅದು ಭೌತಿಕ ಸತ್ಯ. ಅವನಿಗೆ ಅದು ಸತ್ಯಸ್ಯ ಸತ್ಯ ಅದನ್ನು ನಾವು ಕನಸೆಂದು ಕರೆದು ಅವನ ಸಂಕಷ್ಟಗಳಿಗೆ ಸ್ಪಂದಿಸಲು ಹೋಗಬಾರದೆ?

ಜ್ಞಾನಿ ಅಥವಾ ನಿರಪೇಕ್ಷ ಸತ್ಯದ ದೃಷ್ಟಿಯಿಂದ ನೀವು ಸಂಕಷ್ಟವೆಂದು ಯಾವುದನ್ನು ಗುರುತಿಸಿತ್ತಿದ್ದೀರೋ ಅದು, ಈ ಸಂಕಷ್ಟವೂ ಯಾವುದರ ಒಂದು ಅತಿ ಸಣ್ಣ ಭಾಗವಾಗಿದೆಯೋ ಆ ಜಗತ್ತಿನಂತೆ ಒಂದು ಕನಸೇ. ನೀವು ನಿದ್ರೆಯಲ್ಲಿದ್ದಾಗ ಬಿದ್ದ ಕನಸಿನಲ್ಲಿ ನೀವು ಮತ್ತು ನಿಮ್ಮ ಸುತ್ತಮುತ್ತಲಿನವರೂ ಉರಿಬಿಸಿಲಿನಲ್ಲಿ ಯಾವುದೋ ಶ್ರಮದ ಕೆಲಸ ಮಾಡಿ ತಡೆಯಲಾರದ ಹಸಿವಿನಿಂದ ನರಳುವಂತಾಗಿ ನೀವು ಊಟ ಮಾಡುವಿರಿ ಮತ್ತು ಸುತ್ತಮುತ್ತಲಿನವರ ಮೇಲೂ ನಿಮಗೆ ದಯೆಯುಂಟಾಗಿ ನೀವು ಅವರಿಗೂ ಊಟ ಕೊಡುವಿರಿ. ಆದರೆ ಕನಸಿನಿಂದ ಎದ್ದಾಗ ಗೊತ್ತಾಗುತ್ತದೆ, ನೀವು ಹೊಟ್ಟೆ ತುಂಬ ಉಂಡೇ ಮಲಗಿದ್ದು, ಒಂದು ಕ್ಷಣ ಕೂಡಾ ಹಾಸಿಗೆಯಿಂದೆದ್ದು ಹೊರಗೆ ಹೋಗಿಲ್ಲ ಎಂದು. ಹಾಗೇ ಇದು ಕೂಡ.


ಹಾಗೆಂದ ಮಾತ್ರಕ್ಕೆ ನೀವು ಕನಸಿನಲ್ಲಿ ಕಷ್ಟ ನೋಡಿದಂತೆ ಎಂದು, ಅದೆಲ್ಲ ಹುಸಿ ಎಂದು ಸುಮ್ಮನಿರಬಹುದೆಂದು ಹೇಳುತ್ತಿಲ್ಲ. ಕನಸಿನ ಹಸಿವನ್ನು ಕನಸಿನ ಆಹಾರದಿಂದ ತಣಿಸಲೇಬೇಕು. ಆದರೆ ಒಂದು ಮಾತು: ಜಾಗೃತ ಮತ್ತು ಸ್ವಪ್ನಾವಸ್ಥೆಗಳನ್ನು ಪರಸ್ಪರ ಗೊಂದಲಗೊಳಿಸಿಕೊಳ್ಳಬಾರದು. ಹಾಗಾಗಿ ನಿಮಗೆ ಆತ್ಮ ಅಥವಾ ಸತ್ಯ ಸಾಕ್ಷಾತ್ಕಾರವಾಗಿ ಈ ಐಂದ್ರಿಯಿಕ ಜಗತ್ತಿನ ಭ್ರಾಂತಿಕಾರಕತೆಯಿಂದ ಜಾಗೃತರಾಗಿ ಏಳುವವರೆಗೆ ನೀವು ಎಲ್ಲೆಲ್ಲಿ ದುಃಖ ನೋಡುವಿರೋ ಅಲ್ಲೆಲ್ಲ ದುಃಖ ನಿವಾರಣೆಯ ಸಮಾಜ ಸೇವೆ ಮಾಡಬೇಕು. ಆದರೆ ಹಾಗೆ ಮಾಡುವಾಗ ಅಹಂಕಾರ ಇಲ್ಲದೆ ಅಂದರೆ 'ನಾನು ನನಗಿಂತ ಕೆಳಗಿರುವವನಿಗೆ ಸಹಾಯ ಮಾಡುತ್ತಿದ್ದೇನೆ. ಆತನಿಗೆ ಸಹಾಯದ ಅಗತ್ಯವಿದೆ ಮತ್ತು ಅದನ್ನು ನಾನು ಒದಗಿಸುತ್ತಿದ್ದೇನೆ' ಎಂಬ ಆಲೋಚನೆಗೆ ಸಿಲುಕಿಕೊಳ್ಳದಂತೆ ಎಚ್ಚರ ವಹಿಸಬೇಕು. ಅವನಲ್ಲಿರುವ ದೇವರನ್ನು ಪೂಜಿಸುವ ಮಾರ್ಗವಿದು ಎಂಬ ಭಾವದಲ್ಲಿ ಸಹಾಯ ಮಾಡಬೇಕು. ಇಂತಹ ಸೇವೆಯೆಲ್ಲ ಆತ್ಮನ ಸೇವೆಯೇ ಹೊರತು ಬೇರೆಯಲ್ಲ. ಈ ಸೇವೆ ನಿಮಗಾಗಿಯೇ ಹೊರತು ಬೇರೆಯವರಿಗಲ್ಲ.

ಸತ್ಯ ನೀವು ಹೇಳುವಷ್ಟು ಸರಳವಾಗಿದ್ದರೆ ತಲೆ ಕೆಡಿಸುವ ಇಷ್ಟೆಲ್ಲ ಶಾಸ್ತ್ರ ಪುರಾಣಗಳೇಕೆ?

ಕೆಲವರಿಗೆ ಬೌದ್ಧಿಕ ಕಸರತ್ತಿಲ್ಲದೆ ಏನೂ ದಕ್ಕದು. ಅದಕ್ಕಾಗಿ ಇವೆಲ್ಲ, ಅಷ್ಟೆ!

(ಕೃಪೆ: ಡಿ.ಎಸ್. ನಾಗಭೂಷಣ ಅವರ 'ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ')

ಗಾಂಧಿ–ಅಂಬೇಡ್ಕರ್ ಮತ್ತು ಬುದ್ಧ







–ಗೋಪಾಲ್ ಗುರು

ಆಧುನಿಕ ಭಾರತದ ಪ್ರಮುಖ ರಾಜಕೀಯ ಚಿಂತಕರುಗಳ ಪೈಕಿ ಗಾಂಧಿ ಮತ್ತು ಅಂಬೇಡ್ಕರ್ ತಮ್ಮಿಬ್ಬರ ಕುರಿತಾಗಿ ವಿದ್ವದ್ವಲಯದಲ್ಲಿ ನಡೆಯುವ, ಚರ್ಚೆ ವಾಗ್ವಾದಗಳಿಗೆ ಸಾಕಷ್ಟು ಪ್ರೇರಣೆ ನೀಡಿದ್ದಾರೆ. ಈ ವಿದ್ವದ್ವಲಯದಲ್ಲಿ ಗಾಂಧಿ ಅಂಬೇಡ್ಕರ್ ಕುರಿತು ಆಲೋಚಿಸುತ್ತಿರುವ ಬಹುತೇಕ ವಿದ್ವಾಂಸರು ಹೊಸ ತಲೆಮಾರಿನವರಾಗಿದ್ದಾರಲ್ಲದೆ, ಅವರಿಬ್ಬರನ್ನು ಪರಿಣಾಮಕಾರಿಯಾಗಿ, ಕೌಶಲ್ಯಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ, ಸಂಕೀರ್ಣವೆನ್ನಬಹುದಾದ ವಾದಗಳನ್ನು ಮಂಡಿಸುತ್ತ ಬಂದಿದ್ದಾರೆ. (ಕುಮಾರ್ ೨೦೧೫).

ಈ ಬಗೆಯ ವಿದ್ವತ್ಪೂರ್ಣ ಸಂವಾದಗಳನ್ನು ಅಂಬೇಡ್ಕರ್‌ರನ್ನು ಬೆಂಬಲಿಸುವ ವರ್ಗವು ಗಂಭೀರವಾಗಿ ಪರಿಗಣಿಸಿಲ್ಲವೆಂದು ತೋರುತ್ತದೆ. ಅವರು ಇಂದಿಗೂ ಗಾಂಧಿಯ ಬಗ್ಗೆ ತಿರಸ್ಕಾರದ ಧೋರಣೆಯನ್ನೇ ಹೊಂದಿದ್ದಾರೆ. ಅಂಬೇಡ್ಕರ್‌ವಾದಿಗಳ ಪಾಲಿಗೆ ಗಾಂಧಿಯ ನಿಂದನೆ ಒಂದು ವ್ಯಸನವಾಗಿ ಪರಿಣಮಿಸಿದೆ; ಮಾತ್ರವಲ್ಲ, ಅಂಬೇಡ್ಕರ್‌ರನ್ನು ಒಬ್ಬ ಪ್ರಮುಖ ಚಿಂತಕನೆಂದು ಬಿಂಬಿಸಲು ಈ ನಿಂದನೆ ಅತ್ಯಗತ್ಯ ಎಂದೇ ಅವರಲ್ಲಿ ಬಹುತೇಕರು ನಂಬಿಕೊಂಡಿದ್ದಾರೆ. ಗಾಂಧಿಯ ಕುರಿತಾದ ಈ ಬಗೆಯ ಕಟು ನಿಲುವು ಗಾಂಧಿ ಮತ್ತು ಅಂಬೇಡ್ಕರ್ ನಡುವಿನ 'ಸಂಘರ್ಷಮಯ' ಸಂಬಂಧದಿಂದ ಒಂದಿಷ್ಟಾದರೂ ಬಿಡುಗಡೆ ಹೊಂದಿ ಅವರಿಬ್ಬರ ಕುರಿತು ಆಲೋಚಿಸಲು ಸಾಧ್ಯವಾಗದಂತಹ ವಾತಾವರಣವನ್ನು ನಿರ್ಮಿಸಿ ಬಿಟ್ಟಿದೆ. ಉದಾಹರಣೆಗೆ, ಗಾಂಧಿಯ ವಿಶಿಷ್ಟತೆಯನ್ನು ಕುರಿತು ಆಲೋಚಿಸುವ ದಲಿತ ಸಾಹಿತಿಗಳ ಪ್ರಯತ್ನಗಳನ್ನು ಯುವ ದಲಿತ ಸಮುದಾಯವು ವಿರೋಧಿಸಿಕೊಂಡೇ ಬಂದಿದೆ[೨]. ದಲಿತರಿಗೆ ಪ್ರತ್ಯೇಕ ಮೀಸಲು ಮತಕ್ಷೇತ್ರದ ಕುರಿತಾದ ಮ್ಯಾಕ್ ಡೊನಾಲ್ಡ್ ಪ್ರಸ್ತಾಪವನ್ನು ವಿರೋಧಿಸಿ ಗಾಂಧಿ ಆಮರಣಾಂತ ಉಪವಾಸ ಸತ್ಯಾಗ್ರಹ ಘೋಷಿಸಿದ ವಿಷಯದಲ್ಲಿ ಅಂಬೇಡ್ಕರ್ ವಾದಿಗಳು ಗಾಂಧಿಯನ್ನು ಟೀಕಿಸುತ್ತಾರೆ. ಈ ಟೀಕೆ ಎರಡು ವೈರುಧ್ಯಕರ ಪರಿಕಲ್ಪನೆಗಳಿಗೆ ಜನ್ಮ ನೀಡುತ್ತದೆ. ತೀವ್ರ ಧೋರಣೆಯುಳ್ಳವರು ಗಾಂಧಿಯ ಉಪವಾಸ ನ್ಯಾಯಯುತವಾದುದಲ್ಲ, ಅದು ಅಂಬೇಡ್ಕರ್‌ರನ್ನು ಪೂನಾ (ರಾಜಿ)ಒಪ್ಪಂದಕ್ಕೆ ತಲೆಬಾಗುವಂತೆ ಮಾಡಿತು ಎಂದು ವಾದಿಸಿದರೆ, ಮೃದು ಧೋರಣೆಯುಳ್ಳವರು ಪೂನಾ ಒಪ್ಪಂದಕ್ಕೆ ಸಹಿ ಮಾಡುವ ಮೂಲಕ ಗಾಂಧಿಯ ಜೀವವನ್ನು ಕಾಪಾಡುವ ವಿಷಯದಲ್ಲಿ ಅಂಬೇಡ್ಕರ್ ನ್ಯಾಯಯುತವಾಗಿ, ಜವಾಬ್ದಾರಿಯುತವಾಗಿ ನಡೆದುಕೊಂಡರು ಎಂದು ಭಾವಿಸುತ್ತಾರೆ.

ಇದೇ ರೀತಿ ಅಂಬೇಡ್ಕರ್ ಸಹ ಗಾಂಧಿ ವಿದ್ವಾಂಸರ ತೀವ್ರವಾದ, ಅನ್ಯಾಯವಾದ ಟೀಕೆಗಳಿಗೆ ಒಳಗಾಗಿದ್ದಾರೆ (ಷಾ ೧೯೭೭), ಇಂತಹ ಅನ್ಯಾಯವಾದ ಟೀಕೆ, ವಿಮರ್ಶೆಗಳಿಂದ ನಿಜಕ್ಕೂ ಅನ್ಯಾಯವಾಗುವುದು ಗಾಂಧಿಗೆ. ಗಾಂಧಿ ಒಬ್ಬ ದಲಿತ ವಿರೋಧಿ ಎಂಬ ಅಂಬೇಡ್ಕರ್‌ವಾದಿಗಳ ಆಲೋಚನೆಗೆ ತಳಹದಿಯಿಲ್ಲ, ಅಂತಹ ಆಲೋಚನೆ ಪರಿಣಾಮಕಾರಿಯಾದುದಲ್ಲ; ಅಂಬೇಡ್ಕರರ ಗಾಂಧಿ ಕುರಿತ ವಿಮರ್ಶೆ ಅಂತಹ ಯಾವುದೇ ಪರಿಣಾಮ ಉಂಟು ಮಾಡದ ಸ್ವರೂಪದ್ದಾಗಿದೆ. ಡಾ. ಅಂಬೇಡ್ಕರ್ ಗಾಂಧಿಯ ಬಗ್ಗೆ ಒಂದು ಕಹಿ ಭಾವವನ್ನು, ನಿರ್ಧಾರಕವಾದ, ನ್ಯಾಯಯುತವಾದ ಧೋರಣೆಯನ್ನು ಹೊಂದಿದ್ದರು ಎಂದು ಅಂಬೇಡ್ಕರ್‌ವಾದಿಗಳು ನಂಬಿದ್ದಾರೆ. ಗಾಂಧಿಯನ್ನು ಪ್ರಸ್ತಾಪಿಸುವಾಗ ಅಂಬೇಡ್ಕರ್ ಬಳಸುವ ಭಾಷೆ ಶಿಷ್ಟಾಚಾರದ್ದಲ್ಲ, ಅವರು ಬಳಸುವ ಶಬ್ದಗಳು ನಕಾರಾತ್ಮಕವಾದುದು, ಪ್ರಶ್ನಿಸುವ ಮತ್ತು ನಿಂದಿಸುವ ಧೋರಣೆಯದ್ದು ಎಂಬುದು ನಿಜ (ಅಂಬೇಡ್ಕರ್ ೧೯೪೮). ಅದರಲ್ಲೂ ೧೯೩೦ರ ಪ್ರಾರಂಭದಲ್ಲಿ ನಡೆದ ದುಂಡು ಮೇಜಿನ ಸಭೆಯ ನಂತರ ಅಂಬೇಡ್ಕರ್ ಅವರ ಮಾತಿನ ಶೈಲಿಯೇ ಬದಲಾಯಿತು ಎಂದು ಕೆಲವರು ಹೇಳುತ್ತಾರೆ.

ಈಗ ಹುಟ್ಟುವ ಪ್ರಶ್ನೆ ಏನೆಂದರೆ: ಅಂಬೇಡ್ಕರ್ ಗಾಂಧಿಯ ಕುರಿತು ಯೋಚಿಸುವಾಗ ಮೃದುವಾದ ಭಾಷೆಯನ್ನು ಬಳಸಲೇ ಇಲ್ಲವೇ? ಗಾಂಧಿಯಲ್ಲಿ ಅವರಿಗೆ ಸಕಾರಾತ್ಮಕವಾದ, ಜಾಗರೂಕವಾದ ಚೈತನ್ಯ ಕಾಣಿಸಲೇ ಇಲ್ಲವೇ? ಅಂಬೇಡ್ಕರ್ ದೃಷ್ಟಿ ದಾರಿ ಹುಡುಕುವ ಕಡೆಗಿತ್ತೋ ಅಥವಾ ತಪ್ಪು ಹುಡುಕುವ ಕಡೆಗಿತ್ತೋ? ಅವರ ದೃಷ್ಟಿ ದಾರಿ ಹುಡುಕುವುದಾಗಿದ್ದಲ್ಲಿ ನೈತಿಕವಾಗಿ ಮನವೊಲಿಸುವ, ಒಂದು ಸಂವಾದಕ್ಕೆ ಆಸ್ಪದ ಮಾಡಿಕೊಡುವ ಒಂದು ವಿಧಾನವಾಗಿ ಅವರು ತಮ್ಮ ಟೀಕೆಯನ್ನು ಬಳಸಿಕೊಳ್ಳಲಿಲ್ಲವೇ? ಅವರ ವಿಮರ್ಶಾ ವಿಧಾನ ವಿಮೋಚನಾ ಮಾರ್ಗ ಕಂಡುಕೊಳ್ಳುವ ಪ್ರಯತ್ನವಾಗಲಿಲ್ಲವೇ? ಈ ಪ್ರಬಂಧ ಇಂತಹ ಕೆಲವು ಪ್ರಮುಖ ಪ್ರಶ್ನೆಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಗಾಂಧಿಯ ವಿಮರ್ಶೆ

ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರೂ ತಮ್ಮ ಆದರ್ಶವನ್ನು ಸಾಕಾರಗೊಳಿಸಲು ವಾಸ್ತವವನ್ನು (ಅಂದರೆ ಅಸ್ಪೃಶ್ಯತೆಯನ್ನು) ಮೀರಬೇಕು ಎಂದು ನಂಬಿದ್ದರು. ದಲಿತರ ವಿಮೋಚನೆಯ ತಳಹದಿಯ ಮೇಲೆ ನಿಂತಿರುವ ಅಂತಹ ಆದರ್ಶದ ಈಡೇರಿಕೆಗಾಗಿ ಅಂಬೇಡ್ಕರ್‌ವಾದಿಗಳು ಗಾಂಧಿಯ ಶಕ್ತಿಯನ್ನು ಮನಗಾಣಲು ನೆರವಾಗಬಲ್ಲಂತೆ ಅಂಬೇಡ್ಕರ್‌ರನ್ನು ಹೊಸ ಓದಿನಿಂದ ಪರಿಭಾವಿಸಬೇಕಾಗುತ್ತದೆ. ಅಂಬೇಡ್ಕರರ ಕುರಿತಾದ ವಿಧಿವತ್ತಾದ ಓದು ಅಂಬೇಡ್ಕರರ ವಿಸ್ತಾರವಾದ ಆಲೋಚನೆಗಳ ಪರಿಣಾಮವನ್ನು ಸೀಮಿತಗೊಳಿಸುತ್ತದೆ. ಅದೇ ರೀತಿ ಈ ಹಿನ್ನೆಲೆಯಲ್ಲಿ ಗಾಂಧಿಯ ಹೊಸ ಓದು ಅತ್ಯಂತ ಜರೂರಿನದ್ದಾಗಿದೆ. ಗಾಂಧಿ ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ನಿಗದಿಪಡಿಸುವಾಗ ಜಾತಿ ಮತ್ತು ಅಸ್ಪೃಶ್ಯತೆ ಪ್ರಶ್ನೆಗಳನ್ನು ಗೌಣವಾಗಿಸುವ ನಿಟ್ಟಿನಲ್ಲಿ ಆಲೋಚಿಸುತ್ತಿದ್ದ ವ್ಯಕ್ತಿಯಾಗಿದ್ದರು ಎಂಬುದನ್ನು ಅಂಬೇಡ್ಕರ್‌ವಾದಿಗಳು ಅರ್ಥ ಮಾಡಿಕೊಳ್ಳಬೇಕು. ಅಂಬೇಡ್ಕರರ ಆಲೋಚನೆಗಳನ್ನು ಘೋಷವಾಕ್ಯದ ಮಟ್ಟಕ್ಕೆ ಇಳಿಸಲಾಗಿದೆ. ಗಾಂಧಿ–ಅಂಬೇಡ್ಕರ್‌ರ ವಿಚಾರಗಳ ನಡುವೆ ಸಮನ್ವಯ ಸಾಧಿಸುವ ಸಾಧ್ಯತೆಯನ್ನು ಇಲ್ಲವಾಗಿಸುವ ಸಲುವಾಗಿಯೇ ಈ ಘೋಷವಾಕ್ಯಗಳನ್ನು ಬಳಸಲಾಗುತ್ತಿದೆ. ಈ ಅಂಬೇಡ್ಕರ್‌ವಾದಿಗಳ ಈ ವಿಧಿವತ್ತಾದ ಗ್ರಹಿಕೆ ಅಂಬೇಡ್ಕರರ ಚಿಂತನೆಯ ವಿಸ್ತಾರವನ್ನು ಪರಿಭಾವಿಸಲು ಅಗತ್ಯವಿರುವ ಉದಾರ ಬುದ್ಧಿ ಬೆಳೆಸಿಕೊಳ್ಳಲು ಅಡಚಣೆಯಾಗಿದೆ. ಇಂತಹ ಆಯ್ದ ಓದು ಗಾಂಧಿಯ ವಿಮೋಚನಾ ಮಾರ್ಗವನ್ನು ಶೋಧಿಸಲೂ ಒಂದು ಅಡಚಣೆಯಾಗಿದೆ. ಈ ಆಯ್ಕೆಯ ಓದಿನಿಂದ ರಚನೆಯಾಗುವ ಅಂಬೇಡ್ಕರ್‌ರ ಜೀವನಚರಿತ್ರೆಗಳಂತೂ ತುಂಬ ಮುಜುಗರ ಉಂಟುಮಾಡುವಂತಿವೆ.

. ಅವರ ಪತ್ರಗಳನ್ನು ಪರಿಶೀಲಿಸಿ ನೋಡಿದಾಗ ಗಾಂಧಿ ಕುರಿತ ಅಂಬೇಡ್ಕರ್ ಭಾವನೆಗಳು ಎಲ್ಲ ಕಾಲಕ್ಕೂ ಒಂದೇ ರೀತಿಯಲ್ಲಿ ಇರಲಿಲ್ಲ. ಅವರ ಗಾಂಧಿ ವಿಮರ್ಶೆ ತುಂಬ ಕಠೋರವಾಗಿತ್ತು ಮಾತ್ರವಲ್ಲ, ೧೯೩೭–೧೯೪೮ರ ಅವಧಿಯಲ್ಲಿ ತುಂಬ ನಿಯತವಾಗಿಯೇ ಅವರು ಗಾಂಧಿಯನ್ನು ಟೀಕಿಸುತ್ತಿದ್ದರು. ಆದಾಗ್ಯೂ ಅವರ ಗಾಂಧಿ ವಿಮರ್ಶೆ ನೈತಿಕವಾದುದಾಗಿತ್ತು, ಆ ವಿಮರ್ಶೆಯಲ್ಲಿ ಇರುತ್ತಿದ್ದ ವಿಷಾದ ಭಾವ ಒರಟಾದುದಾಗಿರಲಿಲ್ಲ, ಮೇಲ್ಮೈನದ್ದಾಗಿರಲಿಲ್ಲ, ವಾಸ್ತವ ನಿಷ್ಠವಾದುದಾಗಿತ್ತು, ಸಂವಾದಕ್ಕೆ ತೆರೆದುಕೊಂಡಿತ್ತು.

ಗಾಂಧಿ ಮತ್ತು ಅಂಬೇಡ್ಕರ್ ಈ ಇಬ್ಬರ ಪೈಕಿ ನಾವು ಯಾರ ಶ್ರೇಷ್ಠತೆಯ ಬಗ್ಗೆ ಮಾತನಾಡುತ್ತಿದ್ದೇವೆ, ಎಂಬುದನ್ನು ವಿವೇಚಿಸುವುದು ತುಂಬ ಕಷ್ಟವಾಗಿರುವ ಸನ್ನಿವೇಶವನ್ನು ನಾವಿಂದು ತಲುಪಿದ್ದೇವೆ. ಅಥವಾ ತಮ್ಮ ವಿಚಾರವೇ ಶ್ರೇಷ್ಠವೆಂಬಂತೆ ಬಿಂಬಿಸಲು ವಾಗ್ವಾದ ನಡೆಸುತ್ತಿರುವವರ ಪರವಾಗಿ ನಾವು ಮಾತನಾಡುತ್ತಿರುವೆವೇ? ಸೂಕ್ಷ್ಮನಾದ ವಿದ್ವಾಂಸನಿಗೆ ಯಾರ ವಿಚಾರ ಶ್ರೇಷ್ಠ ಎಂಬ ಪ್ರಶ್ನೆ ಗೌಣವಾಗುತ್ತದೆ.

ಉದಾಹರಣೆಗೆ, ಸೃಜನಶೀಲ ವಾಗ್ವಾದದ ಮೂಲಕ ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರೂ ಪರಸ್ಪರರನ್ನು ಪರಿವರ್ತಿಸಿದ್ದರು ಎಂದು ಖ್ಯಾತ ಚಿಂತಕ ಡಿ.ಆರ್. ನಾಗರಾಜ್ ಅಭಿಪ್ರಾಯ ಪಡುತ್ತಾರೆ. ಗಾಂಧಿ ಅಂಬೇಡ್ಕರ್‌ರಿಂದ ಅರ್ಥಶಾಸ್ತ್ರದ ಸೂಕ್ಷ್ಮಗಳನ್ನು ಅರಿತಿದ್ದರೆ ಅಂಬೇಡ್ಕರ್ ಗಾಂಧಿಯಿಂದ ಧಾರ್ಮಿಕತೆಯ ಮಹತ್ವವನ್ನು ಮನಗಂಡಿದ್ದರು . ಆದಾಗ್ಯೂ ಅಂಬೇಡ್ಕರ್‌ಗೆ ಗಾಂಧಿಯೊಂದಿಗೆ ಕೆಲವು ಮೂಲಭೂತ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು ಎಂಬ ಅಂಶವನ್ನು ನಾಗರಾಜ್ ಅಲ್ಲಗಳೆಯುವುದಿಲ್ಲ. ಭಿನ್ನಾಭಿಪ್ರಾಯಗಳನ್ನು ಸಮನ್ವಯಿಸುವ ಆತುರದಲ್ಲಿ ಗಾಂಧಿಯನ್ನು ಪ್ರಶ್ನಾತೀತವಾಗಿ ಒಪ್ಪಲೂ ಸಾಧ್ಯವಿಲ್ಲ ಎಂದು ಅವರು ಹೇಳುತ್ತಾರೆ. ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರನ್ನೂ ಸಮಾನವಾಗಿ ಪ್ರಸ್ತುತವೆಂದು ಪ್ರತಿಪಾದಿಸಲು 'ಹಾಗೂ' ಎಂಬ ಪದವನ್ನು ಬಳಸಿದ ವಿದ್ವಾಂಸರುಗಳೂ ಉಂಟು. 'ಹಾಗೂ' ಎಂಬ ಪದ 'ಅಥವಾ' ಎಂಬ ಪದದ ಹಾಗೆ ಪೂರ್ವಪಕ್ಷದ ವಿಚಾರವನ್ನು ಅವಜ್ಞೆ ಮಾಡುವುದಿಲ್ಲ, ಬದಲಾಗಿ ಅವೆರಡರ ನಡುವೆ ಸಮಾನಾಂತರವಾದ ರೇಖೆಯನ್ನು ಎಳೆಯುತ್ತದೆ. ಅಂಬೇಡ್ಕರರ ಚಿಂತನೆಗಳು ಗಾಂಧಿಯ ವಿಮರ್ಶೆಯನ್ನೂ ಒಳಗೊಂಡು 'ಅಥವಾ', 'ಹಾಗೂ' ಮುಂತಾದ ಪ್ರತ್ಯಯಗಳ ಮಿತಿಯನ್ನು ಮೀರಿ ಮುಂದುವರಿಯುತ್ತವೆ. ಆದರೆ ರಾಜಕೀಯ ನೆಲೆಯಲ್ಲಿ ಹಾಗೆ ಮುಂದುವರಿಯಲು ಕೆಲವು ತೊಡಕುಗಳಿವೆ ಎಂದು ಅಂಬೇಡ್ಕರ್ ಭಾವಿಸುತ್ತಾರೆ. ದಲಿತರ ರಾಜಕೀಯ ಅಧಿಕಾರದ ವಿಷಯದಲ್ಲಿ ಗಾಂಧಿ ಹಟಮಾರಿತನದ ಧೋರಣೆ ತೋರಿಸುತ್ತಿದ್ದಾರೆ ಎನಿಸಿದಾಗ ಅಥವಾ ಜಾತಿಯ ಪ್ರಶ್ನೆ ಬಂದಾಗ ಕಾಂಗ್ರೆಸ್ ಪಕ್ಷ, ಮುಖವಾಡ ತೊಡದಿದ್ದರೂ, ದಿವ್ಯ ನಿರ್ಲಕ್ಷ್ಯ ತೋರಿಸಿದಾಗ ಮತ್ತು ಸವರ್ಣೀಯರು ಇಂತಹ ಪ್ರಶ್ನೆಗಳಿಗೆ ಬೆನ್ನುತೋರಿಸಿದಾಗ ಅಂಬೇಡ್ಕರ್ ಹತಾಶರಾಗಲಿಲ್ಲ, ಸಿನಿಕತನ ತೋರಿಸಲಿಲ್ಲ. ಹಾಗೆ ನೋಡಿದರೆ ಗಾಂಧಿಯೊಂದಿಗೆ, ಕಾಂಗ್ರೆಸ್ ಪಕ್ಷದೊಂದಿಗೆ ಮತ್ತು ಸವರ್ಣೀಯರೊಂದಿಗೆ ಸಂಯಮದಿಂದ ವಾಗ್ವಾದ ನಡೆಸುವಾಗ ಅಂಬೇಡ್ಕರ್ ಮನವೊಲಿಸುವ ನೀತಿಯನ್ನೇ ಪಾಲಿಸುತ್ತಿದ್ದರು ಎಂಬುದಕ್ಕೆ ಅವರ ಕೃತಿಗಳೇ ರುಜುವಾತಾಗಿವೆ.

ಅಂಬೇಡ್ಕರ್ ಅವರ ಮನವೊಲಿಸುವ ನೀತಿ

ಅಂಬೇಡ್ಕರ್ ಕಾನೂನಿನ ಮೊರೆ ಹೋಗುವ ಬದಲಾಗಿ ಮನವೊಲಿಕೆಯ ನೀತಿಯನ್ನು ಅಳವಡಿಸಿಕೊಳ್ಳುವುದರ ಹಿಂದಿನ ನೈತಿಕತೆ ಆವ ತೆರನದ್ದು ಎಂಬ ಮೂಲಭೂತ ಪ್ರಶ್ನೆ ಉದ್ಭವಿಸುತ್ತದೆ. ಅಂಬೇಡ್ಕರ್ ಆಂತರ್ಯದಲ್ಲಿ ಒಬ್ಬ ಅನ್ವೇಷಕರಾಗಿದ್ದರು. ಮನವೊಲಿಸುವ ನೀತಿಯೇ ಅವರೊಳಗಿನ ಅನ್ವೇಷಕನಿಗೆ ಸೂಕ್ತವಾದ ಮಾರ್ಗವೆಂದು ತೋರಿತು. ಇದನ್ನು ಬೇರೆಯ ರೀತಿ ಹೇಳುವುದಾದರೆ, ಅವರು ತಪ್ಪುಗಳನ್ನು ಬೆದಕುವ ಸ್ವಭಾವದವರಲ್ಲ, ಅವರ ವಿಮರ್ಶೆ ಒಬ್ಬ ವ್ಯಕ್ತಿಯನ್ನು ಅಥವಾ ಸಮುದಾಯವನ್ನು ಪ್ರತ್ಯೇಕಗೊಳಿಸುವ ಸಿನಿಕತನದ ಅಥವಾ ನಿರಾಕರಣೆಯ ಧೋರಣೆಯದ್ದೂ ಆಗಿರಲಿಲ್ಲ. ಅಂಬೇಡ್ಕರ್ ತಮ್ಮ ಚಿಂತನೆಗಳಿಗೆ ಮತ್ತು ತಮ್ಮ ಜೀವನ್ಮರಣದ ಹೋರಾಟಗಳಿಗೆ ಸಿನಿಕತನ ಆವರಿಸಲು ಆಸ್ಪದ ನೀಡಲಿಲ್ಲ. ಜೀವನ್ಮರಣದ ಹೋರಾಟ ವ್ಯಕ್ತಿಯ ಒಳಗಿನ ಹೋರಾಟವೂ ಆದುದರಿಂದ, ಆ ಹೋರಾಟ ತನಗಾದ ಅನ್ಯಾಯಕ್ಕೆ ತಾನೇ ಕಾರಣ ಎಂಬ ಹೊಣೆಗಾರಿಕೆಯತ್ತ ವ್ಯಕ್ತಿಯನ್ನು ನಡೆಸುತ್ತದೆ. ಹಾಗಲ್ಲದೆ ಅಂತಹ ವ್ಯಕ್ತಿ ಇನ್ನೊಬ್ಬರ ಮೇಲೆ ಆ ಹೊಣೆಗಾರಿಕೆಯನ್ನು ಹೊರಿಸಿದಾಗ ತನ್ನೊಂದಿಗೆ ತನ್ನ ಸಮುದಾಯವೂ ಸಹ ಬಲಿಪಶುವಾಗಿದೆ ಎಂದು ಅವನು ಯೋಚಿಸುತ್ತಾನೆ. ಅಂಬೇಡ್ಕರ್ ಈ ಎರಡು ಮಾರ್ಗದಲ್ಲೂ ಯೋಚಿಸಲಿಲ್ಲ. ಜಾತೀಯತೆಯ ಎದುರು ತಾನು ಅಸಹಾಯಕನೆಂದು ತನ್ನನ್ನು ತಾನೇ ನಿಂದಿಸಿಕೊಳ್ಳಬೇಕಾಗುತ್ತಿತ್ತು ಅಥವಾ ತನ್ನ ಸಮಸ್ಯೆಗಳಿಗೆ, ನಿರ್ದಿಷ್ಟವಾಗಿ ಜಾತೀಯತೆ ಮತ್ತು ಪ್ರತ್ಯೇಕ ಮೀಸಲು ಮತಕ್ಷೇತ್ರಗಳ ಕುರಿತಾದ ಸಮಸ್ಯೆಗಳಿಗೆ, ಗಾಂಧಿಯನ್ನು ತಪ್ಪಿತಸ್ಥನನ್ನಾಗಿಸಿ ಅವರಲ್ಲಿ ಅಪರಾಧಭಾವ ಮೂಡಿಸಬೇಕಾಗುತ್ತಿತ್ತು. ಅಂಬೇಡ್ಕರರಾದರೋ ಸಾಮಾಜಿಕ ನೆಲೆಯಲ್ಲಿ, ಗಾಂಧಿಯನ್ನೂ ಒಳಗೊಂಡಂತೆ, ಅನ್ಯರೊಂದಿಗೆ ಮುಕ್ತವಾಗಿ ಬಾಳಲು ಮತ್ತು ಸತ್ಯದ ಹುಡುಕಾಟದ ಮಾರ್ಗ ಹಿಡಿಯಲು ಅಗತ್ಯವಿರುವ ಒಂದು ಸಕಾರಾತ್ಮಕ ಹೊಣೆಗಾರಿಕೆಯನ್ನು ರೂಢಿಸಿಕೊಂಡಿದ್ದರು. ಅದು ವಾಸ್ತವವಾದಿ ಮಾರ್ಗವಲ್ಲದಿರಬಹುದು. ಆದರೆ ಅದೊಂದು ಆದರ್ಶಮಯ ಮಾರ್ಗವಾಗಿತ್ತು, ಅದು ಬುದ್ಧನ ಮಾರ್ಗವಾಗಿತ್ತು. ಆದ್ದರಿಂದಲೇ ಅವರ ೧೯೩೨ರ ಪೂನಾ ಒಪ್ಪಂದದ ಐತಿಹಾಸಿಕ ವಾಸ್ತವ ವಿವರಗಳಿಗಳೊಂದಿಗೆ ಬಂಧಿತರಾಗಲಿಲ್ಲ. ಚುನಾವಣಾ ಪ್ರಕ್ರಿಯೆಯ ಚಲನಶೀಲತೆ ಒಂದು ವಿಭಿನ್ನವಾದ ಪರಿಣಾಮವನ್ನು ಉಂಟುಮಾಡುತ್ತದೆ, ಪ್ರಾಯಶಃ ಕಹಿಯಾದ ಸತ್ಯವನ್ನು ಅನಾವರಣ ಮಾಡುತ್ತದೆ ಎಂಬುದು ಅವರಿಗೆ ಗೊತ್ತಿತ್ತು. ಕೆಲವು ನಾಯಕರುಗಳು ಕಂಡುಕೊಂಡಂತೆ ಈ ಸತ್ಯದ ಅನಾವರಣ ಅದರ ಪರಿಣಾಮವನ್ನು ಉಂಟು ಮಾಡಿಯೇ ತೀರಿತು. ಅವರ ಪ್ರಕಾರ ರಾಜಕೀಯ ಪ್ರತಿನಿಧೀಕರಣ – ಅದು ಪ್ರತ್ಯೇಕ ಮತಕ್ಷೇತ್ರದ್ದಿರಲಿ ಅಥವಾ ಸಂಯುಕ್ತ ಮತಕ್ಷೇತ್ರದ್ದಿರಬಹುದು ಪ್ರಾತಿನಿಧ್ಯದ ಹಾಗೂ ನಾಯಕತ್ವದ ಸ್ವಾಯತ್ತತೆಯನ್ನೊದಗಿಸದೇ ಹೋಯಿತು. ಇದಕ್ಕೆ ಉದಾರವಾದಿ ಚೌಕಟ್ಟಿನ ಅಧಿಕಾರದಲ್ಲಿ ಅಂತರ್ಗತವಾಗಿರುವ ಕೆಲವು ಮಿತಿಗಳೇ ಕಾರಣ. ಹಾಗಾಗಿಯೇ ಪೂನಾ ಒಪ್ಪಂದ ಕುರಿತವಿವಾದಕ್ಕೆ ಅಂಬೇಡ್ಕರ್ ಆದರ್ಶಮಯವಾದ ಸತ್ಯದ ಹುಡುಕಾಟವೇ ಮುಖ್ಯ ಪರಿಹಾರವೆಂದು ಭಾವಿಸಿದರು. ಪೂನಾ ಒಪ್ಪಂದದ ವಿವಾದಕ್ಕೆ ಗಾಂಧಿಯನ್ನು ದೂಷಿಸುವವರ ಮಾತಿನಲ್ಲಿ ಸತ್ಯಾಂಶ ಇಲ್ಲದಿಲ್ಲ. ಆದರೆ ಗಾಂಧೀ ಟೀಕೆಗೆ ಅದೊಂದನ್ನೇ ಮುಖ್ಯ ಅಸ್ತ್ರವನ್ನಾಗಿ ಬಳಸಿಕೊಳ್ಳುವುದು ಸಾಧುವಲ್ಲ. ಅಂಬೇಡ್ಕರ್ ಅವರ ಸತ್ಯಾನ್ವೇಷಣೆಯ ಮಾರ್ಗ ಅಂತಹ ಪ್ರಯತ್ನಕ್ಕೆ ಆಸ್ಪದ ನೀಡುವುದಿಲ್ಲ. ಉದಾರವಾದೀ ನಿಲುವಿನಿಂದ ಆಧ್ಯಾತ್ಮಿಕ ನಿಲುವಿನತ್ತ ಹೊರಳುವ ಅಂಬೇಡ್ಕರ್ ಅವರ ಸತ್ಯಾನ್ವೇಷಣೆಯ ಪ್ರಯತ್ನ ಪೂನಾ ಒಪ್ಪಂದದ ಐತಿಹಾಸಿಕ ನೆನಪಿನಲ್ಲೇ ಸ್ಥಿರವಾಗಿ ನಿಂತುಬಿಡಲು ಸಾಧ್ಯವಾಗಲಿಲ್ಲ. ಹಾಗೆ ನೋಡಿದರೆ ಅವರು ಮುಕ್ತವಾಗಿ ಸಂವಿಧಾನ ರಚನೆಯಲ್ಲಿ ತೊಡಗಿಸಿಕೊಂಡರು ಮತ್ತು ಕೊನೆಗೆ ನವಬೌದ್ಧರಾಗಿ ಮತಾಂತರಗೊಂಡರು. ಅಂಬೇಡ್ಕರ್ ಅವರ ಬೌದ್ಧಧರ್ಮದ ಮೈತ್ರಿ ಕರುಣ ಮುಂತಾದ ಮೌಲ್ಯಗಳಿಂದಾಗಿ ಸುಲಭವಾಗಿ ಸ್ವತಂತ್ರರಾಗಲು ಸಾಧ್ಯವಾಯಿತು. ಈ ಮೌಲ್ಯಗಳು ಅವರಿಗೆ ಗಾಂಧಿಯ ಸಕಾರಾತ್ಮಕ ಶಕ್ತಿಯ ಸ್ಫೂರ್ತಿಯ ನೆಲೆಗಳನ್ನು ಮನಗಾಣಲು ಸಾಧ್ಯ ಮಾಡಿದ ನೈತಿಕ ತಳಹದಿ ನಿರ್ಮಿಸಿಕೊಟ್ಟಿತು. ಈ ಪ್ರಬಂಧದ ಕೊನೆಯ ಭಾಗದಲ್ಲಿ ವಿವರಿಸಿರುವಂತೆ ಅಂಬೇಡ್ಕರ್ ಗಾಂಧಿಯಲ್ಲಿ ಬೌದ್ಧಧರ್ಮದ ಅವಿಭಾಜ್ಯ ಅಂಶಗಳಾದ ಸಂಘಶೀಲತೆಯ ಸಂಪ್ರದಾಯ ಮತ್ತು ಸಕಾರಾತ್ಮಕ ದೃಷ್ಟಿಕೋನವನ್ನು ಕಂಡುಕೊಂಡಿದ್ದರು. ಗಾಂಧಿಯ ವಿಮರ್ಶೆಯಲ್ಲಿ ಸೃಜನಶೀಲ ರೂಪವನ್ನು ಪಡೆದುಕೊಳ್ಳುವ ಅಂಬೇಡ್ಕರ್ ಅವರ ನೈತಿಕ ಮನವೊಲಿಕೆಯ ವಿಧಾನವು ಗಾಂಧಿಯ ಕುರಿತ ಅವರ ತೀರ್ಮಾನಗಳ ಮೇಲೂ ಪರಿಣಾಮ ಬೀರಿದೆ. ಇದು ಆಕ್ರಮಣದ ವಿಧಾನಕ್ಕೆ ಪರ್ಯಾಯ ವಿಧಾನವಾಗಿದೆ. ಗಾಂಧಿವಾದಿಗಳು ಅಂಬೇಡ್ಕರರ ಕುರಿತು ಈ ಬಗೆಯ ಆಕ್ರಮಣದ ತೀರ್ಮಾನ ಮಾಡುತ್ತಾರೆ, "ಅಂಬೇಡ್ಕರ್ ತಮ್ಮ ಸಮುದಾಯದ ಹಿತಾಸಕ್ತಿಗೆ ಮಾತ್ರ ಸೀಮಿತರಾಗಿದ್ದಾರೆ" ಎಂದು ಅವರು ಹೇಳುತ್ತಾರೆ. ಅಥವಾ ಅಂಬೇಡ್ಕರ್‌ವಾದಿಗಳ "ಗಾಂಧಿ ದಲಿತ ವಿರೋಧಿ" ಎಂಬ ತೀರ್ಮಾನವೂ ಸಹ ಆಕ್ರಮಣದ ತೀರ್ಮಾನವೇ ಆಗಿದೆ. ಆಕ್ರಮಣದ ತೀರ್ಮಾನ ಸಿನಿಕತನದ ಫಲವಾಗಿದ್ದು ಇದರಿಂದ ಅಂತಿಮವಾಗಿ ಮನವೊಲಿಕೆಯ (ಬೌದ್ಧ)ವಿಧಾನಕ್ಕೆ ಹಾನಿಯೇ ಆಗುತ್ತದೆ. ನೈತಿಕ ಮನವೊಲಿಕೆಯ ತೀರ್ಮಾನವು, ತಾನು ಗೆಲುವು ಸಾಧಿಸಬೇಕೆಂದಿದ್ದರೆ ಅನಿವಾರ್ಯವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಆಕ್ರಮಣದ ತುಡಿತವನ್ನು ನಿಗ್ರಹಿಸಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಅವರ ನೈತಿಕ ಮನವೊಲಿಕೆಯು ವಿಮೋಚನಾ ಮಾರ್ಗದ ಮೂಲದ್ದಾಗಿದೆ. ಹಿಂದೂ ಸವರ್ಣೀಯರ ವಿಮೋಚನೆಯ ಸಾಧ್ಯತೆಗಳನ್ನು ಶೋಧಿಸುವ ಈ ಪ್ರಯತ್ನಕ್ಕೆ ಕೇವಲ ಅಮೂರ್ತ ನೈತಿಕ ತತ್ವಗಳಷ್ಟೇ ಸಾಲುವುದಿಲ್ಲ. ಅವರೊಳಗಿನ ನೈತಿಕ ವೈರುದ್ಧ್ಯಗಳನ್ನು ಅವರಿಗೆ ಮನಗಾಣಿಸಬೇಕಾಗುತ್ತದೆ.ಈ ವಿಷಯದಲ್ಲಿ ಅಂಬೇಡ್ಕರ್ ನೈತಿಕ ಹೊಣೆಗಾರಿಕೆಯನ್ನು ಆಯ್ಕೆ ಮಾಡುವುದಿಲ್ಲ. ಹೆಚ್ಚೆಂದರೆ ಗಾಂಧಿಯನ್ನು ವಿವೇಚಿಸುವಾಗ ಆಕ್ರಮಣದ ತೀರ್ಮಾನಗಳಿಗೆ ಬರದಂತೆ ಎಚ್ಚರ ವಹಿಸುತ್ತಾರೆ. ತಮ್ಮ ಪ್ರಮಾಣಕ ತತ್ವಗಳಿಗೆ ಒಗ್ಗುವಂತೆ ಬಲವಂತ ಪಡಿಸದವರೊಂದಿಗೆ ಸಹಕರಿಸಲು ಅಂಬೇಡ್ಕರ್ ಸದಾ ಸಿದ್ಧರಿದ್ದರು. ನೈತಿಕ ಮನವೊಲಿಕೆಯ ವಿಧಾನದ ನೆರವಿನಿಂದ ಅವರು ಗಾಂಧಿಯೊಂದಿಗೆ ಸಂವಹಿಸಲು ಪ್ರಯತ್ನಿಸಿದ್ದರು.

ಅಂಬೇಡ್ಕರ್‌ಗೆ ತಮ್ಮನ್ನು ತಾವು ಅಸ್ಪೃಶ್ಯತೆಯ ಸ್ಥಿತಿಯಿಂದ ಪ್ರತ್ಯೇಕಿಸಿಕೊಳ್ಳುವ ಸಾಮರ್ಥ್ಯವಿತ್ತು. ಅವರ ನೈತಿಕ ಮನವೊಲಿಕೆಯ ವಿಧಾನವು ಸ್ಪೃಶ್ಯರಾದ ಅನ್ಯರೂ ಸಹ ತಮ್ಮ ಸ್ಥಿತಿಯಿಂದ ಮೇಲೇಳುವಂತೆ ಮಾಡುವ ಉದ್ದೇಶ ಹೊಂದಿತ್ತು. ವ್ಯಕ್ತಿಗಳನ್ನು ತಮ್ಮ ಜಾತಿ/ಲಿಂಗ ಇತ್ಯಾದಿ ವಿಭೇದಗಳಿಂದ ಬೇರ್ಪಡಿಸಿ ವಿಶ್ವಾತ್ಮಕ ನೆಲೆಯಲ್ಲಿ ಮಾನವ ಘನತೆಯೊಂದಿಗೆ ಒಂದಾಗಿಸುವ ಉದ್ದೇಶ ಹೊಂದಿತ್ತು. ಅಂಬೇಡ್ಕರ್ ಅವರ ಬೌದ್ಧಧರ್ಮ ಅಮೂರ್ತ ಆತ್ಮಗಳನ್ನು ವಿಶ್ವಾತ್ಮಕ ನೆಲೆಯಲ್ಲಿ ಒಂದಾಗಿಸುವ ಧರ್ಮವಾಗಿದೆ. ಅವರು ಗಾಂಧಿಯನ್ನು ಬೌದ್ಧಧರ್ಮದ ಚೌಕಟ್ಟಿನೊಳಕ್ಕೆ ತರಲು ಅವರನ್ನು ರಾಜಕಾರಣದ ಹೊರಗಿನ ವಲಯಗಳಲ್ಲ ಗ್ರಹಿಸಲು ಪ್ರಯತ್ನಿಸುತ್ತಾರೆ.. ಇಂತಹ ಉದ್ದೇಶಕ್ಕಾಗಿ ಅವರು ಗಾಂಧಿಯ

ವಿಷಯದಲ್ಲಿ ಆಸಕ್ತಿ ತಳೆದಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಇದರ ಭಾಗವಾಗಿಯೇ ಅವರು ಗಾಂಧಿಯಲ್ಲಿ ಸತ್ಯಸಂಧತೆಯನ್ನು ಕಂಡದ್ದು.

ಗಾಂಧಿಯ ಸತ್ಯಸಂಧತೆ

ಅಂಬೇಡ್ಕರ್ ಅವರ ಗಾಂಧಿಯ ಕುರಿತಾದ ವಿಶಿಷ್ಟ ತೀರ್ಮಾನಗಳು ಗಾಂಧಿಯ ಸತ್ಯಸಂಧತೆಯನ್ನು ಆಧರಿಸಿತ್ತು. ಈ ಬಗ್ಗೆ ವಿದ್ವಾಂಸರಾದ ರಾಘವನ್ ಅಯ್ಯರ್ ಹಲವು ಒಳನೋಟಗಳನ್ನು ನೀಡುತ್ತಾರೆ. ಅಯ್ಯರ್ ಅವರ ಪ್ರಕಾರ ಸತ್ಯಸಂಧತೆ ಎಂಬುದು ಗಾಂಧಿಯ ನೈತಿಕತೆಯ ಜೀವಾಳವಾಗಿತ್ತು. ಪಶ್ಚಾತ್ತಾಪದ ಮೂಲಕ ಅದು ಮೈದಾಳುತ್ತಿತ್ತು. ಗಾಂಧಿಯ ಪ್ರಕಾರ ಪಶ್ಚಾತ್ತಾಪವೆಂದರೆ ವ್ಯಕ್ತಿ ತನ್ನ ಮೋಸವನ್ನು ತಾನು ಯಾರಿಗೆ ಮೋಸ ಮಾಡಿದ್ದನೋ ಅವರ ಎದುರಲ್ಲಿ ಒಪ್ಪಿಕೊಳ್ಳುವುದಾಗಿದೆ. . ಗಾಂಧಿಯ ಪ್ರಕಾರ ಸತ್ಯಸಂಧತೆಗೆ ಮತ್ತೊಂದು ಅರ್ಥವುಂಟು, ವ್ಯಕ್ತಿ ತನ್ನ ಭಾವನೆಗಳನ್ನು ನಿಗ್ರಹಿಸಿಕೊಳ್ಳುವುದೂ ಸಹ ಅವರ ಪ್ರಕಾರ ಸತ್ಯಸಂಧತೆಯೇ ಆಗಿದೆ. ಗಾಂಧಿಯ ಈ ಪರಿಕಲ್ಪನೆಗಳಿಗೆ ನೈತಿಕ ನೆಲೆಗಟ್ಟಿದೆ. ಆದಾಗ್ಯೂ ಈ ಪ್ರಬಂಧದಲ್ಲಿ ಚರ್ಚಿತವಾಗಿರುವ ಸತ್ಯಸಂಧತಯೆ ಗಾಂಧಿ ದೃಷ್ಟಿಯ ಸತ್ಯಸಂಧತೆಗಿಂತಲೂ ಭಿನ್ನವಾದುದಾಗಿದೆ. ಗಾಂಧಿಯ ನೈತಿಕ ಪ್ರಜ್ಞೆಯಲ್ಲಿ, ಅಸ್ಪೃಶ್ಯರ ಪರವಾಗಿ ಅವರು ತೆಗೆದುಕೊಳ್ಳುತ್ತಿದ್ದ ನಿಲುವುಗಳಲ್ಲಿ, ಹಿಂದೂ ಸವರ್ಣೀಯರಲ್ಲಿ ನೈತಿಕ ಪ್ರಜ್ಞೆ ಜಾಗೃತಿಗೊಳಿಸಲು ಅವರು ಮಾಡುತ್ತಿದ್ದ ಪ್ರಯತ್ನಗಳಲ್ಲಿ ಅಂಬೇಡ್ಕರ್ ಗಾಂಧಿಯ ಸತ್ಯಸಂಧತೆಯನ್ನು ಕಂಡುಕೊಂಡಿದ್ದರು. ಅಂಬೇಡ್ಕರ್ ಪ್ರಕಾರ ಸತ್ಯಸಂಧತೆಯಿಂದಿರುವುದೆಂದರೆ ನೈತಿಕತೆ ಪಾಲಿಸುವುದೆಂದರ್ಥ, ಸತ್ಯವನ್ನು ಯಥಾವತ್ತಾಗಿ ಒಪ್ಪಿಕೊಳ್ಳುವುದು ಎಂದರ್ಥ. ಅಂಬೇಡ್ಕರ್ ಗಾಂಧಿಯಲ್ಲಿ ಈ ನೈತಿಕ ಸಾಮರ್ಥ್ಯ ಕಂಡುಕೊಂಡಿದ್ದರು. ಅಂಬೇಡ್ಕರ್ ಪ್ರಕಾರ ಸತ್ಯಸಂಧತೆ ಎಂದರೆ ಒಂದು ನೈತಿಕ ಕ್ರಿಯೆಯಾಗಿದ್ದು ಆ ಕ್ರಿಯೆಯ ಫಲವಾಗಿ ನೈತಿಕವಾಗಿ ಸ್ಥಿರವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುತ್ತದೆ. ಮೈತ್ರಿಯಂತಹ ಸಾಮೂಹಿಕ ನೈತಿಕತೆಯ ತಳಹದಿಯ ಮೇಲೆ ಅಂತಹ ವ್ಯವಸ್ಥೆ ನಿರ್ಮಾಣವಾಗುತ್ತದೆ.ಸೈದ್ಧಾಂತಿಕವಾಗಿ ಪರಿಭಾವಿಸುವುದಕ್ಕಿಂತ ನಮ್ಮ ಕ್ರಿಯೆಗಳ ಮೂಲಕ ಸತ್ಯವನ್ನು ಅರಿಯಬೇಕು ಎಂಬುದು ಅಂಬೇಡ್ಕರ್ ಅವರ ವಿಚಾರವಾಗಿತ್ತು. ಸತ್ಯ ಕ್ರಿಯೆಗಳ ಮೂಲಕ ಅನಾವರಣವಾಗುತ್ತದೆ ಎಂದು ಅವರು ನಂಬಿದ್ದರು.

ಇಂತಹ ಸತ್ಯವನ್ನು ಪರಿಭಾವಿಸುವ ಬಗೆ ಹೇಗೆ? ಅಂಬೇಡ್ಕರ್ ಹಿಂದೂಗಳಿಂದ ಮತ್ತು ಗಾಂಧಿಯಿಂದ ಸತ್ಯಸಂಧತೆಯನ್ನು ಯಾವ ಬಗೆಯಲ್ಲಿ ಅಪೇಕ್ಷಿಸಿದರು? ಸತ್ಯಕ್ಕಿಂತಲೂ ಸತ್ಯಸಂಧತೆಯೇ ಮಿಗಿಲು ಎಂದೇಕೆ ಅವರು ಭಾವಿಸಿದರು? ಹೀಗೆ ಅಸ್ಪೃಶ್ಯತೆಯ ವಿರುದ್ಧ ಸತ್ಯಸಂಧತೆಯಿಂದ ನಿಲ್ಲುವ ಯಾವುದೇ ವ್ಯಕ್ತಿಯನ್ನು ಅಂಬೇಡ್ಕರ್ ಮೆಚ್ಚುತ್ತಿದ್ದರು. ಕಾರ್ಯರೂಪದಲ್ಲೇ ವ್ಯಕ್ತಗೊಳ್ಳುವ ಅಸ್ಪೃಶ್ಯತೆ ಪ್ರತಿದಿನವೂ ದಲಿತರಿಗೆ ನೈತಿಕವಾಗಿ ಹಾನಿ ಮಾಡುತ್ತದೆ. ಸಾಮಾಜಿಕವಾಗಿ ಜೀವಂತವಾಗಿರುವ ಅಸ್ಪೃಶ್ಯತೆಯ ಇರುವಿಕೆಯನ್ನು ಸ್ಥಾಪಿಸಲು ಯಾವುದೇ ಪುರಾವೆಗಳ ಅಗತ್ಯವಿಲ್ಲ. ಗಾಂಧಿ ಸಹ ಇದನ್ನು ಒಪ್ಪುತ್ತಾರೆ. ಈ ಬಗ್ಗೆ ಅಂಬೇಡ್ಕರರೊಂದಿಗೆ ವಾದಿಸಲು ಹೋಗುವುದಿಲ್ಲ. ಗಾಂಧಿಯ ಪ್ರಕಾರ ಅಸ್ಪೃಶ್ಯತೆ ಸ್ವಯಂಪ್ರಮಾಣಿತವಾದುದು. ಅಂಬೇಡ್ಕರರ ಸಾಮಾಜಿಕ ಯಾತನೆಯಲ್ಲಿ ಸತ್ಯವಿದೆ ಎಂಬುದನ್ನು ಒಪ್ಪಬಲ್ಲ ನೈತಿಕ ಬಲ ಗಾಂಧಿಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಗಾಂಧಿ ಅಸ್ಪೃಶ್ಯತೆಯ ಇರುವಿಕೆಯನ್ನು ಒಪ್ಪಿದ್ದರು. ಇಲ್ಲಿ ಸತ್ಯಸಂಧತೆ ಎಂದರೆ ಅಸ್ಪೃಶ್ಯತೆಯ ದಾಳಿಗೆ ಸಿಲುಕುವ ವ್ಯಕ್ತಿಯ ಘನತೆಯನ್ನು ಅನ್ಯರ ನೆರವು, ಬೆಂಬಲಗಳಿಗಾಗಿ ಎದುರು ನೋಡದೆ, ಒಡನೆಯೆ ಸಂರಕ್ಷಿಸುವುದಾಗಿದೆ. ಅಸ್ಪೃಶ್ಯತೆಗೆ ರುಜುವಾತೇನು ಎಂದು ಗಾಂಧಿ ಅಂಬೇಡ್ಕರ್‌ರನ್ನು ಕೇಳಲಿಲ್ಲವಾದ ಮಾತ್ರಕ್ಕೆ ಅದುವೆ ಗಾಂಧಿಯ ಉದಾತ್ತ ಔದಾರ್ಯ ಎಂದೇನೂ ಭಾವಿಸಲಾಗದು. ಗಾಂಧಿಯ ಈ ನಿಲುವು ಅವರಿಬ್ಬರ ನಡುವೆ ನಡೆದ ಮಾತುಕತೆಯ ಫಲವೂ ಅಲ್ಲ. ನಮಗೆ ತಿಳಿದಂತೆ ಎಲ್ಲ ಬಗೆಯ ಮತುಕತೆಗಳೂ ಆಧುನಿಕ ಎನ್ನಲಾಗುವ ಒಂದು ಪೂರ್ವಪಕ್ಷವನ್ನು ಒಳಗೊಂಡಿರುತ್ತದೆ. ಗಾಂಧಿಯ ಸತ್ಯಸಂಧತೆಗೆ ಅಸ್ಪೃಶ್ಯತೆಯ ಕುರಿತು ಅಂಬೇಡ್ಕರ್‌ರೊಂದಿಗೆ ವಾದಿಸಬೇಕಾದ ಅವಶ್ಯಕತೆ ಕಾಣಿಸಲಿಲ್ಲ. ಆದರೆ ಅಂಬೇಡ್ಕರರ 'ಜಾತಿ ವಿನಾಶ' ಎಂಬ ಭಾಷಣ ಪ್ರಕಟವಾದ ಮೇಲೆ ಆ ಕೃತಿಯಲ್ಲಿ ಜಾತಿಯ ಪ್ರಶ್ನೆಗಳ ಕುರಿತಾದ ಅಂಬೇಡ್ಕರರ ವಿಚಾರಗಳನ್ನು ಅವರು ಪ್ರಶ್ನಿಸುತ್ತಾರೆ. ಅಸ್ಪೃಶ್ಯತೆಯ ಬಗ್ಗೆ ಅವರು ಅಂಬೇಡ್ಕರರೊಡನೆ ವಾದಿಸದಿದ್ದರೂ ಅವರ ಸತ್ಯಸಂಧತೆ ಮೇಲು ಜಾತಿಯ ಬ್ರಾಹ್ಮಣರೊಂದಿಗೆ ಅವರು ತೀವ್ರವಾದ ವಾಗ್ವಾದ ನಡೆಸುತ್ತದೆ. ಹಿಂದೂ ಶಾಸ್ತ್ರಗಳಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಯಾವ ಪ್ರಮಾಣವಿದೆ ಎಂದು ಗಾಂಧಿ ಪ್ರಶ್ನಿಸುತ್ತಾರೆ. ಈ ವಿಷಯದಲ್ಲಿ ಸಂಪ್ರದಾಯವಾದಿ ನಾಯಕರೊಂದಿಗೆ ವಾದಿಸಲು ಗಾಂಧಿ ವಾದ-ವಿವಾದದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇಂಥದೊಂದು ವಾಗ್ವಾದ ೧೯೨೪ರ ವೈಕೋಂ ಸತ್ಯಾಗ್ರಹದಲ್ಲಿ ನಡೆದಿತ್ತು. ಅಸ್ಪೃಶ್ಯತೆಯ ನಿರ್ಮೂಲನೆಯ ಪರವಾಗಿ ಜನಾಭಿಪ್ರಾಯ ಮೂಡಿಸಲು ಗಾಂಧಿ ಸಂಸದೀಯ ವಿಧಾನವನ್ನು ಅಳವಡಿಸಿಕೊಳ್ಳುತ್ತಾರೆ. ಒಂದು ಹಂತದಲ್ಲಿ ದಕ್ಷಿಣ ಭಾರತದ ಸವರ್ಣೀಯರು ಅಸ್ಪೃಶ್ಯತಾ ವಿರೋಧೀ ಅಭಿಯಾನವನ್ನು ಒಪ್ಪದೆ ಹೋದಾಗ ಅವರು ರಾಜಗೋಪಾಲಾಚಾರಿ ಅವರೊಂದಿಗೆ ಸೇರಿ ಕಲ್ಲಿಕೋಟೆಯಲ್ಲಿ ಒಂದು ದೇವಸ್ಥಾನದೊಳಗೆ ದಲಿತರಿಗೆ ಪ್ರವೇಶ ಕೊಡಿಸುವ ಸಲುವಾಗಿ ಜನಾಭಿಪ್ರಾಯ ಸಂಗ್ರಹಣೆಯ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಈ ಪ್ರಯತ್ನದಲ್ಲಿ ಗಾಂಧಿಯವರ ಪರವಾಗಿ ಜನಾಭಿಪ್ರಾಯ ಮೂಡಿತ್ತು. ಆದರೆ ತಮ್ಮದೇ ತವರುನೆಲವಾದ ಗುಜರಾತ್‌ನಲ್ಲಿ ಗಾಂಧಿಗೆ ಇದೇ ಪ್ರಯತ್ನ ಫಲ ಕೊಡಲಿಲ್ಲ. ಒಮ್ಮೆ ಮೇಲ್ಜಾತಿಯ ಗಾಂಧಿವಾದಿಯೊಬ್ಬರು ಸಾರ್ವಜನಿಕ ಸಭೆಯಲ್ಲಿ ಅಸ್ಪೃಶ್ಯತೆಯ ಬಗ್ಗೆ ಭಾಷಣ ಮಾಡಲು ಗಾಂಧಿಯನ್ನು ಆಹ್ವಾನಿಸಿದಾಗ ಗಾಂಧಿ ವೇದಿಕೆಯನ್ನೇರಿ ಭಾಷಣ ಮಾಡಲು ನಿರಾಕರಿಸಿದ್ದರು. ಅಂದಿನ ಸಭೆಯಲ್ಲಿ ಸ್ಥಳೀಯ ಸಮಿತಿಯವರು ಅಸ್ಪೃಶ್ಯರನ್ನೊಳಗೊಳ್ಳದೆ ಕಡೆಗಣಿಸಿದ್ದು ಅವರ ಈ ಪ್ರತಿಭಟನೆಗೆ ಕಾರಣವಾಗಿತ್ತು. ಅಸ್ಪೃಶ್ಯರನ್ನು ಒಳಗೊಂಡೇ ಸಭೆ ನಡೆಸಬೇಕು ಎಂಬ ತಮ್ಮ ನಿಲುವನ್ನು ಕೈಯೆತ್ತುವ ಮೂಲಕ ಸಮರ್ಥಿಸಲು ಸೂಚಿಸಿದಾಗ ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕರು ಗಾಂಧಿಯ ಪ್ರಸ್ತಾಪದ ವಿರುದ್ಧ ತಮ್ಮ ಮತ ಚಲಾಯಿಸಿದ್ದರು. ಮೇಲ್ಜಾತಿಯವರ ಈ ತೀರ್ಮಾನವನ್ನು ಒಪ್ಪಿಕೊಂಡ ಗಾಂಧಿ ಅಸ್ಪೃಶ್ಯರೊಂದಿಗೆ ಸೇರಿ ಅವರನ್ನು ಮಾತ್ರ ಉದ್ದೇಶಿಸಿ ಮಾತನಾಡಿದರು.

ಗಾಂಧಿಯ ಸತ್ಯಸಂಧತೆಯ ಬಗ್ಗೆ ಹೇಳುವುದಾದರೆ ಅಸ್ಪೃಶ್ಯತೆಯ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಲು ಅವರು ಅಂಬೇಡ್ಕರರಿಗೆ ಎಂದೂ ಸೂಚಿಸಲಿಲ್ಲ. ಅಂಬೇಡ್ಕರರ ಜಾತಿ ವಿನಾಶ ಕೃತಿಯ ಬಗ್ಗೆ ಕೆಲವು ತಕರಾರುಗಳನ್ನು ಎತ್ತಿದ್ದು ಬಿಟ್ಟರೆ ಗಾಂಧಿ, ಅವರ ಮತ್ತು ಅವರ ಸಮುದಾಯದ ಸಾಮಾಜಿಕ ಅನುಭವಗಳನ್ನು ಎಂದೂ ನಿರಾಕರಿಸಲಿಲ್ಲ. ಸತ್ಯಸಂಧತೆ ಎಂದರೆ ಯಾವುದೇ ಬೌದ್ಧಿಕತೆಯ ಛದ್ಮದ ಹಿಂದೆ ಮರೆಯಾಗದೆ ಅಸ್ಪೃಶ್ಯತೆಯ ವಾಸ್ತವದ ವಿರುದ್ಧ ಸ್ಪಷ್ಟ ನೈತಿಕ ನಿಲುವನ್ನು ರೂಪಿಸಿಕೊಂಡು ಆ ನಿಲುವನ್ನು ಕಾರ್ಯಾಚರಣೆಗೆ ತರುವುದಾಗಿದೆ, ಗಾಂಧಿಯ ಸತ್ಯಸಂಧತೆ ಎಂದರೆ ಅಂಬೇಡ್ಕರರ ಅನುಭವದ ಎದುರು ವಿನೀತನಾಗುವ ನೈತಿಕ ಸಾಮರ್ಥ್ಯ ಬೆಳೆಸಿಕೊಳ್ಳುವುದ ಎಂದರ್ಥ. ಗಾಂಧಿಯ ಈ ಮೌಲ್ಯಗಳನ್ನು ಜೋಸೆಫ್ ಲೆಲಿವೆಲ್ಡ್ ಅವರು ಪರಿಣಾಮಕಾರಿಯಾಗಿ ವರ್ಣಿಸುತ್ತಾರೆ. ಅವರು ಗಾಂಧಿಯ ಈ ಸಾಲುಗಳನ್ನು ಉದ್ಧರಿಸುತ್ತಾರೆ: "ಅಂಬೇಡ್ಕರ್, ಉಳಿದ ಪ್ರತಿಯೊಬ್ಬ ಅಸ್ಪೃಶ್ಯನಂತೆ, ನನ್ನ ವಿರುದ್ಧ ತಿರುಗಿ ಬೀಳುವ ಎಲ್ಲ ಅಧಿಕಾರ ಹೊಂದಿದ್ದಾರೆ. ಅವರು ಹಾಗೇನಾದರೂ ಮಾಡಿದಲ್ಲಿ ನಾನು ಹಸನ್ಮುಖನಾಗಿಯೇ ಅವರ ಪ್ರತಿರೋಧ ಸ್ವೀಕರಿಸುತ್ತೇನೆ". ಈ ಮಾತನ್ನು ಉಲ್ಲೇಖಿಸುತ್ತಾ ಅವರು "ಗಾಂಧಿಯ ಈ ನಗು, ಹಸನ್ಮುಖ ಒಂದು ಮುಖವಾಡವಲ್ಲ, ಅವರೊಳಗಿನ ಮಾನವತೆಯ ಅಳತೆಗೋಲಾಗಿದೆ" ಎಂದು ಬರೆದಿದ್ದಾರೆ. ಗಾಂಧಿಯ ಪ್ರಕಾರ ವಿನಯಶಾಲಿಯಾಗುವ ನೈತಿಕ ಸಾಮರ್ಥ್ಯವೆಂದರೆ ನಮ್ಮೊಂದಿಗೆ ನಾವು ಸತ್ಯಸಂಧರಾಗಿರುವುದು ಎಂದರ್ಥ. ನಮ್ಮನ್ನು ನಾವು ಕಂಡುಕೊಳ್ಳುವ ಬಗೆ ಹೇಗೆ ಎಂದು ಅವರು ಆಳವಾಗಿ ಯೋಚಿಸಿದ್ದರು. ತನ್ನ ವಿನಯಭಾವ ಒಂದು ಮಹಾತ್ಯಾಗ ಎಂದು ಅವರು ಭಾವಿಸಿರಲಿಲ್ಲ ಬದಲಾಗಿ ನನಗೆ ನಾನು ಸತ್ಯವಂತನಾಗಿ ಇರುವುದು ಎಂದು ಅವರು ತಿಳಿದಿದ್ದರು. ಇದನ್ನೇ ಸತ್ಯದಿಂದ ಸತ್ಯಕ್ಕೆ ಬೆಳೆಯುವುದು ಎಂಬ ಮಾತಿನ ಅರ್ಥವಾಗಿದೆ. ಅವರೊಳಗಿನ ಸತ್ಯ ನಿರಂತರವಾಗಿ ವಿಸ್ತಾರವಾಗುತ್ತಿತ್ತು, ಇದು ಅಂಬೇಡ್ಕರರ ವಿಮೋಚನಾ ಮಾರ್ಗವೂ ಸಹ ಆಗಿತ್ತು.

ಗಾಂಧಿ, ಅಂಬೇಡ್ಕರ್ ಒಂದೇ ವಂಶವಾಹಿನಿಗೆ ಸೇರಿದವರು:

ಗಾಂಧಿ ಅಂಬೇಡ್ಕರರಿಗೆ ಸೇರುವ ಚಿಂತಕರಾಗಿದ್ದಾರೆ ಎಂಬುದನ್ನು ಅರಿಯಲು ಬಹುಸಾಂಸ್ಕೃತಿಕತೆ/ಸಾಪೇಕ್ಷವಾದದ ತತ್ವಗಳು ನಮ್ಮ ನೆರವಿಗೆ ಬರುವುದಿಲ್ಲ. ಅಂಬೇಡ್ಕರರ ಕೃತಿಗಳನ್ನು ಸೂಕ್ಷ್ಮವಾಗಿ ಓದಿದರೆ ವಂಶವಾಹಿನಿಮೂಲ ವಿಧಾನದ(ಜಿನಿಯಲಾಜಿಕಲ್) ಮೂಲಕವೇ ಇದನ್ನು ಮನಗಾಣಬಹುದು ಮತ್ತು ಅಂಬೇಡ್ಕರ್ ಹೇಗೆ ಗಾಂಧಿಯನ್ನು ತನ್ನೊಳಮಾಡಿಕೊಳ್ಳುವುದಕ್ಕಾಗಿ ಒಂದು ನೀತಿಸಂಹಿತಾತ್ಮಕ ಒಳನೋಟಕ್ಕೆ ಬಾಧ್ಯರಾದರು ಎಂಬುದು ನಮ್ಮ ಅರಿವಿಗೆ ಬರುತ್ತದೆ.

ಒಬ್ಬ ತತ್ವಪ್ರತಿಪಾದಕ ನಾಯಕರಾದ ಅಂಬೇಡ್ಕರ್‌ರಂತಹವರಿಗೆ ಒಂದು ತತ್ವ ಭರವಸೆದಾಯಕವೆನಿಸುವುದು ಅದು ಬೌದ್ಧಿಕವಾಗಿಮುಂಚೂಣಿಯಲ್ಲಿದೆ ಅಥವಾ ಆದರ್ಶಪ್ರಾಯವಾಗಿದೆ, ಆಕರ್ಷಕವಾಗಿದೆ ಎಂಬಿತ್ಯಾದಿ ಕಾರಣದಿಂದಲ್ಲ, ಅಂತಹ

ತತ್ವದಲ್ಲಿ ಆಚರಣಾರ್ಹ ಸಾಮಾಜಿಕ ಸತ್ಯದ ಒಂದು ಅಂಶವಿದೆ ಎಂಬ ಕಾರಣಕ್ಕೆ.. ತತ್ವದ ಈ ನೈತಿಕ ಗುಣದಿಂದಾಗಿ ಅದು ವಿಶ್ವಾಸಾರ್ಹ ಎನಿಸುತ್ತದೆ. ಅಸ್ಪೃಶ್ಯತೆಯಂತಹ ಅಮಾನವೀಯತೆಯ ಆಚರಣೆಯನ್ನು ಪ್ರಶ್ನಿಸುವ ಗಾಂಧಿಯಲ್ಲಿ ಈ ತತ್ವ ಸತ್ಯದ ಒಂದು ಅಂಶವನ್ನು ಅವರು ಕಂಡುಕೊಂಡಿದ್ದರು. ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಸಹ ಅಸ್ಪೃಶ್ಯತೆ ಮೇಲ್ವರ್ಗದವರಿಂದ ಸೃಷ್ಟಿಯಾದ ಮತ್ತು ಕೆಳವರ್ಗದವರು ಅನಾದಿಕಾಲದಿಂದಲೂ ಪ್ರಶ್ನಾತೀತವಾಗಿ ಒಪ್ಪಿಕೊಂಡು ಬಂದಿರುವ ಒಂದು ಸಾಮಾಜಿಕ ಪಿಡುಗು ಎಂದು ನಂಬಿದ್ದರು. ಈ ಸತ್ಯವನ್ನು ಇತಿಹಾಸದ ಒಳಗಡೆಯೇ ಮೀರಬೇಕು ಎಂದು ಅವರು ನಂಬಿದ್ದರು. ಈ ಅರ್ಥದಲ್ಲಿ, ಅಸ್ಪೃಶ್ಯರನ್ನು ಹರಿಜನರೆಂದು ಕರೆದರೆ ಅವರನ್ನು ಇತಿಹಾಸದಿಂದ ಆಚೆಗೆ ಇರಿಸಿದಂತಾಗುತ್ತದೆ. ಗಾಂಧಿ ಸವರ್ಣೀಯರ ಮಿತಿಗಳನ್ನು ಪರೀಕ್ಷಿಸಿದರೇನೋ ನಿಜ, ಜೊತೆಗೆ ಅಸ್ಪೃಶ್ಯರ ವಿರುದ್ಧ ನೇರವಾದ ರಾಜಕೀಯ ಮುಖಾಮುಖಿಯಾಗದಂತೆ ಅವರನ್ನು ಸಂರಕ್ಷಿಸಿದರು. ಈ ಸಂದರ್ಭದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಪರಸ್ಪರರನ್ನು ಗುಣಮುಖರನ್ನಾಗಿಸಿಕೊಳ್ಳಲು ಐತಿಹಾಸಿಕ ಚಳವಳಿಗಳೊಳಗೆ ಮುಳುಗಿದರು ಎಂಬ ಡಿ.ಆರ್. ನಾಗರಾಜ್ ಅವರ ಮತುಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಅಸ್ಪೃಶ್ಯತೆಯ ಚರಿತ್ರೆಯ ವಿರುದ್ಧದ ಹೋರಾಟದಲ್ಲಿ, ಅಸ್ಪೃಶ್ಯತೆ ಆಚರಿಸುವವರನ್ನು ಪ್ರಶ್ನಿಸುವುದರಲ್ಲಿ ಮತ್ತು ಹಿಂದೂ ಶಾಸ್ತ್ರಗ್ರಂಥಗಳನ್ನು ಪರೀಕ್ಷೆಗೆ ಒಡ್ಡುವಲ್ಲಿ ಪ್ರಮಾಣಕ ತೀರ್ಮಾನವನ್ನು ನೀಡುವ ನೈತಿಕ ಸಾಮರ್ಥ್ಯ ಗಾಂಧಿಗಿತ್ತು ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಸ್ಪೃಶ್ಯತೆಯ ವಿರುದ್ಧದ ಗಾಂಧಿಯ ಐತಿಹಾಸಿಕ ತೀರ್ಮಾನಕ್ಕೂ ಸಹ ನೈತಿಕ ತಳಹದಿ ಇತ್ತು ಎಂಬುದನ್ನು ಸಹ ನಾವು ಒಪ್ಪಬೇಕಾಗುತ್ತದೆ. ಗಾಂಧಿ ಅಂಬೇಡ್ಕರರಂತೆ ಸಾಮಾಜಿಕ ಅವಮಾನಗಳನ್ನು ಅನುಭವಿಸಿದವರಲ್ಲ, ಆದರೆ ಅಂತಹ ಸನ್ನಿವೇಶವನ್ನು ಸ್ಮರಿಸಿಕೊಂಡು ಅವರು ನೈತಿಕವಾಗಿ ಸಂಕಟ ಪಟ್ಟವರು. ಅಂಬೇಡ್ಕರ್ ಅವರ ನೈತಿಕತೆಯನ್ನು ಗಾಂಧಿಯ ಸಮಕಾಲೀನರಾದ ಇತರ ರಾಷ್ಟ್ರೀಯವಾದೀ ಚಿಂತಕರುಗಳೊಂದಿಗೆ ಹೋಲಿಸಿದಾಗ ಅಂಬೇಡ್ಕರ್ ಅವರ ವಿಚಾರಗಳ ಮಹತ್ವ ನಮಗೆ ಮನವರಿಕೆಯಾಗುತ್ತದೆ. ಈ ಚಿಂತಕರುಗಳು ಜಾತಿ ಪದ್ಧತಿಗೆ ಅಸ್ಪೃಶ್ಯತೆಗೆ ಒಂದು ಸಕಾರಾತ್ಮಕ ಆಯಾಮ ನೀಡಿದವರಾಗಿದ್ದರು ಅಥವಾ ಆ ಕುರಿತು ಸಂದಿಗ್ಧ ನಿಲುವನ್ನು ಹೊಂದಿದ್ದರು. ವಂಶಾನುಕ್ರಮದಲ್ಲಿ ನೋಡುವುದಾದರೆ ಗಾಂಧಿ, ಬಾಲಗಂಗಾಧರ ತಿಲಕ್ ಮತ್ತು ಜವಾಹರಲಾಲ್ ನೆಹರೂರನ್ನು ಒಳಗೊಂಡಂತೆ, ತಮ್ಮ ಸಮಕಾಲೀನರಿಗಿಂತ ಭಿನ್ನರಾಗಿ ಕಾಣಿಸುತ್ತಾರೆ. ಗಾಂಧಿಯವರ ಅಹಿಂಸಾ ಸತ್ಯಾಗ್ರಹ, ಬೌದ್ಧಧರ್ಮದ ಮೂಲದ್ದಾಗಿದ್ದು ಅಹಿಂಸೆ ಎಂಬ ನೈತಿಕ ತಳಹದಿ ಹೊಂದಿದೆ ಎನ್ನುವ ಅಂಬೇಡ್ಕರ್, ಗಾಂಧಿಯ ಈ ಸತ್ಯಾಗ್ರಹ, ತಿಲಕರ ಸಕ್ರಿಯ ಪ್ರತಿರೋಧ ಮಾರ್ಗಕ್ಕಿಂತ ಹೆಚ್ಚು ಉತ್ತಮವಾದುದು ಎಂದು ವಾದಿಸುತ್ತಾರೆ "ನಾವು ದ್ವೇಷ ಮತ್ತು ಕೋಪವನ್ನು ಶಾಂತಿ ಮಾರ್ಗದಿಂದ ಗೆಲ್ಲಬೇಕು, ಸತ್ಯದ ಬಲದಿಂದ ಅಸತ್ಯವನ್ನು ಪತ್ತೆ ಮಾಡಬೇಕು" ಎಂಬ ಬುದ್ಧನ ಬೋಧನೆಗಳ ಮೇಲೆ ಬುದ್ಧನ ನೈತಿಕತೆ ನಿಂತಿದೆ ಎಂದು ಅಂಬೇಡ್ಕರ್ ವ್ಯಾಖ್ಯಾನಿಸುತ್ತಾರೆ. ತನಗೆ ಗಾಂಧಿ ತಿಲಕರಿಗಿಂತಲೂ ಸಮೀಪದವರೆಂದು ಅಂಬೇಡ್ಕರ್ ಹೇಳಿದರೂ ಅವರು ಗಾಂಧಿಯೊಂದಿಗಿನ ತಮ್ಮ ತಕರಾರುಗಳನ್ನು ವ್ಯಕ್ತಪಡಿಸದೆ ಇರಲಿಲ್ಲ. ಗಾಂಧಿ ಬುದ್ಧನ ಬೋಧನೆಗಳನ್ನು ಪಾಲಿಸಲು ಸೋತರು ಎಂದು ಅಂಬೇಡ್ಕರ್ ವಾದಿಸುತ್ತಾರೆ. ಗಾಂಧಿ ಅಹಿಂಸೆ ಎಂಬ ಪರಮಮೌಲ್ಯವನ್ನು ಕಡ್ಡಾಯವಾದ ನಿಯಮವನ್ನಾಗಿ ಮಾಡಿದ್ದನ್ನು ಅವರು ಆಕ್ಷೇಪಿಸುತ್ತಾರೆ. ಆದಾಗ್ಯೂ ಈ ಒಂದು ಕಾರಣ ಗಾಂಧಿಯನ್ನು ಅಂಬೇಡ್ಕರ್ ಒಳಗು ಮಾಡಿಕೊಳ್ಳುವುದರಲ್ಲಿ ಸಮಸ್ಯೆಯಾಗಲಿಲ್ಲ. ಇದನ್ನು ವಿವರಿಸಲು ಅಂಬೇಡ್ಕರ್ ನೆಹರೂ ಅವರ ಉದಾಹರಣೆ ನೀಡುತ್ತಾರೆ. ನೆಹರೂ ಅಸ್ಪೃಶ್ಯತೆಯ ಪಿಡುಗನ್ನು ಜಾಗತಿಕವಾದ ದುಡಿಮೆಗಾರರ ಪ್ರವರ್ಗದೊಳಗೆ ಸಮಾಹಿತಗೊಳಿಸುತ್ತಾರೆ ಗಾಂಧಿಯಾದರೋ ಅಸ್ಪೃಶ್ಯತೆಯನ್ನು ಸಾಮಾಜಿಕ ಪ್ರಶ್ನೆಯನ್ನಾಗಿ ಪರಿಭಾಷಿಸುತ್ತಾರೆ. ಅಸ್ಪೃಶ್ಯತೆಯ ಕುರಿತಾದ ಗಾಂಧಿ ಮತ್ತು ನೆಹರೂರ ನಡುವಿನ ಈ ಅಜಗಜಾಂತರ ವ್ಯತ್ಯಾಸವನ್ನು ಗುರುತಿಸುವ ಅಂಬೇಡ್ಕರ್ ನೆಹರೂ ಗಾಂಧಿಯಂತೆ ಅಸ್ಪೃಶ್ಯತೆ ಹಿಂದೂಧರ್ಮದ ಒಂದು ಕಪ್ಪು ಚುಕ್ಕೆ ಎಂದು ಭಾವಿಸಲಿಲ್ಲ ಎಂದು ಹೇಳುತ್ತಾರೆ. ಹೀಗೆ ಅಂಬೇಡ್ಕರ್ ತಮ್ಮ ಸಾಮಾಜಿಕ ದೃಷ್ಟಿಕೋನಕ್ಕೆ ನೆಹರೂಗಿಂತ ಗಾಂಧಿ ಹೆಚ್ಚು ಸಮೀಪದಲ್ಲಿ ಇದ್ದಾರೆಂದು ಭಾವಿಸುತ್ತಾರೆ.


ಕೊನೆಯ ಮಾತು:

ಗಾಂಧಿ ಮತ್ತು ಅಂಬೇಡ್ಕರ್ ಬಗ್ಗೆ ಬರೆಯುವ ಮತ್ತು ಮಾತನಾಡುವ ನನ್ನ ಆಸಕ್ತಿ ತುಂಬ ಹಳೆಯದು. ಇದು ಬರೀ ವಿದ್ವತ್ತಿಗೆ ಸಂಬಂಧಿಸಿದ ವಿಷಯವಲ್ಲ ಅಥವಾ ಅವರಿಬ್ಬರ ಬರವಣಿಗೆಗಳ ಬಗ್ಗೆ ಯಾವುದೇ ಆಕರ್ಷಣೆ ಮೂಡಿಸುವ ಉದ್ದೇಶದ್ದೂ ಅಲ್ಲ. ಗಾಂಧಿ, ಅಂಬೇಡ್ಕರ್ ಹಾಗೂ ನನಗೆ ಸಾಮಾನ್ಯವಾಗಿರುವ ವಿಧಿಯನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದ ಒಂದು ತಾತ್ವಿಕ ಜಿಜ್ಞಾಸೆಯಾಗಿದೆ. ಭಾರತೀಯ ಸಂದರ್ಭದಲ್ಲಿ ನಮ್ಮ ಭವಿಷ್ಯ ಸಾಮಾಜಿಕ ಸಂಬಂಧಗಳನ್ನು ಬದಲಾಯಿಸುವುದರೊಂದಿಗೆ ಸಂಬಂಧ ಹೊಂದಿದೆ. ಗಾಂಧಿಯ ಉದ್ದೇಶ ಜಾತಿಯಲ್ಲದಿದ್ದರೂ ಅಸ್ಪೃಶ್ಯತೆಯನ್ನು ಇಲ್ಲವಾಗಿಸಬೇಕು ಎಂಬುದಾಗಿತ್ತು. ತಮ್ಮ ವಿಚಾರಗಳನ್ನು ಅಸ್ಪೃಶ್ಯತೆಗೆ ಮಾತ್ರ ಸೀಮಿತಗೊಳಿಸದೆ ಒಟ್ಟಾರೆ ಜಾತಿ ಪದ್ಧತಿಯ ಮೇಲೆ ದಾಳಿ ಮಾಡುವ ಮೂಲಕ ಈ ಉದ್ದೇಶವನ್ನು ಅಂಬೇಡ್ಕರ್ ಇನ್ನೂ ತೀವ್ರಗೊಳಿಸಿದರು. ಏಕೆಂದರೆ ಅಸ್ಪೃಶ್ಯತೆ ಜಾತೀಯತೆಯ ವಿಸ್ತರಣೆಯಾಗಿದೆ. ವಿಧಿಯನ್ನು ಬದಲಾಯಿಸುವ ಪ್ರಯತ್ನದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ನಮಗೆ ಅತ್ಯಗತ್ಯ ಚಿಂತಕರಂತೆ ಕಾಣಿಸುತ್ತಾರೆ. ಅಂಬೇಡ್ಕರರದು ಬೌದ್ಧಿಕ ಮತ್ತು ರಾಜಕೀಯ ಪ್ರಯತ್ನಗಳೆರಡೂ ಆಗಿದ್ದವು. ಜಾತಿಗಳೊಂದಿಗೆ ಗುರುತಿಸಿಕೊಂಡಿದ್ದ ಸಾಮಾಜಿಕರನ್ನು ಪ್ರಶ್ನಿಸುವ ಅಂಬೇಡ್ಕರ್ ಐತಿಹಾಸಿಕ ಮಹತ್ವ ಪಡೆದುಕೊಳ್ಳುತ್ತಾರೆ. ಈ ಪ್ರಯತ್ನದಲ್ಲಿ ಅವರು ಗಾಂಧಿಯ ನೈತಿಕತೆಗೆ ಮನ್ನಣೆ ನೀಡುತ್ತಾರೆ. ಅಂಬೇಡ್ಕರರ ಗಾಂಧಿಯ ವಿಮರ್ಶೆಯು ಹಿಂದೂಧರ್ಮದ ಜಾತೀಯತೆ ಎಂಬ ಪಿಡುಗಿನತ್ತ ಅವರು ಕಣ್ಣು ಹಾಯಿಸಲಿ ಎಂಬ ಆಶಯವಿತ್ತು. ಇವರು ಮನವೊಲಿಕೆಯ ಮೂಲಕ ಮತ್ತು ಬೌದ್ಧಧರ್ಮಕ್ಕೆ ಪರಿವರ್ತನೆಯಾಗುವ ಇಚ್ಛೆಯ ಮೂಲಕ ಗಾಂಧಿಯನ್ನು ಆ ನಿಟ್ಟಿನಲ್ಲಿ ಯೋಚಿಸಲು ಪ್ರೇರೇಪಿಸಿದರು. ಅಂಬೇಡ್ಕರ್‌ಗೆ ಮನವೊಲಿಕೆಯಲ್ಲಿ ಮತ್ತು ಮತಪರಿವರ್ತನೆಯಲ್ಲಿ ಭರವಸೆ ಇತ್ತು.

ಅಂಬೇಡ್ಕರರ ವಿಮೋಚನಾ ಮಾರ್ಗದಲ್ಲಿ ಹಲವು ನೈತಿಕ ಪ್ರಶ್ನೆಗಳಿಗೆ ಉತ್ತರಗಳಿವೆ. ಸಮಾಜದ ವ್ಯವಸ್ಥೆಗೆ ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು ಎಂದು ಯೋಚಿಸುವ ಸವರ್ಣೀಯ ಹಿಂದೂಗಳು ಇಂತಹ ವಿಷಮ ಯೋಚನೆಯಿಂದ ಏಕೆ ಹೊರಬರುತ್ತಿಲ್ಲ ಎಂಬುದು ಅಂಬೇಡ್ಕರರ ಮೂಲ ಪ್ರಶ್ನೆಯಾಗಿದೆ. ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂಬ ವಿಂಗಡಣೆಯ ಮೂಲಕಾರಣವಾದ ಜಾತೀಯತೆ ಭಾರತೀಯ ಸಮಾಜವನ್ನು ಉದ್ದುದ್ದವಾಗಿ ಮತ್ತು ಅಗಲಗಲವಾಗಿ ವಿಭಾಗ ಮಾಡಿದೆ. ಈ ಪಿಡುಗನ್ನು ನೈತಿಕವಾಗಿ ಮನವೊಲಿಸುವ ಮೂಲಕ ಬಗೆಹರಿಸಬಹುದಾಗಿದೆ ಎಂದು ಅವರು ನಂಬಿದ್ದರು. ಈ ನಿಟ್ಟಿನಲ್ಲಿ ಗೋಪಾಲ ಕೃಷ್ಣ ಗಾಂಧಿಯವರೊಂದಿಗಿನ ನನ್ನ ವೈಯಕ್ತಿಕ ಭೇಟಿ ಮತ್ತು ಅವರ ಸಲಹೆಗಳು ನನ್ನನ್ನು ಪ್ರಭಾವಿಸಿವೆ ಎಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಅವರ ಸಲಹೆಗಳನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಈ ಕೆಳಗಿನ ಪ್ರಶ್ನೆಗಳನ್ನು ಮುಂದಿಡುತ್ತಿದ್ದೇನೆ ಮತ್ತು ಆ ಪ್ರಶ್ನೆಗಳಿಗೆ ಹಂಗಾಮಿ ಉತ್ತರಗಳನ್ನೂ ನೀಡುತ್ತಿದ್ದೇನೆ: ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ಸಾಮೂಹಿಕ ಪ್ರಯತ್ನ ಏನಾಗಿತ್ತು? ಭಾರತವನ್ನು ವಿವಿಧ ಅಧಿಕಾರಶಕ್ತಿಗಳಿಂದ ಬಿಡುಗಡೆಗೊಳಿಸುವುದು ಆಗಿತ್ತೋ ಅಥವಾ ಭಾರತವನ್ನು ಅದರ ಸಕಾರಾತ್ಮಕ ಶಕ್ತಿಯ ಮೂಲಕ, ಉದಾಹರಣೆಗೆ ಇಲ್ಲಿನ ಬೌದ್ಧ ಧರ್ಮದ ಮೂಲಕ ಪುನರುಜ್ಜೀವಿಸುವುದಾಗಿತ್ತೋ? ಅವರಿಬ್ಬರ ಉದ್ದೇಶ ಪುನರುಜ್ಜೀವಿಸುವುದೇ ಆಗಿದ್ದಲ್ಲಿ, ಅದನ್ನು ಸಾಕಾರಗೊಳಿಸುವ ಬಗೆ ಹೇಗೆ? ಪ್ರಾಯೋಗಿಕ ನೈತಿಕತೆಯ ಮೂಲಕವೋ ಅಥವಾ ಪರಿಕಲ್ಪನಾತ್ಮಕ ರಾಜಕಾರಣದ ಮೂಲಕವೋ? ಮೇಲ್ನೋಟಕ್ಕೆ ಹೇಳುವುದಾದರೆ ಇಬ್ಬರೂ ನೈತಿಕ ಮಾರ್ಗವನ್ನೇ ಮೊರೆ ಹೋಗುತ್ತಾರೆ. ರಾಜಕೀಯ ಮಾರ್ಗ ತುಂಬ ತುಂಬ ಪ್ರಾಥಮಿಕ ಪರಿಕಲ್ಪನೆಯಾಗಿದೆ.

(ಕನ್ನಡಾನುವಾದ : **ಡಾ. ಟಿ.ಎನ್. ವಾಸುದೇವ ಮೂರ್ತಿ**)

(**ವಿ.ಸೂ:** ಈ ಲೇಖನವು 'ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯ ೨೦೧೭ರ ಏಪ್ರಿಲ್ ೧೫ರ ಸಂಚಿಕೆಯಲ್ಲಿನ 'ಎತಿಕ್ಸ್ ಇನ್ ಅಬೇಡ್ಕರ್ಸ್ ಕ್ರಿಟೀಕ್' ಎಂಬ ಶೀರ್ಷಿಕೆಯ ಇಂಗ್ಲಿಷ್ ಲೇಖನದ ಒಂದು ಸ್ಥೂಲ ಅನುವಾದವಾಗಿದ್ದು, ವಿವಿರವಾದ ಅಧ್ಯಯನ ಮತ್ತು ಆಧಾರಗಳಿಗಾಗಿ ಮೂಲ ಲೇಖನವನ್ನು ಗಮನಿಸಬಹುದಾಗಿದೆ)



(ಲೇಖಕ ಗೋಪಾಲ ಗುರು ಅವರು ನವ ದೆಹಲಿಯ ಜವಾಹರಲಾಲ್ ನೆಹ್ರೂ ವಿಶ್ವವಿದ್ಯಾಲಯದ ರಾಜಕೀಯ ಅಧ್ಯಯನಗಳ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದು, ದಲಿತ ಮತ್ತು ಮಹಿಳಾ ರಾಜಕಾರಣದ ಬಗ್ಗೆ ಮಹತ್ವದ ಕೃತಿಗಳನ್ನು ರಚಿಸಿರುವ ವಿದ್ವಾಂಸರಾಗಿದ್ದಾರೆ)

ಗಾಂಧಿ – ಅಂಬೇಡ್ಕರ ವಾಗ್ವಾದ ; ಒಂದು ಚಾರಿತ್ರಿಕ ನೋಟ

–ಡಾ. ನಿತ್ಯಾನಂದ ಬಿ. ಶೆಟ್ಟಿ

ಸಮಕಾಲೀನ ಎಡಪಂಥೀಯ ರಾಜಕಾರಣದ ಸೌಲಭ್ಯಕ್ಕಾಗಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಒಟ್ಟಿಗೆ ತರಲು ಅನುಕೂಳವಾಗುವಂತಹ ವಿಶ್ಲೇಷಣೆ, ವಾದಗಳನ್ನು ಮಂಡಿಸುತ್ತಿರುವ ವಿದ್ವಾಂಸರು ತಮ್ಮ ಈ ವಿಶ್ಲೇಷಣೆ–ವಾದ ಮಂಡನೆಗಳಿಗೆ ಆಧಾರವಾಗಿ ನೀಡುವ ಕಾರಣವೆಂದರೆ, ರಾಜಕಾರಣವನ್ನು ಚಲನಶೀಲವಾಗಿ ಗ್ರಹಿಸಲು ಚರಿತ್ರೆಯನ್ನು ಮೀರಿ ಯೋಚಿಸಬೇಕಾಗುತ್ತದೆ ಎಂಬುದು. ಆದರೆ ಚರಿತ್ರೆ, ವಿಶೇಷವಾಗಿ ನಮ್ಮ ಕಾಲುಗಳಿಗಿನ್ನೂ ತೊಡರಿಕೊಂಡೇ ಇರುವ ಇತ್ತೀಚಿನ ಚರಿತ್ರೆ ಬಹಳ ಮೂರ್ತ ವಿವರಗಳಲ್ಲೇ ನಮಗೆ ಇಂದಿನ ವಾಸ್ತವದಲ್ಲಿ ಮುಖಾಮುಖಿಯಾಗುತ್ತಿರುವಾಗ ಚರಿತ್ರೆಯನ್ನು ಮೀರುವುದು ಅಷ್ಟು ಸುಲಭವಲ್ಲ. ಬದಲಿಗೆ ಅದನ್ನು ಅದಿದ್ದಂತೆ ಜೀರ್ಣಿಸಿಕೊಂಡು ಅದರ ಬಂಧನಗಳಿಂದ ವಿಮೋಚಿತಗೊಳ್ಳುವುದು ಹೆಚ್ಚು ವಾಸ್ತವಿಕ ಮಾರ್ಗ. ಏಕೆಂದರೆ ಚರಿತ್ರೆಯನ್ನು ಬೌದ್ಧಿಕತೆಯ ಪರಿಭಾಷೆಯಲ್ಲಿ ಮೀರಿದಷ್ಟು ಸುಲಭ–ಸುಂದರವಾಗಿ ವಾಸ್ತವದಲ್ಲಿ ನಮಗೆದುರಾಗುವ ಚರಿತ್ರೆಯ ಪ್ರತಿಧ್ವನಿಗಳ ಗದ್ದಲದ ಮಧ್ಯೆ ಮೀರುವುದು ಬಹು ಕಷ್ಟ ಮತ್ತು ಬಹು ಸಮಸ್ಯಾತ್ಮಕ. ವಿಶೇಷವಾಗಿ ಗಾಂಧಿ–ಅಂಬೇಡ್ಕರ್ ನಡುವಣ ಸಂವಾದ ವರ್ತಮಾನದ ರಾಜಕಾರಣದಲ್ಲಿ ಒಂದು ಸಂಘರ್ಷಮಯ ಆಯಾಮವಾಗಿ ಕ್ರಿಯಾಶೀಲವಾಗಿರುವಾಗ. ಹಾಗಾಗಿ ಸಂವಾದದ ಚಾರಿತ್ರಿಕ ಪಥ್ಯವನ್ನಿಟ್ಟುಕೊಂಡೇ ನಡೆಸುವ ಅದರ ವಸ್ತುನಿಷ್ಠ ವಿಶ್ಲೇಷಣೆ ಮಾತ್ರ ಈ ಸಂವಾದದಲ್ಲಿ ಅಂತರ್ನಿಹಿತವಾಗಿರುವ ಬಿಗುವುಗಳನ್ನು ವರ್ತಮಾನದ ನಮ್ಮ ಪಾಲಿಗೆ ಸಡಿಲಿಸಬಹುದು. ಇಂತಹ ಒಂದು ಪ್ರಯತ್ನವಾಗಿದೆ ಈ ಲೇಖನ–ಸಂ.



ಗಾಂಧಿ ಮತ್ತು ಅಂಬೇಡ್ಕರ್‌ರನ್ನು ಒಟ್ಟಿಗೆ ನೋಡಬಹುದಾದ ಬಹುಶಃ ಏಕೈಕ ಚಿತ್ರವಿದು : ಲಂಡನ್‌ನಲ್ಲಿ ನಡೆದ ಎರಡನೇ ದುಂಡು ಮೇಜಿನ ಪರಿಷತ್ತಿನ ಕಾರ್ಯಕಲಾಪಗಳ ಸಂದರ್ಭದಲ್ಲಿ ತೆಗೆದದ್ದು : ಗಾಂಧಿ ಕ್ಯಾಮರಾದಿಂದ ದೂರವಾದ ಸಾಲಿನಲ್ಲಿ ಕೂತಿದ್ದರೆ ಅಂಬೇಡ್ಕರ್ ಕ್ಯಾಮಾರದತ್ತ ತಿರುಗಿ ನೋಡುತ್ತಿರುವ ಭಂಗಿಯಲ್ಲಿ ಗು ರುತಿಸಬಹುದು

ಗಾಂಧಿ ಮತ್ತು ಅಂಬೇಡ್ಕರ್ ಸಂವಾದದ ವಿಷಯದಲ್ಲಿ ನಾನು ಒಬ್ಬ ತಜ್ಞ ಓದುಗನಲ್ಲ. ಓರ್ವ ಸಾಮಾನ್ಯ ಓದುಗ ಅಷ್ಟೇ. ಇತಿಹಾಸವನ್ನು ಪಥ್ಯದ ಶಿಸ್ತಿನಲ್ಲಿ ಓದುವ ಕ್ರಮ ನನ್ನಲ್ಲಿದ್ದುದು ಹತ್ತನೆಯ ತರಗತಿಯವರೆಗೆ ಮಾತ್ರ. ಆಮೇಲೆ ಕಾಲೇಜು ಹಂತದಲ್ಲಿ ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ ಕೊನೆಗೆ ವಿಶ್ವವಿದ್ಯಾನಿಲಯಕ್ಕೆ ಬಂದಾಗ ಅಲ್ಲಿ ಕನ್ನಡ ಸಾಹಿತ್ಯ ಓದಿ ಸಾಹಿತ್ಯಕ್ಕಿಂತಲೂ ಹೆಚ್ಚಿನ ಆಸಕ್ತಿಯನ್ನು ಪೊಲಿಟಿಕಲ್ ಫಿಲಾಸಫಿಗಳ ಕುರಿತು ಬೆಳೆಸಿ ನನ್ನ ಬದುಕಿನ ಬೌದ್ಧಿಕ ಒಡನಾಟವನ್ನು ರಾಜಾರಾಮ ತೋಳ್ಪಾಡಿ, ಡಿ ಎಸ್ ನಾಗಭೂಷಣ್‌ರಂತಹ ಚಿಂತಕರ ಜೊತೆ ನಡೆಸಿದ ಕಾರಣದಿಂದ ನಾನು ಇಂದು ಈ ವಿಷಯದ ಕುರಿತು ಮಾತಾಡುತ್ತಿದ್ದೇನೆ. ಹಾಗಿದ್ದರೂ ಈ ಕ್ಷೇತ್ರದಲ್ಲಿ ನನ್ನದು ಅಡ್ಡಾದಿಡ್ಡಿಯಾದ ಓದು ಮತ್ತು ಬರವಣಿಗೆ.

ಇಂದಿನ ಉಪನ್ಯಾಸಕ್ಕೆ ನಾನು ಎರಡು ಕಾರಣಗಳಿಗಾಗಿ ಡಿ. ಎಸ್. ನಾಗಭೂಷಣ್ ಅವರಿಗೆ ವಿಶೇಷ ಕೃತಜ್ಞನಾಗಿದ್ದೇನೆ. ಮೊದಲನೆಯದಾಗಿ ಅವರು ನಾನು ಈ ಎಲ್ಲ ಚರ್ಚೆಗಳನ್ನು ಮತ್ತೆ ಓದುವುದಕ್ಕೆ ನನ್ನನ್ನು ಹಚ್ಚಿದ್ದಾರೆ. ಎರಡನೆಯದು ಅವರು ನಮ್ಮ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ಜಾತಿ ಕುರಿತ ವಿಚಾರಸಂಕಿರಣದಲ್ಲಿ ಭಾಗವಹಿಸಿ 'ವರ್ಣಧರ್ಮ ಮತ್ತು ಜಾತಿ ಪದ್ಧತಿ ಕುರಿತ ಗಾಂಧಿ ಚಿಂತನೆಗಳು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ್ದರು. ಅದನ್ನೂ ಬರಹರೂಪಕ್ಕೂ ಇಳಿಸಿ ನನಗೆ ಕಳುಹಿಸಿದ್ದರು. ನಾನು ಆ ಬರವಣಿಗೆಗೂ ವಿಶೇಷ ಕೃತಜ್ಞನಾಗಿದ್ದೇನೆ.

ಗಾಂಧಿ–ಅಂಬೇಡ್ಕರ್ ಸಂವಾದವನ್ನೇ ನಾನು ಗಾಂಧಿ–ಅಂಬೇಡ್ಕರ್ ಸಂಬಂಧ ಅಂತಲೂ ಅಂದ್ಕೋಡಿದ್ದೀನಿ. ಈ ಸಂವಾದವನ್ನು ಅಧ್ಯಯನ ಮಾಡುವಾಗ ಅಥವಾ ಈ ಸಂವಾದದ ಕುರಿತು ಮಾತಾಡುವಾಗ ಮಾತಾಡುವವರು ಮತ್ತು ಕೇಳುವವರು ಬಹಳ ಎಚ್ಚರಿಕೆಯಿಂದಿರಬೇಕು. ಗಾಂಧಿ ಮತ್ತು ಅಂಬೇಡ್ಕರ್ ನಡುವೆ ನಡೆದ ಬೌದ್ಧಿಕ ಜಗಳಗಳನ್ನು ಇಂದು ಬೀದಿ ಜಗಳದ ಮಟ್ಟಕ್ಕೆ ತಂದು ಮರುನಿರೂಪಿಸಿರುವ ವರ್ತಮಾನದ ದಲಿತ ರಾಜಕಾರಣದ ಬಲಿಪಶುಗಳಾಗಿರುವವರು ನಮ್ಮಲ್ಲನೇಕರು ಇದ್ದಾರೆ. ಅವರಲ್ಲಿ ಕೆಲವರು ಗಾಂಧಿಯ ಪರ, ಇನ್ನು ಹಲವರು ಅಂಬೇಡ್ಕರ್ ಪರ, ಮತ್ತು ಕೆಲವರು ಗಾಂಧಿ–ಅಂಬೇಡ್ಕರ್ ನಡುವೆ ಸಮನ್ವಯಕಾರರಾಗಿ, ಇನ್ನೂ ಕೆಲವರು ಗಾಂಧಿಯಿಂದ ಅಂಬೇಡ್ಕರರೂ, ಅಂಬೇಡ್ಕರ್‌ರಿಂದ ಗಾಂಧಿಯವರೂ ಪರಸ್ಪರ ಪಡೆದುಕೊಂಡು ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸಿಕೊಂಡರು ಎನ್ನುವ ಪೊಲಿಟಿಕಲ್ ಕರೆಕ್ಟ್‌ವಾದಿಗಳು. ಹೀಗೆ ಇವರೆಲ್ಲರೂ ಸೇರಿಕೊಂಡು ಗಾಂಧಿ–ಅಂಬೇಡ್ಕರ್ ಸಂವಾದವನ್ನು ಹಲವು ಅರ್ಥಜಾಲಗಳು ಇಡಿಕ್ಕಿರಿದಿರುವ ಒಂದು ಸಂಕೀರ್ಣ ವಾಙ್ಮಯವಾಗಿ ನೋಡುತ್ತಿದ್ದಾರೆ. ಪ್ರಾಯಃ ಇವೆಲ್ಲದರ ಹಿಂದೆ ಭಾರತದಲ್ಲಿ ಅಕಾಡೆಮಿಕ್ ಮತ್ತು ಸಾಮಾಜಿಕ ಕ್ರಿಯಾಶೀಲ ವಲಯದಲ್ಲಿ (ಆಕ್ಟಿವಿಸ್ಟ್) ಹೆಚ್ಚೆಚ್ಚು ಮುಂಚೂಣಿಗೆ ಬರುತ್ತಿರುವ ದಲಿತತ್ವದ ರಾಜಕೀಯ ಇದೆ ಎಂದು ನಾನು ಭಾವಿಸಿದ್ದೇನೆ.

ಗಾಂಧಿ–ಅಂಬೇಡ್ಕರ್ ಸಂವಾದದ ಕುರಿತು ನಡೆದಿರುವ ಈ ಎಲ್ಲ ಸಂಕೀರ್ಣ ಜಿಜ್ಞಾಸೆಯ ಹಿಂದೆ ಮತ್ತು ಸರಳಾತಿಸರಳ ಭಾವಾವೇಶದ ಹಿಂದೆ ಒಂದು ಖಚಿತ ದೃಷ್ಟಿಕೋನ ಇದೆ. ಅದೇನೆಂದರ?, ಈ ಎಲ್ಲ ಜಿಜ್ಞಾಸೆಗಳೂ ಗಾಂಧಿಯನ್ನು ಓರ್ವ ಸವರ್ಣೀಯ ಹಿಂದೂ ಆಗಿ ಮತ್ತು ಅಂಬೇಡ್ಕರ್‌ರನ್ನು ಓರ್ವ ಅಸ್ಪೃಶ್ಯ ದಲಿತನಾಗಿ ನೋಡಿರುವುದರಿಂದ ಹುಟ್ಟಿಕೊಂಡಿವೆ. ನಾನು ನನ್ನ ಇಂದಿನ ಈ ಉಪನ್ಯಾಸದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಇದುವರೆಗೆ ನೋಡಿದ ಈ ಜನಪ್ರಿಯ ನೆಲೆಯನ್ನು ಮುರಿದು ಬೇರೆಯೇ ಆದ ಒಂದು ಹೊಸನೆಲೆಯಲ್ಲಿ ಈ ಇಬ್ಬರ ರಾಜಕೀಯ–ಸಾಮಾಜಿಕ ಚಿಂತನೆಗಳನ್ನು ನೋಡಬಹುದೇ ಎಂಬ ಪ್ರಯತ್ನವನ್ನು ಮಾಡುತ್ತಿದ್ದೇನೆ. ಗಾಂಧಿಯನ್ನು ಓರ್ವ ಸವರ್ಣೀಯ ಹಿಂದೂ ಎಂದು ನೋಡುವುದರ ಬದಲು ಆಧುನಿಕ ಪಶ್ಚಿಮದ ಕನ್ಸರ್ವೇಟಿವ್ ಆಗಿ ನೋಡಿದರೆ ಮತ್ತು ಅಂಬೇಡ್ಕರ್‌ರವರನ್ನು ಓರ್ವ ಅಸ್ಪೃಶ್ಯ ದಲಿತನಾಗಿ ನೋಡುವುದರ ಬದಲು ಆಧುನಿಕ ಪಶ್ಚಿಮದ ರ್‍ಯಾಷನಲ್ ಮಾಡರ್ನ್ ಆಗಿ ನೋಡಿದರೆ ನಮಗೆ ಹೊಸ ಬೆಳಕುಗಳು ಕಂಡಾವು. ಅದಕ್ಕಾಗಿ ಪಶ್ಚಿಮದ ತತ್ತ್ವಜ್ಞಾನಿ ನೀತ್ಸೆ ಹೇಳುವ 'ನೋಡುವ ನೋಟ ಬದಲಿಸಿದರೆ ವಾಸ್ತವದ ರೂಪ ಬದಲಾಗುತ್ತದೆ' ಎನ್ನುವ ವ್ಯಾಪಕ ಒಳನೋಟದ ಮಾತನ್ನು ನಾನು ನನ್ನ ಇಂದಿನ ಉಪನ್ಯಾಸದ ಬೀಜವಾಕ್ಯವಾಗಿ ಬಳಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನೀವು ನನ್ನ ಇಂದಿನ ಉಪನ್ಯಾಸದ ತಾತ್ತ್ವಿಕ ಚೌಕಟ್ಟು ಎಂದು ಭಾವಿಸಬಹುದು.

ಗಾಂಧಿಯವರನ್ನು ಓರ್ವ ಸವರ್ಣೀಯ ಹಿಂದೂ ಎಂದು ನೋಡುವುದರ ಬದಲಿಗೆ ಅವರು ರೂಪುಗೊಂಡ ಪಶ್ಚಿಮದ ಬೌದ್ಧಿಕ ಚಿಂತನಾಕ್ರಮದ ಮೂಲಕ

ನೋಡುವುದು ಸೂಕ್ತ. ಗಾಂಧಿಯವರು ಸ್ವತಃ ಅವರೇ ಘೋಷಿಸಿಕೊಂಡ ಹಾಗೆ ಅವರ ಬೌದ್ಧಿಕತೆ ರೂಪುಗೊಂಡಿರುವುದು ಥಾಮಸ್ ಕಾರ್ಲೈಲ್ (೧೭೯೫–೧೮೮೧) ಥೋರೋ (೧೮೧೭– ೧೮೬೨), ಜಾನ್ ರಸ್ಕಿನ್ (೧೮೧೯–೧೯೦೦), ಲಿಯೋ ಟಾಲ್‌ಸ್ಟಾಯ್ (೧೮೨೮–೧೯೧೦) ಇವರುಗಳ ಕೆಲ ಆಯ್ದ ಬರಹಗಳಿಂದ. ಈ ಎಲ್ಲ ಚಿಂತಕರು ಮೂಲಭೂತವಾಗಿ ಕ್ರಿಶ್ಚಿಯನ್ ಧರ್ಮದ ಸಾಂಪ್ರದಾಯಿಕ ನೈತಿಕವಾದಿಗಳು. ಆದರೆ ಇವರೆಲ್ಲರ ತತ್ತ್ವಚಿಂತನೆಯಲ್ಲಿ ಇವರೆಲ್ಲರಿಗಿಂತಲೂ ಪೂರ್ವದಲ್ಲಿ ಬರುವ ಪಶ್ಚಿಮದ ಸಾಂಪ್ರದಾಯಿಕ ಚಿಂತನೆಯ ಅಧ್ವರ್ಯು ಎನಿಸಿದ ಎಡ್ಮಂಡ್ ಬರ್ಕ್ (೧೭೨೯–೧೭೯೭) ಎಂಬ ಐರಿಷ್ ರಾಜಕೀಯ ತತ್ತ್ವಜ್ಞನ ಪ್ರಭಾವ ಇದೆ.

ಬರ್ಕ್ ಬದಲಾವಣೆಗಳನ್ನು ವಿರೋಧಿಸುವವನಲ್ಲ. ಬದಲಾವಣೆಗಳು ರಾತ್ರಿ ಹಗಲಾಗುವುದರೊಳಗೆ ಸಿಡಿಲಿನಂತೆ ಅಪ್ಪಳಿಸಬಾರದು. ಅವುಗಳು ಬೀಜ ಮೊಳೆತು ಸಸಿಯೊಂದು ಹೆಮ್ಮರವಾಗುವಂತೆ ನಿಧಾನವಾಗಿ ಸಂಭವಿಸಬೇಕು. ಇದು ವ್ಯವಧಾನದಿಂದ ಮತ್ತು ಸಮಾಧಾನದಿಂದ ನಡೆಯುವ ಒಂದು ಪ್ರಕ್ರಿಯೆ. ಹಾಗಾಗಿ ಬರ್ಕ್ ಅಮೇರಿಕದಲ್ಲಿ ನಡೆದ ಕ್ರಾಂತಿಯನ್ನು ಸಹಜ ಬೆಳವಣಿಗೆ ಎಂದು ಒಪ್ಪಿಕೊಳ್ಳುತ್ತಾನೆ. ಆದರೆ ಫ್ರೆಂಚ್ ಕ್ರಾಂತಿಯನ್ನು ಸಮಾಜದಲ್ಲಿ ಸಹಜವಾಗಿ ಮೂಡಿಬರದೆ ಅಪ್ಪಳಿಸಿದಂತಹ ಬೆಳವಣಿಗೆ ಎಂದು ತಿರಸ್ಕರಿಸುತ್ತಾನೆ. ಸಮಾಜದಲ್ಲಿ ಒಂದು ಬಗೆಯ ನಿಧಾನ ಲಯ ಇದೆ. ಈ ನಿಧಾನ ಲಯವನ್ನು ತಪ್ಪಿಸಿ ತ್ವರಿತ ಲಯದಲ್ಲಿ ಸಮಾಜದಲ್ಲಿ ಕೆಲವು ಘಟನೆಗಳು ನಡೆಯುವಂತೆ ಮಾಡಿದರೆ ಅದರ ಫಲಿತಾಂಶ ಅಪಕ್ವವಾಗುತ್ತದೆ. ಹಾಗಾಗಿ ಬರ್ಕ್ ಫ್ರೆಂಚ್ ಕ್ರಾಂತಿಯ ನಂತರದ ಎಲ್ಲ ಬಗೆಯ ಕ್ರಾಂತಿಕಾರಕ ಬೆಳವಣಿಗೆಗಳನ್ನು ತಿರಸ್ಕರಿಸುತ್ತಾನೆ. ನಮ್ಮ ಸಮಾಜದ ಸಾಂಪ್ರದಾಯಿಕ ಜೀವನಕ್ರಮದಲ್ಲಿ ಒಂದು ಲೋಕಜ್ಞಾನ ಇದೆ. ಅದನ್ನು ಒತ್ತಾಯದಿಂದ ಅದುಮಿ ನೀವು ಹೊರಗಿನಿಂದ ತರುವ ಯಾವುದೇ ಕ್ರಾಂತಿಕಾರಕ ಯೋಚನೆ ಅಥವಾ ಪ್ರಾಯೋಗಿಕ ಕ್ರಿಯಾಚರಣೆ ಒಂದು ಸಾವಯವ ಸಮಾಜದಲ್ಲಿ ಹಾಸುಹೊಕ್ಕಾಗಿ ಬೆಳೆದು ಬರಲು ಸಾಧ್ಯವಿಲ್ಲ. ಹಾಗಾಗಿ ಯಾವುದೇ ಕ್ರಾಂತಿ ಒಂದು ಸಾವಯವ ಸಮಾಜದ ಆಂತರ್ಯದಿಂದ ಮೊಳೆತು ಬರಬೇಕೇ ಹೊರತು ಹೊರಗಿನಿಂದ ಬಂದು ಅಪ್ಪಳಿಸುವುದರಿಂದ ಅಲ್ಲ ಎಂಬುದು ಬರ್ಕ್ ಸೇರಿದಂತೆ ಆ ಕಾಲದ ಎಲ್ಲ ಆಧುನಿಕ ಕನ್ಸರ್ವೇಟಿವ್‌ಗಳ ಚಿಂತನೆಯಾಗಿತ್ತು. ಗಾಂಧಿ ಈ ಚಿಂತನಾಕ್ರಮದ ಭಾರತೀಯ ಮಾದರಿ. ಅಂಬೇಡ್ಕರ್ ಅಧುನಿಕ ಪಶ್ಚಿಮದ ರೀಸನ್, ರಾಷನಾಲಿಟಿಯ; ಒಟ್ಟಿನಲ್ಲಿ ಹೇಳುವುದಾದರೆ ಕಾರ್ಯ–ಕಾರಣ ಸಂಬಂಧಗಳನ್ನು ಪ್ರತಿಪಾದಿಸುವ ಪಶ್ಚಿಮದ ಓರ್ವ ಆಧುನಿಕವಾದಿ. ಆಧುನಿಕತೆಯ ಚಿಂತನೆಯ ಭಾಗಗಳಾಗಿರುವ ವೈಚಾರಿಕತೆ ಮತ್ತು ಸೆಕ್ಯುಲರ್‌ವಾದ ಅಂಬೇಡ್ಕರ್ ಚಿಂತನೆಯ ಮೂಲದ್ರವ್ಯ. ಆಧುನಿಕ ವಿಚಾರವಾದದ ಕುರಿತು ಮೈಕೆಲ್ ಓಕ್‌ಶಾಟ್ ಹೇಳುವ ಈ ಮುಂದಿನ ಮಾತುಗಳನ್ನು ಅಂಬೇಡ್ಕರ್ ಚಿಂತನೆಗಳೊಂದಿಗೆ ಹೋಲಿಸಿ ನೋಡಬಹುದು. ಓಕ್‌ಶಾಟ್ ಹೇಳುತ್ತಾನೆ. "ಒಂದು ವಿಷಯ ಇದೆ ಎಂಬ ಕಾರಣಕ್ಕೆ ಅಥವಾ ಅನೇಕ ತಲೆಮಾರುಗಳಿಂದ ಇದೆ ಎಂಬ ಕಾರಣಕ್ಕೆ, ಒಬ್ಬ ವಿಚಾರವಾದಿಯ ದೃಷ್ಟಿಯಲ್ಲಿ ಆ ವಿಷಯ ಮೌಲ್ಯಯುತವಾಗಿರಲು ಸಾಧ್ಯವಿಲ್ಲ. ಪರಂಪರೆಯ ಮೋಡಗಳ ಮಬ್ಬು ಇಲ್ಲದ ತರ್ಕದ ಬೆಳಕಿನಲ್ಲಿ ಎಲ್ಲ ಸಂಸ್ಥೆಗಳನ್ನೂ ಮರುವಿಮರ್ಶಿಸಬೇಕೆಂದು ವಿಚಾರವಾದಿ ತಿಳಿಯುತ್ತಾನೆ. ಅನುಭವವನ್ನು ಒಟ್ಟುಗೂಡಿಸುವುದರಲ್ಲಿ ಓರ್ವ ವಿಚಾರವಾದಿಗೆ ಆಸಕ್ತಿಯಿರುವುದಿಲ್ಲ. ಬದಲಿಗೆ ಆತ ತನ್ನ ಸಮಾಜದ ಪಾರಂಪರಿಕ ಜ್ಞಾನದಿಂದ ತನ್ನನ್ನು ತಾನು ಪ್ರತ್ಯೇಕಗೊಳಿಸಿಕೊಳ್ಳುತ್ತಾನೆ. 'ರಿಪೇರಿ' ಅಥವಾ 'ಸುಧಾರಣೆ'ಗೆ ಬದಲಾಗಿ ನಾಶ ಮತ್ತು ಹೊಸಸೃಷ್ಟಿಗೆ ಹೆಚ್ಚು ಆದ್ಯತೆಯನ್ನು ಓರ್ವ ವಿಚಾರವಾದಿ ಕೊಡುತ್ತಾನೆ."

(ಆಡ್ರೀ ಕಾಂಟ್ಲೀ, 'ದ ಕಾನ್ಸೆಪ್ಟ್ ಆಫ್ ಟ್ರೆಡಿಷನ್, ಟ್ರೆಡಿಷನ್ ಆಂಡ್ ಪೊಲಿಟಿಕ್ಸ್ ಇನ್ ಸೌತ್ ಏಶಿಯಾ, ಪುಟ.೧೦) ಗಾಂಧಿ ಭಾರತೀಯ ಸಮಾಜದ ರಿಪೇರಿಯನ್ನು ಬಯಸುತ್ತಾರೆ, ಆದರೆ ಅಂಬೇಡ್ಕರ್ ಅದರ ನಾಶವನ್ನು ಅಪೇಕ್ಷಿಸುತ್ತಾರೆ. ಗಾಂಧಿ ಭಾರತೀಯ ಮನಸ್ಥಿತಿಯಲ್ಲಿ ಆಳವಾಗಿ ಹುದುಗಿರುವ ನೈತಿಕತೆಯನ್ನು ಉಜ್ವಲಗೊಳಿಸಿ ಈ ಕಿಲುಬುಗಟ್ಟಿದ ಸಮಾಜವನ್ನು ಉಜ್ಜಿ, ತಿಕ್ಕಿ ಸುಧಾರಣೆಗೊಳಿಸುವುದಕ್ಕೆ ಉದ್ಯುಕ್ತರಾಗುತ್ತಾರೆ. ಆದರೆ ಅಂಬೇಡ್ಕರ್ ಆಧುನಿಕ ಕಾನೂನು–ಕಾಯ್ದೆಗಳೆಂಬ ಹೊಚ್ಚಹೊಸ ಬುಲ್‌ಡೋಜರ್‌ಗಳ ಮೂಲಕ ಭಾರತೀಯವಾದ ಈ ಹಳೆಯ ಮತ್ತು ಅಸಮ ಸಮಾಜವನ್ನು ಸಮಗೊಳಿಸಿ ಸಾಮಾಜಿಕ ನ್ಯಾಯದಡಿ ಹೊಸಸಮಾಜದ ಹೊಸಸೃಷ್ಟಿಯನ್ನು ಬಯಸುತ್ತಾರೆ. ನಾವು ಈ ಹಿನ್ನೆಲೆಯಲ್ಲೇ ಪೂನಾ ಒಪ್ಪಂದವೂ ಸೇರಿದಂತೆ ಗಾಂಧಿ–ಅಂಬೇಡ್ಕರ್ ಸಂವಾದವನ್ನು ನೋಡಬೇಕಾಗಿದೆ ಎಂದು ನನಗೆ ಅನ್ನಿಸುತ್ತಿದೆ.

ಡಿ ಎಸ್ ನಾಗಭೂಷಣ್‌ರವರು ತಮ್ಮ ಲೇಖನದಲ್ಲಿ ಉದ್ಧರಿಸಿದ, ಮಹಾತ್ಮಾ ಗಾಂಧಿಯವರು ಕರಾಚಿಯಲ್ಲಿ ಜುಲೈ ೧೦, ೧೯೩೧ರಂದು ಆಡಿದ ಒಂದು ಮಾತಿನ ಮೂಲಕ ಗಾಂಧಿ–ಅಂಬೇಡ್ಕರ್ ಸಂವಾದವನ್ನು ನೋಡಬಹುದು. ಗಾಂಧಿ ಹೇಳ್ತಾರೆ–

> "....ಡಾ॥ ಅಂಬೇಡ್ಕರರು ನಮ್ಮಲ್ಲಿ ಹಲವರು ನಾಚಿಕೆ ಪಡುವಷ್ಟು ಬುದ್ಧಿವಂತರು ಹಾಗೂ ಜಾಣರು. ತಮ್ಮ ಚುರುಕಾದ ಬುದ್ಧಿಯಿಂದ ಅವರು ಹಲವು ಜನರ ಹೃದಯವನ್ನು ಮುಟ್ಟಿದ್ದಾರೆ. ಅವರ ತ್ಯಾಗ ತುಂಬ ದೊಡ್ಡದು. ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ಮಗ್ನರು. ಅವರು ಸರಳ ಜೀವನ ನಡೆಸುವವರು. ಅವರು ತಿಂಗಳಿಗೆ ಒಂದೆರಡು ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸಬಲ್ಲವರು. ಅವರು ಯೂರೋಪಿಗೆ ಹೋಗಿ ನೆಲಸಲು ಕೂಡ ಸಾಧ್ಯ. ಆದರೆ ಅವರಿಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲ. ಅವರಿಗೆ ಹರಿಜನರ ಕ್ಷೇಮಾಭ್ಯುದಯದ್ದೇ ಚಿಂತೆ. ಆದರೆ ಇಂದು ಸಮಾಜದಲ್ಲಿ ಇಂತಹ ಮನುಷ್ಯನ ಸ್ಥಾನಮಾನವಾದರೂ ಏನು? 'ನಾನು ವಿಧಾನ ಸಭೆ ಅಧಿವೇಶನಕ್ಕೆಂದು ಪೂನಾಗೆ ಹೋದಾಗ, ಇತರರೆಲ್ಲ ಅವರ ಸ್ನೇಹಿತರ ಮನೆಗಳಲ್ಲಿ ತಂಗಿ ತಮ್ಮ ದಿನಭತ್ಯೆಯನ್ನು ಉಳಿಸಿಕೊಳ್ಳುವವರಾದರೆ, ನಾನು ಹೋಟೆಲಿನಲ್ಲಿ ತಂಗಿ ಆ ಇಡೀ ೧೦ ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬೇಕಾಗಿದೆ. ನನ್ನನ್ನು ಒಬ್ಬ ಸಹೋದ್ಯೋಗಿಯೆಂದಾಗಲೀ, ಸ್ನೇಹಿತನೆಂದಾಗಲೀ ಒಪ್ಪಿಕೊಳ್ಳುವ ಒಂದು ಹಿಂದೂ ಕುಟುಂಬವೂ ಪೂನಾದಲ್ಲಿ ಇಲ್ಲ' ಎಂದು ಅವರು ಹೇಳುತ್ತಾರೆ. ಯಾರ ಅವಮಾನವಿದು. ಅವರದೋ ಅಥವಾ ಸವರ್ಣೀಯರೆನಿಸಿಕೊಳ್ಳುವ ಹಿಂದೂಗಳದೋ?
>
> ನಾವು ಅಸ್ಪೃಶ್ಯರ ಮೇಲೆ ಇಷ್ಟು ವರ್ಷಗಳ ಕಾಲ ನಡೆಸಿರುವ ದೌರ್ಜನ್ಯಗಳಿಗಾಗಿ ಅವರಿನ್ನೂ ನಮ್ಮ ತಲೆಗಳನ್ನು ಒಡೆಯಲು ಮುಂದಾಗದಿರುವುದು ನಮ್ಮ ಪುಣ್ಯ. ಅದಕ್ಕಾಗಿಯಾದರೂ ನಾವು ಅವರಿಗೆ ಕೃತಜ್ಞರಾಗಿರಬೇಕು."

ಗಾಂಧಿ–ಅಂಬೇಡ್ಕರ್ ಸಂವಾದವನ್ನು ಅರಿಯುವಲ್ಲಿ ಇಂತಹ ಮಾತುಗಳು ಬಹಳ ಮುಖ್ಯವಾದವುಗಳು ಎಂಬುದು ನನ್ನ ಭಾವನೆ.

ತಮಗೆಲ್ಲರಿಗೂ ಗೊತ್ತಿರುವಂತೆ ಗಾಂಧಿ ಮತ್ತು ಅಂಬೇಡ್ಕರ್ ಮೂರು ಬಾರಿ ಭೇಟಿಯಾಗುತ್ತಾರೆ. ಮೊದಲ ಭೇಟಿಯಲ್ಲಿ ಗಾಂಧಿಯವರ ಜೊತೆಗಿನ ಭೇಟಿಗಾಗಿ ಅಂಬೇಡ್ಕರ್ ಬಹಳ ಹೊತ್ತು ಕಾಯುವಂತಾಗುತ್ತದೆ. ಇದು ಅಂಬೇಡ್ಕರ್ ಅವರಿಗೆ ಸ್ವಲ್ಪಮಟ್ಟಿಗೆ ಅಸಮಾಧಾನವನ್ನು ಉಂಟುಮಾಡುತ್ತದೆ. ಎರಡನೆ ಭೇಟಿ ಇಂಗ್ಲೆಂಡ್‌ನ ದುಂಡುಮೇಜಿನ ಸಭೆಯ ಸಂದರ್ಭದಲ್ಲಿ ಆಗುತ್ತದೆ. ಮೂರನೇ ಭೇಟಿಯೇ ಇತಿಹಾಸ ಪ್ರಸಿದ್ಧ ಪೂನಾ ಒಪ್ಪಂದದ ಸಂದರ್ಭದಲ್ಲಿ ನಡೆದದ್ದು.

ಮುಂಬೈನಲ್ಲಿ ನಡೆದ ಮೊದಲ ಭೇಟಿಯ ನಂತರವೂ ಬಹಳಷ್ಟು ಕಾಲ ಗಾಂಧಿ ಅಂಬೇಡ್ಕರ್ ಅವರನ್ನು ಓರ್ವ ಅಸ್ಪೃಶ್ಯ ಸಮುದಾಯಕ್ಕೆ ಸೇರಿದವನು ಎಂದು ತಿಳಿದುಕೊಂಡೇ ಇರಲಿಲ್ಲ. ಗಾಂಧಿ ಅಂಬೇಡ್ಕರ್‌ರನ್ನು ಬ್ರಾಹ್ಮಣನಿದ್ದಿರಬೇಕು ಎಂದು ಭಾವಿಸಿದ್ದರು.

ಗಾಂಧಿ ಮತ್ತು ಅಂಬೇಡ್ಕರ್ ಪರಸ್ಪರ ಸಂವಾದದಲ್ಲಿ ತೊಡಗುವುದಕ್ಕಿಂತ ಬಹುಮುಂಚಿತವಾಗಿಯೇ ಈ ಇಬ್ಬರೂ ಧೀಮಂತ ನಾಯಕರೂ ಅಸ್ಪೃಶ್ಯೋದ್ಧಾರದ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಂಬೇಡ್ಕರ್ ತಮ್ಮದೇ ಆದ ರೀತಿಯಲ್ಲಿ ದಲಿತೋದ್ಧಾರದ ಕಾರ್ಯಕ್ರಮದಲ್ಲಿ ವ್ಯಸ್ತರಾಗಿದ್ದರೆ; ಗಾಂಧಿ ಅಸ್ಪೃಶ್ಯತಾ ನಿವಾರಣೆಯೂ ಒಂದು ಮುಖ್ಯ ಅಂಗವಾಗಿದ್ದ ತಮ್ಮ ರಚನಾತ್ಮಕ ಕಾರ್ಯಕ್ರಮದಲ್ಲಿ ಮತ್ತು ಅದರ ಅನುಷ್ಠಾನದಲ್ಲಿ ತೊಡಗಿದ್ದರು. ಅಸ್ಪೃಶ್ಯರ ಸಮಸ್ಯೆ ರಾಷ್ಟ್ರೀಯ ಹೋರಾಟದ ಜೊತೆ ಬೆಸೆದುಗೊಳ್ಳುವುದಕ್ಕೆ ಅಂಬೇಡ್ಕರ್ ಎಷ್ಟು ಕಾರಣರೋ, ಗಾಂಧಿಯೂ ಅಷ್ಟೇ ಕಾರಣ ಎನ್ನುವುದನ್ನು ನಾವಿಲ್ಲಿ ಮರೆಯಬಾರದು. ರಾಷ್ಟ್ರೀಯ ಹೋರಾಟದ

ಜೊತೆಜೊತೆಗೆ ಅಂಬೇಡ್ಕರ್ ಮತ್ತು ಗಾಂಧಿ ಅಸ್ಪೃಶ್ಯರ ಸಮಸ್ಯೆಯನ್ನು ಬೆಸೆದಿರುವುದರಿಂದ ಈ ಸಮಸ್ಯೆಗೆ ಅಂತರ್‌ರಾಷ್ಟ್ರೀಯ ಆಯಾಮವೂ ದೊರಕಿತು.

ಮೊದಲ ದುಂಡುಮೇಜಿನ ಸಭೆ ಲಂಡನ್ನಿನಲ್ಲಿ ನಡೆದಾಗ ಅದರಲ್ಲಿ ಗಾಂಧಿ ಭಾಗವಹಿಸುವುದಿಲ್ಲ. ಅಂಬೇಡ್ಕರ್ ಭಾಗವಹಿಸುತ್ತಾರೆ. ಆದರೆ ೨ನೆಯ ದುಂಡುಮೇಜಿನ ಸಭೆಯಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಭಾಗವಹಿಸುತ್ತಾರೆ. ಈ ಸಭೆಯಲ್ಲಿ ಅಂಬೇಡ್ಕರ್‌ರವರ ಬೇಡಿಕೆಗಳ ಬಗ್ಗೆ ಗಾಂಧಿ ತಳೆದ ನಿಲುವುಗಳು ಗಾಂಧಿಯುವರು ಅಸ್ಪೃಶ್ಯರ ವಿಷಯುದಲ್ಲಿ ಪ್ರಾಮಾಣಿಕರಲ್ಲವೇನೋ ಎಂಬ ಅನುಮಾನ ಅಂಬೇಡ್ಕರ್ ಅವರಿಗೆ ಹುಟ್ಟುತ್ತದೆ. ಅದಕ್ಕಿಂತ ಹೆಚ್ಚಾಗಿ ಅಂಬೇಡ್ಕರ್ ಅವರನ್ನು ಘಾಸಿಗೊಳಿಸಿದ್ದು ಗಾಂಧಿಯವರ 'ತಾನು ಮಾತ್ರ ಅಸ್ಪೃಶ್ಯರೂ ಸೇರಿದ ಸಮಸ್ತ ಭಾರತೀಯರ ಪ್ರತಿನಿಧಿ ಎಂದೂ, ಮಿಕ್ಕವರೆಲ್ಲರೂ ಬ್ರಿಟಿಷರ ನಾಮಕರಣ ಸದಸ್ಯರು' ಎಂಬ ಹೇಳಿಕೆ. ಮುಂದುವರಿದು 'ಭಾರತದ ದಲಿತರಿಗೇನಾದರೂ ಒಂದು ಮುಕ್ತ ಆಯ್ಕೆಯ ಸ್ವಾತಂತ್ರ್ಯ ಕೊಟ್ಟರೆ ಅವರು ನನ್ನನ್ನೇ ಅತ್ಯಂತ ಅಧಿಕ ಮತಗಳಿಂದ ಆರಿಸಿ ಇಂದಿನ ಸಭೆಗೆ ಕಳುಹಿಸುತ್ತಿದ್ದರು' ಎಂಬ ಗಾಂಧಿಯವರ ಮಾತೂ ಅಂಬೇಡ್ಕರ್ ಕ್ರುದ್ಧಗೊಳ್ಳುವಂತೆ ಮಾಡುತ್ತದೆ.

ಅಂಬೇಡ್ಕರ್ ಬಯಸುವ ಪ್ರತ್ಯೇಕ ಮತದಾನದ ವ್ಯವಸ್ಥೆ ಜಾರಿಗೆ ಬಂದರೆ ಈಗಾಗಲೇ ಸಾಮಾಜಿಕವಾಗಿ ಹೊರಗಿರಿಸಲ್ಪಟ್ಟಿದ್ದ ಅಸ್ಪೃಶ್ಯರು ರಾಜಕೀಯವಾಗಿಯೂ ಅಸ್ಪೃಶ್ಯರಾಗುತ್ತಾರೆ. ಅಸ್ಪೃಶ್ಯರನ್ನು ಹಿಂದೂ ಧರ್ಮದ ಜಾತೀಯತೆ ಈಗಾಗಲೇ ಪರಂಪರೆಯ ಹೆಸರು ಹೇಳಿ ಹೊರಗಿಟ್ಟಿದೆ. ಆದರೆ ಅಂಬೇಡ್ಕರ್ ಆಧುನಿಕತೆ ಮತ್ತು ಆಧುನಿಕತೆಯ ಮೌಲ್ಯಗಳ ಹೆಸರಿನಲ್ಲಿ ಅಸ್ಪೃಶ್ಯರನ್ನು ರಾಜಕೀಯವಾಗಿಯೂ ಇತರೆ ಹಿಂದೂಗಳಿಂದ ದೂರ ಇರಿಸುತ್ತಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಅಸ್ಪೃಶ್ಯರ ಬದುಕು ನಿಜಕ್ಕೂ ದುರ್ಭರವಾಗುತ್ತದೆ ಎಂದು ಆತಂಕಗೊಂಡ ಗಾಂಧಿ ಅಂಬೇಡ್ಕರ್ ನಿಜವಾಗಿಯೂ ಸವರ್ಣೀಯ ಹಿಂದೂಗಳೊಂದಿಗೆ ಅಸ್ಪೃಶ್ಯರ ಸಮಾನತೆಯನ್ನೇ ಬಯಸುವವರಾದರೆ ಪ್ರತ್ಯೇಕ ಮತದಾನದ ಅವರ ಬೇಡಿಕೆ ಅವರ ಈ ಆಶಯವನ್ನು ಈಡೇರಿಸುತ್ತದೆಯೇ? ಬದಲಾಗಿ ಈಗಾಗಲೇ ಇರುವ ಕಂದರವನ್ನು ಇನ್ನಷ್ಟು ಹೆಚ್ಚು ಮಾಡುವುದಿಲ್ಲವೇ? ಎಂಬ ಪ್ರಶ್ನೆಗಳನ್ನು ಎತ್ತುತ್ತಾರೆ. ಅಂಬೇಡ್ಕರ್‌ರವರ ಈ ಬೇಡಿಕೆಯಿಂದ ಅಸ್ಪೃಶ್ಯರಿಗಾಗಲೀ ಹಿಂದೂ ಧರ್ಮಕ್ಕಾಗಲೀ ಎಳ್ಳಿನಿತೂ ಒಳಿತಾಗುವುದಿಲ್ಲ ಎಂದು ಗಾಂಧಿ ನಂಬಿದ್ದರು. ಹಾಗಾಗಿಯೇ ಗಾಂಧಿ 'ನನಗೆ ಮುಖ್ಯವಾದ ಅಸ್ಪ್ರಶ್ಯರ ಹಿತಾಸಕ್ತಿಯನ್ನು ಭಾರತದ ಸ್ವಾತಂತ್ರ್ಯಕ್ಕಾಗಿಯೂ ನಾನು ಮಾರಿಕೊಳ್ಳಲು ಸಿದ್ಧ' ಎಂದು ಘೋಷಿಸಿದರು. ಗಾಂಧಿ ಈ ನಿಲುವು ತಾಳಲು ಬಹುಮುಖ್ಯ ಕಾರಣಗಳು ಮೂರು. ಅವು ಹೀಗಿವೆ:

೧. ದಲಿತರಿಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆಯಾದರೆ ಅದು ಧಾರ್ಮಿಕ ಸುಧಾರಣೆಗೆ ಶಾಶ್ವತ ಅಡ್ಡಿಯಾಗುತ್ತದೆ
೨. ಮೇಲ್ಜಾತಿಯವರಿಗೆ ದಲಿತರ ಜೊತೆ ಸ್ಪರ್ಧಾ ಮನೋಭಾವನೆ ಬೆಳೆದು ಹಳ್ಳಿಗಾಡಿನ ಪರಿಸ್ಥಿತಿ ವಿಷಮಗೊಳ್ಳುತ್ತದೆ
೩. ದಲಿತರಿಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆ ರೂಪುಗೊಂಡರೆ ಬ್ರಿಟಿಷರ ಒಡೆದು ಆಳುವ ನೀತಿ ಫಲಿಸಿ ರಾಷ್ಟ್ರೀಯು ಚಳುವಳಿ ದುರ್ಬಲಗೊಳ್ಳುತ್ತದೆ

ಅಸ್ಪೃಶ್ಯರನ್ನು ಹಿಂದೂ ಧರ್ಮದೊಳಗೆ ಉಳಿಸಿಕೊಳ್ಳಲು ಗಾಂಧಿ ಯಾವ ತ್ಯಾಗಕ್ಕೂ, ಯಾವ ಹೊಂದಾಣಿಕೆಗೂ ಸಿದ್ಧರಾಗಿದ್ದರು. ಪ್ರತ್ಯೇಕ ಮತಕ್ಷೇತ್ರದ ಅಂಬೇಡ್ಕರ್ ಬೇಡಿಕೆಯನ್ನು ಮುಸ್ಲಿಮರು ವಿರೋಧಿಸಿದರೆ ಕಾಂಗ್ರೆಸ್ ಮುಸ್ಲಿಮರ ಬೇಡಿಕೆಗಳಿಗೆ ಬೆಂಬಲ ಕೊಡುವುದೆಂದು ಗಾಂಧಿ ಮುಸ್ಲಿಮ್ ಮುಖಂಡರೊಂದಿಗೆ ಮಾಡಿಕೊಂಡ ಒಪ್ಪಂದ ಅಂಬೇಡ್ಕರ್ ಅವರನ್ನು ಕೆರಳಿಸಿತು. ದುಂಡು ಮೇಜಿನ ಸಮ್ಮೇಳನದ ಅಲ್ಪಸಂಖ್ಯಾತ ಸಮಿತಿ ವಿವಿಧ ಕೋಮುಗಳ ಪ್ರಾತಿನಿಧ್ಯದ ಪ್ರಮಾಣದ ಕುರಿತು ಒಮ್ಮತಕ್ಕೆ ಬರಲು ಸಾಧ್ಯವಾಗದೇ ಇದ್ದಾಗ ಅದನ್ನು ತೀರ್ಮಾನಿಸುವ ಹಕ್ಕನ್ನು ಸಮಿತಿಯ ಅಧ್ಯಕ್ಷ ಬ್ರಿಟನ್‌ನ ಪ್ರಧಾನಿ ರ್‍ಯಾಮ್ಸೆ ಮೆಕ್‌ಡೊನಾಲ್ಡ್‌ರಿಗೆ ಕೊಡಲು ಒಪ್ಪಿ ಗಾಂಧಿ ಸಹಿ ಮಾಡುತ್ತಾರೆ. ಆದರೆ ಅಂಬೇಡ್ಕರ್ ಅದಕ್ಕೆ ಸಹಿ ಮಾಡುವುದಿಲ್ಲ. ಆದರೆ ಮೆಕ್‌ಡೊನಾಲ್ಡ್ ಕೈಗೊಂಡ ತೀರ್ಮಾನ ಅಂಬೇಡ್ಕರ್ ಪರವಾದಾಗ, ಗಾಂಧಿ ಆಮರಣಾಂತ ಉಪವಾಸಕ್ಕೆ ನಿರ್ಧರಿಸುತ್ತಾರೆ. ಅಂಬೇಡ್ಕರ್ ಅವರಿಗೆ ಗಾಂಧಿಯವರದ್ದು ವಚನ ಭ್ರಷ್ಟತೆ ಎಂದೇ ಅನ್ನಿಸಿತು.

ಬ್ರಿಟಿಷ್ ಪ್ರಧಾನಿಯ, ಅಂಬೇಡ್ಕರ್ ಪರವಾದ ತೀರ್ಮಾನದ ನಂತರದ ಬೆಳವಣಿಗೆಯೇ ಗಾಂಧೀಜಿಯುವರ ಉಪವಾಸ ಮತ್ತು ಅಂಬೇಡ್ಕರ್ ಅನಿವಾರ್ಯವಾಗಿ ಸಹಿ ಹಾಕಬೇಕಾಗಿ ಬಂದ ಪೂನಾ ಒಪ್ಪಂದ.

ಪೂನಾ ಒಪ್ಪಂದದ ಸಂದರ್ಭದಲ್ಲಿ ಅಂಬೇಡ್ಕರ್ ಯೋಚಿಸದೆಯೂ ಇದ್ದುದನ್ನು ಗಾಂಧಿ ತಮ್ಮ ಕಾಣ್ಕೆಯ ಬಲದಿಂದ ನೀಡಿದರು. ಅದೇನೆಂದರೆ ದಲಿತಸಮುದಾಯದ ಅಭ್ಯರ್ಥಿಗಳಿಗಾಗಿ ಮೀಸಲು ಕ್ಷೇತ್ರಗಳು. ಅಂಬೇಡ್ಕರ್ ಎಷ್ಟು ನಿರೀಕ್ಷಿಸಿದ್ದರೋ ಅದಕ್ಕಿಂತಲೂ ಹೆಚ್ಚಿನ ಸ್ಥಾನಗಳನ್ನು ಮೀಸಲು ಕ್ಷೇತ್ರಗಳನ್ನಾಗಿ ಗಾಂಧಿ ನೀಡಿದ್ದರಿಂದ ಅಂಬೇಡ್ಕರ್ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಅವರು ಆಡುವ ಮಾತುಗಳನ್ನು ಇಲ್ಲಿ ಗಮನಿಸಬೇಕು. "ಅವರನ್ನು ಮುಖತಃ ಭೇಟಿಯಾಗಿ ಮಾತಾಡಿದಾಗ ನನ್ನ ಮತ್ತು ಅವರ ನಡುವೆ ಎಷ್ಟೊಂದು ಸಾಮ್ಯಗಳಿವೆ ಎಂಬುದು ನನ್ನ ಅರಿವಿಗೆ ಬಂದು ನಾನು ಪರಮಾಶ್ಚರ್ಯಗೊಂಡೆ. ಅವರು ಈ ಸಂದರ್ಭದಲ್ಲಿ ದುಂಡುಮೇಜಿನ ಸಭೆಯ ಸಂದರ್ಭದಲ್ಲಿದ್ದುದಕ್ಕಿಂತ ಎಷ್ಟು ಭಿನ್ನರಾಗಿದ್ದರೆಂದರೆ, ಅವರು ತಮ್ಮ ಶಿಷ್ಯರಿಗಿಂತ ನನ್ನ ಕಡೆಗೇ ಹೆಚ್ಚು ಒಲವು ತೋರಿದ್ದಾರೆ. ಆ ಮೂಲಕ ನನ್ನನ್ನು ದೊಡ್ಡ ಸಂಕಟದಿಂದ ಪಾರು ಮಾಡಿದ್ದಾರೆ. ಹಳೆಯದೆಲ್ಲ ಹಳೆಯದೇ. ಹಾಗಾಗಿ ಅದನ್ನೆಲ್ಲ ಮರೆತು ನಾನು ಸಂತೋಷದಿಂದ ಈ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದೇನೆ'.

ಪೂನಾ ಒಪ್ಪಂದದ ನಂತರದಲ್ಲಿ ಗಾಂಧಿ ದಲಿತರಿಗಾಗಿಯೇ ತಮ್ಮ ಸಮಯವನ್ನು ವಿಶೇಷವಾಗಿ ಮೀಸಲಿರಿಸಿದರು. ಈ ಹಂತದಲ್ಲೇ ಅವರು 'ಹರಿಜನ ಸೇವಕ ಸಂಘ', 'ಹರಿಜನ' ಪತ್ರಿಕೆ ಮತ್ತು ತಮ್ಮ ಎರಡು ವರ್ಷದ ಹರಿಜನ ಪ್ರವಾಸವನ್ನೂ ಆರಂಭಿಸಿದರು. ಗಾಂಧಿಗೆ ಬಹಳ ಸ್ಪಷ್ಟವಾಗಿ ದಲಿತರ ಮತ್ತು ಅಲ್ಪಸಂಖ್ಯಾತರ ಬೇಡಿಕೆಗಳ ಬಗ್ಗೆ ಕಾಂಗ್ರೆಸ್ ಸಹಾನುಭೂತಿಯನ್ನು ಹೊಂದಿಲ್ಲ ಎಂದು ಗೊತ್ತಿತ್ತು. ಇದನ್ನು ಬಹಿರಂಗವಾಗಿಯೇ ಒಪ್ಪಿಕೊಳ್ಳುತ್ತಿದ್ದ ಗಾಂಧಿ, ದಲಿತೋದ್ಧಾರದ ವಿಷಯುದಲ್ಲಿ ಕಾಂಗ್ರೆಸಿಗರನ್ನು ನಂಬಿ ಕೂರುವಂತಿರಲಿಲ್ಲ ಎಂದೇ ಹೇಳುತ್ತಿದ್ದರು. ಪೂನಾ ಒಪ್ಪಂದದ ನಂತರ ತಮ್ಮೆಲ್ಲ ಚಟುವಟಿಕೆಗಳನ್ನು ಅಸ್ಪೃಶ್ಯತೆಯ ವಿರೋಧಿ ಚಳುವಳಿಯಾಗಿ ಗಾಂಧಿ ನಡೆಸಿಕೊಂಡು ಬಂದರು. ಯಾವಾಗ ಈ ಕೆಲಸಗಳಲ್ಲಿ ಗಾಂಧಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೋ ಅಂದಿನಿಂದ ಅವರು ಕಾಂಗ್ರೆಸ್ ಪಕ್ಷದ ತಮ್ಮ ಪ್ರಾಥಮಿಕ ಸದಸ್ಯತ್ವವನ್ನು ನವೀಕರಿಸಲೂ ಒಪ್ಪಲಿಲ್ಲ. ದಲಿತೋದ್ಧಾರ ಮತ್ತು ಗ್ರಾಮೋದ್ಧಾರದ ಕುರಿತು ಕಾಳಜಿ ಹೊಂದಿಲ್ಲದ ಕಾಂಗ್ರೆಸ್‌ನ ಜೊತೆಗೆ ನಂಟು ಬೆಸೆಯುವುದು ಗಾಂಧಿಗೆ ಹಿಂಸಾತ್ಮಕವಾಗಿತ್ತು.

೧೯೩೨ರ ಪೂನಾ ಒಪ್ಪಂದವನ್ನು ಅಂಬೇಡ್ಕರ್ ಅನುಮೋದಿಸಿದ್ದು ಅವರಿಗೆ ಅದರಲ್ಲಿರುವುದೆಲ್ಲ ಒಪ್ಪಿತವಾಗಿಯಲ್ಲ. ಅಂಬೇಡ್ಕರ್ ಹೆದರಿಕೆಯಿಂದಲೇ ಈ ಒಪ್ಪಂದಕ್ಕೆ ಸಹಿ ಮಾಡಿದರು. ಆ ಭಯು ಯಾವುದೆಂದರೆ ಗಾಂಧೀಜಿಯವರೇನಾದರೂ ಸತ್ತರೆ ದೇಶದಾದ್ಯಂತ ನಡೆಯಬಹುದಾದ ದಲಿತರ ಸಾಮೂಹಿಕ ಹತ್ಯೆಯ ವಾಸನೆಯನ್ನು ಅಂಬೇಡ್ಕರ್ ಆಘ್ರಾಣಿಸಿದ್ದರು. ಆದರೆ ಗಾಂಧಿ ಈ ಕ್ಷಣಿಕ ಗೆಲುವನ್ನು ಸಂಭ್ರಮಿಸುವ ಕ್ಷುಲ್ಲಕರಲ್ಲ. ಈ ಗೆಲುವು ಮೇಲ್ಪದರದ್ದು, ಯಾವುದೇ ಕ್ಷಣದಲ್ಲಿ ಕುಸಿಯಬಹುದಾದ ಉಸುಕಿನ ಮೇಲೆ ನೆಟ್ಟ ವಿಜಯಧ್ವಜ ಎಂಬುದು ಅವರಿಗೆ ಗೊತ್ತಿತ್ತು. ಹಾಗಾಗಿ ಈ ಗೆಲುವನ್ನು ಅಜರಾಮರಗೊಳಿಸುವುದಕ್ಕಾಗಿ ಭಾರತದ ಪ್ರತಿಯೊಬ್ಬ ಮೇಲ್ಜಾತಿ ಹಿಂದೂ ಸಾಮಾಜಿಕನ ಆಂತರ್ಯವನ್ನು ತಲುಪುವುದು ಹೇಗೆ ಎಂಬುದರ ಕುರಿತು ಅವರು ಆಳವಾಗಿ ಯೋಚಿಸುತ್ತಿದ್ದರು.

ಅಸ್ಪೃಶ್ಯತೆಯೇ ಜಾತೀಯತೆಯ ಧಾತು ಎಂದು ತಿಳಿದಿದ್ದ ಗಾಂಧಿ ಅಸ್ಪೃಶ್ಯತೆಯ ನಿವಾರಣೆಯನ್ನು ಮಾತ್ರ ತಮ್ಮ ಮುಖ್ಯ ಕಾರ್ಯಕ್ರಮವನ್ನಾಗಿಸಿದ್ದರು. ಅಂಬೇಡ್ಕರ್ 'ಹರಿಜನ' ಪತ್ರಿಕೆಯ ಫೆಬ್ರವರಿ ೧೧, ೧೯೩೩ರ ಪತ್ರಿಕೆಯಲ್ಲಿ ಕೇಳಿದ ಪ್ರಶ್ನೆಗೂ ಗಾಂಧಿ ಉತ್ತರಿಸುವುದು ಹಿಂದೂ ಧರ್ಮ ಆಚರಿಸುತ್ತಿರುವ ಅಸ್ಪೃಶ್ಯತೆ ನನ್ನ ಪ್ರಕಾರ ದೇವರು ಹಾಗೂ ಮನುಷ್ಯನ ವಿರುದ್ಧ ಮಾಡುತ್ತಿರುವ ಪಾಪ. ಈ ಅಸ್ಪೃಶ್ಯತೆ ಹಿಂದೂ ಧರ್ಮವನ್ನು ಸರ್ವನಾಶಗೊಳಿಸುವ ನಿಧಾನ ವಿಷ ಎಂದು ಹೇಳಿದರು. ಓರ್ವ ಹಿಂದೂ ಧರ್ಮೀಯ ಅಸ್ಪೃಶ್ಯತೆಯನ್ನು ನಿರಾಕರಿಸಿ ಬದುಕಿದರೆ ಜಾತಿ ಇದ್ದರೆಷ್ಟು ಬಿಟ್ಟರೆಷ್ಟು ಎಂಬುದು ಗಾಂಧಿಯ ನಿಲುವಾಗಿತ್ತು.

ಈ ಹಂತದಲ್ಲಿ ಗಾಂಧಿಯವರಲ್ಲಿ ಒಂದು ಬಹಳ ದೊಡ್ಡ ವ್ಯತ್ಯಾಸವನ್ನು ನಾವು ಕಾಣಬಹುದು. ೧೯೨೧ರಲ್ಲಿ ಹಿಂದೂಧರ್ಮದ ಶಾಸ್ತ್ರಗಳು ಅಸ್ಪೃಶ್ಯತೆಯ ಬಗ್ಗೆ ಏನು ಹೇಳುತ್ತವೆ ಎಂಬುದರ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಡುವುದಕ್ಕೆ ನಿರಾಕರಿಸಿದ ಗಾಂಧಿ, ಈಗ ಅಸ್ಪೃಶ್ಯತೆಯನ್ನು ಸಮರ್ಥಿಸುವ ಧರ್ಮಶಾಸ್ತ್ರಗಳನ್ನು, ಅ–ಧರ್ಮಶಾಸ್ತ್ರಗಳೆಂದು ಕರೆದು ಬಿಟ್ಟರು. ವರ್ಣವ್ಯವಸ್ಥೆಯನ್ನು ಒಂದು ಕಾಲದಲ್ಲಿ ಒಪ್ಪಿಕೊಂಡಿದ್ದ ಗಾಂಧಿ ಈಗ ನಿಜವಾದ ವರ್ಣ ಇಲ್ಲವೇ ಇಲ್ಲ, ಹಿಂದೂಗಳೆಲ್ಲ

ಅಸ್ಪೃಶ್ಯತೆಯ ಸಮಸ್ಯೆಯನ್ನು ಗಾಂಧಿ ತಮ್ಮ ಸ್ವಂತದ ಸಮಸ್ಯೆ ಎಂದು ಭಾವಿಸಿದರು. ರಾಷ್ಟ್ರೀಯ ಹೋರಾಟಕ್ಕೆ ಅಖಂಡವಾಗಿ ಕಟ್ಟಬೇಕಿದ್ದ ಒಂದು ಹಿಂದೂ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ಅಸ್ಪೃಶ್ಯತೆಯ ಒಡಕು ಒಂದು ಬಹುದೊಡ್ಡ ತೊಡಕು ಎಂದು ಅವರು ಭಾವಿಸಿದ್ದರು. ಹಿಂದೂ ಆತ್ಮವನ್ನು ಆಳವಾಗಿ ಊನಗೊಳಿಸಿರುವ ಜಾತಿ ಅಹಂಕಾರ ನಿರಸನಗೊಂಡರೆ ಮಾತ್ರ ಬ್ರಿಟಿಷರ ಎದುರು ಅಕಳಂಕ, ನೈತಿಕ ಪರಿಶುದ್ಧ ಬದಲಿ ವ್ಯಕ್ತಿತ್ವವನ್ನು ಮುಂದಿಡಲು ಸಾಧ್ಯ ಎಂದು ನಂಬಿದ ಗಾಂಧಿ ತಮ್ಮ ಅಸ್ಪೃಶ್ಯತಾ ನಿವಾರಣೆಯ ಇಡೀ ಚಳುವಳಿಯನ್ನು ಆತ್ಮಶುದ್ಧೀಕರಣದ ಪವಿತ್ರ ಆಚರಣೆಯೆಂದೇ ನೋಡಿದರು. ೧೯೩೩ ಏಪ್ರಿಲ್ ೧೫ರ ಹರಿಜನ ಪತ್ರಿಕೆಯಲ್ಲಿ ಇದನ್ನು ಆತ್ಮಶುದ್ಧೀಕರಣದ ಚಳುವಳಿ ಎಂದೇ ಕರೆದರು. ಅಂಬೇಡ್ಕರ್ ಅಸ್ಪೃಶ್ಯತೆಯ ಸಮಸ್ಯೆಯನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯದ ಹಿನ್ನೆಲೆಯಲ್ಲಿ ನೋಡಿದರೆ ಗಾಂಧಿ ಈ ಸಮಸ್ಯೆಯನ್ನು ಧಾರ್ಮಿಕವಾಗಿ ನೋಡಿದರು. ಹಾಗಾಗಿ ಗಾಂಧಿ ಈ ಸಮಸ್ಯೆಯನ್ನು ಪರಿಭಾವಿಸಿರುವುದು ಬಹಳ ಆಳವಾಗಿ.

ಅಂಬೇಡ್ಕರ್ ಸಾರ್ವಜನಿಕ ಜೀವನ ಪ್ರವೇಶ ಮಾಡಿದ್ದು ೧೯೨೪ರ ಹೊತ್ತಿಗೆ, 'ಬಹಿಷ್ಕೃತ ಹಿತಕಾರಿಣಿ ಸಭಾ'ದ ಸ್ಥಾಪನೆಯೊಂದಿಗೆ. ಆದರೆ ಅದಕ್ಕಿಂತಲೂ ಮೊದಲೇ ಗಾಂಧಿ ದಲಿತರ ಸಮಸ್ಯೆಗಳನ್ನು ತಾವು ಉದ್ದೇಶಿಸಬೇಕು ಎಂದು ತಿಳಿದುಕೊಂಡಿದ್ದರು. ಈಗಾಗಲೇ ಪ್ರಸ್ತಾವಿಸಿದಂತೆ ಗಾಂಧೀಜಿಯವರಿಗೆ ದಲಿತರ ಸಮಸ್ಯೆ ರಾಜಕೀಯ ಪರಿಣಾಮಗಳನ್ನು ಒಳಗೊಂಡಿದ್ದರೂ ಮೂಲಭೂತವಾಗಿ ಅದೊಂದು ಧಾರ್ಮಿಕ ಮತ್ತು ನೈತಿಕ ಪ್ರಶ್ನೆ. ಇದನ್ನು ಅವರು ೧೯೨೧ರ ಏಪ್ರಿಲ್‌ನಲ್ಲಿ ಪ್ರಕಟವಾದ ಯಂಗ್ ಇಂಡಿಯಾದ ೨೭ನೇ ಸಂಚಿಕೆಯಲ್ಲೂ ಪ್ರಸ್ತಾವಿಸಿದ್ದಾರೆ ಅಂತೆಯೇ ೧೯೩೩ರ ಫೆಬ್ರವರಿ ತಿಂಗಳ ಹರಿಜನ ಪತ್ರಿಕೆಯಲ್ಲೂ ದಾಖಲಿಸಿದ್ದಾರೆ. ಆದರೆ ಅಂಬೇಡ್ಕರ್ ಅವರಿಗೆ ಇದು ಮುಖ್ಯವಾಗಿ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆ. ಅಸ್ಪೃಶ್ಯತಾ ನಿವಾರಣೆಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಳ್ಳದ ಭಾರತದ ಸ್ವಾತಂತ್ರ್ಯ ಹೋರಾಟ ಹೋರಾಟವೇ ಅಲ್ಲ; ಮತ್ತು ಅಸ್ಪೃಶ್ಯರ ಉದ್ಧಾರವಾಗದೆ ಸ್ವರಾಜ್ಯ ಕೇವಲ ಕನಸು. ಇದು ಅಂಬೇಡ್ಕರ್ ಅವರ ದೃಷ್ಟಿ.

ಆದರೆ ಈಗ ನಿಮ್ಮಲ್ಲಿ ಯಾರಾದರೂ ನನ್ನನ್ನು ಕೇಳಬಹುದು. ಅಸ್ಪೃಶ್ಯತೆಯನ್ನು ಇಷ್ಟು ಗಂಭೀರವಾಗಿ ಪರಿಗಣಿಸಿದ ಗಾಂಧಿ ಜಾತಿ ಪದ್ಧತಿಯ ವಿರುದ್ಧವೇ ಯಾಕೆ ಕಾರ್ಯಕ್ರಮಗಳನ್ನು ರೂಪಿಸಲಿಲ್ಲ? ಸ್ವರಾಜ್ಯದ ಕುರಿತ ಹೋರಾಟವನ್ನು ಕಾಂಗ್ರೆಸ್‌ನ ಇತರೆ ನಾಯಕರಿಗೆ ಬಿಟ್ಟುಕೊಟ್ಟು ಅಸ್ಪೃಶ್ಯತೆಯ ವಿರುದ್ಧ ಹೋರಾಟಗಳನ್ನೇಕೆ ಆರಂಭಿಸಲಿಲ್ಲ. ಈ ಪ್ರಶ್ನೆಯನ್ನು ಗಾಂಧಿಗೆ ಅವರ ಮಿತ್ರ 'ಚಾರ್ಲಿ'ಎಂದೇ ಗಾಂಧಿ ಪರಿವಾರದಲ್ಲಿ ಜನಪ್ರಿಯರಾಗಿದ್ದ ಚಾರ್ಲ್ಸ್ ಆಂಡ್ರ್ಯೂಸ್ ಕೇಳುತ್ತಾರೆ. ಈ ಪ್ರಶ್ನೆಯನ್ನು ಕೇಳುವುದಕ್ಕೆ ಚಾರ್ಲ್ಸ್ ಅವರಿಗೆ ಒಂದು ಹಿನ್ನೆಲೆಯೂ ಒದಗಿಬಂದಿತ್ತು. ಅದೇನೆಂದರೆ ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಅಂಬೇಡ್ಕರ್ ಗಾಂಧಿ ಬಗ್ಗೆ ಆಡಿದ ಸೌಹಾರ್ದದ ಮಾತುಗಳ ಕೊನೆಯ ವಾಕ್ಯವಾದ 'ಮಹಾತ್ಮಾಜಿ ತಮ್ಮ ಇಡೀ ಬದುಕನ್ನು ನಿಮ್ಮ ವರ್ಗಗಳ ಕ್ಷೇಮಾಭ್ಯುದಯಕ್ಕೇ ಮುಡಿಪಾಗಿಡುವುದಾದದರೆ ಅವರು ನಮ್ಮ ನಾಯಕರಾಗುತ್ತಾರೆ' ಎಂಬ ಮಾತಿನಿಂದ ಸ್ಫೂರ್ತಿಗೊಂಡ ಚಾರ್ಲ್ಸ್ ೧೯೩೩ರಲ್ಲಿ ಗಾಂಧಿಯವರನ್ನು 'ನೀವು ಒಮ್ಮೆಗೇ ಎರಡು ಕುದುರೆಗಳ ಸವಾರಿ ಮಾಡುವ ಕಸರತ್ತಿನ ಬದಲು, ಅಸ್ಪೃಶ್ಯತಾ ನಿವಾರಣೆ ಹೋರಾಟಕ್ಕೇ ನೀವೇಕೆ ತೆತ್ತುಕೊಳ್ಳಬಾರದು?' ಎಂದು ಪ್ರಶ್ನಿಸುತ್ತಾರೆ. ಆ ಪ್ರಶ್ನೆಗೆ ಗಾಂಧಿ ನೀಡುವ ಉತ್ತರ ಹೀಗಿತ್ತು: 'ನನ್ನ ಬದುಕನ್ನು ನಾನು ಕಂಡುಕೊಂಡಿರುವುದು ಒಂದು ಅವಿಭಾಜ್ಯ ಅಖಂಡ ರೂಪದ್ದಾಗಿ. ಅವುಗಳಲ್ಲಿ ಕೋಣೆಗಳಿಲ್ಲ. ಹಾಗಾಗಿ ಒಮ್ಮೆ ನನ್ನ ಬೆರಳು ಸತ್ಯಾಗ್ರಹದ ಮನೆ ಮೇಲೆ, ನಂತರ ಸವಿನಯ ಕಾನೂನು ಭಂಗದ ಮನೆಯ ಮೇಲೆ, ಆನಂತರ ಅಸ್ಪೃಶ್ಯತಾ ನಿವಾರಣೆಯ ಮನೆಯ ಮೇಲೆ, ತದನಂತರ ಹಿಂದು ಮುಸ್ಲಿಂ ಐಕ್ಯತೆಯ ಮನೆ ಮೇಲೆ-ಹೀಗೆ ಪಿಯಾನೋದ ವಿವಿಧ ಮನೆಗಳ ಮೇಲೆ ವಿವಿಧ ತೀವ್ರತೆಯ ಒತ್ತುಗಳಂತೆ-ಒಂದೇ ರಾಗದ ಪರಸ್ಪರ ಸಂಬಂಧಿಸಿದ ವಿವಿಧ ಸ್ವರಗಳ ಸಂಯೋಜನೆಯಂತೆ ನನ್ನ ಬದುಕು.' ನನ್ನ ಬದುಕು ಒಂದು ಆರ್ಕೆಸ್ಟ್ರಾ ಅಂತಾರೆ ಗಾಂಧಿ.

ಅಸ್ಪಶ್ಯರು ಸವರ್ಣೀಯರಿಂದ ಮತ್ತಷ್ಟು ದೂರವಾಗದಂತೆ ಖಚಿತಪಡಿಸಿದ ೧೯೩೨ರ ಪೂನಾ ಒಪ್ಪಂದಕ್ಕೆ ಗಾಂಧಿ ಅಂಬೇಡ್ಕರ್‌ರೊಂದಿಗೆ ಸಹಿ ಹಾಕಿದ ನಂತರದಲ್ಲಿ ಗಾಂಧಿಯವರನ್ನು ವಿಶೇಷವಾಗಿ ಪುರೋಹಿತ ಸಮುದಾಯಕ್ಕೆ ಸೇರಿದ ಕೆಲ ಜನರು 'ಇದು ಹಿಂದೂ ಧರ್ಮದ ಸಾಮಾಜಿಕ ವಿಶಿಷ್ಟತೆಯ ಒಂದೇ ವರ್ಣದವರು ಮತ್ತು ಆ ವರ್ಣ ಶೂದ್ರವರ್ಣ ಎಂದರು. ಅಂತರ್ಜಾತಿ ಮತ್ತು ಸಹಭೋಜನಗಳನ್ನು ಖಾಸಗಿ ವಿಷಯಗಳು, ಭಾವೈಕ್ಯಕ್ಕೆ ಅವು ಅನಿವಾರ್ಯವಲ್ಲ ಎಂದು ಹೇಳುತ್ತಿದ್ದ ಗಾಂಧಿ ಈಗ ಹರಿಜನ ಮತ್ತು ಸವರ್ಣೀಯರ ನಡುವೆ ಮದುವೆ ಮಾಡಿಸಲು ಸ್ವತಃ ಮುಂದೆ ಬಂದರು. ನಾನು ಮದುವೆಗೆ ಬರಬೇಕಿದ್ದರೆ ಗಂಡು ಅಥವ ಹೆಣ್ಣು ಇಬ್ಬರಲ್ಲಿ ಒಬ್ಬರು ಅಸ್ಪೃಶ್ಯರಾಗಿರಬೇಕು ಎಂಬ ಹಂತಕ್ಕೆ ಬಂದರು. ದಲಿತರ ಬಗ್ಗೆ ಗಾಂಧಿಗಿದ್ದ ಕಾಳಜಿ ಅಂಬೇಡ್ಕರ್ ಅವರಿಂದಾಗಿ ಮೊನಚು ಪಡೆದುಕೊಂಡಿತು. ಆದರೆ ಓರ್ವ ಆಧುನಿಕ ಕನ್ಸರ್ವೇಟಿವ್ ಆಗಿದ್ದ ಗಾಂಧಿಗೆ ಈ ಜಾತಿಬದ್ಧವಾದ ಸಮಾಜವನ್ನು ನಿಧಾನವಾಗಿಯೇ ಆಮೂಲಾಗ್ರವಾಗಿ ಬದಲಾಯಿಸಬೇಕು ಎಂಬುದು ಒಂದು ಬದ್ಧತೆಯಾಗಿತ್ತು.

ಅಂಬೇಡ್ಕರ್ ಪೂನಾ ಒಪ್ಪಂದದ ನಂತರ ಘಾಸಿಗೊಂಡವರಂತೆ ಇದ್ದರು. ದಲಿತರ ನಡುವೆ ಗಾಂಧಿ ಜನಪ್ರಿಯರಾಗುತ್ತಿದ್ದುದು ಕೂಡ ಅವರನ್ನು ತಳಮಳಕ್ಕೀಡು ಮಾಡಿತು. ಆ ಹಿನ್ನೆಲೆಯೋ ಏನೋ ಅಂಬೇಡ್ಕರ್ ಗಾಂಧಿಯವರನ್ನು ತದನಂತರದಲ್ಲಿ ಹೀನಾಯವಾಗಿ ಟೀಕೆ ಮಾಡಲು ತೊಡಗಿದರು. ಗಾಂಧಿ ಮತ್ತು ಕಾಂಗ್ರೆಸ್ ತನ್ನ ವೈರಿಗಳು ಮತ್ತು ತನ್ನ ವಿರುದ್ಧ ಅನೈತಿಕ ಸಂಚು ಮಾಡುತ್ತಿದ್ದಾರೆಂಬ ಅನುಮಾನ ಅವರಿಗೆ ಒಂದು ಗೀಳು ಆಯಿತು. ಈ ಹಂತದಲ್ಲಿ ತಾತ್ತ್ವಿಕ ಬದ್ಧತೆಯನ್ನು ಕಳೆದುಕೊಂಡಂತೆ ಕಂಡು ಬಂದ ಅಂಬೇಡ್ಕರ್ ದಲಿತರ ಒಳಿತಿಗಾಗಿ ಯಾವ ಕಡೆಯಿಂದ ಸಹಾಯ ಬಂದರೂ ಅದನ್ನು ಒಪ್ಪಿಕೊಳ್ಳತೊಡಗಿದರು. ಆದ್ದರಿಂದ ಅಂಬೇಡ್ಕರ್ ಅವರನ್ನು ಸಂಘಪರಿವಾರದವರು, ಕಮ್ಯೂನಿಸ್ಟರು, ಕಾಂಗ್ರೆಸಿಗರು, ಕೊನೆಗೆ ಬ್ರಿಟಿಷರು ಹೀಗೆ ಎಲ್ಲರೂ ನಮ್ಮವರು ಎಂದು ಹೇಳುವಂತಹ ಸ್ಥಿತಿ ಬಂದೊದಗಿತು.

ಅಂಬೇಡ್ಕರ್ ಅವರಿಗೆ ಹೋಲಿಸಿದರೆ ಸವರ್ಣೀಯ ಸಮಾಜದಲ್ಲಿ ಸಹಜವಾಗಿಯೇ ಅನೇಕ ಸೌಕರ್ಯಗಳನ್ನು ಪಡೆದಿದ್ದ ಗಾಂಧಿ ತಮಗೆ ಪ್ರಿಯವಾದ ಅಸ್ಪೃಶ್ಯತಾ ನಿವಾರಣೆಯ ಕನಸನ್ನು ನನಸು ಮಾಡಿಕೊಳ್ಳಲು ಈ ಜನ್ಮದಲ್ಲಿ ಸಾಧ್ಯವಾಗಿಲ್ಲ. ಹಾಗಾಗಿ ಮುಂದಿನ ಜನ್ಮದಲ್ಲಿ ಓರ್ವ ಅಸ್ಪೃಶ್ಯನಾಗಿ ಹುಟ್ಟಬೇಕೆಂದು ಬಯಸುತ್ತಾರೆ. ಆದರೆ ಹಿಂದೂ ಧರ್ಮದಲ್ಲಿ ಓರ್ವ ಅಸ್ಪೃಶ್ಯನಾಗಿ ಹುಟ್ಟಿದ್ದರಿಂದ ಅನುಭವಿಸಿದ ಕಷ್ಟಕೋಟಲೆಗಳಿಂದ ಜರ್ಝರಿತಗೊಂಡ ಅಂಬೇಡ್ಕರ್ ಹಿಂದೂವಾಗಿ ಸಾಯಲಾರೆ ಎನ್ನುತ್ತಾರೆ. ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ರೂಪಿಸಿದ್ದ ಅವರ ವೈಚಾರಿಕ ಚಿಂತನೆಗಳ ಹಿನ್ನೆಲೆಯಲ್ಲಿ ಈ ಎರಡೂ ಮಾತುಗಳು ವಿಶೇಷ ಸಾಂಸ್ಕೃತಿಕ ಮೌಲ್ಯವನ್ನು ಪಡೆದಿವೆ.

ದಕ್ಷಿಣ ಆಫ್ರಿಕಾದಲ್ಲಿರುವಾಗಲೇ ಅಸ್ಪೃಶ್ಯತೆಯ ವಿರುದ್ಧ ವೈಯಕ್ತಿಕ ನೆಲೆಗಳಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದ ಗಾಂಧಿ ಭಾರತಕ್ಕೆ ಹಿಂದಿರುಗಿದ ನಂತರವೂ ಅನೇಕ ಕಡೆ ಮಾಡಿದ ಭಾಷಣಗಳಲ್ಲಿ ಮತ್ತು ಬರೆದ ಲೇಖನಗಳಲ್ಲಿ ಅಸ್ಪೃಶ್ಯತೆಯನ್ನು ಒಂದು ಸಾಮಾಜಿಕ ಪಿಡುಗೆಂದೇ ಪರಿಗಣಿಸಿ ಅದನ್ನು ರಾಷ್ಟ್ರೀಯ ಹೋರಾಟದ ಒಂದು ಅವಿಭಾಜ್ಯ ಭಾಗವನ್ನಾಗಿ ಮಾಡಿ, ಅದರ ವಿರುದ್ಧ ಹೋರಾಟವನ್ನು ಸಂಘಟಿಸತೊಡಗಿದರು. ಅಸ್ಪೃಶ್ಯತೆಯನ್ನು ಆಚರಿಸುತ್ತ ಇನ್ನೊಬ್ಬರನ್ನು ಗುಲಾಮರನ್ನಾಗಿ ಮಾಡಿದ ಈ ದೇಶದ ಸವರ್ಣೀಯ ಹಿಂದೂಗಳು ಬ್ರಿಟಿಷರ ಗುಲಾಮಗಿರಿಗೆ ಅರ್ಹರೇ ಆಗಿದ್ದಾರೆ ಎಂದ ಗಾಂಧಿ ಸಾಂಪ್ರದಾಯಿಕ ಹಿಂದೂಗಳು ಅಸ್ಪೃಶ್ಯತೆಯನ್ನು ಸಮರ್ಥಿಸುವ ಶಾಸ್ತ್ರಗಳನ್ನು ಉಲ್ಲೇಖಿಸಿದಾಗ ವಿವೇಚನೆ ಮತ್ತು ಸಾಮಾಜಿಕ ನೀತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಶಾಸ್ತ್ರಗಳನ್ನು ತಿರಸ್ಕರಿಸಬೇಕೆಂದರು. ಐದನೇ ಭಾಗದಷ್ಟು ಜನರನ್ನು ಗುಲಾಮಗಿರಿಯಲ್ಲಿರಿಸಿಕೊಂಡ ಜನ ಸ್ವರಾಜ್ಯಕ್ಕೆ ಯೋಗ್ಯರಲ್ಲ ಎಂದೂ ಘೋಷಿಸಿದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ಪ್ರಸ್ತಾಪಿಸುತ್ತಾ ಅವರು ಈ ಹತ್ಯಾಕಾಂಡ ನಡೆಸಿದವರು ಅಸ್ಪೃಶ್ಯತೆಯ ಕೌರ್ಯ ನಡೆಸುತ್ತಿರುವ ನಮ್ಮ ಮೇಲೆ ತಮ್ಮ ಮೇಲಿನ ಆರೋಪಗಳಿಗಿಂತ ಕ್ರೂರವಾದ ಆರೋಪಗಳನ್ನು ಹೊರಿಸಬಹುದಾಗಿದೆ ಎಂದು ಎಚ್ಚರಿಸಿದರು. ಇವೆಲ್ಲವೂ ಅಂಬೇಡ್ಕರ್ ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಮುನ್ನ ಗಾಂಧಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ನಡೆಸಿದ ಕಾರ್ಯಾಚರಣೆಗಳಲ್ಲಿನ ಉದ್ಗಾರಗಳು. ಅಷ್ಟೇ ಅಲ್ಲ, ಅಂಬೇಡ್ಕರ್ ನೇತೃತ್ವದ ೧೯೨೭ರ ಮಹಾಡ್ ಕೆರೆ ನೀರನ್ನು ಮುಟ್ಟುವ ಸತ್ಯಾಗ್ರಹವನ್ನು ಅವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬೆಂಬಲಿಸುತ್ತಾರಲ್ಲದೆ, ಆ ಸತ್ಯಾಗ್ರಹ ಸಂದರ್ಭದಲ್ಲಿ ಸವರ್ಣೀಯರು ಅಸ್ಪೃಶ್ಯರ ಮೇಲೆ ನಡೆಸಿದ ದೌರ್ಜನ್ಯಗಳನ್ನು ಖಂಡಿಸಿ, ಅಂಬೇಡ್ಕರ್ ಪ್ರದರ್ಶಿಸಿದ ಸಂಯಮಪೂರ್ಣ ನಾಯಕತ್ವವನ್ನು ಶ್ಲಾಘಿಸುತ್ತಾರೆ. (*'ಯಂಗ್ ಇಂಡಿಯಾ', ೨೮, ಏಪ್ರಿಲ್, ೧೯೨೭*)

ನಾಶ' ಎಂದು ಕಟುವಾಗಿ ಟೀಕಿಸುತ್ತಾರೆ. ಯುಗಧರ್ಮವನ್ನು ನಾಶಗೊಳಿಸಿದ ಕಲಿಪುರುಷ ಎಂದೂ ಬಣ್ಣಿಸುತ್ತಾರೆ. ಜೊತೆಗೆ ಗಾಂಧಿಯವರನ್ನು ಮುಗಿಸಲು ಎರಡು ಬಾರಿ ಕೊಲೆ ಪ್ರಯತ್ನಗಳೂ ನಡೆಯುತ್ತವೆ. ಇದೇ ಸಂದರ್ಭದಲ್ಲಿ, ಕನ್ನಡಿಗರಾದ ನಾವು ಯಾರನ್ನು 'ಕರ್ನಾಟಕದ ಕುಲಪುರೋಹಿತ' ಎಂದು ಕರೆಯುತ್ತೇವೆಯೋ ಅಂತಹ ಆಲೂರು ವೆಂಕಟರಾಯರು ಗಾಂಧಿ ಮತ್ತು ಕಾಂಗ್ರೆಸ್ ಸಹವಾಸವನ್ನು ತೊರೆದು 'ಹಿಂದೂ ಮಹಾಸಭಾ' ಸೇರಿಕೊಳ್ಳುತ್ತಾರೆ.

ಪೂನಾ ಒಪ್ಪಂದದ ನಂತರ ಗಾಂಧಿ ಮತ್ತು ಅಂಬೇಡ್ಕರ್ ನಡುವೆ ನಡೆದ ಸಂವಾದ ನಮಗೆ ದೊರಕುವುದು ಅಂಬೇಡ್ಕರ್ ಅವರ 'ಜಾತಿ ವಿನಾಶ' ಪ್ರಬಂಧಕ್ಕೆ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಗಾಂಧಿ ಬರೆದ ಪ್ರತಿಕ್ರಿಯೆ ಮತ್ತು ಆ ಪ್ರತಿಕ್ರಿಯೆಗೆ ಅಂಬೇಡ್ಕರ್ ಅವರು ನೀಡಿದ ಉತ್ತರಗಳಲ್ಲಿ. ಆರ್ಯ ಸಮಾಜದ ಆಲೋಚನೆಗಳಿಂದ ತೀವ್ರವಾಗಿ ಪ್ರಭಾವಿತವಾಗಿದ್ದ ಕೆಲವರು ಲಾಹೋರ್‌ನ ಜಾತ್ ಪಾತ್ ತೋಡಕ್ ಮಂಡಲ್ (ಜಾತಿ ಪಾತಿ ಒಡೆಯುವ ಮಂಡಲ) ೧೯೩೬ರ ಮೇನಲ್ಲಿ ಆಯೋಜಿಸಲು ಉದ್ದೇಶಿಸಿದ್ದ ಸಮ್ಮೇಳನವೊಂದರ ಸರ್ವಾಧ್ಯಕ್ಷತೆಗೆ ಅಂಬೇಡ್ಕರ್ ಅವರನ್ನು ಆಹ್ವಾನಿಸಿದ್ದರು ಮತ್ತು ಆ ಆಹ್ವಾನವನ್ನು ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಆದರೆ ಅಂಬೇಡ್ಕರ್ ಅವರು ಇದಕ್ಕಾಗಿ ತಯಾರಿಸಿದ್ದ ಭಾಷಣದಲ್ಲಿನ 'ಇದು ಹಿಂದೂವಾಗಿ ನನ್ನ ಕೊನೆಯ ಭಾಷಣ' ಎಂಬ ವಾಕ್ಯವನ್ನು ತೆಗೆಯಬೇಕೆಂದು ಸಂಘಟಕರ ಕೋರಿಕೆಯನ್ನು ಅಂಬೇಡ್ಕರ್ ಒಪ್ಪದಿದ್ದಾಗ ಅದು ಆ ಸಮ್ಮೇಳನವನ್ನು ರದ್ದುಪಡಿಸಿತು. 'ಜಾತಿ ವಿನಾಶ' ಎಂದು ಪ್ರಸಿದ್ಧವಾದ ಆ ಭಾಷಣವನ್ನು ಅಂಬೇಡ್ಕರ್ ತಾವೇ ಪ್ರಕಟಿಸಿ ಅದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿದರು. ಗಾಂಧಿ ಈ ಪ್ರಬಂಧವನ್ನೂ ಗಮನಿಸಿ ಅದನ್ನು ತಮ್ಮ 'ಹರಿಜನ' ಪತ್ರಿಕೆಯ ೧೯೩೬ರ ಜುಲೈ ೧೧ರ ಸಂಚಿಕೆಯಲ್ಲಿ ಪ್ರಕಟಿಸಿದ್ದಲ್ಲದೆ ಅದಕ್ಕೊಂದು ಪ್ರತಿಕ್ರಿಯೆಯನ್ನೂ ಬರೆದರು.

ಈ ಪ್ರತಿಕ್ರಿಯೆಯಲ್ಲಿ ಗಾಂಧಿ ಸವರ್ಣೀಯ ಹಿಂದೂಗಳಿಂದ ಅಮಾನವೀಯವಾದ ಅವಮಾನ–ದೌರ್ಜನ್ಯಗಳನ್ನು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುತ್ತಿರುವ ಸಮುದಾಯಕ್ಕೆ ಸೇರಿದ ಅಂಬೇಡ್ಕರ್ ಅವರ ಈ ಪ್ರಬಂಧವನ್ನು ಯಾವ ಸುಧಾರಕನೂ ಉದಾಸೀನ ಮಾಡುವಂತಿಲ್ಲ ಎನ್ನುತ್ತಾರಲ್ಲದೆ, ಸಂಪ್ರದಾಯವಾದಿಗಳು ಇದನ್ನು ಓದಿದರೆ ಪ್ರಯೋಜನ ಪಡೆಯುವರು ಎಂದು ಹೇಳುತ್ತಾರೆ. ಇದು ಭಾರತದ ಎಲ್ಲ ಭಾಷೆಗಳಿಗೂ ಅನುವಾದವಾಗಬೇಕು ಮತ್ತು ಇದರ ಬೆಲೆ ಈಗಿರುವ ಹನ್ನೆರಡಾಣೆಗಿಂತ ಕಡಿಮೆಯಾಗಬೇಕು; ಎರಡಾಣೆಗೆ, ಹೆಚ್ಚೆಂದರೆ ನಾಲ್ಕಾಣೆಗೆ ಇದು ಸಾಮಾನ್ಯ ಜನರಿಗೆ ಸಿಗುವಂತಾಗಬೇಕು ಎಂದೂ ಅವರು ಸೂಚಿಸುತ್ತಾರೆ. ಆದರೆ ಅಂಬೇಡ್ಕರ್ ಜಾತಿ ಕುರಿತು ಮಂಡಿಸಿರುವ ವಿಚಾರಗಳನ್ನಾಗಲೀ, ಅದರ ಆಧಾರದ ಮೇಲೆ ಅವರು ತಮ್ಮ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು ಅಂದರೆ ಒಂದು ಪರಂಪರೆಯ ವಾರಸುದಾರಿಕೆಯನ್ನು ತೊರೆದುಹೋಗುವ ನಿರ್ಧಾರವನ್ನು ಒಪ್ಪುವುದಿಲ್ಲ.


ಗಾಂಧಿ ಪ್ರಕಾರ ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ. ಜಾತಿ ವಿಸರ್ಜಿಸುವುದಕ್ಕೆ ಯೋಗ್ಯವಾದುದು. ಆದರೆ ಧರ್ಮವೆಂದರೆ ಆಧ್ಯಾತ್ಮವನ್ನು ಆರ್ಜಿಸುವ ಹಾದಿಯಲ್ಲಿನ ಮನುಷ್ಯನ ನಡವಳಿಕೆಗಳು. ಧರ್ಮದ ಹೆಸರಿನಲ್ಲಿ ಯಾರೋ ಕೆಲವರು ನಡೆಸಿದ ದೌರ್ಜನ್ಯವನ್ನು ಮತ್ತು ಕೆಲ ಕೆಟ್ಟ ಉದಾಹರಣೆಗಳ ಹೊಣೆಯನ್ನು ಇಡೀ ಧರ್ಮದ ಮೇಲೆ ಹೊರಿಸಿ ಧರ್ಮ ಬಿಟ್ಟು ಹೊರಹೋಗುವುದು ಉಚಿತವಲ್ಲ. ಇಡೀ ಅಸ್ಪೃಶ್ಯ ಸಮುದಾಯ ಹಾಗೆ ಭಾವಿಸಿಲ್ಲ. ಅಂಬೇಡ್ಕರ್‌ರದ್ದು ಅಲ್ಪಸಂಖ್ಯಾತ ಅಭಿಪ್ರಾಯ. ಹಿಂದೂ ಧರ್ಮವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬಯಸುವ ಹಲವರು ಅಸ್ಪೃಶ್ಯರಲ್ಲಿದ್ದಾರೆ ಎಂದು ರಾವ್ ಬಹಾದುರ್, ಎಂ.ಸಿ. ರಾಜಾ ಮತ್ತು ದಿವಾನ್ ಬಹಾದುರ್ ಶ್ರೀನಿವಾಸನ್ ಅವರ ಉದಾಹರಣೆಗಳನ್ನು ನೀಡುತ್ತಾರೆ. ಹಿಂದೂ ಧರ್ಮ ಬೆಳೆದಿರುವುದು ಶಾಸ್ತ್ರಗ್ರಂಥಗಳ ನೀತಿ–ನಿಯಮಗಳ ಆಧಾರದ ಮೇಲಲ್ಲ. ಬದಲಿಗೆ, ಕಾಲಾನುಕಾಲದಲ್ಲಿ ಬಾಳಿ ಹೋದ ಸಮಾಜಸುಧಾರಕ ಸಂತರು ಅವುಗಳ ಬಗ್ಗೆ ಮಾಡಿದ ವ್ಯಾಖ್ಯಾನಗಳು ಮತ್ತು ಉಪದೇಶಗಳ ಮೂಲಕ ಎಂದು ಅವರು ಜ್ಞಾನದೇವ, ಏಕನಾಥ, ತುಕಾರಾಮ, ಕಬೀರ, ಚೈತನ್ಯ, ತಿರುವಳ್ಳುವರ್ ಮುಂತಾದ ಉದಾಹರಣೆಗಳನ್ನು ನೀಡುತ್ತಾರೆ ಮತ್ತು ಇಂತಹ ಮಹಾತ್ಮರು ಹಾಗೂ ರಾಜಾರಾಂ ಮೋಹನ ರಾಯ್, ಮಹರ್ಷಿ ದೇವೇಂದ್ರನಾಥ ಟ್ಯಾಗೋರ್, ರಾಮಕೃಷ್ಣ ಪರಮಹಂಸ, ವಿವೇಕಾನಂದರಂಥ ಮಹಾಪುರುಷರಿಂದ ಪ್ರತಿಪಾದಿಸಲ್ಪಟ್ಟ ಧರ್ಮವು ಬರೀ ದೋಷಗಳಿಂದ ತುಂಬಿ ತಿರಸ್ಕರಣೀಯವಾಗಿದೆ ಎಂದು ನಂಬಲಾಗದು ಎನ್ನುತ್ತಾರೆ ಗಾಂಧಿ. ಹೀಗೆ ಗಾಂಧಿ ಒಂದರ್ಥದಲ್ಲಿ ಓರ್ವ ಶ್ರಮಣರಂತೆ ಹಿಂದೂ ಧರ್ಮವನ್ನು ಒಂದು ಶ್ರಮಣ ಧರ್ಮವನ್ನಾಗಿ ಪ್ರಸ್ತುತಪಡಿಸಲು ಯತ್ನಿಸುತ್ತಾರೆ ಎಂದು ಹೇಳುವ ಡಿ ಎಸ್ ನಾಗಭೂಷಣರ ಮಾತನ್ನು ನಾನಿಲ್ಲಿ ವಿಶೇಷವಾಗಿ ಸ್ಮರಿಸಿಕೊಳ್ಳಲು ಬಯಸುತ್ತೇನೆ.

ಇದಕ್ಕೆ ಅಂಬೇಡ್ಕರ್ ಒಂದು ವಿವರವಾದ ಉತ್ತರ ನೀಡುತ್ತಾರೆ. ಗಾಂಧಿಯವರ ವಾದದ ಪ್ರತಿ ಅಂಶವನ್ನೂ ಎತ್ತಿಕೊಂಡು ಅದನ್ನು ತಿರಸ್ಕರಿಸುತ್ತಾರೆ. ಈ ತಿರಸ್ಕಾರದ ಭಾಗವಾಗಿ ಅವರು ಗಾಂಧಿಯನ್ನು ಆತ್ಮದ್ರೋಹಿಯೆಂದೂ, ಯೋಚನಾ ಶಕ್ತಿಯೇ ಇಲ್ಲದವರೆಂದೂ, ಕೊನೆಗೆ ಹಿಂದೂ ಧರ್ಮದ ಶತ್ರುವೆಂದೂ ಟೀಕಿಸುತ್ತಾರೆ. ಬಿಬಿಸಿಗೆ ನೀಡಿದ ಸಂದರ್ಶನದಲ್ಲಂತೂ ಅಂಬೇಡ್ಕರ್ ಗಾಂಧಿಯವರನ್ನು ಸಾರ್ವಜನಿಕ ಸಭ್ಯತೆಯ ಚೌಕಟ್ಟಿನ ಆಚೆಗೆ ನಿಂದಿಸುತ್ತಾರೆ. 'ಆತ ಓರ್ವ ಅನೈತಿಕ ವ್ಯಕ್ತಿ' ಎಂದೂ ಜರೆಯುತ್ತಾರೆ.

ಆದರೆ ಅಂಬೇಡ್ಕರ್ ಅವರಿಗೆ ಗಾಂಧಿ ಹಿಂದೂ ಧರ್ಮವನ್ನು ಬ್ರಾಹ್ಮಣ ಕೇಂದ್ರದಿಂದ ಬಿಡಿಸಿ ಅದನ್ನು ಸಂತ ಪರಂಪರೆಯೊಂದಿಗೆ ಜೋಡಿಸುತ್ತಾ ಜನಸಾಮಾನ್ಯರ ಧರ್ಮವನ್ನಾಗಿ ಪರಿವರ್ತಿಸಲು ಕೈಗೊಂಡಿದ್ದ ಕ್ರಮಗಳು ಕಾಣುವುದಿಲ್ಲ. ಪಶ್ಚಿಮದ ಆಧುನಿಕತೆ ಬೆಳೆಸಿದ ಕಡು ವೈಚಾರಿಕತೆಯ ಪ್ರತೀಕವಾಗಿರುವ ಅಂಬೇಡ್ಕರ್ ಗಾಂಧಿಯವರ ವಿಚಾರದ ಎಳೆಗಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಪಶ್ಚಿಮದಲ್ಲಿ ತನ್ನ ಬೌದ್ಧಿಕತೆಯನ್ನು ರೂಪುಗೊಳಿಸಿದ ಅಂಬೇಡ್ಕರ್ ಪಶ್ಚಿಮದ ಸಮಾಜದ ಕ್ರಿಶ್ಚಿಯನ್ ಲೋಕದೃಷ್ಟಿಯನ್ನು ಅದರಲ್ಲೂ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಧರ್ಮದ ಲೋಕದೃಷ್ಟಿಯನ್ನು ತಮ್ಮದಾಗಿಸಿಕೊಂಡವರು. ಚಲನೆ ಇಲ್ಲದ, ಏಕಘನಾಕಾರದ, ಶಿಸ್ತುಬದ್ಧವಾದ ಮತ್ತು ಏಕದೇವೋಪಾಸನೆಯ ಆಚರಣೆ, ಸಂಪ್ರದಾಯಗಳ ಮೊತ್ತವನ್ನೇ ಅವರು ಧರ್ಮ ಎಂದು ಭಾವಿಸಿದರು. ಪಶ್ಚಿಮದ ರಿಲಿಜನ್‌ಗೆ ಪರ್ಯಾಯವಾಗಿ ಪೂರ್ವದಲ್ಲಿ ಧರ್ಮ ಇದೆ ಎಂದು ಅವರು ತಪ್ಪು ಅನುವಾದ ಮಾಡಿಕೊಂಡಿದ್ದರು. ಹಾಗಾಗಿ ಅವರಿಗೆ ಗಾಂಧಿ ಸ್ಥಗಿತಗೊಂಡ ಒಂದು ಮನಸ್ಥಿತಿಯ ವಾರೀಸುದಾರ ಎಂದು ಅನ್ನಿಸಿತ್ತು. ತನಗೆದುರಾದ ಪ್ರಾಣಾಪಾಯಗಳನ್ನೂ ಲೆಕ್ಕಿಸದೆ ಗಾಂಧಿ ಭಾರತೀಯರ ಧಾರ್ಮಿಕ ಮನೋಭಾವನೆಗಳನ್ನು ಆಮೂಲಾಗ್ರವಾಗಿ ಬದಲಾಯಿಸುತ್ತಿದ್ದಾರೆ ಎಂಬುದನ್ನು ಅವರು ಕಾಣದೆ ಹೋದರು. ಹಾಗಾಗಿ ಗಾಂಧಿ ಹತ್ಯೆಯಾದಾಗಲೂ ಅಂಬೇಡ್ಕರ್‌ರವರು ನೀಡಿದ ಹೇಳಿಕೆ ಅವರು ನಂಬಿದ ವಿಚಾರಗಳಿಗನುಗುಣವಾಗಿಯೇ ಇತ್ತು.

ಭಾರತೀಯ ಸಮಾಜಗಳ ಅಧ್ಯಯನಕ್ಕೆ ಅಂಬೇಡ್ಕರ್ ಒಂದು ಹೊಸ ಬಗೆಯ ದೃಷ್ಟಿಕೋನವನ್ನು ಒದಗಿಸಿದರು. ಜಾತಿ ಪದ್ಧತಿ ಭಾರತದಲ್ಲಿ ಬೆಳೆದು ಬಂದ ಬಗೆಯನ್ನು ಅವರು ಚಾರಿತ್ರಿಕವಾಗಿ ಶೋಧಿಸಿದರು. ಈ ಶೋಧನೆಯಿಂದಲೇ ಅವರಿಗೆ ಪಾರಂಪರಿಕ ಜಾತಿವ್ಯವಸ್ಥೆಯನ್ನು ಆಧುನಿಕ ಕಾಲದ ಯಾವ ಮೌಲ್ಯಗಳನ್ನು ಕ್ರಿಯಾತ್ಮಕಗೊಳಿಸುವುದರ ಮೂಲಕ ದಾಟಬಹುದು ಎಂಬ ಹೊಸಹೊಳಹುಗಳು ಸಿಕ್ಕವು. ಭಾರತದ ನಿಬಿಡವಾದ ಮತ್ತು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯಲ್ಲಿ ಇದಕ್ಕೆ ಯಾವತ್ತೂ ಅದರದ್ದೇ ಆದ ಘನತೆ ಮತ್ತು ಮಹತ್ತ್ವ ಇದ್ದೇ ಇದೆ. ಆದರೆ ಅಂಬೇಡ್ಕರ್‌ರವರನ್ನು ರೂಪುಗೊಳಿಸಿದ ಆ ಕಾಲದ ವೈಚಾರಿಕತೆ ಮತ್ತು ಆಧುನಿಕತೆ; ಗಾಂಧಿ ಎಂಬ ದಾರ್ಶನಿಕನನ್ನು ಸರಿಯಾಗಿ ಗ್ರಹಿಸುವುದಕ್ಕೆ ಸ್ವತಃ ಅಂಬೇಡ್ಕರ್ ಅವರಿಗೇ ಅವಕಾಶ ಮಾಡಿಕೊಡಲಿಲ್ಲ. ತಾನು ಬದುಕಿದ್ದ ತನ್ನ ದೇಶಕಾಲದ ಬಂಧಿಯಾಗಿದ್ದ ಮತ್ತು ವೈಚಾರಿಕವಾಗಿ ತನ್ನನ್ನು ತಾನು ಮುಚ್ಚಿಕೊಂಡಿದ್ದ ಅಂಬೇಡ್ಕರ್‌ರವರನ್ನು ಅವರನ್ನು ನಾವು ನೋಡಬೇಕಾದ್ದು ಹೀಗೆ.

(೨೦೧೭ರ ಅಕ್ಟೋಬರ್ ೧೪ ಹಾಗೂ ೧೫ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಏರ್ಪಡಿಸಿದ್ದ 'ಗಾಂಧಿಯೊಂದಿಗೆ ಸಂವಾದ' ಎಂಬ ವಿಷಯ ಕುರಿತ ಅಧ್ಯಯನ ಶಿಬಿರದ ಗೋಷ್ಠಿಯೊಂದರಲ್ಲಿ ಮಾಡಿದ ಭಾಷಣದ ಬರಹ ರೂಪ)




(ತುಮಕೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಲೇಖಕ ನಿತ್ಯಾನಂದ ಶೆಟ್ಟಿಯುವರು ಬಹುಶಿಸ್ತೀಯ ಅಧ್ಯಯನಗಳಲ್ಲಿ ಆಸಕ್ತಿ ಹೊಂದಿದ ನಮ್ಮ ನಡುವಿನ ಯುವ ವಿದ್ವಾಂಸರಲ್ಲಿ ಒಬ್ಬರು)

ಗಾಂಧಿ ಮತ್ತು ಸಮಾಜವಾದ ಹಾಗೂ ಸಮಾಜವಾದಿಗಳು

–ಡಿ.ಎಸ್. ನಾಗಭೂಷಣ


"ಸಮಾಜವಾದದ ನನ್ನ ಪರಿಕಲ್ಪನೆ ಸ್ವಲ್ಪ ಬೇರೆಯೆ ಇದೆ. ಈ ವಿಷಯದಲ್ಲಿ ಉಳಿದವರಿಗೆ ಸಹಮತವಿಲ್ಲದಿದ್ದರೂ, ಅವರು ನನ್ನನ್ನು ತೊರೆದರೂ ನಾನು ಚಿಂತಿಸುವುದಿಲ್ಲ.ಅವರೆಲ್ಲರೂ ನನ್ನ ಸ್ನೇಹಿತರೆ ಆಗಿದ್ದರೆ. ಹಾಗಾಗಿ ಅವರಿಗೆ ನಾನು ಹೇಳುವುದೆಂದರೆ, " ಒಬ್ಬ ನಿರ್ಬಲನು ತನಗೆ ಅಗತ್ಯವಿದ್ದುದನ್ನು ಒದಗಿಸಿಕೊಳ್ಳಲಾಗದಿದ್ದರೆ ನಾನೂ ಅವುಗಳನ್ನು ವರ್ಜಿಸುತ್ತೇನೆ. ಮೊದಲಿಗೆ ಅವನ ಅಗತ್ಯಗಳನ್ನು ಪೂರೈಸುವಂತೆ ನೋಡಿಕೊಂಡು ನಂತರ ನನ್ನ ಬಗ್ಗೆ ಯೋಚಿಸುತ್ತೇನೆ .ಇದು ಸಮಾಜವಾದದ ನನ್ನ ರೀತಿ ಮತ್ತು ಪರಿಕಲ್ಪನೆ. ಮಾದರಿಯ ಸಮಾಜವಾದವನ್ನು ತರಬೇಕೆಂದು ನೀವೂ ಇಚ್ಛಿಸದರೆ ನಿಮ್ಮೊಟ್ಟಿಗೆ ಕೂಡಿ ಕೆಲಸವನ್ನು ಮಾಡುವವರಲ್ಲಿ ನಾನೇ ಮೊದಲಿಗನಾಗಿರುತ್ತೇನೆ." –ಮಹಾತ್ಮ ಗಾಂಧಿ



ಸಮಾಜವಾದ ಎಂಬ ಶಬ್ದ ಅಚ್ಚ ಭಾರತೀಯ ಶಬ್ದವಾಗಿ ಕಂಡರೂ, ಪರಿಕಲ್ಪನೆಯಾಗಿ ಅದರ ಮೂಲ ಇರುವುದು ೧೮-೧೯ನೇ ಶತಮಾನದ ಯೂರೋಪ್‌ನಲ್ಲಿ. ಅದು ಯೂರೋಪ್‌ನ 'ಜ್ಞಾನ ಯುಗ'ದ ಫಲವಾಗಿ ಅಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿ ಹುಟ್ಟು ಹಾಕಿದ ವಿಚಾರಕ್ರಾಂತಿಯ ಫಲಗಳಲ್ಲೊಂದು. ಕೈಗಾರಿಕಾ ಕ್ರಾಂತಿ ಪಶಚಿಮ ಯೂರಪ್ಪನದೇಶ್ಲಾಧ ಇಂಗ್ಲೆಂಡ್, ಜರ್ಮನಿ ಮತ್ತು ಫ್ರಾನ್ಸ್ ದೇಶಗಳ ಸಮಾಜಗಳಲ್ಲಿ ಉಂಟು ಮಾಡಿದ ಆರ್ಥಿಕ ಮತ್ತು ಸಾಮಾಜಿಕ ಏರುಪೇರು ಮತ್ತು ವಿಷಮತೆಗಳನ್ನು ಪರಿಹರಿಸಲು ನಡೆಸಲಾದ ವಿಚಾರ ಮಂಥನದ ಮೂಸೆಯಲ್ಲಿ ಮೂಡಿದ ಒಂದು ವಿಚಾರಧಾರೆ ಸಮಾಜವಾದ.

ಕೈಗಾರಿಕಾ ಸಮಾಜದಲ್ಲಿ ಉಂಟಾದ ಮಾಲಿಕರು ಅಥವಾ ಬಂಡವಾಳಗಾರರು ಮತ್ತು ಕಾರ್ಮಿಕರ ಸಂಬಂಧಗಳು ಹೊಸಹೊಸ ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ ಕೈಗಾರಿಕಾ ಉತ್ಪಾದನೆಯ ರೀತಿ ನೀತಿಗಳನ್ನು ಕ್ರಾಂತಿಕಾರಕವಾಗಿ ಬದಲಾಯಿಸುತ್ತಾ ಹೋದ ಪರಿಣಾಮವಾಗಿ ಹೆಚ್ಚೆಚ್ಚು ಘರ್ಷಣಾತ್ಮಕವಾಗುತ್ತಾ ಹೋಗಿ ಅಂತಿಮವಾಗಿ ಕಾರ್ಮಿಕ ಕ್ರಾಂತಿಯಲ್ಲಿ ಕೊನೆಗೊಂಡು ಶೋಷಣೆ ಇಲ್ಲದ ಸಮಾನತೆಯ ಸುಖಿ ರಾಜ್ಯ ಕಾರ್ಮಿಕರ ಸರ್ವಾಧಿಕಾರದಡಿಯಲ್ಲಿ ಸ್ಥಾಪಿತವಾಗುತ್ತದೆ ಎಂಬ ತರ್ಕದ ಮೇಲೆ ಸಮಾಜವಾದದ ತಾತ್ವಿಕ ಕಟ್ಟಡವನ್ನು ಕಟ್ಟಲಾಯಿತು.ಇದರ ಮುಖ್ಯ ವಾಸ್ತುಶಿಲ್ಪಿ ಜರ್ಮನಿಯ ಪ್ರಖರ ತತ್ವಜ್ಞಾನಿ ಕಾರ್ಲ್ ಮಾರ್ಕ್ಸ್. ಈ ತರ್ಕ ಬಹಳ ಶಿಸ್ತುಬದ್ಧವಾಗಿಕಂಡದ್ದರಿಂದ ಮತ್ತು ಇದರಲ್ಲಿ ತಂತ್ರಜ್ಞಾನದ ಕ್ರಾಂತಿಕಾಶರಿ ಪಾತ್ರವಿದ್ದುದರಿಂದ ಇದನ್ನು 'ವೈಜ್ಞಾನಿಕ ಸಮಾಜವಾದ' ಎಂದು ಕರೆಯಲಾಯಿತು. ಇದು ಮಾಲೀಕ ಮತ್ತು ಕಾರ್ಮಿಕ ಎಂಬ ಎರಡು ಅತಿಗಳ ನಡುವೆ (ಮನುಷ್ಯನ ಅಧ್ಯಾತ್ಮಿಕತೆಯ ಗೋಜಿಲ್ಲದೆ) ಭೌತವಾದಿ ಪರಿಭಾಷೆಯಲ್ಲೇ ತುಯ್ದಾಡುತ್ತಾ ಕಟ್ಟಿಕೊಳ್ಳುವ ಪ್ರಕ್ರಿಯೆಯಾದ್ದರಿಂದ ಇದನ್ನು ದ್ವಂದ್ವಾತ್ಮಕ ಭೌತವಾದ ಎಂದೂ ಕರೆಯಲಾಗುತ್ತದೆ. ಇದರ ಅನುಯಾಯಿಗಳನ್ನು ಕಮ್ಯನಿಸ್ಟರು ಎಂದು ಕರೆಯಲಾಗುತ್ತದೆ.

ಮಾಲೀಕ ಅಥವಾ ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವೆ ಮೂಡುವ ವಿಷಮ ಸಂಬಂಧಗಳನ್ನು ಮಾನವ ಮಧ್ಯಸ್ಥಿಕೆಯ ಮಾರ್ಗಗಳ ಮೂಲಕ (ಉದಾ: ಸಹಕಾರಿ ತತ್ವ, ಪ್ರಜಾತಾಂತ್ರಿಕ ವಿಧಾನ ಇತ್ಯಾದಿ) ಪರಿಹರಿಸುವ ವಿವಿಧ ಪ್ರಯೋಗಗಳು ನಡೆದು ಹಲವು ತೆರೆನ ಸಮಾಜವಾದಗಳು ಪ್ರಚಲಿತಕ್ಕೆ ಬಂದುವಾದರೂ, ಮಾರ್ಕ್ಸ್‌ವಾದದ ಸ್ಫೂರ್ತಿಯಲ್ಲಿ ಸಂಭವಿಸತೆಂದು ಹೇಳಲಾದ ೧೯೧೭ರ ರಷ್ಯಾದ ಕ್ರಾಂತಿಯ ನಾಟಕೀಯತೆ, ಸಮಾಜವಾದವೆಂದರೆ ವೈಜ್ಞಾನಿಕ ಸಮಾಜವೆಂದೇ ಸಾಮಾನ್ಯವಾಗಿ ಜಗತ್ತಿನಾದ್ಯಂತ ಮಾನ್ಯ ಮಾಡಲ್ಪಟ್ಟಿತು.ಈ ಸಮಾಜವಾದಕ್ಕೆ ತಾತ್ವಿಕ ಆಧಾರವಾದ ಮಾರ್ಕ್ಸ್‌ವಾದ ರಷ್ಯಾದ ಕ್ರಾಂತಿಯ ನಂತರದ ಈ ನೂರು ವರ್ಷಗಳಲ್ಲಿ ಲೆನಿನ್, ಮಾವೋ ಮುಂತಾದ ತಾತ್ವಿಕ ನಾಯಕರಿಂದ ಅನೇಕ ತಿದ್ದುಪಡಿ, ಮರು ನಿರೂಪಣೆಗಳಿಗೆ ಒಳಪಟ್ಟಿದ್ದರೂ, ಅದರ ಮೂಲ ಕ್ರಿಯಾಶೀಲತೆ ಸಮಾಜವನ್ನು ವರ್ಗಗಳಾಗಿ ನೋಡಿ ಅವುಗಳ ನಡುವಣ ಹೋರಾಟದ ಮೂಲಕ ಶೋಷಣಾರಹಿತವಾದ ಸಮಾನತೆಯ ಸಮಾಜದ ನಿರ್ಮಾಣದ ಹಂಬಲದಲ್ಲಿ ಅಡಗಿದೆ. ಲೆನಿನ್ ನೇತೃತ್ವದಲ್ಲಿ ರಷ್ಯಾದಲ್ಲಿ ಇಂತಹ ವರ್ಗ ಹೋರಾಟ ಯಶಸ್ವಿಯಾಗಿ ನಡೆದು ಅಲ್ಲಿ ಹೊಸ ಸಮಾಜ ನಿರ್ಮಾಣವಾಗುತ್ತಿದೆ ಎಂಬ ಜಾಗತಿಕ ಹೊಸ ಹುರುಪಿನ ವಾತಾವರಣ ಪರಿಣಾಮ



ನರೇಂದ್ರ ದೇವ ಜೆಪಿ ಲೋಹಿಯಾ

ಇತರ ಹಲವು ದೇಶಗಳಲ್ಲಿಯೂ ಕಾರ್ಮಿಕ ಕ್ರಾಂತಿಯ ಹುರುಪನ್ನು ಹುಟ್ಟಿಸಿತು. ಮಾರ್ಕ್ಸ್‌ವಾದ ಆಧುನಿಕ ಯುಗದ ಪರಮ ಮೌಲ್ಯವೆನಿಸಿದ ಸಮಾನತೆಯ ತುಡಿತಕ್ಕೊಂದು ಬೌದ್ಧಿಕತೆಯ ರೂಪ ನೀಡಿತು.

ಬ್ರಿಟಿಷ್ ಪ್ರಭುತ್ವದ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದ ಭಾರತವೂ ರಷಿಯಾದ ಕಮ್ಯೂನಿಸ್ಟ್ ಕ್ರಾಂತಿ ಮತ್ತು ಅದಕ್ಕೆ ಸ್ಫೂರ್ತಿಯಾದದ್ದೆಂದು ಹೇಳಾಲಾಗುವ ಮಾರ್ಕ್ಸ್‌ವಾದದ ಪ್ರಭಾವದಿಂದ ಹೊರತಾಗಿರಲು ಹೇಗೆ ಸಾಧ್ಯ? ೧೯೨೦ರಲ್ಲೇ ರಷ್ಯಾದ ತಾಷ್ಕೆಂಟ್‌ನಲ್ಲಿ ಎಂ.ಎನ್. ರಾಯ್, ಅಬಾನಿ ಮುಖರ್ಜಿ ಮಹಮ್ಮದ್ ಅಲಿ ಮುಂತಾದವರಿಂದ ಭಾರತದ ಕಮ್ಮಯೂನಿಸ್ಟ್ ಪಕ್ಷ ಸ್ಥಾಪಿತವಾಯಿತಾದರೂ, ಅದು ಭಾರತದ ನೆಲದಲ್ಲಿ ಕಾರ್ಯಶೀಲಗೊಳ್ಳದಂತೆ ಬ್ರಿಟಿಷ್ ಸರ್ಕಾರ ಅರ ಮೇಲೆ ನಿಷೇಧ ಹೇರಿತ್ತು. ಹೀಗಾಗಿ ಅಲ್ಲಲ್ಲಿ ಕಮ್ಯೂನಿಸ್ಟ್ 'ಗುಂಪು'ಗಳು ಭೂಗತವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಎಸ್.ಎ. ಡಾಂಗೆ, ಸಿಂಗಾರವೇಲು, ಶೌಕತ್ ಅಲಿ ಈ ಗುಂಪುಗಳ ನಾಯಕರಾಗಿದ್ದರು. ಇವರಾರೂ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಠವನ್ನು ಬೆಂಬಲಿಸದಿರುವುದು ಮಾತ್ರವಲ್ಲ, ಅವರನ್ನು ಬಂಡವಾಳಿಗರ ಮತ್ತು ಜಮೀನ್ದಾರರ ವಕ್ತಾರ ಎಂದು ದೂಷಿಸುತ್ತಿದ್ದಿರು.

ಆದರೆ ಗಾಂಧಿ ಪ್ರಭಾವಕ್ಕೆ ಒಳಗಾಗಿದ್ದ ಅನೇಕರನ್ನೂ ರಷ್ಯಾದ ಕ್ರಾಂತಿ ಮತ್ತು ಮಾರ್ಕ್ಸ್‌ವಾದ ಸೆಳೆದಿದ್ದವು. ಅವರಲ್ಲಿ ಪ್ರಮುಖರೆಂದರೆ ಕಾಶಿ ವಿದ್ಯಾಪೀಠದಲ್ಲಿ ಅಧ್ಯಾಪಲರಾಗಿದ್ದ ಆಚಾರ್ಯ ನರೇಂದ್ರ ದೇವ ಹಾಗೂ ಡಾ. ಸಂಪೂರ್ಣಾನಂದರು. ಅವರು ೧೯೨೩ರಲ್ಲಿ ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಗೆ ಮಾರ್ಕ್ಸ್‌ವಾದಿ ಸಿದ್ಧಂತದ ಪ್ರಭಾವದ ಒಂದು 'ಸಮಾಜವಾದಿ ಕಾರ್ಯಕ್ರಮ'ದ ಕರಡನ್ನು ಪರಿಶೀಲನೆಗೆ ಒಪ್ಪಿಸಿದರು. ಅದನ್ನು ಮಾನ್ಯ ಮಾಡಿದ ಸಮಿತಿ ಕರಡನ್ನು ಅಖಿಲಭಾರತ ಕಾಂಗ್ರೆಸ್ ಸಮಿತಿಗೆ ಕಳಿಸಿತು. ರಷ್ಯಾದ ಕ್ರಾಂತಿಯ ಮಹಾ ಅಭಿಮಾನಿಯಾಗಿದ್ದ ಜವಾಹರಲಾಲ್ ನೆಹ್ರೂ ಅವರು ೧೯೨೯ರ ಹೊತ್ತಿಗೆ ಅದಕ್ಕೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಅದರ ಅನುಮೋದನೆ ಪಡೆದರು. ಇದರ ಪರಿಣಾಮವಾಗಿ ೧೯೩೧ರ ಕರಾಚಿ ಕಾಂಗ್ರೆಸ್ ಅಧಿವೇಶನ ದೇಶಕ್ಕೆ ಸಮಾಜವಾದಿ ಅಭಿವೃದ್ದೀಯ ಕಾರ್ಯಕ್ರಮ ಮಾದರಿಯನ್ನು ಒಪ್ಪಿ, ಸಂಪೂರ್ಣ ಸ್ವರಾಜ್ಯದ ಬೇಡಿಕೆಯ ಜೊತೆಗೆ ಮಾನವ ಹಕ್ಕುಗಳು ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಕುರಿತ ನಿರ್ಣಯವನ್ನು ಅನುಮೋದಿಸಿತು.

ಇದೇ ಹೊತ್ತಿನಲ್ಲಿ ದೇಶದ ಹಲವೆಡೆ, ವಿಶೇಷವಾಗಿ ಕಲ್ಕತ್ತಾ ಮತ್ತು ಪುಣೆಗಳಲ್ಲಿ 'ಸಮಾಜವಾದ'ದ ಹೆಸರಿನಲ್ಲಿ ಕಾಂಗ್ರೆಸ್ ಯುವಜನ ಗುಂಪುಗಳೂ ಸಕ್ರಿಯವಾಗಿದ್ದವು. ೧೯೩೨ರ ಸವಿನಯ ಕಾನೂನೂಭಂಗ ಚಳುವಳಿಯ ಕಾರಣದಿಂದ ನಾಸಿಕ್ ಸೆರೆಮನೆಯಲ್ಲಿ ಬಂಧಿತರಾಗಿದ್ದ ಜಯಪ್ರಕಾಶ್

ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ, ಅಚ್ಯುತ ಪಟವರ್ಧನ್, ಎಸ್.ಎ> ಜೋಷಿ, ಎನ್.,ಜಿ. ಗೋರೆ ಮುಂತಾದ ಯುವ ಕಾಂಗ್ರೆಸ್ಸಿಗರು ಕಾಂಗ್ರೆಸ್‌ನ ನಿಧಾನ ಗತಿಯ ಹೋರಾಟದಿಂದ ಬೇಸತ್ತು ಅದಕ್ಕೆ ಹೊಸ ದಿಕ್ಕು, ಉತ್ಸಾಹ ಒದಗಿಸಲು ಕಾಂಗ್ರೆಸ್ಸಿನೊಳಗೇ ಒಂದು ಸಮಾಜವಾದಿ ಪಕ್ಷವನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡರು. ಇವರಲ್ಲಿ ಜಯಪ್ರಕಾಶ ನಾರಾಯಣ (ಜೆಪಿ(ಅಮೆರಿಕಾದಲ್ಲಿ ಉನ್ನತ ಶಿಕ್ಷಣ ಪಡೆದವರಾಗಿ ಪ್ರಖರ ಮಾರ್ಕ್ಸ್‌ವಾದದ ಪ್ರತಿಪಾದಕರಾಗಿದ್ದರು. ಸೆರೆಮನೆಯಿಂದ ಇವರೆಲ್ಲ ಬಿಡುಗಡೆಯಾದ ನಂತರ ಜೆಪಿಯವರ ಮುಂದಾಳತ್ವದಲ್ಲಿ ಮತ್ತು ಆಚಾರ್ಯ ನರೇಂದ್ರ ಅವರ ಅಧ್ಯಕ್ಷತೆಯಲ್ಲಿ ೧೯೩೪ರ ಮೇ ೧೭ರಂದು ಪಾಟ್ನಾದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನಾ ಸಮ್ಮೇಳನ ನಡೆಯಿತು. ಮತ್ತು ೧೯೩೪ರ ಅಕ್ಟೋಬರ್ ೨೧ರಂದು ಮುಂಬೈನಲ್ಲಿ ಪಕ್ಷದ ಮೊದಲ ಅಧಿವೇಶನ ನಡೆದು ಪಕ್ಷದ ಸಂವಿಧಾನ ಮತ್ತು ನೀತಿ ಪತ್ರಗಳನ್ನು ಅನುಮೋದಿಸಿತು. ಮೂಲತಃ ಮಾರ್ಕ್ಸ್‌ವಾದಿ ತತ್ವಗಳನ್ನು ನಂಬಿದ್ದ ಈ ಪಕ್ಷದ ಸದಸ್ಯರೆಲ್ಲ ಗಾಂಧಿಯವರನ್ನು ತುಂಬ ಗೌರವಿಸುವರಾಗಿದ್ದು, ಕಮ್ಯೂನಿಸ್ಟರು ಗಾಂಧಿಯನ್ನು ದೂಷಿಸದೆ ಮತ್ತು ಭೂಗತರಾಗಿ ತಮ್ಮ ಚಟುವಟಿಕೆಗಳನ್ನು ನಡೆಸದೇ ಇದ್ದಿದ್ದರೆ ಬಹುಶಃ ಇವರೆಲ್ಲ ಕಮ್ಯೂನಿಸ್ಟ್ ಪಕ್ಷ ಸೇರುತ್ತಿದ್ದರು ಎಂಬ ಅಭಿಪ್ರಾಯವೂ ಇದೆ.

ಈ ಮಧ್ಯೆ ಕಾಂಗ್ರೆಸ್ ಕೆಲವು ಸಂಪ್ರದಾಯವಾದಿ ನಾಯಕರು ಕಾಂಗ್ರೆಸ್ ಸಮಾಜವಾದಿ ಪಕ್ಷಷದ ನೀತಿಪತ್ರದಲ್ಲಿ ಕೆಲವು ಅಂಶಗಳ ಬಗ್ಗೆ ಆಕ್ಷೇಪಣೆಗಳನ್ನೆತ್ತಿ ಪಕ್ಷದೊಳಗಿನ ಈ ಬೆಳವಣಿಗೆಯ ಬಗ್ಗೆ ತಮ್ಮ ಅಸಮಧಾನ ತೋರಿದಾಗ, ಕಾಂಗ್ರೆಸ್ ಸಮಾಜವಾದಿ ನಾಯಕರು ಗಾಂಧಿಯವರ ಬೆಂಬಲ ಪಡೆಯಲು ಅವರಿಗೆ ತಮ್ಮ ನೀತಿ ಪತ್ರವನ್ನು ಕಳಿಸಿದರಲ್ಲದೆ ಅದರ ಬಗ್ಗೆ ಅವರೊಂದಿಗೆ ಚರ್ಚಿಸಲು ನಿಯೋಗ ಹೋದರು. ಸಮಾಜವಾದಿಗಳ ನೀತಿ ಪತ್ರವನ್ನು ಓದಿದ ಗಾಂಧಿ ಅದರಲ್ಲಿ ಮುಖ್ಯವಾಗಿ ಈ ನಾಲ್ಕುವಿಷಯಗಳನ್ನು ಕುರಿತ ಬದ್ಧತೆ ಇಲ್ಲದಿರುವ ಬಗ್ಗೆ ತಮ್ಮ ಅಸಮಧಾನ ಸೂಚಿಸಿದರು: ಅಸ್ಪೃಶ್ಯತಾ ನಿವಾರಣೆ, ಹಿಂದೂ-ಮುಸ್ಲಿಂ ಐಕ್ಯತೆ, ಖದಿ ಮೂಲಕ ಬಡವರೊಂದಿಗೆ ಗುರುತಿಸಿಕೊಳ್ಳುವುದು ಮತ್ತು ಮದ್ಯಪಾನ ಮತ್ತು ಇತರ ದುಶ್ಚಟಗಳಿಂದ ದೂರವಿರುವುದು. ಇವಲ್ಲದೆ ಹಲವು ಮುಖ್ಯವಾಗಿ ವರ್ಗ ಹೋರಾಟ, ಹಿಂಸೆಯ ಪ್ರಶ್ನೆ, ತಂತ್ರಜ್ಞಾನ ಮತ್ತು ಸರ್ಕಾರ ಪರಿಹಾರವಿಲ್ಲದೆ ಖಾಸಗಿ ಆಸ್ತಿಯನ್ನು ವಶಪಡಿಸಿಕೊಳ್ಳುವ ಅಂಶಗಳ ಬಗ್ಗೆ ಅವರು ಸಮಾಜವಾದಿಗಳ ಜೊತೆ ವ್ಯಾಪಕವಾದ ಅನೇಕ ವಾಗ್ವಾದಗಳನ್ನು ನಡೆಸಿದರು. ವಿಶೇಷವಾಗಿ ಗಾಂಧಿಗೆ ಆಪ್ತರಾಗಿದ್ದ ಜೆಪಿ ಮತ್ತು ರಾಮಮನೋಹರ ಲೋಹಿಯಾ ಈ ವಿಷಯಗಳ ಬಗ್ಗೆ ನಡೆಸಿದ ಸಂವಾದಗಳು ಕಾಂಗ್ರೆಸ್ ಸಮಾಜವಾದಿಗಳು ಕ್ರಮೇಣ ಮಾರ್ಕ್ಸ್‌ವಾದದಿಂದ ದೂರ ಸರಿದು ಗಾಂಧಿ ಚಿಂತನೆಗಳ ಪ್ರಭಾವದಲ್ಲಿ ವಿಶಿಷ್ಟವೇ ಆದ ಭಾರತೀಯ ಸಮಾಜವಾದವೊಂದನ್ನು ರೂಪುಗೊಳ್ಳಲು ನೆರವಾದವು. ಈ ಪ್ರಕ್ರಿಯೆಯಲ್ಲಿ ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರಬಂದು ಒಂದು ಸ್ವತಂತ್ರ ಸಮಾಜವಾದಿ ಪಕ್ಷವನ್ನೂ ಕಟ್ಟಿಕೊಂಡರು.

ಆದೆ ಇಂದು ಸಮಾಜವಾದಿ ಪಕ್ಷ ಇಲ್ಲ. ಅದು ತನ್ನ ಜೀವಿತಾವಧಿಯಲ್ಲಿ ತನ್ನ ಪ್ರಖರ ಚಿಂತನೆಗಳಿಂದ ರಾಷ್ಟ್ರದ ರಾಜಕಾರಣದಲ್ಲಿನ ಹಲವು ನಿರ್ಣಾಯಕ ತಿರುವುಗಿಗೆ ಕಾರಣವಾಯಿತಾದರೂ, ಅದು ಈ ಪ್ರಕ್ರಿಯೆಯಲ್ಲಿ ಒಡೆದು ಚೂರಾಗುತ್ತಾ ಈ ಪ್ರಕ್ರಿಯೆಯಲ್ಲಿ ಲೀನವಾಗಿ ಕಾಣೆಯಾಯಿತು. ಇದರ ಪೆಣಾಮವಾಗಿಯೇ ಇಂದು ಜಾಗತೀಕರಣದ ಹೆಸರಿನ ನವ ಬಂಡವಾಳಶಾಹಿಯ ಮುಕ್ತ ಮಾರುಕಟ್ಟೆಯ ಜಗತ್ತಿಗೆ ಕಾರಣವಾಗಿದ್ದು ವಿವಿದ ರೂಪಗಳಅಸಮಾನತೆ, ಹಿಂಸೆಗಳು ತಾಂಡವವಾಡುಂತಾಗಿದೆ. ಹೀಗಾಗಿ ಮತ್ತೆ ಜಗತ್ತಿನಲ್ಲಿ ಸಮಾಜವಾದದ ಪುನರುಜ್ಜೀವನದ ಪ್ರಯತ್ನಗಳು ನಡೆದಿವೆ. ಇದಕ್ಕೆ ಭಾರರತವೂ ಹೊರತಾಗಿಲ್ಲ ಭಾರತದಲ್ಲಿ ಮತ್ತೆ ಸಮಾಜವಾದವನ್ನು ಕಟ್ಟ ಹೊರಟಿರುವವರು, ಮೊದಲು ಮಾಡಬೇಕಾದ ಕೆಲಸವೆಂದರೆ, ಸಮಾಜವಾದ ಸೋತು ಜಾಗತೀಕರಣಕ್ಕೆ ಅವಕಾಶವಾದುದಕ್ಕೆ ತಾವು ನಂಬಿದ್ದ ಸಮಾಜವಾದದಲ್ಲೇ ಏನಾದರೂ ದೋಷಗಳಿದ್ದುವೇ ಎಂದು ಆತ್ಮಾವಲೋಕನ ಮಾಡಿಕೊಳ್ಳುವುದು.

ಈ ಹಿನ್ನೆಲೆಯಲ್ಲಿ ಸಮಾಜವಾದಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, 'ನಿಮ್ಮ ಮಧ್ಯೆ ಅಪ್ಪಟ ಸಮಾಜವಾದ ಯಾರಾದರೂ ಇದ್ದರೆ ಅದು ನಾಏ!; ಎಂದು ದಿಟ್ಟವಾಗಿ ಹಳೀದ ಗಾಂಧಿ ಸಮಾಜವಾದದ ಬಗ್ಗೆ ಆಡಿರುವ ಮಾತುಗಳನ್ನು ಮತ್ತೆ ಗಮನಿಸಬೇಕಾಗಿದೆ. ಅಂಯಹ ಮಾತುಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ನೀಡಲಾಗುತ್ತಿದೆ:

'ನನ್ನ ಸಮಾಜವಾದ' : ಗಾಂಧಿ ಮಾತುಗಳು

ಸುಮಾರು ಐವತ್ತು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ನಾನು ವಕೀಲ ವೃತ್ತಿಯನ್ನು ನಡೆಸುತ್ತಿರುವಾಗ ತಾವು ಸಮಾಜವಾದಿಗಳು ಎಂದು ಹೇಳಿಕೊಳ್ಳುವ ಸಾಕಷ್ಟು ಮಂದಿ ಅಲ್ಲಿ ಇದ್ದರು. ಆದರೆ ವಾಸ್ತವವಾಗಿ ಅವರು ಯಾವ ರೀತಿಯಿಂದಲೂ ನನಗಿಂತ ಹೆಚ್ಚು/ಉತ್ತಮ ಸಮಾಜವಾದಿಗಳು ಎಂದು ತೋರುತ್ತಿರಲಿಲ್ಲ. ಆಗ ನಾನು ಕೂಲಿ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿದ್ದೆ. ಮತ್ತು ನಾನು ಈ ಕೆಲಸವನ್ನು ಜೀವನದ ಪರಮೋದ್ದೇಶವನ್ನಾಗಿ ಮಾಡಿಕೊಂಡು ಅವರಂತೆಯೇ ನನ್ನ ಬದುಕನ್ನು ನೆಡೆಸುತ್ತಿದ್ದೆ. ನನ್ನನ್ನು ಕಾರ್ಮಿಕರು ಮತ್ತು ರೈತರ ಸೇವಕನೆಂದೇ ತಿಳಿದು ಅವರ ನಡುವೆ ಕೆಲಸ ಮಾಡುತ್ತಲಿದ್ದೆ. ಆದರೆ ಎಂದಿಗೂ ನನ್ನನ್ನು ನಾನು ಒಬ್ಬ ಸಮಾಜವಾದಿಯೆಂದು ಕರೆದುಕೊಳ್ಳುವ ಅಗತ್ಯ ಕಂಡಿರಲಿಲ್ಲ. ಸಮಾಜವಾದದ ನನ್ನ ಪರಿಕಲ್ಪನೆ ಸ್ವಲ್ಪ ಬೇರೆಯೆ ಇದೆ. ಈ ವಿಷಯದಲ್ಲಿ ಉಳಿದವರಿಗೆ ಸಹಮತವಿಲ್ಲದಿದ್ದರೂ, ಅವರು ನನ್ನನ್ನು ತೊರೆದರೂ ನಾನು ಚಿಂತಿಸುವುದಿಲ್ಲ.ಅವರೆಲ್ಲರೂ ನನ್ನ ಸ್ನೇಹಿತರೆ ಆಗಿದ್ದರೆ. ಹಾಗಾಗಿ ಅವರಿಗೆ ನಾನು ಹೇಳುವುದೆಂದರೆ, " ಒಬ್ಬ ನಿರ್ಬಲನು ತನಗೆ ಅಗತ್ಯವಿದ್ದುದನ್ನು ಒದಗಿಸಿಕೊಳ್ಳಲಾಗದಿದ್ದರೆ ನಾನೂ ಅವುಗಳನ್ನು ವರ್ಜಿಸುತ್ತೇನೆ. ಮೊದಲಿಗೆ ಅವನ ಅಗತ್ಯಗಳನ್ನು ಪೂರೈಸುವಂತೆ ನೋಡಿಕೊಂಡು ನಂತರ ನನ್ನ ಬಗ್ಗೆ ಯೋಚಿಸುತ್ತೇನೆ" .ಇದು ಸಮಾಜವಾದದ ನನ್ನ ರೀತಿ ಮತ್ತು ಪರಿಕಲ್ಪನೆ.

ಈ ಮಾದರಿಯ ಸಮಾಜವಾದವನ್ನು ತರಬೇಕೆಂದು ನೀವೂ ಇಚ್ಛಿಸದರೆ ನಿಮ್ಮೊಟ್ಟಿಗೆ ಕೂಡಿ ಕೆಲಸವನ್ನು ಮಾಡುವವರಲ್ಲಿ ನಾನೇ ಮೊದಲಿಗನಾಗಿರುತ್ತೇನೆ. ಒಬ್ಬ ಅರಸನೂ, ತನ್ನ ಪ್ರಜೆಗಳ ಪ್ರಾಮಾಣಿಕ ಸೇವಕನಾಗುವುದರ ಮೂಲಕ, ನಿಜವಾದ ಸಮಾಜವಾದಿ ಆಗಬಲ್ಲನೆಂದು ನನ್ನ ಬಲವಾದ ನಂಬಿಕೆ. ಹಾಗಾದರೆ ಅರಸ ಮತ್ತು ಆತನ ಪ್ರಜೆಗಳನ್ನು ಸಮಾಜವಾದಿಗಳನ್ನಾಗಿ ಮಾಡಬೇಕಾದರೆ ನಾವು ಹೇಗೆ ಕ್ರಿಯಾಶೀಲರಾಗಬಹುದು? ನನ್ನ ಪ್ರಕಾರ ಮೊದಲು ಸ್ವತಃ ನಾವೇ ಅಂತಹ ನಿದರ್ಶನವನ್ನು ಹಾಕಿಕೊಳ್ಳುವುದರ ಮೂಲಕ ಉಳಿದವರಲ್ಲಿ ಪರಿವರ್ತನೆಯನ್ನು ತರಬಹುದು .ಅಂದರೆ ನಾವು ಏನು ಹೇಳುತ್ತಿದ್ದೆವೋ ಅದು ನಾವೇ ಆಗುವುದರ ಮೂಲಕ ಪರಿವರ್ತನೆ ಸಾಧ್ಯ ಎಂದು ನನ್ನ ಅಚಲ ವಿಶ್ವಾಸ.

ಒಬ್ಬ ರಾಜನನ್ನು ಬದಲಾಯಿಸಲು ಎರಡು ರೀತಿಗಳಿವೆ ಎಂದು ಹೇಳುತ್ತಾರೆ. ಒಂದೋ ಆತನನ್ನು ಮುಗಿಸಿಬಿಡುವುದು ಇಲ್ಲಾ ... ಅಧಿಕಾರದಿಂದ ಕೆಳಗಿಳಿಸುವುದು. ಆದರೆ ನನ್ನದು ಅವರನ್ನು ಪ್ರೇಮದಿಂದ ಪರಿವರ್ತಿಸುವ ವಿಧಾನ. ಕೊಲ್ಲುವುದು ಅತ್ಯಂತ ಹೇಯ ಕೃತ್ಯ. ಸಾವಿರಾರು ಜನರಿಗೆ ಕೊಲ್ಲುವುದನ್ನು ಕಲಿಸಿದರೆ ನೀವು ಸ್ಥಾಪಿಸುವುದು ಸಮಾಜವಾದದ ವ್ಯವಸ್ಥೆಯನ್ನಲ್ಲ, ಬದಲಿಗೆ ಕೊಲೆಗಡುಕರ ವ್ಯವಸ್ಥೆ. ನಮ್ಮ ಸ್ಪೀಕರ್‌ರವರು ತಮ್ಮನ್ನು ಕಾಂಗ್ರೆಸ್ಸಿಗನೆಂದು ಕರೆದುಕೊಂಡ ಹಾಗೆ ನಮ್ಮ ವೈಸರೊಯ್ ರವರೂ ತಮ್ಮನ್ನು ಕಾಂಗ್ರೆಸ್ಸಿಗನೆಂದು ಕರೆದುಕೊಳ್ಳಬಹುದು. ಆದರೆ ತಮ್ಮ ಅಧಿಕಾರವನ್ನು ಬಿಟ್ಟುಕೊಡುವಂತೆ ಆಗ್ರಹಿಸಿದರೆ ಅವರು ಬಿಟ್ಟುಕೊಟ್ಟಾರೆಯೆ? ಅದೇ ರೀತಿ ತಮ್ಮನ್ನು ಕಾಂಗ್ರೆಸ್ಸಿಗರೆಂದು ಕರೆದುಕೊಳ್ಳುವ ಅನೇಕ ಜನರಿದ್ದಾರೆ. ಆದರೆ ಅವರನ್ನು ನೈಜ ಕಾಂಗ್ರೆಸ್ಸಿಗರೆಂದು ಒಪ್ಪಿಕೊಳ್ಳಬಹುದೇ? ಅವರನ್ನು ನಿಜ ಸಮಾಜವಾದಿಗಳೆಂದು ಕರೆಯಬಹುದೇ? ಅವರಲ್ಲನೇಕರು ತಮ್ಮನ್ನು ತಾವು ಸಂಪತ್ತಿನ ಮತ್ತು ಅದರಿಂದ ಕೊಂಡುಕೊಳ್ಳಬಹುದಾದ ಸುಖ ಮತ್ತು ಮೋಜಿನ ಹೊಳೆಯಲ್ಲಿ ಮಿಂದು ತೇಲಾಡುತ್ತಾ ಮೈಮರೆತಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ನನ್ನನ್ನು ವೈರಿಯಂತೆ ನಡೆಸಿಕೊಂಡರೂ ಅನೇಕ ಬಿಳಿಯರು ನನ್ನೊಡನೆ ಸ್ನೇಹವನ್ನೂ ಬೆಳೆಸಿದರು. ಸಮಾಜವಾದವೆಂಬುದು ವೈರಿಗಳನ್ನು ಸ್ನೇಹಿತರನ್ನಾಗಿ ಪರಿವರ್ತಿಸುವ ವಿಷಯವೇ ಆಗಿದ್ದರೆ ನನ್ನನ್ನು ನಿಜ ಸಮಾಜವಾದಿಯೆಂದು ಪರಿಗಣಿಸಬೇಕು. ಸಮಾಜವಾದದ ಈ ಪರಿಕಲ್ಪನೆ ನನ್ನದೇ ಸ್ವಂತದ್ದು. ಸಮಾಜವಾದಿಗಳೆಂದು ಹೇಳಿಕೊಳ್ಳುವ ಜನರು ಸಮಾಜವಾದವೆಂದರೇನು ಎಂದು ನನ್ನಿಂದ ಕಲಿತುಕೊಳ್ಳಬೇಕು. ಆಗ ಮಾತ್ರ ನಾವು ನಿಷ್ಠಾವಂತ ಮತ್ತು ಶ್ರದ್ಧೆಯುಳ್ಳ ಕಾರ್ಯಕರ್ತರನ್ನು ತಯಾರುಗೊಳಿಸಿ ರೈತರ ಮತ್ತು ಶ್ರಮಿಕರ ಆಡಳಿತವನ್ನು ತರಬಹುದು. ಬಹುಶಃ ನನ್ನ ಈ ಕರೆ ಅರಣ್ಯರೋಧನವೆಂದು ತಳ್ಳಿಹಾಕಿ ಯಾರು ಕೇಳಿಸಿಕೊಳ್ಳದೇ ಇರಬಹುದು. ಈ ನನ್ನ ನಿಲುವನ್ನು ಟೀಕಿಸಿ ನನ್ನನ್ನು ಒಬ್ಬ ಹುಚ್ಚ ಎಂದು ಕರೆಯುವ ಜನರೂ ಇದ್ದಾರೆ.ಆದರೆ ಹಿಂಸೆಯಲ್ಲಿ ಎಳ್ಳಷ್ಟೂ ನಂಬಿಕೆಯಿಲ್ಲದವನಾಗಿ ಅದನ್ನೇ ನಾನು ಬೋಧಿಸಲಾರೆ. ಪ್ರಾಣವನ್ನೇ ತೆರಬೇಕಾದಂತಹ ಪರಿಸ್ಥಿತಿಯಲ್ಲೂ ಯಾರಿಗೂ ನೀವು ತಲೆ ಬಾಗಬೇಡಿ ಎಂದು ಮಾತ್ರ ನಾನು ಹೇಳುತ್ತೇನೆ. ಇದೇ ಧೈರ್ಯವಂತನ ಮತ್ತು ಧೀರತೆಯ ಲಕ್ಷಣ. ಹಿಂಸೆಯನ್ನು ಎಸಗುವುದಲ್ಲ. ಹಾಗಾಗಿ ಸಮಾಜವಾದಿ ಪಕ್ಷವು ರೂಪಿಸಿ ಪ್ರಸರಿಸುತ್ತಿರುವ ಸಮಾಜವಾದದ ಪರಿಕಲ್ಪನೆಯಲ್ಲಿ ನನಗೆ ಅಷ್ಟಾಗಿ ನಂಬಿಕೆ ಇಲ್ಲವೆಂದೇ ಹೇಳಬಹುದು.

ಈ ನಿರ್ಭಯತೆ, ಆತ್ಮಬಲ, ಛಲ ಮತ್ತು ಕೆಚ್ಚನ್ನು ನನ್ನಿಂದ ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ. ನಾನೊಬ್ಬ ಅಪ್ಪಟ ಸಮಾಜವಾದಿಯಾಗಿದ್ದೇನೆಂದು ನನ್ನ ಮರಣದ ನಂತರ ಅರಿಯುತ್ತೀರಿ. ನಾನು ಟ್ರಸ್ಟೀಷಿಪ್ ಬಗ್ಗೆ ಮಾತನಾಡಿದಾಗಲೆಲ್ಲ ಅದು ನನ್ನ ಹುಚ್ಚುತನ ಎಂದು ಜನರು ತಿಳಿಯುತ್ತಿದ್ದಾರೆ. ಆದರೆ ಈ ಹುಚ್ಚುತನದಲ್ಲೂ ಒಂದಷ್ಟು ಸತ್ಯ ಇದೆ ಎಂದು ತಿಳಿಯಿರಿ. ಸ್ವಲ್ಪ ಆಳವಾಗಿ ಆಲೋಚಿಸಿದರೆ ಅದರ ಅರ್ಥ ನಿಮಗೂ ಹೊಳೆಯುತ್ತದೆ. ಇಂದು ಈ ಎಲ್ಲಾ ಜನರ ಮದ್ಯೆ ಯಾರಾದರೂ ಒಬ್ಬ ಅಪ್ಪಟ ಸಮಾಜವಾದಿ ಎಂಬುವವನಿದ್ದರೆ ಅದು ನಾನೇ ಎಂದು ಅತ್ಯಂತ ಖಚಿತವಾಗಿ ಹೇಳಿಕೊಳ್ಳಬಲ್ಲೆ. ಸಮಾಜವಾದ ಪರಿಕಲ್ಪನೆಯ ಬಗೆಗಿನ ನನ್ನ ಈ ನಿಷ್ಠೆ ಮತ್ತು ತಿಳುವಳಿಕೆಯೇ ಈಗ ನಾನೇನು ಹೇಳುತ್ತಿದ್ದೇನೆಯೋ ಅದನ್ನು ಹೇಳಲು ಅರ್ಹತೆಯನ್ನೂ, ಹಕ್ಕನ್ನೂ ಕೊಟ್ಟಿದೆ ಎಂದು ತಿಳಿದಿದ್ದೇನೆ. ಒಬ್ಬ ಸಮಾಜ ಸೇವಕನ ಸಾರ್ವಜನಿಕ ಜೀವನ ಮತ್ತು ವೈಯಕ್ತಿಕ ಜೀವನ ಪರಸ್ಪರ ಬೆಸೆದುಗೊಂಡಿರುತ್ತದೆ. ವೈಯಕ್ತಿಕ ನೈತಿಕ ಪರಿಶುದ್ಧತೆ ಇಲ್ಲದೆ ಸಮಾಜವಾದ ಯಶಸ್ವಿಯಾಗಲು ಸಾಧ್ಯವಿಲ್ಲ.

ಸಮಾಜವಾದವೆಂಬುದು ಮಹಾಭಾರತದ ಕೃಷ್ಣನ ಕಾಲದಿಂದಲೂ ರೂಢಿಯಲ್ಲಿದೆ ಎಂದೇ ಹೇಳಬಹುದು. ಅವನು ಗೋಪಾಲಕರೊಡನೆ ಆಟವಾಡುತ್ತಿದ್ದ.. ಅವರ ಜೊತೆಯಲ್ಲಿ ಊಟ ಮಾಡುತ್ತಿದ್ದ, ಮಲಗುತ್ತಿದ್ದ. ಸುಧಾಮನ ಜೊತೆಯಾಗಿ ಕಟ್ಟಿಗೆಯನ್ನು ತಂದ. ಇಂತಹ ಅನೇಕ ನಿದರ್ಶನಗಳು ಇವೆ. ಅವನು ಅರ್ಜುನನಿಗೆ ಸಾರಥಿಯೂ ಆಗಿ ಕೆಲಸವನ್ನು ನಿರ್ವಹಿಸಿ ಇಲ್ಲಿ ಯಾರೂ ಮೇಲೂ ಅಲ್ಲ ಕೀಳೂ ಅಲ್ಲ ಎಂಬ ಮೌಲ್ಯವನ್ನು ಪರಿಪಾಲಿಸಿದ. ತನ್ನ ಅಪ್ಪಟ ಪ್ರೇಮದಿಂದ ಗೋಪಿಕೆಯರೊಡನೆ ಯಾವುದೇ ಕಲ್ಮಶ ಭಾವವಿಲ್ಲದೆ ಒಡನಾಡಿದ.

ಹಾಗಾಗಿ, ತಾವು ಯಾವ ಸಮಾಜವಾದವೆಂಬುದು ರಶಿಯಾ ಅಥವಾ ಅಮೇರಿಕಾ ಅಥವಾ ಇಂಗ್ಲೆಂಡ್ ನವರಿಂದ ಕಲಿಯಬೇಕೆಂದು ಯೋಚಿಸುತ್ತೀರೋ ಅದು ನಮ್ಮ ಭೂಮಿಯಲ್ಲೇ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಜಯಪ್ರಕಾಶ್ ನಾರಾಯಣ ನನ್ನ ಸ್ವಂತ ಮಗನಿದ್ದ ಹಾಗೆ ಹಾಗು ಇತರ ಅನೇಕ ಸಮಾಜವಾದಿ ಪಕ್ಷದ ನಾಯಕರು ನನಗೆ ಸ್ನೇಹಿತರೆ. ನನ್ನ ನಮ್ರ ಕೋರಿಕೆ ಏನೆಂದರೆ ನಾನು ನಿರೂಪಿಸಿದ ರೀತಿಯ ಸಮಾಜವಾದವನ್ನು ತಮ್ಮ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡರೆ ಇಡೀ ದೇಶದ ಜನರು ತಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ. ಪಶ್ಚಿಮದಿಂದ ಆಮದು ಮಾಡಿಕೊಂಡು ಜಾರಿಗೊಳಿಸಬೆಂದಿರುವ ನಿಮ್ಮ ಸಮಾಜವಾದದ ಪರಿಕಲ್ಪನೆಯನ್ನು ನಾನು ಒಪ್ಪುವುದಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಏಕೆಂದರೆ ಯಾರು ಅದನ್ನು ಪ್ರತಿಪಾದಿಸುತ್ತಿದ್ದಾರೋ ಅವರೇ ತಮ್ಮ ಜೀವಮಾನದಲ್ಲಿ ತಾವು ಹೇಳುವ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅವರ ಸಿದ್ಧಾಂತಕ್ಕೂ ಆಚರಣೆಗೂ ಸಾಕಷ್ಟು ಅಂತರವಿದೆ. ತತ್ವಗಳನ್ನು ಕೇವಲ ಬೋಧಿಸಿದರೆ ಯಾವ ಬದಲಾವಣೆಯೂ ಸಾಧ್ಯವಿಲ್ಲ. ರಾಮಾಯಣದ ಶ್ರೀರಾಮ ೧೪ ವರ್ಷದ ವನವಾಸವನ್ನು ಸಂಪೂರ್ಣ ಪಾಲಿಸಿ ರಾಜ್ಯಕ್ಕೆ ಹಿಂದಿರುಗಿದ. ಇಂದು ನಾವು ಅವನನ್ನು ಆದರದಿಂದ ಪೂಜಿಸುತ್ತೇವೆ. ಒಂದೊಮ್ಮೆ ಅವನು ವನವಾಸಕ್ಕೆ ಹೊರಡುವ ಬದ್ಧತೆಯನ್ನು ತೋರಿಸದೆ ಕೇವಲ ಮಾತಿನಲ್ಲೇ ಮಗನಾದವನು ತಂದೆಯ ಆಜ್ಞಾನುಧಾರಕನಾಗಿರಬೇಕು ಎಂದು ಬೋಧಿಸಿಕೊಂಡಿದ್ದುಬಿಟ್ಟಿದ್ದರೆ ಅವನನ್ನು ಈಗ ಯಾರು ನೆನೆಸಿಕೊಳ್ಳುತ್ತಿದ್ದರು?

ಇಂದಿನ ಈ ಸಮಾಜದಲ್ಲಿ ಎಲ್ಲೆಲ್ಲಿಯೂ ಕೊಲೆ-ಸುಲಿಗೆ,ಲೋಟಿ, ಬಲಾತ್ಕಾರದಂತ ಕೆಡುಕುಗಳೇ ತಾಂಡವವಾಡುತ್ತಿದೆ. ನನ್ನ ಮಾತು ಯಾರಿಗೂ ಕೇಳಿಸುತ್ತಿಲ್ಲ. ನಾನೊಬ್ಬ ಹುಚ್ಚನೆಂದು ತಿಳಿಯುತ್ತಿದ್ದೀರಿ. ಒಂದು ಏಟಿಗೆ ಎರಡನ್ನು ತಿರುಗಿಸಿ ಕೊಡುವಂತ ನಾನು ಬೋಧಿಸಬೇಕೆಂದು ನಿರೀಕ್ಷಿಸುತ್ತಿದ್ದೀರಿ. ನಾನು ಹಾಗೆ ಮಾಡಲು ಸಾಧ್ಯವೇ ಇಲ್ಲ. ಆದರೆ ಇಷ್ಟನ್ನು ಮಾತ್ರ ಹೇಳಬಲ್ಲೆ,"ಗೆಳೆಯ, ನನ್ನನ್ನು ಕೊಲ್ಲುವುದಾದರೆ ಹಾಗೇ ಮಾಡು. ಆದರೆ ನಾನು ಮಾತ್ರ ಯಾರನ್ನು ಹಿಂಸಿಸುವುದಿಲ್ಲ". ಹಾಗು ಕೊನೆಯವರೆಗೂ ಇದೇ ರೀತಿಯ ಧೈರ್ಯವಂತಿಕೆಯನ್ನು ನನ್ನಲ್ಲಿ ತುಂಬಿರು ಎಂದು ಆ ದೇವರಲ್ಲಿ ಪ್ರಾರ್ಥಿಸಬಹುದು. ಯಾರು ಇಂಥ ನಿರ್ಭಯತೆಯನ್ನು ರೂಢಿಸಿಕೊಂಡಿರುತ್ತಾರೋ ಅವರನ್ನು ಮಣಿಸಲು ಯಾರಿಂದಲೂ ಸಾಧ್ಯವಿಲ್ಲ.

ಸಮಾಜವಾದ ಎಂಬುದು ಒಂದು ಸುಂದರವಾದ ಪರಿಕಲ್ಪನೆ ಮತ್ತು ನನಗೆ ತಿಳಿದ ಹಾಗೆ ಈ ವ್ಯವಸ್ಥೆಯಲ್ಲಿ ಮೇಲು - ಕೀಳು ಎಂಬ ಯಾವ ಭೇದ ಭಾವವಿಲ್ಲದೆ ಎಲ್ಲಾ ಜನರ ನಡುವೆಯ ಸಮಾನತೆಯೇ ಮೂಲ ಆಶಯ ಮತ್ತು ಮಂತ್ರವಾಗಿದೆ. ಹೇಗೆ ಒಂದು ದೇಹದಲ್ಲಿ ತಲೆಯ ಭಾಗವು ಎತ್ತರದಲ್ಲಿದ್ದ ಕಾರಣಕ್ಕೆ ಅದು ಮೇಲೂ, ಪಾದವು ಅತೀ ಕೆಳಗೆ ಇದ್ದು ನೆಲವನ್ನು ಸ್ಪರ್ಶಿಸುತ್ತಿರುವುದರಿಂದಾಗಿ ಕೀಳು ಎಂದು ಪರಿಭಾವಿಸಲಿಕ್ಕೆ ಆಗುವುದಿಲ್ಲವೋ ಮತ್ತು ದೇಹದ ಪ್ರತಿಯೊಂದು ಭಾಗವೂ ಸಮಾನವಾಗಿ ಮುಖ್ಯ ಹೇಗೋ, ಹಾಗೆ ಒಂದು ಸಮಾಜದ ಎಲ್ಲಾ ಜನರೂ ಸಮಾನರೂ ಹಾಗು ಮುಖ್ಯರೂ ಆಗಿರುತ್ತಾರೆ. ಅದೇ ಸಮಾಜವಾದ ಎಂದು ನಾನು ತಿಳಿದಿದ್ದೇನೆ. ಈ ವ್ಯವಸ್ಥೆಯಲ್ಲಿ ಒಬ್ಬ ಅರಸನೂ - ಅಗಸನೂ, ರೈತನೂ -ಉದ್ಯಮಿಯೂ, ಶ್ರೀಮಂತನೂ- ಬಡವನೂ, ಉದ್ಯೋಗಿಯೂ-ಯಜಮಾನನೂ, ಎಲ್ಲರೂ ಸಮಾನ ಸ್ತರದಲ್ಲಿ ಇರುತ್ತಾರೆ. ಧರ್ಮದ ವಿಷಯಕ್ಕೆ ಬಂದರೆ ನನ್ನ ಪರಿಕಲ್ಪನೆಯ ಸಮಾಜವಾದದಲ್ಲಿ ದ್ವಂದ್ವಕ್ಕೆ ಅವಕಾಶವೇ ಇಲ್ಲ. ಸಂಪೂರ್ಣ ಐಕ್ಯತೆ ನೆಲೆಗೊಂಡಿರುತ್ತದೆ.

ನಾವು ಪ್ರತಿಪಾದಿಸುತ್ತಿರುವ ಆದರ್ಶಗಳನ್ನು ನಮ್ಮ ವೈಯಕ್ತಿಕ ಬದುಕಿನಲ್ಲಿ ಮೊದಲಿಗೆ ಆಚರಣೆಗೆ ತರದೆ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಆಶಿಸುತ್ತಾ, ಹದ್ದುಗಳು ತನ್ನ ಬೇಟೆಯನ್ನು ಹಿಡಿಯಲು ಕಾಯುತ್ತಾ ಕುಳಿತ ಹಾಗೆ, ಅಧಿಕಾರದ ಅವಕಾಶವನ್ನು ನಿರೀಕ್ಷಿಸುತ್ತಲಿದ್ದರೆ ಯಾವ ಮೂಲಭೂತ ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಹೀಗೆ ನಮ್ಮ ದಾರಿಯಲ್ಲಿ ಬರುವ ಅವಕಾಶಕ್ಕಾಗಿ ಕಾಯುತ್ತ ಕುಳಿತಿರುವ ಧೋರಣೆಯನ್ನು ನಾನು ಸಮಾಜವಾದ ಎಂದು ಖಂಡಿತಾ ಹೇಳುವುದಿಲ್ಲ. ಸಮಾಜವಾದವೆಂಬುದನ್ನು ನಾವು ವಶಪಡಿಸಿಕೊಳ್ಳಬೇಕಾಗಿರುವ ಒಂದು ರಾಜ್ಯಾಧಿಕಾರದ ಆಟವೆಂದು ಬಗೆದಷ್ಟೂ ಈ ಉದಾತ್ತ ಪರಿಕಲ್ಪನೆಯ ಆದರ್ಶಗಳು ಕಣ್ಮರೆಯಾಗುತ್ತಾ ಹೋಗುತ್ತವೆ.

ತಮ್ಮ ಬದುಕಿನಲ್ಲಿ ಅಗತ್ಯ ಪರಿವರ್ತನೆಯನ್ನು ಯಾರು ಮೊದಲು ತಂದುಕೊಳ್ಳುತ್ತಾರೋ ಅವರಿಂದಲೇ ಸಮಾಜವಾದ ಪ್ರಾರಂಭವಾಗುತ್ತದೆ. ಅಂತಃ ಒಬ್ಬನು ಹತ್ತು, ನೂರು,ಸಾವಿರ ಜನರಲ್ಲಿ ಪ್ರಭಾವ ಬೀರುತ್ತಾ ಹೋಗುತ್ತಾನೆ. ಆದರೆ ತಮ್ಮ ಬದುಕಿನಲ್ಲಿ ಯಾವ ಮಾರ್ಪಾಟುಗಳನ್ನೂ ತಂದುಕೊಳ್ಳದೆ ಕೇವಲ ಆದರ್ಶ ಹೇಳಿಕೊಂಡಿದ್ದರೆ ಫಲಿತಾಂಶವು/ಸಾಧನೆಯು ಶೂನ್ಯಮಯವಾಗಿರುತ್ತದೆ. ನಮ್ಮೆಲ್ಲಾ ಬುದ್ಧಿ, ಶಕ್ತಿ ಮತ್ತು ಸಮಯದ ಅಪವ್ಯಯವಾಗಿರುತ್ತದೆ ಅಷ್ಟೇ. ಈ ಸಮಾಜವಾದವೆಂಬುದು ಸ್ಫಟಿಕದಷ್ಟೇ ಪರಿಶುದ್ಧವಾಗಿರುವಂಥ ಆದರ್ಶ ವ್ಯವಸ್ಥೆ. ಹಾಗಾಗಿ ಅದನ್ನು ಸಾಧಿಸಲು ಅಷ್ಟೇ ಪರಿಶುದ್ಧ ಮಾರ್ಗವೂ ಬಹಳ ಮುಖ್ಯ ಎಂದು ನಾವು ಮನಗಾಣಬೇಕು.

ಗುರಿಯನ್ನು ಸಾಧಿಸುವುದಕ್ಕಿಂತ ಮಾರ್ಗದ ಪರಿಶುದ್ಧತೆ ಬಹಳ ಮುಖ್ಯ. ತಪ್ಪು ಮಾರ್ಗಗಳು ತಪ್ಪು ಗುರಿಗಳೆಡೆಗೆ ಕೊಂಡೊಯ್ಯುತ್ತವೆ. ಆದ್ದರಿಂದ ಒಬ್ಬ ರಾಜಕುಮಾರನ ಅಥವಾ ಒಬ್ಬ ಉದ್ಯೋಗದಾತನ ತಲೆ ತೆಗೆಯುವುದರಿಂದ ಅವರ ಮತ್ತು ರೈತರ ಅಥವಾ ಕಾರ್ಮಿಕರ ನಡುವೆ ಸಮಾನತೆಯನ್ನು ಸ್ಥಾಪಿಸಿದಂತಾಗುವುದಿಲ್ಲ. ಸತ್ಯವನ್ನು ಅಸತ್ಯದ ನಡೆಗಳಿಂದ ತಲುಪಲಾಗುವುದಿಲ್ಲ .ಅಹಿಂಸೆ ಮತ್ತು ಸತ್ಯ ಬೇರ್ಪಡಿಸಲಾಗದಂತೆ ಒಂದರೊಳಗೊಂದು ಮಿಳಿತಗೊಂಡಿರುವಂತದ್ದು. ಹಾಗಾಗಿಯೇ ಅವು ಒಂದೇ ನಾಣ್ಯದ ಎರಡು ಮುಖಗಳು ಆ ನಾಣ್ಯದ ಯಾವುದೇ ಬದಿಯನ್ನು ಓದಿ. ಪದ ಮತ್ತು ಅಕ್ಷರಗಳು ಮಾತ್ರ ಬೇರೆಯಾಗಿರುತ್ತದೆ. ಆದರೆ ಬೆಲೆ ಮಾತ್ರ ಒಂದೇ. ಇಂತಹ ಆಳವಾದ ಒಳನೋಟವನ್ನು ಮತ್ತು ಅನುಗ್ರಹೀತ ಭಾವವನ್ನು ಹೊಂದಲು ಸಂಪೂರ್ಣ ವೈಯಕ್ತಿಕ ಪರಿಶುದ್ಧತೆಯಿಂದ ಮಾತ್ರ ಸಾಧ್ಯ. ನಮ್ಮ ದೇಹ ಮತ್ತು ಮನಸ್ಸಿನಲ್ಲಿ ಮಲೀನತೆಯನ್ನು /ಕಲ್ಮಶವನ್ನು ತುಂಬಿಕೊಂಡರೆ ಸಹಜ ಪರಿಣಾಮದಂತೆ ಹಿಂಸೆ ಮತ್ತು ಅಸತ್ಯಗಳು ಹೊರ ಹೊಮ್ಮುತ್ತವೆ. ಆದುದರಿಂದ ಕೇವಲ ಸತ್ಯವಂತಿಕೆಯ, ಅಹಿಂಸಾತ್ಮಕ ಮತ್ತು ಪರಿಶುದ್ಧ ಹೃದಯವಂತಿಕೆಯುಳ್ಳ ಸಮಾಜವಾದಿಗಳಿಂದ ಮಾತ್ರ ಸಮತೆಯ ಸಮಾಜವನ್ನು ಸ್ಥಾಪಿಸಲು ಸಾಧ್ಯ. ನನಗೆ ತಿಳಿದ ಹಾಗೆ ಜಗತ್ತಿನಲ್ಲಿ ಈಗ ಎಲ್ಲಿಯೂ ನಿಜವಾದ ಅರ್ಥದ ಸಮಾಜವಾದಿ ಎನಿಸಿಕೊಳ್ಳುವ ಸಮಾಜ ಇಲ್ಲ. ನಾನು ಮೇಲೆ ವಿವರಿಸಿದ ಮಾರ್ಗವನ್ನು ಹೊರತುಪಡಿಸಿ ಅಂತಹ ಸಮಾಜವನ್ನು ಅಸ್ತಿತ್ವಕ್ಕೆ ತರಲು ಸಾಧ್ಯವೇ ಇಲ್ಲ.


ಪಾಶ್ಚಿಮಾತ್ಯ ದೇಶಗಳಲ್ಲಿ ಪರಿಕಲ್ಪಿಸಿಕೊಂಡ ಸಮಯಾಜವಾದದ ಮಾದರಿಯು ನಮ್ಮ ದೇಶದ ಸಂಸ್ಕೃತಿಗೆ ಸರಿಹೊಂದುವುದಿಲ್ಲ. ಹಾಗೆ ಹೊಂದುವುದಿಲ್ಲವೆಂದರೆ ಅದು ದೋಷಯುಕ್ತವೇ ಆಗಿದ್ದು ನಾನು ಈಗಾಗಲೇ ವಿವರಿಸಿದ ಮಾದರಿಯು ಅತ್ಯಂತ ಜೀವಂತಿಕೆಯ ಮತ್ತು ನಿಜವಾದ ಸಮಾಜವಾದವಾಗಿದೆ. ಮತ್ತು ಅದು ನಿಸ್ಸಂದೇಹವಾಗಿ ವರ್ಗ ಸಂಘರ್ಷವನ್ನು ಆಧರಿಸಿರದ ಒಂದು ಆರ್ಥಿಕ ನೀತಿಯೂ ಆಗಿದೆ.

(ಅನುವಾದ ; ಬಿ. ವಿ. ಸುರೇಂದ್ರ)

ಸಾಹಿತ್ಯ, ಸಂಸ್ಕೃತಿ, ಬೌದ್ಧಿಕತೆ, ಪ್ರಗತಿಪರತೆ ಇತ್ಯಾದಿ

ಒಂದು ಪತ್ರಿಕೆಯೂ, ಒಂದು ಪುಸ್ತಕವೂ

ದಾರಿ ತಪ್ಪಿರುವ ಪೃಥ್ವಿ ಅವರ ಚಿಂತನೆ...



ಕನ್ನಡಕ್ಕೊಂದು ಹೊಸ ವೈಚಾರಿಕ ಪತ್ರಿಕೆ ಲಭ್ಯವಾಗಿದೆ. ಅದು ನಾನು ಬೌದ್ಧಿಕ ಪ್ರಮಾಣಿಕತೆಗಾಗಿ ಮೆಚ್ಚಿ ಗೌರವಿಸುವ ಪೃಥ್ವಿ ದತ್ತ ಚಂದ್ರ ಶೋಭಿಯವರ ಮಾರ್ಗದರ್ಶನದಲ್ಲಿ ಮತ್ತು ಚಂದ್ರಕಾಂತ ವಡ್ಡು ಅವರ ಸಂಪಾದಕತ್ವದಲ್ಲಿ ಆರಂಭವಾಗಿರುವ 'ಸಮಾಜಮುಖಿ' ಎಂಬ ಮಾಸ ಪತ್ರಿಕೆ. ಅತ್ಯಾಧುನಿಕ ತಾಂತ್ರಿಕ ಉತ್ಪಾದನಾ ಮೌಲ್ಯಗಳೊಂದಿಗೆ ತುಂಬ ಶ್ರೀಮಂತವಾಗಿ ಹೊರಬಂದಿರುವ ಇದರ ಪ್ರಾಯೋಗಿಕ ಸಂಚಿಕೆ ಹೂರಣದಲ್ಲೂ ವೈವಿಧ್ಯಮಯವಾಗಿ, ಮೌಲಿಕವಾಗಿ, ಕನ್ನಡಕ್ಕೆ ಇಂದು ಬೇಕಾಗಿದ್ದ ಒಂದು ಸಂಗ್ರಹಾರ್ಹ ಪತ್ರಿಕೆ ಎನಿಸುತ್ತದೆ. ಆದರೆ ಪೃಥ್ವಿಯವರು ಇದಕ್ಕೆ ಕನ್ನಡ ಮನಸ್ಸು, ಅದರ ಬೌದ್ಧಿಕತೆ ಕುರಿತ ಸಂಪಾದಕೀಯದ ಬಗ್ಗೆ ನನ್ನ ಆಳವಾದ ಭಿನ್ನಾಭಿಪ್ರಾಯಗಳಿವೆ ಎಂಬುದನ್ನೂ ಇಲ್ಲಿ ತಿಳಿಸಬೇಕಿದೆ. ಅದರ ಬಗ್ಗೆ ಒಂದು ವ್ಯಾಪಕ ಚರ್ಚೆಯ ಅಗತ್ಯವಿದೆ. ವಿಶೇಷವಾಗಿ 'ಹೊಸ ಮನುಷ್ಯ'ದಂತಹ ಪತ್ರಿಕೆ ಪ್ರತಿಪಾದಿಸುತ್ತಿರುವ ರಾಜಕೀಯ ಮತ್ತು ಸಾಂಸ್ಕೃತಿಕ ಮೀಮಾಂಸೆಯ ಸಂದರ್ಭದಲ್ಲಿ. ಹಾಗಾಗಿ ಈ ಕೆಳಗೆ ಇದರ ಬಗ್ಗೆ ಸ್ವಲ್ಪ ದೀರ್ಘವಾಗಿಯೇ ಈ 'ಟಿಪ್ಪಣಿ'ಗಳನ್ನು ಬರೆದಿದ್ದೇನೆ.

ಪೃಥ್ವಿ ಅವರ ಪ್ರಕಾರ ಕನ್ನಡ ಬೌದ್ಧಿಕತೆ ಈಗ ಸ್ಥಗಿತಗೊಂಡಿದೆ. ಸ್ಥಗಿತಗೊಂಡಿದೆ ಎಂಬ ಮಾತನ್ನು ನಾನು ಒಪ್ಪುವೆನಾದರೂ, ಅದನ್ನು ಸಾಬೀತು ಮಾಡಲು ಅವರು ಬಳಸುವ ವಾದಗಳನ್ನಾಗಲೀ, ಆ ವಾದಗಳ ಮೂಲಕ ಅವರು ನಿರೂಪಿಸಿರುವಂತಹ ಸ್ಥಗಿತತೆಯ ಕಲ್ಪನೆಯನ್ನಾಗಲೀ ನಾನು ಒಪ್ಪಲಾರೆ. ನನ್ನ ಪ್ರಕಾರ ಇಡೀ ಲೇಖನದ ಸಮಸ್ಯೆ ಎಂದರೆ ಕನ್ನಡದ ಬೌದ್ಧಿಕತೆ ಎಂಬುದನ್ನು ಒಂದು ಸ್ವತಂತ್ರ ಪರಿಕಲ್ಪನೆಯಂತೆ ಮಂಡಿಸಿ ಬೆಳೆಸಿರುವುದು. ಅದನ್ನು ಕನ್ನಡದ ಅಸ್ಮಿತೆ ಅಥವಾ ಕನ್ನಡ ಸಂಸ್ಕೃತಿಯ ಭಾಗವಾಗಿ ನೋಡಿ ಪರಿಶೀಲಿಸಿದಾಗ ಅದು ಸ್ಥಗಿತಗೊಂಡಿದೆ ಎನ್ನಲು ಇವರು ಮಂಡಿಸುವ ವಾದದಲ್ಲಿ ಬಳಸುವ ಜಗತ್ತು, ವಿಶ್ವ, ವಿಶ್ವಾತ್ಮಕತೆ ಎಂಬ ಶಬ್ದಗಳು ಯಾವ ಗುಣಾತ್ಮಕತೆಯನ್ನೂ ಒಳಗೊಳ್ಳದ ಬರೀ ಭೌತಿಕ ಆಯಾಮಗಳ (ಗಾತ್ರದ)ಹುಸಿ ಹಿರಿಮೆಯ ಶಬ್ದಗಳಾಗಿ ಪರಿವರ್ತಿತವಾಗುತ್ತವೆ ಎಂಬುದು ಗೊತ್ತಾಗುತ್ತದೆ.

ಪೃಥ್ವಿಯವರ ಸದರಿ ವಾದದ ಪ್ರಕಾರ ಇಂಗ್ಲಿಷ್ ಜ್ಞಾನವಿಲ್ಲದ ಕನ್ನಡಿಗರಿಗೆ ಒಂದು ಬೌದ್ಧಿಕ ಸಂಪ್ರದಾಯವೇ ಇರಲಾರದು! ಇದು ಆಧುನಿಕತೆ ಎಂಬುದನ್ನು ಪಶ್ಚಿಮದ ಬೌದ್ಧಿಕ ಸಂಪ್ರದಾಯದ ಸೂಚಕಗಳಿಂದಲೇ ಗುರುತಿಸುವ ಚಾಳಿಯಿಂದಾಗಿ ಆಗಿರುವ ಲೋಪ. ಈ ಆಧುನಿಕತೆ ಮೂಲತಃ ಆಧುನಿಕ ತಂತ್ರಜ್ಞಾನ ಪ್ರೇರಿತ ಸ್ಪರ್ಧಾತ್ಮಕ ಸುಖದ ಬದುಕಿನ ಹಪಾಹಪಿಯನ್ನು ಆಧರಿಸಿರುವುದು; ಅದರ ಮುನ್ನೊತ್ತಡವನ್ನು 'ಸಂಭೋಗ ಸುಖ'ವಾಗಿ ನಂಬಿರುವಂತಹದ್ದು. ಮತ್ತು ಅದನ್ನೊಂದು ಬದುಕಿನ ನಿರಪೇಕ್ಷ ಆದರ್ಶವನ್ನಾಗಿ ಬಿತ್ತುವುದರಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುವಂತಹದ್ದು. ಹಾಗಾಗಿಯೇ ಇದು ಕನ್ನಡದ ಬೌದ್ಧಿಕೆಯನ್ನು ಪಶ್ಚಿಮದ ಬೌದ್ಧಿಕತೆಯೊಂದಿಗೆ ಹೋಲಿಸಿಕೊಂಡೇ ನೋಡುವ, ಅದು ಪಶ್ಚಿಮದ ಬೌದ್ಧಿಕತೆಯೊಂದಿಗೆ ಹೆಜ್ಜೆ ಹಾಕಬೇಕೆಂಬ ನಿರೀಕ್ಷಿಸುವ ('ಆಧುನಿಕ') ಮನಸ್ಸಿನ ದೋಷವಾಗಿದೆ. ಕನ್ನಡ ಅಸ್ಮಿತೆ ಅಥವಾ ಸಂಸ್ಕೃತಿಯ ಸ್ವಾಯತ್ತತೆಯನ್ನು-ಅದರ ಜ್ಞಾನಕೋಶವನ್ನು ತಾವು ಕಲಿತ ಜ್ಞಾನದ ಗಾತ್ರದ ಸಾಪೇಕ್ಷತೆಯಲ್ಲಿ ಮಾತ್ರ ಗ್ರಹಿಸಿಯೋ ಏನೋ-ಮಾನ್ಯ ಮಾಡಲು ನಿರಾಕರಿಸುತ್ತಾ ಅದನ್ನು ವಿಶ್ವ ಸಂಸ್ಕೃತಿಯ ಬಿಡಿ ಭಾಗದಂತೆ ನೋಡುವುದರಲ್ಲಿನ ದೃಷ್ಟಿ ದೋಷ ಕೂಡ ಇದು. ಪ್ರಜ್ಞಾಪೂರ್ವಕವಾದ ಮಿತಿಗಳ ಬದುಕೊಂದರ ಸುಖ-ಸೌಂದರ್ಯಗಳ ವಿಶಿಷ್ಟ ಸವಿಗೆ ಎರವಾಗಿ, ಅದನ್ನು ಸ್ಥಗಿತತೆಯೆಂದೋ, ದೌರ್ಬಲ್ಯವೆಂದೋ ಕರೆದು ಸಂಸ್ಕೃತಿಯೊಂದರ ಸಮತೋಲನವನ್ನು ಅಸ್ಥಿರಗೊಳಿಸುವ ಬೌದ್ಧಿಕ ಚೇಷ್ಟೆ ಕೂಡ. ಇದು ಇಂದು ಅಸ್ತಿತ್ವದಲ್ಲಿರುವ ತೌಲನಿಕ ಅಧ್ಯಯನಗಳ ದೋಷವೂ ಆಗಿದೆ. ಸೃಷ್ಟಿಯಲ್ಲಿ ಆನೆಯೂ, ಇರುವೆ ಎರಡೂ ಪೂರ್ಣ ಅಸ್ತಿತ್ವಗಳೇ. ಆನೆಯನ್ನು ನೋಡಿ ಇರುವೆ ಎಂದೂ ತಾನು (ಯಾವುದೇ ವಿಷಯದಲ್ಲೂ) ಅದರಂತಾಗಬೇಕೆಂದು ಬಯಸಲಾರದು. 'ಸ್ಥಗಿತತೆ'ಯ ಆತಂಕ ಅದನ್ನು ಕಾಡದು. ಏಕೆಂದರೆ ಅದಕ್ಕೆ ಓದಿನ-ವಿಶೇಷವಾಗಿ, ತುಲನಾತ್ಮಕ ಅಧ್ಯಯನಗಳ- ಹಂಗಿಲ್ಲ! ಆದರೂ ಅವು ಸೃಷ್ಟಿಯ ಕೃಪೆಯ ಸಮಾನ ಫಲಾನುಭವಿಗಳು; ಹಾಗಾಗಿ ಸಮಾನ ಘನತೆಯ ಅಸ್ತಿತ್ವಗಳು. (ಇಲ್ಲಿ ಇಂಗ್ಲಿಷ್ ಆನೆಯೆಂದೂ ಕನ್ನಡ ಇರುವೆಯೆಂದೂ ಹೇಳುತ್ತಿಲ್ಲವೆಂಬುದನ್ನೂ ಓದುಗರು ಗಮನಿಸಬೇಕು ಮತ್ತು ಅವರು ಸಾಧ್ಯವಾದರೆ ಮಾಸ್ತಿಯವರ 'ಇರುವೆಗಳ ಲೋಕ' ಎಂಬ ಕಥೆಯನ್ನೂ ಓದಬೇಕು!)

ಹಾಗಾಗಿಯೇ ಈ ಲೇಖನ ಕನ್ನಡ ಮನಸ್ಸು ಸೃಜನಶೀಲ ಕೃತಿಗಳಿಂದ ಪ್ರಭಾವಿಸಲ್ಪಟ್ಟಷ್ಟು ಕ್ರಮಬದ್ಧ ವೈಚಾರಿಕರಿಂದ ಪ್ರಭಾವಿಸಲ್ಪಟ್ಟಿಲ್ಲ ಎಂಬೊಂದು ಕೊರತೆಯನ್ನು ಸೂಚಿಸುತ್ತಾ, ಕುವೆಂಪು ಮುಂತಾದ ಬರಹಗಾರರನ್ನು ಕ್ರಮಬದ್ಧ ವೈಚಾರಿಕರಲ್ಲ ಎನ್ನುತ್ತದೆ. ಹಾಗೂ ನಮ್ಮ ನೋಟಕ್ರಮವನ್ನೇ ಇಡಿಯಾಗಿ ಬದಲಿಸಿದ ಒಂದು ಕನ್ನಡ ಕೃತಿಯನ್ನು ಹೆಸರಿಸಿ ಎಂದು ಸವಾಲು ಹಾಕುತ್ತದೆ. ಕನ್ನಡ ಮನಸ್ಸು ಸೃಜನಶೀಲ ಮತ್ತು ವೈಚಾರಿಕ ಎಂದು ಒಡೆದುಕೊಂಡು 'ಪ್ರಗತಿಶೀಲ'ವಾಗಬೇಕೆಂದು ಒತ್ತಾಯಿಸುವ ಈ 'ಪ್ರಗತಿಶೀಲತೆ'ಯೇ ಒಂದು ಎರವಲು ವಿಚಾರ. ಕುವೆಂಪು ಓರ್ವ ಕ್ರಮಬದ್ಧ ವೈಚಾರಿಕರಲ್ಲ ಎನ್ನುವುದೇ ನನ್ನ ಪ್ರಕಾರ ವೈಚಾರಿಕತೆ ಎಂದರೇನು ಎಂಬುದನ್ನು ಕುರಿತು ಪಶ್ಚಿಮದ 'ಜ್ಞಾನಯುಗ'ದ ಪಠ್ಯಕ್ರಮ ಹೇರಿರುವ ಮೌಢ್ಯದ ಪರಿಣಾಮ. ಹಾಗೆ ನೋಡಿದರೆ, ಕ್ರಮಬದ್ಧ ಚಿಂತಕ ಎಂಬುದೇ ಒಂದು ಕನ್ನಡದಲ್ಲದ, ಅನುವಾದಿತ, ('ಡೂಪ್ಲಿಕೇಟ್') ಶಬ್ದ. ಅದನ್ನು ಕನ್ನಡದೊಳಕ್ಕೆ ಕೇವಲ ಶಬ್ದಶಃ ಅನುವಾದದಿಂದ ಬರಮಾಡಿಕೊಳ್ಳಲು ಸಾಧ್ಯವಿಲ್ಲ. ಅದಕ್ಕೆ ಕನ್ನಡದ್ದೇ ಆದ ವಿವೇಕದ ಬೆಂಬಲ-ಪೋಷಣೆ ಇರಬೇಕು.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕನ್ನಡದ ವಿವೇಕ ಎಂದರೇನು ಮತ್ತು ಅದು ಹೇಗೆ (ಪಶ್ಚಿಮದ) 'ಆಧುನಿಕತೆ'ಗೆ ಸಮಬಲವಾಗಿ ಮುಖಾಮುಖಿಯಾಗಿ ಅದನ್ನು ಜೀರ್ಣಿಸಿಕೊಂಡು ತನ್ನನ್ನು ತಾನು ಕಟ್ಟಿಕೊಳ್ಳಬಲ್ಲುದು ಎಂಬುದರ ನಮ್ಮ ಕಾಲದ ಒಂದು ದೊಡ್ಡ ಉದಾಹರಣೆಯಾಗಿದೆ. ಹೆಚ್ಚಲ್ಲದಿದ್ದರೂ ನಮ್ಮ ಕಾಲದ ಇಂತಹ ಹಲವು ಉದಾಹರಣೆಗಳನ್ನು ಹೊಸಗನ್ನಡ ಸಾಹಿತ್ಯದಿಂದ ನೀಡಬಹುದು. ನನ್ನ ಪ್ರಕಾರ 'ಮಲೆಗಳಲ್ಲಿ ಮದುಮಗಳು'ಘಿಗಿಂತ ಹೆಚ್ಚು ಪ್ರಭಾವಶಾಲಿಯಾಗಿ ಯಾವ 'ಕ್ರಮಬದ್ಧ' ಚಿಂತನೆಯೂ ಕನ್ನಡ ಮನಸ್ಸಿಗೆ ಅದಕ್ಕೆ ಅಗತ್ಯವಾದ-ಸುಸಂಬದ್ಧವಾದ-ವೈಚಾರಿಕತೆಯನ್ನು ಕಲಿಸಲಾರದು. ಆದರೆ ತೊಂದರೆ ಎಂದರೆ ಕನ್ನಡಿಗರು ವ್ಯಾಪಕವಾಗಿ ಈ ಕಾದಂಬರಿಯನ್ನು ಓದುವ ಸಂದರ್ಭವನ್ನೇ ನಾನು ಮೇಲೆ ಪ್ರಸ್ತಾಪಿಸಿದ 'ಬೌದ್ಧಿಕ ಚೇಷ್ಟೆ'ಗಳ ಒಂದು ಪರಂಪರೆಯೇ ನಿರ್ಮಾಣ ಮಾಡಿದೆ. ಪೃಥ್ವಿಯಂತಹವರು ಮೊದಲು ಈ ಬೌದ್ಧಿಕ ಚೇಷ್ಟೆಗಳಪರಂಪರೆಯನ್ನು ಸ್ಥಗಿತಗೊಳಿಸುವ ಕಡೆ ಗಮನ ನೀಡಿದರೆ ಕನ್ನಡ ಬೌದ್ಧಿಕತೆಯನ್ನು ನಿಜವಾಗಿ (ಅವರು ಬಳಸುವ 'ವಿಶ್ವ ಮಟ್ಟ' ಎಂಬ ನುಡಿಗಟ್ಟನ್ನು ನಾನು ಬಳಸಲಾರೆ) ಬೆಳೆಸಿದಂತಾಗುತ್ತದೆ.

ಈ ಸಂಬಂಧವಾಗಿ ಒಂದೆರಡು ವೈಯಕ್ತಿಕ ಮಾತುಗಳನ್ನೂ ಆಡುವುದು ಉಚಿತವೆನಿಸೀತು. ಪೃಥ್ವಿಯವರದ್ದು ಮೂಲತಃ ವಿದ್ವತ್ತಿನ ಮನಸ್ಸು. ಅದರ ಬಂಧನಗಳಲ್ಲಿ ತೊಳಲಾಡುತ್ತಿರುವ ಮನಸ್ಸೂ ಎಂದೂ ಕೆಲವೊಮ್ಮೆ ನನಗನ್ನಿಸಿದೆ. ಹಾಗಾಗಿಯೇ ಇತ್ತೀಚೆಗೆ ಅವರು 'ಪ್ರಜಾವಾಣಿ'ಯ ತಮ್ಮ ಅಂಕಣದಲ್ಲಿ ಮೈಸೂರು ಸಾಹಿತ್ಯ ಸಮ್ಮೇಳನದಲ್ಲಿನ ಚಂಪಾ ಅವರ ರಾಜಕೀಯ ದುರ್ವಾಸನೆಯ ಭಾಷಣವನ್ನು ಆರ್ವೆಲ್, ಗೂಗಿಗಳ ಜೊತೆ ಚಂಪಾ ಅವರ ಹೆಸರನ್ನು ಬಳಸಿ ಸಮರ್ಥಿಸುವ ಪ್ರಯತ್ನ ಮಾಡಲು ಮುಂದಾದದ್ದು. ಆಗ ಅವರಿಗೆ ನಾನು ಹೇಳಿದ ಒಂದು ಮಾತು : 'ಎಲ್ಲವೂ ವಿದ್ವತ್ ಚರ್ಚೆಗಳಿಗೆ ಒದಗುವುದಿಲ್ಲ, ಹುಷಾರಾಗಿರಿ!'

ಇಂಗ್ಲಿಷ್ ಭಾಷೆ ಒಂದು ಭಾಷೆ ಮಾತ್ರವಾಗಲ್ಲದೆ ಅದೊಂದು ಜೀವನ ದೃಷ್ಟಿ, ಜೀವನ ಕ್ರಮದ ಸಿದ್ಧಾಂತವೂ ಆಗಿ ನಮ್ಮ ಮೇಲೆ ಬೀಳುತ್ತಿರುವುದೂ ಈ ಎಲ್ಲ ಗೊಂದಲಕ್ಕೆ ಕಾರಣ. ಹೀಗೆಂದ ಮಾತ್ರಕ್ಕೆ ನಾನು ಇಂಗ್ಲಿಷ್ ಬೇಡ,


ಪಶ್ಚಿಮದ ಆಧುನಿಕತೆಯಿಂದ ನಾವು ಕತ್ತರಿಸಿಕೊಂಡು ಇರಬೇಕೆಂದು ಹೇಳುವವನೆಂದು ಯಾರೂ ಭಾವಿಸಬಾರದು. ಹೇಗೆ ಯಂತ್ರ ಕುರಿತ ಭ್ರಾಂತಿ (ಅದೇ ಮುಕ್ತಿದಾಯಕ ಎಂಬ ಮಾನಸಿಕತೆ) ಕಳೆದುಕೊಂಡು ಯಂತ್ರಗಳ ಬಳಕೆಯ ಪರಿಯನ್ನು ನಿರ್ಧರಿಸಬೇಕು ಎಂಬ ಗಾಂಧಿಯವರ ಮಾತನ್ನು ನಾವು ಇಂಗ್ಲಿಷ್ ಭಾಷೆಗೂ ಅನ್ವಯಿಸಿಕೊಂಡು ಅದನ್ನು ಕಲಿಯಬೇಕು ಎನ್ನುವವನು ನಾನು. ಅಂದರೆ ಕನ್ನಡ ಭಾಷೆಯ–ಸಂಸ್ಕೃತಿಯ ಭದ್ರ ಅಡಿಪಾಯದ ಮೇಲೆ ಇಂಗ್ಲಿಷ್ ಕಲಿಕೆಯಾದರೆ ಅದು ನಮ್ಮನ್ನು ನಮ್ಮ ಕೇಂದ್ರದಿಂದ ವಿಚಲಿತಗೊಳಿಸಿ ನಮ್ಮನ್ನು ನಮ್ಮಿಂದಲೇ ಪರಕೀಯ ಮಾಡುವ ದುರಂತವನ್ನು ಸೃಷ್ಟಿಸಲಾರದು ಎಂಬುದು ನನ್ನ ಅಭಿಮತ. ಹಾಗೆ ಕನ್ನಡದ ಬೌದ್ಧಿಕತೆ ಬೆಳೆದರೆ ಅದು ಅನನ್ಯವೂ ಆಗಿ, ಆ ತನ್ನ ಪರಿಮಳವನ್ನು ಹರಡಿ, ನಾವು ಇಂಗ್ಲಿಷ್ ಬೌದ್ಧಿಕ ಸಂಪ್ರದಾಯವನ್ನು ಅದರ ವಿಶಿಷ್ಟತೆಗಾಗಿ ಮೆಚ್ಚಿ ಅರಸಿಹೋದಂತೆ ಷೆಲ್ಡನ್ ಪೊಲಾಕ್, ಈಟನ್‌ರಂತಹ ಹೆಚ್ಚು ಜನ ಹಳೆಗನ್ನಡ ಸಂಸ್ಕೃತಿ ಕೋಶದ ಬಗ್ಗೆ ಮಾತ್ರವಲ್ಲದೆ ಸಮಕಾಲೀನ ಕನ್ನಡ ಸಂಸ್ಕೃತಿ ಕೋಶವನ್ನೂ ಅರಸಿ ಬರುವಂತಾಗುತ್ತದೆ. ಅದು ಮಾತ್ರ ಒಂದು ಭಾಷಾ ಸಂಸ್ಕೃತಿಯ ಜೀವಂತಿಕೆಯ ಲಕ್ಷಣ. ಅವರನ್ನು ಅರಸಿಕೊಂಡು ಹೋಗುವುದು, ಅವರ ಕೃತಿಗಳನ್ನು ಕನ್ನಡೀಕರಿಸುವ ಹಂಬಲ ಉಂಟಾಗುವುದು ಸ್ಥಗಿತಗೊಂಡ ಸಂಸ್ಕೃತಿಯೊಂದರ ಲಕ್ಷಣ ಅಥವಾ ಫಲ. ಕನ್ನಡ ಬೌದ್ಧಿಕ ಸಂಪ್ರದಾಯ ಸ್ಥಗಿತಗೊಂಡಿದೆ ಎಂದು ಹೇಳುತ್ತಲೇ ಪೃಥ್ವಿಯವರು ತಮ್ಮ ಮೀಮಾಂಸೆಯೂ ಅಂತಹ ಸ್ಥಗಿತತೆಯ ಫಲವೇ ಆಗಿದೆ ಎಂಬುದನ್ನು ಅರಿಯಲಾಗದ್ದು ಸಹಜವೇ ಆಗಿದೆ.

ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿದ್ವತ್ತು ಮತ್ತು ಸಂಶೋಧನೆಯ ಗುಣಮಟ್ಟ ಕಳಪೆಯಾಗಿರಲು ನಮ್ಮ ಬೌದ್ಧಿಕ ಸಂಪ್ರದಾಯ ಕನ್ನಡದ್ದಾಗಿರದೆ ಪಶ್ಚಿಮದ ಆಧುನಿಕತೆಯಿಂದ ಸಾರಾಸಗಟಾಗಿ ಆಮದು ಮಾಡಿಕೊಂಡ ಬೌದ್ಧಿಕತೆಯಾಗಿರುವುದೇ ಕಾರಣವಾಗಿದೆ. ಇದು ಬೌದ್ಧಿಕತೆಯನ್ನು ಮಾತ್ರವಲ್ಲದೆ ಬೌದ್ಧಿಕತೆಯನ್ನು ಗುರುತಿಸುವ, ಅದರ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನೂ ಪ್ರಭಾವಿಸಿರುವುದೂ ಇದಕ್ಕೆ ಕಾರಣವಾಗಿದೆ. ಇಂದು ನಮ್ಮ ವಿಶ್ವವಿದ್ಯಾಲಯಗಳ, ಸಂಶೋಧನಾ ಸಂಸ್ಥೆಗಳ ಹಾಗೂ ಅಕಾಡಮಿಗಳಂತಹ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಗಳ ಕುಲಪತಿ/ಮುಖ್ಯಸ್ಥರಿಂದ ಹಿಡಿದು ಕಿರಿಯ ಶ್ರೇಣಿಯ ಉಪನ್ಯಾಸಕ/ಸಂಶೋಧಕ ಮತ್ತು ಸದಸ್ಯರವರೆಗಿನ ಆಯ್ಕೆಗೆ ಮತ್ತು ಅವು ಹಾಕಿಕೊಳ್ಳುವ ಯೋಜನೆಗಳು, ಆಯೋಜಿಸುವ ಕಾರ್ಯಕ್ರಮಗಳು ಮತ್ತು ನೀಡುವ ಪ್ರಶಸ್ತಿ ಪುರಸ್ಕಾರಗಳಿಗೆ ಈಗ ಬಳಕೆಗೆ ಬಂದಿರುವ ಮಾನದಂಡಗಳು ಎರಡು ವಿಭಿನ್ನ ಬೌದ್ಧಿಕ ಸಂಪ್ರದಾಯಗಳ 'ಅನೈತಿಕ' ಮಿಲನದಲ್ಲಿ(ಕಲಬೆರಕೆ) ಹುಟ್ಟಿರುವ ಗೊಂದಲದ ದುಷ್ಪರಿಣಾಮಗಳು ಎಂದು ನಾನು ಭಾವಿಸಿದ್ದೇನೆ. ಜಾತಿ ಪದ್ಧತಿ ಕುರಿತ ನಮ್ಮ ದೃಷ್ಟಿಕೋನ ಮತ್ತು ಅದು ಸೃಷ್ಟಿಸಿರುವ 'ಸಾಮಾಜಿಕ ನ್ಯಾಯ' ಪರಿಕಲ್ಪನೆ ಕೂಡ ಈ ಗೊಂದಲದಲ್ಲಿ ಉಂಟಾದ ವಕ್ರೀಭವನದ ಫಲಗಳಷ್ಟೇ ಎಂದೂ ನಾನು ನಂಬಿದ್ದೇನೆ. ಹಾಗಾಗಿಯೇ ನಮ್ಮ ಸಾಹಿತ್ಯ ಅಕಾಡೆಮಿ ಬಹಳ ಬಾರಿ ಸಮಾಜ ಕಲ್ಯಾಣ ಇಲಾಖೆ ಸುಪರ್ದಿಗೆ ಒಳಗಾದ ಸಂಸ್ಥೆಯೋ ಎಂಬ ಅನುಮಾನ ಬರುವಂತೆ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ತನ್ನ ಅಸ್ಮಿತೆಗೆ ಭಂಗ ತಂದುಕೊಂಡಿದೆ. ಅದು ಅದಾಗಿ ಉಳಿಯದೆ ಅಸ್ತಿತ್ವದ ಬಿಕ್ಕಟ್ಟಿಗೆ ಸಿಕ್ಕಿಕೊಂಡಿದೆ.

ಕನ್ನಡ ಸಂಸ್ಕೃತಿಯನ್ನು ವಿಶ್ವ ಸಂಸ್ಕೃತಿಯ ಬಿಡಿಭಾಗವೆಂದು ಪರಿಗಣಿಸುವ ಚಾಳಿಯ ಬಗ್ಗೆ ಹೇಳಿದೆ. ಹಾಗೇ ಅದನ್ನು ಭಾರತೀಯ ಸಂಸ್ಕೃತಿಯ ಬಿಡಿಭಾಗದಂತೆ ಪರಿಗಣಿಸುವ ಚಾಳಿಯ ಒಂದು ಫಲವೇ ಪೃಥ್ವಿಯವರು ಪ್ರಸ್ತಾಪಿಸುವ ಕನ್ನಡ ಚಳುವಳಿಯ ಉಗ್ರಗಾಮಿ ಆಯಾಮಕ್ಕೆ ಮತ್ತು ಅದು ಕನ್ನಡ ಶಿಕ್ಷಣದ ಅಗತ್ಯವನ್ನೇ ನಿರ್ಲಕ್ಷಿಸಿ ಕನ್ನಡತನವನ್ನು ಸ್ಥಾಪಿಸುವ ಭೋಳೇತನಕ್ಕೆ ಒಳಗಾಗಲು ಕಾರಣವಾಗಿರುವುದು. ಈಗ 'ಕ್ರಿಯಾಶೀಲ'ವಾಗಿರುವ ಕನ್ನಡ ಬೌದ್ಧಿಕತೆಯು ಹೀಗೆ ರೂಪದಲ್ಲಿ(ಅಂದರೆ ಮಾತಿನಲ್ಲಿ) ಮಾತ್ರ ಬಿರುಸಾಗಿದ್ದು ಹೂರಣದಲ್ಲಿ ಟೊಳ್ಳಾಗಿರುವುದೇ ಈ ಬೌದ್ಧಿಕತೆಯ ಒಂದು ಭಾಗ ಬಹು ಟೊಳ್ಳಾದ ರಾಜಕೀಯದ ಪ್ರತಿಪಾದನೆಗಳಲ್ಲಿ ತೊಡಗಿ, ಅದರ ಭಾಗವಾಗಿ ಪ್ರಭುತ್ವದ ಕೂಲಿಕಾರಾಗಿ ಪರಿವರ್ತಿತರಾಗಲು ಕಾರಣವಾಗಿರುವುದು. ಅಂದ ಮಾತ್ರಕ್ಕೆ ಬೌದ್ಧಿಕರು ಪ್ರಭುತ್ವದ ಗೊಡವೆಗೆ ಹೋಗಬಾರದೆಂದು ನಾನು ಹೇಳುತ್ತಿಲ್ಲ. ಬದಲಿಗೆ, ಅವರು ಪ್ರಭುತ್ವದ ನೀತಿ ಸಿದ್ಧಾಂತಗಳನ್ನು ಪ್ರಭಾವಿಸುವ ಘನತೆ–ಗೌರವಗಳಿಗೆ ಬಾಧ್ಯರಾಗುವಂತಾಗಬೇಕು. ಅವರು ಪ್ರಭುತ್ವಕ್ಕೆ ಬೇಕಾಗುವಂತಾಗಬೇಕು. ಆದರೆ ಈಗ ಇವರಿಗೆ ಪ್ರಭುತ್ವದ ರೊಟ್ಟಿಯ ರುಚಿ ಬೇಕಾಗಿದೆ ಎಂಬಂತಾಗಿದೆ.

ಸಾವಿರ–ಎರಡು ಸಾವಿರ ವರ್ಷಗಳ ಹಿಂದೆಯೇ ಕನ್ನಡವು ವಿಶ್ವದೊಂದಿಗೆ ಸಂವಾದಿಸಬಲ್ಲುದಾಗಿತ್ತು ಎಂದು ಪೃಥ್ವಿ ಬರೆಯುತ್ತಾರೆ. ಆಗ ಕನ್ನಡ ಇಂಗ್ಲಿಷ್‌ನಂತಹ 'ವಿಶ್ವ ಭಾಷೆ'ಯನ್ನೇನೂ ತನ್ನ ಹೆಗಲ ಮೇಲೆ ಹೊತ್ತುಕೊಂಡಿರಲಿಲ್ಲ. ಹಾಗಾಗಿ ಕನ್ನಡವು ಇಂದು ವಿಶ್ವಾತ್ಮಕವಾಗಲು ಇಂಗ್ಲಿಷ್‌ನ ವಿಶ್ವಾತ್ಮಕತೆಯ ಅಗತ್ಯವೇನೂ ಇರಲಾರದು. ನಮ್ಮ ಮೂಲೆ ಹಳ್ಳಿಯ ಇಂಗ್ಲಿಷ್‌ನ ಗಂಧಗಾಳಿಯೂ ಇಲ್ಲದದ ರೈತನೂ ವಿಶ್ವಾತ್ಮಕನಾಗಿರಬಲ್ಲ. ಅವನಿಗೆ ಕವಿರಾಜ ಮಾರ್ಗ ಕನ್ನಡಿಗನ ಅಥವಾ ಕನ್ನಡತ್ವದ ಗುಣ ಲಕ್ಷಣವಾಗಿ ಹೇಳುವ 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ...' ಎಂಬುದು ಅವನಿಗೆ ಕನ್ನಡ ಚರಿತ್ರೆ ಮತ್ತು ಸಂಪ್ರದಾಯದಿಂದ ಸಹಜವಾಗಿ ದತ್ತವಾಗಿದೆ. ಅದನ್ನೀಗ ಪಶ್ಚಿಮದ ಆಧುನಿಕತೆಯ ಭಾಗವಾಗಿ ನಮ್ಮನ್ನುನ್ನು ಕೆರಳಿಸಿರುವ 'ಸೆಕ್ಯುಲರಿಸಂ' ಎಂಬ ತತ್ವವಾಗಿ ಪರಿವರ್ತಿಸುವ (ಅನುವಾದದ) ರಾಜಕೀಯ–ಸಾಂಸ್ಕೃತಿಕ ದಾಳಿ ಅವನ ಮೇಲೆ ನಡೆದಿದೆ. ಈ ದಾಳಿಯ ಮೂಲಕವೇ ಸ್ವಾತಂತ್ರ್ಯ ಮತ್ತು ಸಮಾನತೆಗಳ ಹೊಸ ಅರ್ಥಗಳನ್ನೂ ಅವನ ಮೇಲೆ ಹೊರಿಸುವ ಪ್ರಯತ್ನ ನಡೆದಿದೆ. ಇದು ನಿಜವಾದ ನವ ಸಾಮ್ರಾಜ್ಯಶಾಹಿ. ಹಾಗಾಗಿಯೇ ನಾನು ನಮ್ಮ ಭಾಷೆ ಯಾವುದೇ ನರಳಾಟವಿಲ್ಲದೆ ಸಹಜವಾಗಿ ಒಳಬಿಟ್ಟುಕೊಳ್ಳಬಲ್ಲ (ಸೆಕ್ಯುಲರಿಸಂ ಎಂಬ ಶಬ್ದವನ್ನು ಒಳಬಿಟ್ಟುಕೊಳ್ಳಲು ಕನ್ನಡ ಹೇಗೆ ಮತ್ತು ಏಕೆ ನಿರಾಕರಿಸುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ) ಪ್ರಮೇಯಗಳನ್ನಷ್ಟೇ ನಾವು ನಮಗೆ ಬೇಕಾದ ಜ್ಞಾನ ಎಂದು ಪರಿಗಣಿಸಬೇಕು ಎಂದು ಹಿಂದೊಮ್ಮೆ ಹೇಳಿದ್ದಿದು. ಪಶ್ಚಿಮದ ಆಧುನಿಕ ಜೀವನ ದೃಷ್ಟಿ ನಮ್ಮಲ್ಲಿ ಹುಟ್ಟಿಸಿಬಿಟ್ಟಿರುವ ದುರಂತಮಯವಾದ ಮಿತಿಯಿಲ್ಲದ ಸುಖಗಳ ಬದುಕಿನ ತುಡಿತವನ್ನು ನೀಗಿಕೊಳ್ಳುವವರೆಗೆ ಈ ಮಾತು, ವಿಶ್ವ, ವಿಶ್ವಾತ್ಮಕತೆ ಎಂಬ ಸಾಪೇಕ್ಷ ಪರಿಕಲ್ಪನೆಗಳ ದಾಕ್ಷಿಣ್ಯದಲ್ಲಿ ಅಸಂಬದ್ಧವಾಗಿ, ಯಥಾಸ್ಥಿತಿವಾದವಾಗಿಯೇ ಕಂಡೀತು. ಗಾಂಧಿಯ ಹೆಸರನ್ನು ಹೇಳಿಕೊಂಡೇ ಅವರನ್ನು ಅಸಂಬದ್ಧಗೊಳಿಸಿರುವ ದುರಂತದ ಭಾಗವಿದಷ್ಟೆ. ನನ್ನ ಈ ಇಡೀ ಟಿಪ್ಪಣಿಗಳನ್ನು ಒಂದೇ ವಾಕ್ಯದಲ್ಲಿ ಸಾರಾಂಶೀಕರಿಸಿ ಹೇಳುವುದಾದರೆ, ಕನ್ನಡ ಬೌದ್ಧಿಕತೆ ಇಂದು ಎದುರಿಸುತ್ತಿರುವ ಸಮಸ್ಯೆ ಸ್ಥಗಿತತೆಯದಲ್ಲ; ಅಸ್ಮಿತೆ ಮತ್ತು ಆತ್ಮವಿಶ್ವಾಸದ ಬಿಕ್ಕಟ್ಟಿನದು.

ಇಂದಿರಾ ಕೃಷ್ಣಪ್ಪನವರ ಕ್ಯಾಮರಾ ಕಣ್ಣು...



ನಮ್ಮ ಪತ್ರಿಕೆಯಲ್ಲಿ ೨೦೧೨ರಿಂದ ಆರಂಭವಾದಂತೆ ಸತತವಾಗಿ ಸುಮಾರು ಐದು ವರ್ಷಗಳ ಕಾಲ ೪೭ ಕಂತುಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಇಂದಿರಾ ಕೃಷ್ಣಪ್ಪನವರು ಬರೆದ 'ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ' ಈಗ 'ನನ್ನ ಕಣ್ಣಿನ ಕ್ಯಾಮರಾದಲ್ಲಿ ಪ್ರೊ. ಬಿ.ಕೃಷ್ಣಪ್ಪ ' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲಿ ಪ್ರಕಟವಾಗಿದೆ. ಇದನ್ನು ಪ್ರಕಟಿಸಿರುವವರು ಇಂದಿರಾ ಅವರೇ ಮುಖ್ಯಸ್ಥರಾಗಿರುವ ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್. ಈ ಪುಸ್ತಕವನ್ನು ಅದು ಪ್ರಕಟವಾದ ಸುಮಾರು ಎರಡು ತಿಂಗಳುಗಳ ನಂತರ ಲೇಖಕಿಯು ಒಂದು ಪ್ರತಿಯನ್ನು ಗೆಳೆಯರೊಬ್ಬರ ಮೂಲಕ ನನಗೆ ತಲುಪಿಸಿದ್ದಾರೆ. ನಾನು ಸಹಜವಾಗಿಯೇ ಬಹಳ ನಿರೀಕ್ಷೆಯಿಟ್ಟುಕೊಂಡಿದ್ದ ಈಪುಸ್ತಕವನ್ನು ನೋಡಿ ನನಗಾದ ಬೇಸರ–ಜಿಗುಪ್ಸೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ನನ್ನ ಆಪ್ತ ಗೆಳೆಯರಲ್ಲೊಬ್ಬರಾಗಿದ್ದ ಬಿ.ಕೃಷ್ಣಪ್ಪನವರ ಬದುಕು ಮತ್ತು ಹೋರಾಟದ ಕಥೆ ಮುಂದಿನ ತಲೆಮಾರಿನ ದೃಷ್ಟಿಯಿಂದ ದಾಖಲಾರ್ಹವಾದದ್ದೆಂದು ಭಾವಿಸಿ ಅದನ್ನು ನಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರೆಯಲು ಇಂದಿರಾ ಅವರನ್ನು ಪ್ರೇರೇಪಿಸಿದ್ದು ನಾನು. ಪ್ರತಿ ಕಂತಿನ ನಂತರವೂ, ಬರಹವನ್ನು ವಿಮರ್ಶಿಸಿ ಅದಕ್ಕೊಂದು ದಿಕ್ಕು ದೆಸೆ ನಿರ್ದೇಶಿಸಿದವನು ನಾನು. ಉದಾಹರಣೆಗೆ, ಅವರ ಹೋರಾಟದ ವಿವರಗಳ ಏಕತಾನತೆ ಕಂಡಾಗ, ಅವರ ವೈಯಕ್ತಿಕ ಬದುಕಿನ ವಿವರಗಳನ್ನು ನಿರೂಪಿಸುವಂತೆಯೂ, ದಲಿತ ಹೋರಾಟದ ಕಥೆ ಬಿಕೆಯವರ ವೈಯಕ್ತಿಕ ಹೋರಾಟದ ಕಥೆಯಂತೆ ಕಾಣಿಸತೊಡಗಿದಾಗ ಹೋರಾಟವನ್ನು ಅವರ ಜೊತೆಗೆ ಕಟ್ಟಿದವರ ಕಿರುಕಥೆಗಳನ್ನೂ ಅದರೊಂದಿಗೆ ಜೋಡಿಸುವಂತೆ ಸೂಚಿಸಿದವನು ನಾನು. ಏಕೆಂದರೆ ದಲಿತ ಸಂಘರ್ಷ ಸಮಿತಿಯ ಉಚ್ಛ್ರಾಯ ಕಾಲದಲ್ಲಿ ಅದರ ಕಥೆಯನ್ನು ನಾನು ಕಣ್ಣಾರೆ ಕಂಡಿದ್ದೆ. ಇಂದಿರಾ ಅವರು

ಬರೆದು ಕಳಿಸುತ್ತಿದ್ದ ಪ್ರತಿ ಕಂತನ್ನೂ ಅವಲೋಕಿಸಿ ಅದರ ಕಾಗುಣಿತ, ವಾಕ್ಯ ರಚನೆಗಳನ್ನು ತಿದ್ದುತ್ತಾ, ಜೊಳ್ಳು ಮತ್ತು ಅನಗತ್ಯ ಮಾಹಿತಿಯನ್ನು ಸಂಕಲಿಸಿ ಪ್ರತಿ ಕಂತಿಗೂ ಆಕರ್ಷಕ ಮತ್ತು ಅರ್ಥಪೂರ್ಣ್ ಶೀರ್ಷಿಕೆ ನೀಡಿ ಹಾಗೂ ಅವುಗಳಿಗೆ ಸರಿಹೊಂದುವ ಚಿತ್ರಗಳನ್ನು ಅವರಿಂದಲೋ ಮತ್ತೊಬ್ಬರಿಂದಲೋ ಪಡೆದು ಅವನ್ನು ಪರಿಷ್ಕರಿಸಿ ಪ್ರಕಟಿಸಿದವನು ನಾನು. ಕೊನೆಗೆ ಇದು ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟನ ಅಧಿಕೃತ ಕಟ್ಟಡ ಹನಗವಾಡಿ ಬಳಿ ಉದ್ಘಾಟನೆಯಾಗುವ ಸಂದರ್ಭದಲ್ಲಿ ಪುಸ್ತಕ ರೂಪದಲ್ಲಿ ಬಿಡುಗಡೆ ಮಾಡಬೇಕೆಂಬ ಪ್ರಸ್ತಾಪ ಬಂದಾಗ ನನ್ನ ಗಣಕದಲಿದ್ದಲೇಖಣ ಮಾಲೆಯ ಎಲ್ಲ ಕಂತುಗಳನ್ನೂ ಸಕ್ರಮವಾಗಿ ಜೋಡಿಸಿ ಪುಟವಿನ್ಯಾಸಕ್ಕಾಗಿ ಕಳಿಸಿಕೊಟ್ಟವನು ನಾನು. ಮತ್ತು ಇವರು ಕೇಳಿದ ಚಿತ್ರಗಳನ್ನು ಮತ್ತೆ ನನ್ನ ಗಣಕದಲ್ಲಿ ಹುಡುಕಿ ಕಳಿಸಿದವನು ನಾನು. ಇದೆಲ್ಲ ಬೆಳವಣಿಗೆಯ ನಂತರ ನನಗೆ ತಿಳಿಸಲಾದ ಸುದ್ದಿಯೆಂದರೆ, ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಪುಸ್ತಕವನ್ನು ಬಿಡುಗಡೆ ಮಾಡಲಾಗುತ್ತಿಲ್ಲವೆಂದೂ, ಬಿಕೆಯವರ ಚಿತ್ರ ಸಂಪುಟವೊಂದನ್ನು ಮಾತ್ರ ಬಿಡುಗಡೆಗೆ ಸಿದ್ಧಗೊಳಿಸಲಾಗುತ್ತಿದೆ ಎಂದು. ಆದರೆ ಆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಯಾಯಿತು. ಆದರೆ ಮಳೆಯಲ್ಲಿ ತೊಯ್ದು ಅವಸರಸರವಾಗಿ ನಡೆದ ಈ ಸಮಾರಭದಲ್ಲಿ ಪುಸ್ತಕಗಳ ಬಿಡುಗಡೆಯೇನೂ ಸುದ್ದಿಯಾಗಲಿಲ್ಲ. ಲೇಖಕಿಯಾಗಲೀ, ಇತರ ಸಂಘಟಕರಾಗಲೀ ಈ ಪುಸ್ತಕದ ಬಗ್ಗೆ ನನಗೆ ಯಾವ ಮಾಹಿತಿಯನ್ನೂ ನೀಡಲಿಲ್ಲ. ಹಾಗಾಗಿ ಪುಸ್ತಕದ ಒಂದು ಪ್ರತಿ ಮೊನ್ನೆ ನನಗೆ ತಲುಪಿದಾಗಲೇ ಅದು ನನಗೆ ಗೊತ್ತಾದದ್ದು. ಆಶ್ಚರ್ಯದ ಜೊತೆ ಬೇಸರವೂ, ಜಿಗುಪ್ಸೆಯೂ ಆದದ್ದು.

ಬೇಸರವೇಕೆಂದರೆ, ಈ ಪುಸ್ತಕದ ಮೂಲ ಪ್ರೇರಕ ಮತ್ತು ಅದರ ಹೂರಣದ ನಿರ್ದೇಶಕನೂ, ಪರಿಷ್ಕಾರಕನೂ ಆದ ನನ್ನಿಂದ ಈ ಪ್ರಕಟಣೆಯ ಸುದ್ದಿಯನ್ನು ಬಹು ಎಚ್ಚರಿಕೆಯಿಂದ ಮರೆಮಾಚಿದ್ದಕ್ಕಾಗಿ. ಏಕೆ ಮರೆಮಾಚಲಾಯಿತು ಎಂದು ನನಗೆ ಗೊತ್ತಾದದ್ದು, ಈ ಪುಸ್ತಕಕ್ಕೆ ಬರೆಸಲಾಗಿರುವ ಮುನ್ನುಡಿಯನ್ನು ಕಂಡಾಗ. ಕೃಷ್ಣಪ್ಪನವರಿಗಾಗಲೀ, ದಲಿತ ಚಳುವಳಿಗಾಗಲೀ ಸಂಬಂಧವಿರದ ವ್ಯಕ್ತಿಯೊಬ್ಬರಿಂದ ಮುನ್ನುಡಿಯನ್ನು ಬರೆಸಲಾಗಿದೆ. ಐತಿಹಾಸಿಕ ದಾಖಲೆಯಾಗಬಹುದಾಗಿದ್ದ ಈ ಪುಸ್ತಕ ಇನ್ನೂ ಹೆಚ್ಚಿನ 'ಮೌಲಿಕ'ವಾದ ಮುನ್ನುಡಿಗೆ ಅರ್ಹವಾಗಿತ್ತು ಎಂಬುದು ನನ್ನ ಭಾವನೆ. ಇದು ನನ್ನ ಜಿಗುಪ್ಸೆಗೆ ಕಾರಣ. ಇದರ ಮುನ್ನುಡಿ ಬರೆಯಲು ನಿಮಗೇ ಆಸಕ್ತಿ ಇತ್ತೆ ಎಂದು ಯಾರಾದರೂ ಕೇಳಿದರೆ, ನಿಸ್ಸಂಕೋಚವಾಗಿ ಹೌದು ಎನ್ನುವೆ ನಾನು. ಮುನ್ನುಡಿಯೋ, ಮತ್ತೊಂದೋ, ಈ ಪುಸ್ತಕದ ಹಿಂದಿನ ಒಂದು ಚಾಲಕ ಶಕ್ತಿಯಾಗಿ ಕೆಲವು ಮಾತುಗಳನ್ನು ಬರೆಯಬೇಕೆಂಬ ನನ್ನ ಹಂಬಲ ಸಹಜವಾದದ್ದೇ ಮತ್ತು ಅದು ನನ್ನ ಸಹಜ ಹಕ್ಕು ಕೂಡ ಎಂದು ನಾನು ಭಾವಿಸಿದ್ದೇನೆ ಮತ್ತು ನೀವೂ ಒಪ್ಪುವಿರಿ ಎಂದು ನಂಬಿದ್ದೇನೆ. ಆದರೆ ಆ ಅವಕಾಶವೇ ನನಗೆ ದೊರೆಕದಂತೆ ಈ ಲೇಖಕಿ ಮತ್ತು ಪ್ರಕಾಶಕಿ ಮಾಡಿದ್ದಾದರೂ ಏಕೆ?

ಕೃಷ್ಣಪ್ಪ ನಮ್ಮ ನಡುವಣ ದೊಡ್ಡ ಹೋರಾಟಗಾರ ಮತ್ತು ಸಂಘಟಕ. ಕರ್ನಾಟಕದ ದಲಿತ ಹೋರಾಟದ ಇತಿಹಾಸದಲ್ಲಿ ಅವರ ಸ್ಥಾನ ಚಿರಸ್ಥಾಯಿಯಾದದ್ದು. ಅಂದ ಮಾತ್ರಕ್ಕೆ ವೈಯಕ್ತಿಕವಾಗಿ, ಹೋರಾಟಗಾರರಾಗಿ ಮತ್ತು ಸಂಘಟಕರಾಗಿ ಅವರಲ್ಲಿ ದೋಷಗಳಿರಲಿಲ್ಲವೆಂದಲ್ಲ. ಹಲವಿದ್ದವು. ದಲಿತ ಚಳುವಳಿಯೊಳಗಿನ ಅನೇಕ ಸಂಘರ್ಷಗಳಿಗೆ ಮತ್ತು ಜಾತಿಬೇಧವಿಲ್ಲದೆ ಸಮಾನತೆಗಾಗಿ ತುಡಿಯುತ್ತಿದ್ದ ಎಲ್ಲ ಜೀವಗಳ ವೇದಿಕೆಯಾಗಿದ್ದ ಅದು ಅಂತಿಮವಾಗಿ ದಲಿತ ಜಾತಿಯವರಿಗೆ ಸೀಮಿತವಾಗಿ, ನಂತರ ಅಲ್ಲಲ್ಲಿ ಎಡ-ಬಲವೆಂದು ಒಡೆದು ಕೊನೆಗೆ ರಾಜಕೀಯ ಪಕ್ಷವೊಂದರ ಬಾಲಂಗೋಚಿಯಾಗಲು ಯತ್ನಿಸಿ ಈ ಗೊಂದಲದಲ್ಲಿ ಆತ್ಯಂತಿಕವ ಹಲವು ಕವಲುಗಳಾಗಿ ವಿಚ್ಛಿದ್ರವಾದುದಕ್ಕೆ ಇತರ ಕಾರಣಗಳೊಂದಿಗೆ ಅವರ ಈ ದೋಷಗಳು ಕೂಡ ಕಾರಣವಾಗಿದ್ದವು. ಇಂದಿರಾ ಅವರಿಗೆ ತನ್ನ ಪತಿ ಕೃಷ್ಣಪ್ಪನವರನ್ನು ಕಳಂಕ ರಹಿತ ಮಹಾಮೂರ್ತಿಯಾಗಿ ಕಡೆಯುವ ಚಾಳಿ. ಇದನ್ನು ಚಾಳಿ ಎಂದು ಕರೆದಿರುವುದೇಕೆಂದರೆ, ಇದನ್ನು ಸರಿಪಡಿಸಲು ನಾನು ಪತ್ರಿಕೆಯ ಸಂಪಾದಕನಾಗಿ ಹಲವು ಬಾರಿ ಯತ್ನಿಸಿದೆ. ಪತ್ನಿಯಾದರೂ, ಸುದೂರದಲ್ಲಿ ನಿಂತು ಕೃಷ್ಣಪ್ಪನವರ ವ್ಯಕ್ತಿತ್ವವನ್ನು ವಸ್ತುನಿಷ್ಠವಾಗಿ, ರಕ್ತ ಮಾಂಸಗಳ ಮನುಷ್ಯರಾಗಿ ನಿರೂಪಿಸಲು ಅವರಿಗೆ ಹೇಳಿದೆ. ಆದರೆ ಅವರಿಗೆ ಅದು ಬೇಕೂ ಇರಲಿಲ್ಲ; ಹಾಗಾಗಿ ಅದು ಸಾಧ್ಯವೂ ಆಗಲಿಲ್ಲ.

ಆದರೆ ಇದೊಂದು ಪುಸ್ತಕವಾಗಿ ಪ್ರಕಟವಾದಾಗ ಒಂದು ಪ್ರಸ್ತಾವನೆಯ ರೂಪದಲ್ಲಿ ಈ ಪುಸ್ತಕದ ಐತಿಹಾಸಿಕ ಮಹತ್ವ ಮತ್ತು ಇದರ ಹಿಂದಿರುವ ಇಂದಿರಾ ಅವರ ಪರಿಶ್ರಮದ ಜೊತೆಗೇ, ಇಲ್ಲಿನ ನಿರೂಪಣೆಯ ಮಿತಿಗಳಿಂದಾಗಿ ಈ ಪುಸ್ತಕ ಇತಿಹಾಸದ ದಾಖಲೆಯಾಗಿ ಹೇಗೆ ಹಲವು ಕೊರತೆಗಳನ್ನು ಒಳಗೊಂಡು ಇತಿಹಾಸದ ಒಂದು ಪಾರ್ಶ್ವನೋಟ ಮಾತ್ರವಾಗಿದೆ ಎಂಬುದನ್ನು ವಿವರಿಸುವ ಉದ್ದೇಶ ನನಗಿತ್ತು. ಏಕೆಂದರೆ ನಮ್ಮ ಇತಿಹಾಸ ಹಲವರ 'ಮಹಾತ್ಮೆ'ಗಳಾಗಿ 'ಪುರಾಣ'ಗಳಾಗಿ ಘನೀಭವಿಸಿ ವರ್ತಮಾನದಲ್ಲಿ ಕೊಡುತ್ತಿರುವ ತೊಂದರೆಗಳನ್ನು ನಾವು ಗಮನಿಸುತ್ತಿದ್ದೇವೆ; ಅನುಭವಿಸುತ್ತಿದ್ದೇವೆ. ಇಂದಿರಾ ಅವರಿಗೆ ತಮ್ಮ ಬರವಣಿಗೆಯ ಶೈಲಿ ನನಗೆ ಅಷ್ಟೇನೂ ಇಷ್ಟವಾಗಿಲ್ಲ (ಅದನ್ನು ಲೇಖನ ಮಾಲೆಯ ಕೊನೆಯ ಕಂತಿಗೆ ಬರೆದ ಟಿಪ್ಪಣಿಯಲ್ಲಿ ಸೂಚ್ಯವಾಗಿ ಹೇಳಿರುವೆ) ಎಂಬುದು ಗೊತ್ತಾಗಿದೆ ಎಂದು ನನಗೆ ಗೊತ್ತಾಯಿತಾದರೂ, ಈ ಪುಸ್ತಕದ ಹಿಂದಿನ ನನ್ನ ಹುರುಪು, ಆಸಕ್ತಿ, ಶ್ರದ್ಧೆ, ಪರಿಶ್ರಮ ಮತ್ತು ನನಗೆ ಕೃಷ್ಣಪ್ಪನವರ ಬಗೆಗಿರುವ ವೈಯಕ್ತಿಕ ಪ್ರೀತಿ-ಗೌರವಗಳ ಕಾರಣದಿಂದಲಾದರೂ ಅವರು ಈ ಪುಸ್ತಕದ ಪ್ರಕಟಣೆಯ ವಿಷಯದಲ್ಲಿ ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವರು ಎಂದು ಭಾವಿಸಿದ್ದೆ. ಆದರೆ ಅವರು ತಮ್ಮ ಪತಿಯನ್ನು ಈ ಪುಸ್ತಕದಲ್ಲಿ ತಾವಿರಿಸಿರುವ ಇತಿಹಾಸದ ಮಹಾಮಹಿಮರ ಸಾಲಿನಿಂದ (ಬುದ್ಧ, ಬಸವ, ಅಕ್ಕ, ಗಾಂಧಿ, ಅಂಬೇಡ್ಕರ್, ಫುಲೆ, ರಮಾಬಾಯಿ, ಕುವೆಂಪು ಇತ್ಯಾದಿ!) ಎಲ್ಲಿ ಯಾರಾದರೂ ಇಳಿಸಿಯಾರೋ ಎಂಬ ಆತಂಕ, ಅಭದ್ರತೆ ಮತ್ತು ಅವಾಸ್ತವಿಕ ಮಹತ್ವಾಕಾಂಕ್ಷೆಯ ಸುಳಿಗೆ ಸಿಕ್ಕವರು. ಇದರ ಪರಿಣಾಮವೆಂದರೆ, ಈ ಪುಸ್ತಕ ಕೃಷ್ಣಪ್ಪನವರ ಬಗ್ಗೆ ಏಕಾಕಾರದ ಒಂದು ಡುಬ್ಬ ಚಿತ್ರವನ್ನು ನಮ್ಮ ಮುಂದಿರಿಸಿದೆ. ಅದರ ಜೊತೆಗೇ ಬರುವ ದಸಂಸದ ಕಥೆಯ ಪಾಡೂ ಇದೇ ಆಗಿದೆ.

ಹಾಗೆ ನೋಡಿದರೆ ಇದರಲ್ಲಿ ಇಂದಿರಾ ಅವರ ತಪ್ಪೇನೂ ಇಲ್ಲ. ತಪ್ಪು ನನ್ನದೇ. ಹಿಂದೊಮ್ಮೆ ಇವರು ತಮ್ಮ ಪುಸ್ತಕವೊಂದಕ್ಕೆ ನನ್ನಿಂದ ಒತ್ತಾಯಪೂರ್ವಕವಾಗಿ ಮುನ್ನುಡಿಯೊಂದನ್ನು ಬರೆಸಿಕೊಂಡಿದ್ದರು. ಅದರಲ್ಲಿ ಅವರ ಆ ಪುಸ್ತಕದ ಒಳ್ಳೆಯ ಗುಣಗಳನ್ನು ವಿಸ್ತಾರವಾಗಿ ಹೇಳಿ, ಕೊನೆಯಲ್ಲಿ ಅವರ ಬರವಣಿಗೆ ಒಂದೆರಡು ಮಿತಿಗಳ ಬಗ್ಗೆ ಎರಡು-ಮೂರು ಸಾಲು ಬರೆದಿದ್ದೆ. ಅವರು ಅದನ್ನು ನನಗೆ ತಿಳಿಸುವ ಸೌಜನ್ಯವನ್ನೂ ತೋರದೆ ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕಿ ಪ್ರಕಟಿಸಿದ್ದರು. ಆಗ ನಾನು ಅದಕ್ಕಾಗಿ ಅವರನ್ನು ಛೇಡಿಸಿದ್ದೆ. ಆದರೆ ಈ ಮಹಿಳೆ ಕಿಂಚಿತ್ತೂ ಬದಲಾಗಿಲ್ಲ. ಏಕೆಂದರೆ ಅದು ಅವರ ಚಾಳಿ. ಸ್ವಘೋಷಿತ ಪ್ರಗತಿಪರ, ಕ್ರಾಂತಿಕಾರಿಗಳ ಘಾತುಕತನವನ್ನು ನಾನು ಎದುರಾಗಿರುವುದು ಇದೇನೂ ಮೊದಲ ಸಲವಲ್ಲ. ಆದರೂ ನಾನು ಬುದ್ಧಿ ಕಲಿತಿಲ್ಲ. ಇದು ನನ್ನ ತಪ್ಪಲ್ಲದೆ ಮತ್ತೇನು?

೧೯೯೭ರಲ್ಲಿ ಜಾತಿ ಮೀರಿದ ಒಲವಿನ ವಿವಾಹ ವೇದಿಕೆ 'ಮಾನವ ಮಂಟಪ' ಸ್ಥಾಪಿತವಾದಾಗ 'ಒಲವು' ಎಂಬದರ ಸ್ಮರಣ ಸಂಚಿಕೆಯ ಸಂಪಾಜಕನಾಗಿ ಹಲವು ಮೌಲಿಕ ಲೇಖನಗಳು ಮತ್ತು ಅಂತರ್ಜಾತಿ ವಿವಾಹಿತರ ಅನುಭವ ಕಥನಗಳು, ಸಂದರ್ಶನಗಳು ಮತ್ತು ದಾಖಲೆಗಳನ್ನೊಳಗೊಂಡ ಸಂಪುಟವೊಂದನ್ನು ಸಂಪಾದಿಸಿ, ಮೈಸೂರಿನ 'ಆಂದೋಲನ' ಮುದ್ರಣಾಲಯದಲ್ಲಿ ಒಂದು ವಾರ ಹಗಲು-ರಾತ್ರಿ ಕೂತು ಅದರ ವಿನ್ಯಾಸ ಮತ್ತು ಮುದ್ರಣವನ್ನು ನೋಡಿಕೊಂಡೆ. ಆದರೆ ಅದು ಸ್ಥಾಪನಾ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಶಿವರಾಮ ಕಾರಂತರ ಸಮ್ಮುಖದಲ್ಲಿ ಲಕ್ಷ್ಮಿ ನಿಜಾಮುದ್ದೀನ್‌ರಿಂದ ಬಿಡುಗಡೆಯಾದಾಗ ನನ್ನನ್ನು ವೇದಿಕೆಗೆ ಕರೆಯುವುದಿರಲಿ, ನನ್ನ ಹೆಸರನ್ನೂ ಹೇಳದಷ್ಟು ಘಾತುಕತನವನ್ನು ಸಂಘಟಕರು ಮೆರೆದರು! ಯಾವುದೋ ವೈಯಕ್ತಿಕ ಕಾರಣದಿಂದ ಕಾರ್ಯಕ್ರಮದಿಂದ ದೂರ ಸರಿದಿದ್ದ ಮಹಾಶಯರು ಅದು ಯಶಸ್ವಿಯಾಗಿ ನಡೆಯುತ್ತದೆಂದು ಗೊತ್ತಾದ ಕೂಡಲೇ ಇತರೆಲ್ಲರನ್ನೂ ಬದಿಗೆ ಸರಿಸಿ ವೇದಿಕೆ ಹತ್ತಿ ಮೆರೆದರು!

ಇನ್ನು ನಮ್ಮ ಗುರು ಕಿಷನ್ ಪಟ್ನಾಯಕ್ ಅವರಿಗೆ ಒಂದು ಧಾರ್ಮಿಕ ಸಂಸ್ಥೆ, ಅವರು ಅಷ್ಟು ಪ್ರಸಿದ್ಧರಲ್ಲವೆಂದು ಅವರಿಗೆ ತನ್ನ ವಾರ್ಷಿಕ ಪ್ರಶಸ್ತಿಯನ್ನು ಕೊಡಲು ಹಿಂಜರಿದಾಗ ಆ ಪ್ರಶಸ್ತಿಯು ಒಳಗೊಂಡಿದ್ದ ಮೊತ್ತದ (ಒಂದು ಲಕ್ಷ ರೂ.) ಒಂದೂವರೆ ಪಟ್ಟು ಹಣವನ್ನು ಗೆಳೆಯರಿಂದ ಕೂಡಿಸಿ, ಶಿವಮೊಗ್ಗದಲ್ಲಿ ನಾನೇ ಸಂಘಟಿಸಿದ್ದ ಸಮಾಜವಾದಿ ಶಿಬಿರದಲ್ಲಿ ಆ ನಿಧಿಯನ್ನು ಅವರಿಗೆ ಅರ್ಪಿಸಲು ವ್ಯವಸ್ಥೆ ಮಾಡಿದಾಗ ನಾನು ನಿಧಿ ಸಮರ್ಪಣೆಯ ವೇದಿಕೆಯಲ್ಲಿ ಕಾಣಿಸಿಕೊಳ್ಳಲು ಬಯಸದಂತಹ ಕಿತಾಪತಿ ಮಾಡಿ ಆ ವೇದಿಕೆಯಲ್ಲಿ ಬಡಾಯಿ ಭಾಷಣ ಮಾಡಲು ಮುಂದಾದವರು ಈ ನಿಧಿ ಸಂಗ್ರಹಕ್ಕೆ 'ತಾತ್ವಿಕ' ವಿರೋಧ ವ್ಯಕ್ತಪಡಿಸಿ ಅಡ್ಡಗಾಲು ಹಾಕಿದ ಮಹಾಶಯರೇ. ಈ ಪ್ರಗತಿಪರ 'ಗೆಳೆಯ'ರಿಗೆ ವಿನಯವೂ ಇಲ್ಲ. ವಿನಯದಿಂದ ಹಿಂಜರಿಯುವವರನ್ನು ಕೆಳಗೆ ತಳ್ಳಿ ಅವರ ಮೇಲೇ ಹತ್ತಿ ಕತ್ತು ಚಾಚಿ ನಿಲ್ಲಲು ಸಂಕೋಚವೂ ಆಗುವುದಿಲ್ಲ. ವೈಯಕ್ತಿಕ ವೈಭವೀಕರಣವೇ ಇವರ 'ಪ್ರಗತಿಪರತೆ'ಯ ಸಿದ್ಧಾಂತ ಮತ್ತು ಅಧಿಕಾರ ವಲಯದಲ್ಲಿ ಒಂದು ಸ್ಥಾನ ಗಿಟ್ಟಿಸಿಕೊಳ್ಳುವುದು ಅದರ ಗುರಿ!

–ಡಿ.ಎಸ್. ನಾಗಭೂಷಣ

ನವಿಲುಗರಿ



ಬಣ್ಣಗಳು ಬಿಕರಿಯಾಗಿವೆ

ಹಸಿರು ಒಬ್ಬರದು
ಕೇಸರಿ ಇನ್ನೊಬ್ಬರದು
ಕೆಂಪು ಕೆಲವರದು
ಬಿಳಿ ಹಲವರದು ।
ಬಣ್ಣಗಳನ್ನು
ಹಂಚಿಕೊಂಡ
ಬಣ್ಣಗೇಡಿಗಳು ನಾವು

ಕಪ್ಪು ಕದರೇ ಎಲ್ಲರದು ।
ಸಹಜ ಬಣ್ಣಗಳಿಗೆ
ಕಬ್ಜಾ ಹಾಕಿಕೊಂಡವರು ನಾವು

ಹಸಿರು ಪ್ರಕೃತಿ
ಕೇಸರಿ ಕಂಬಳದ ಕೆಸರು
ಕೆಂಪು ರಕ್ತ
ನೀಲಿಯಲಿ ಮಲಗಿದೆ ಬಿಳಿ ಮುಗಿಲು ।

ಬಣ್ಣ ಬಣ್ಣಗಳ ನಡುವೆ
ಸಣ್ಣ ರಾಜಕೀಯ ಸುಣ್ಣ ಕುದಿತ
ಬಣ್ಣಗೇಡಿಗಳ ಬದುಕಿದು ।

ಬಿಳಿ ಬಾವುಟದ
ಬಣ್ಣಗಳು ಬೇರೆಯಾದರೆ
ಎದೆ ಚಕ್ರ ತಿರುಗುವದೆ ?




ನೀಲಿ ಬಾನಲ್ಲಿ
ಕೆಂಪು ಸೂರ್ಯ
ಶುಭ್ರ ಚಂದ್ರ ನಕ್ಷತ್ರಗಳು

ತಿಳಿ ಹೇಳುವುದು ಯಾರಿಗೆ
ಬಣ್ಣಗಳೇ ಬಿಕರಿಯಾದ ಮೇಲೆ

– –ಸತೀಶ ಕುಲಕರ್ಣಿ

ನನ್ನದಿದು ಆಕಾಶ



ನನ್ನದಿದು ಆಕಾಶ
ಆವರಿಸುವವಕಾಶ
ನಾನದನೆ ಕಣ್ಣಿಟ್ಟು
ನೋಡುತ್ತ ನಿಂತೆ

ನನ್ನದಿದು ಮಳೆಗಾಳಿ
ಮೇಘಗಳ ಹೊಗೆಮಾಲೆ



ನಾನದನೆ ಕಣ್ಣಿಟ್ಟು
ನೋಡುತ್ತ ನಿಂತೆ

ನನ್ನದಿದು ಸುರಿಮಳೆ
ಎರಚು ಮಳೆ ಹೂಮಳೆ
ರಭಸದಲ್ಲಿ ಚಚ್ಚು ಮಳೆ
ನಾನದನೆ ಸುಮ್ಮನೆ
ನೋಡುತ್ತ ನಿಂತೆ

ಎಲ್ಲದೂ ನನ್ನದೇ
ಎಲ್ಲದೂ ನಾನೇ
ಎಲ್ಲರೊಳಗಿರುವುದೂ
ನಾನೆ ನಾನೇ

ನಾನಾರು ಎಂಬುದು
ಹೊಳೆದು ತೋರಿದುದೀಗ
ಇನ್ನು ಭಯವಿಲ್ಲ
ಭಯವಿಲ್ಲ
ಇನ್ನು ಭಯವಿಲ್ಲ

–ಕೆ.ಪಿ. ನಟರಾಜ


ಪ್ರಾರ್ಥನೆ

ಹಗಲು ಉರಿವ ಸೂರ್ಯ
ಕಣ್ಣಲ್ಲಿ ಬೆಳಕು
ಇರುಳು ತಣ್ಣನೆ ಚಂದ್ರ, ಗ್ರಹ, ತಾರಾಪುಂಜ.
ಪ್ರಾರ್ಥಿಸಿದೆ;
ಕಾಣಿಸಬಾರದೇ ಒಮ್ಮೆಯಾದರೂ
ಬರಿ ಆಕಾಶವನ್ನು
ಬೋಳು ಬಯಲನ್ನು; ಎದೆಯಾಳದ
ಮೌನ ಮಾತಾಗಿ
ಬರಿದು ಪದ್ಯವಾಗುವುದಿದೆ...
ಕಾಯುತ್ತಿದ್ದೇನೆ,



ಸರಿಹೊತ್ತು ಮೀರಿದೆ, ಏನೂ ಇಲ್ಲದಿರುವ
ಎಲ್ಲವೂ ಇದೆ
ಎನ್ನುತ್ತಾರೆ ಬಲ್ಲವರು. ಕಾಯುತ್ತಿದೆ ಪದ್ಯ
ಕಲಾಕೃತಿ ಆಗುವುದಕ್ಕೆ.


–ಎಂ.ಎಸ್. ರುದ್ರೇಶ್ವರ ಸ್ವಾಮಿ



ಪುಸ್ತಕಾವಲೋಕನ

ಪು : ಧರ್ಮಮೇಘ (ಕೆ.ಎಂ. ಶಂಕರಪ್ಪ ಸ್ಮೃತಿ ಸಂಪುಟ) ಸಂ: ಕೆ.ಪಿ. ನಟರಾಜ ಮತ್ತು ನಿತ್ಯಾನಂದ ಬಿ. ಶೆಟ್ಟಿ ಪ್ರ : ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಪು : ೧೭೦/- ಬೆಲೆ: ಸೂಚಿಸಿಲ್ಲ

ಅಲೆಮಾರಿ ಅವಧೂತನ ಸ್ಮರಣೆ



ಈ ಪುಸ್ತಕವನ್ನು 'ಧರ್ಮಮೇಘ' ಎಂದು ಕರೆದಿದ್ದಾರೆ. ಹೆಸರೇನೋ ವಿಲಕ್ಷಣವಾಗಿದೆಯಲ್ಲ, ನಾದ- ಅರ್ಥ ಸಾಮರಸ್ಯಗಳೆರಡೂ ಕೈ ಕೊಟ್ಟಂತಿದೆಯಲ್ಲ ಅಂದುಕೊಂಡು ನೋಡಿದರೆ ಕೃತಿಯ ಸಂಪಾದಕರಾದ ಕೆ.ಪಿ ನಟರಾಜ ಮತ್ತು ನಿತ್ಯಾನಂದ ಬಿ. ಶೆಟ್ಟಿ ತಮ್ಮ ಪ್ರಸ್ತಾವನೆಯಲ್ಲಿ ವಿವರಣೆ ನೀಡುತ್ತಾರೆ: 'ಈ ನುಡಿಗಟ್ಟನ್ನು ಟಂಕಿಸಿದ್ದು ಶಂಕರಪ್ಪನವರೇ. ತುಮಕೂರಿನ ಊರ್ಡಿಗೆರೆ ಹತ್ತಿರದ ನವೋದಯ ವಿದ್ಯಾಲಯದಲ್ಲಿ ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಶಂಕರಪ್ಪನವರು ಬುದ್ಧನನ್ನು ಕುರಿತು ಮಾತಾಡುತ್ತ "ಬುದ್ಧನೆನ್ನುವುದು ಒಂದು ಧರ್ಮಮೇಘ" ಎಂದಿದ್ದರು..'

ತುಮಕೂರು ವಿಶ್ವವಿದ್ಯಾಲಯದ ಪ್ರಸಾರಾಂಗ ೨೦೧೪ರ ಸೆಪ್ಟೆಂಬರ್‌ನಲ್ಲಿ 'ಕರ್ನಾಟಕದ ಕಳೆದ ಅರ್ಧ ಶತಮಾನದ ಅತಿ ಮುಖ್ಯ ಸಾಂಸ್ಕೃತಿಕ ಘಟನೆಗಳ ಕಾರಣಕರ್ತರಲ್ಲಿ ಪ್ರಮುಖರಾದ' (ವಿವಿ ಕುಲಪತಿಗಳ ಮಾತು) ಕೆ.ಎಂ. ಶಂಕರಪ್ಪನವರ ನೆನಪಿನಲ್ಲಿ 'ಮೌಖಿಕ ಮಹಾಗುರು- ನೆನೆಯಲು ಕಾರಣ ನೂರು' ಎಂಬ ವಿಚಾರ ಸಂಕಿರಣ ಏರ್ಪಡಿಸಿತ್ತು. ಅಲ್ಲಿ ಮಂಡನೆಯಾದ ಮಾತುಗಳು, ಜೊತೆಗೆ ಇನ್ನೊಂದಷ್ಟು ಪ್ರಕಟಿತ ಲೇಖನಗಳನ್ನು ಒಟ್ಟು ಸೇರಿಸಿ ಪ್ರಸಾರಾಂಗವೇ ಈಗ ಈ 'ಧರ್ಮಮೇಘ' ಕೃತಿ ಹೊರತಂದಿದೆ. ಈ ಕೃತಿ ಶಂಕರಪ್ಪನವರಿಗೊಂದು ನುಡಿ ನಮನ.

ಈ ಕೃತಿಯಲ್ಲಿ ಶಂಕರಪ್ಪನವರ ಒಡನಾಡಿಗಳು ಮತ್ತು ಶಿಷ್ಯರು, ಲೋಹಿಯಾ ಸಮಾಜವಾದಿ ಹಿನ್ನೆಲೆಯಿಂದ ಆರಂಭಿಸಿ ಬೌದ್ಧ ಧರ್ಮದ ಕಡೆಗೆ ಶಂಕರಪ್ಪ ನಡೆಸಿದ ಪಯಣದ ಹೆಜ್ಜೆ ಗುರುತುಗಳನ್ನು ಹಿಡಿದಿಡುತ್ತಾರೆ.

ಪುಣೆಯ ಚಿತ್ರಸಂಸ್ಥೆಯಲ್ಲಿ ನಿರ್ದೇಶನದ ಪದವಿ ಪಡೆದ ಕನ್ನಡಿಗರಲ್ಲಿ ಮೊದಲಿಗರಾದ ಶಂಕರಪ್ಪ ಮಾಡಿದ್ದು ಒಂದೇ ಚಿತ್ರ- 'ಮಾಡಿ ಮಡಿದವರು'. ಮುಂದಕ್ಕೆ ಜೀವನ ನಿರ್ವಹಣೆಗಾಗಿ ಹಲವಾರು ಸಾಕ್ಷ್ಯಚಿತ್ರಗಳನ್ನು- ಮುಖ್ಯವಾಗಿ ವಾರ್ತಾ ಇಲಾಖೆಗೆ- ನಿರ್ಮಿಸಿದರು. ಇದರ ಜೊತೆ ಗೆಳೆಯರು, ಶಿಷ್ಯರೊಂದಿಗೆ ಒಡನಾಡುತ್ತ, ಜೀವನದುದ್ದಕ್ಕೂ ಯಾರ ಮುಲಾಜಿಗೂ ಸಿಕ್ಕದೆ ನಿಷ್ಠುರವಾಗಿ, ಅವಧೂತನಂತೆ, ಅನುಭಾವಿಯಂತೆ, ಅನೇಕರಿಗೆ ಮಿಂಚಿನ ಮಾರ್ಗದರ್ಶನ ನೀಡುತ್ತ ಬಾಳಿದ್ದು ಅವರ ವ್ಯಕ್ತಿತ್ವದ ಒಂದು ಮುಖ.

ಇನ್ನು ಕರ್ನಾಟಕದ ಇತಿಹಾಸವನ್ನು ಬದಲಿಸಿದ ಸಮಾಜವಾದಿ ಯುವಜನ ಸಭಾ ಹಾಗೂ ೧೯೭೪ರ ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಪ್ರೇರಕ ಶಕ್ತಿಗಳಲ್ಲಿ ಒಬ್ಬರಾಗಿ, ದಲಿತ ರೈತ ಚಳವಳಿಗಳ ಸಂಗಾತಿಯಾಗಿ- ಒಟ್ಟಾರೆ ಕರ್ನಾಟಕದ ಸಮಾಜವಾದಿ ಅಂತಃಪ್ರಜ್ಞೆಯ ಭಾಗವಾಗಿ ಇದ್ದಿದ್ದು ಮತ್ತೊಂದು ಮುಖ.

ಶಂಕರಪ್ಪನವರ ವ್ಯಕ್ತಿತ್ವದ ಈ ಎಲ್ಲ ಎಳೆಗಳು ಇಲ್ಲಿನ ಚಿತ್ರಣಗಳಲ್ಲಿ ಸಾಕಷ್ಟು ವಿವರವಾಗಿ ಬಂದಿವೆ. ದೇವನೂರ ಮಹಾದೇವ, ವಿ. ಚಿಕ್ಕವೀರಯ್ಯ, ಡಿ.ಎಸ್. ನಾಗಭೂಷಣ, ಚಂದ್ರಶೇಖರ ಪಾಟೀಲ, ಡಾ. ವಿಜಯಾ, ಕಾಳೇಗೌಡ ನಾಗವಾರ, ಅಗ್ರಹಾರ ಕೃಷ್ಣಮೂರ್ತಿ, ಸವಿತಾ ನಾಗಭೂಷಣ, ಎಸ್. ನಟರಾಜ ಬೂದಾಳು, ತುಂಬಾಡಿ ರಾಮಯ್ಯ, ಹಿ.ಶಿ. ರಾಮಚಂದ್ರಗೌಡ, ವಡ್ಡಗೆರೆ ನಾಗರಾಜಯ್ಯ ಮುಂತಾದ ಹಲವಾರು ಗಣ್ಯರು ಶಂಕರಪ್ಪನವರನ್ನು ನೆನೆಸಿಕೊಂಡಿದ್ದಾರೆ. ಸದಾ ಹಿನ್ನೆಲೆಯಲ್ಲಿ ಇದ್ದುಕೊಂಡೇ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿದ ಅವರ ಕಾಳಜಿಗಳ ನುಡಿಚಿತ್ರ ಕಟ್ಟಿಕೊಟ್ಟಿದ್ದಾರೆ.

ಈ ಚಿತ್ರಣಗಳಲ್ಲಿ ಸಾಕಷ್ಟು ಆರ್ದ್ರವಾದ ಪ್ರಸಂಗಗಳಿವೆ, ಖಾಸಗಿ ಅನುಭವಗಳಿವೆ, ತೀಕ್ಷ್ಣ ಒಳನೋಟಗಳೂ ಇವೆ, ಕನ್ನಡ ಸಂಸ್ಕೃತಿ ಚರಿತ್ರೆಯ ಮೈಲಿಗಲ್ಲುಗಳ ಪ್ರಸ್ತಾಪವಿದೆ, ಶಂಕರಪ್ಪನವರ 'ಸಾಧನೆ'ಯ ಹಾಗೆಯೇ 'ವೈಫಲ್ಯ'ದ ಸ್ಮರಣೆಯೂ ಇದೆ... ಎಲ್ಲ ಕೂಡಿಕೊಂಡಾಗ ಅಂತೂ ಶಂಕರಪ್ಪನವರ ಪರಿಚಯವೇ ಇಲ್ಲದವರಿಗೂ ಈ ಮನುಷ್ಯನ ಬಗ್ಗೆ ವಿಸ್ಮಯ ಹುಟ್ಟುವಂಥ ಅನುಭವ ಸಂಚಯದ ದರ್ಶನ ಇಲ್ಲಿ ಸಿಕ್ಕುತ್ತದೆ. ಕೆಲವೇ ನಿದರ್ಶನಗಳನ್ನು ನೋಡುವುದಾದರೆ-

ಬದುಕಿನ ಸೋಲುಗಳು ಅವರನ್ನು ಬೌದ್ಧಧರ್ಮದತ್ತ ನಡೆಯಿಸಿತೇ ಎಂದು ನಮಗೆ ಅನುಮಾನವಾಗುತ್ತಿತ್ತು.... ದೊಡ್ಡ ಟ್ಯಾಲೆಂಟ್ ಒಂದು ವೇಸ್ಟ್ ಆಯಿತಲ್ಲ ಎಂದು ನಾವು ಅಲವತ್ತುಗೊಂಡರೆ 'ಎಲ್ಲವೂ ಕೊನೆಗೆ ಅರ್ಥಹೀನ... ಯಾಕೆ ಒದ್ದಾಡ್ತೀರೋ' ಎನ್ನುವರು. ಆಗೆಲ್ಲ ನಾವು 'ಪಲಾಯನವಾದಿ' ಎಂದು ಅವರನ್ನು ಟೀಕಿಸುತ್ತಿದ್ದೆವು... ಬದುಕಿನಲ್ಲಿ ಬಹುದೂರ ಬಂದಿರುವ ನಮಗೆ ಈಗ ಅಂದು ಅವರು ಹೇಳಿದ್ದು ತಿಳಿದಂತಾಗುತ್ತಿದೆ. ಅವರಿಲ್ಲದ ಈ ಕ್ಷಣದಲ್ಲಿ ನಮಗೆ ಕೊಟ್ಟು ಹೋಗಿರುವುದು ಎಷ್ಟು ದೊಡ್ಡದು ಎಂಬ ಚಿತ್ರ ನಿಧಾನವಾಗಿ ಮೂಡಹತ್ತಿದೆ... ಅವರು ಗುರುವಾಗಿ ನಮ್ಮನ್ನು ಮುನ್ನಡೆಸಿದ್ದರು, ನಾವು ಶ್ರದ್ಧಾಳು ಆಗದೆ ಅನುಮಾನಿಸಿ ಅವರ ನಿರೀಕ್ಷೆ ಹುಸಿ ಮಾಡಿದೆವೇನೋ ಎಂಬ ನೋವು ತುಂಬಿದ ಅನುಮಾನ ಉಳಿದೇ ಇದೆ (ಸವಿತಾ ನಾಗಭೂಷಣ).

ಇನ್ನು ತುಂಬಾಡಿ ರಾಮಯ್ಯನವರ ಮನೆಗೆ ಹೋಗಿದ್ದಾಗ ಶಂಕರಪ್ಪನವರನ್ನು ರಾಮಯ್ಯನವರ ದೊಡ್ಡಮ್ಮ 'ಯಾವ ಮಠದೋರು ಸ್ವಾಮಿಗಳು' ಎಂದು ಕೇಳಿ ಅದಕ್ಕೆ ಶಂಕರಪ್ಪ 'ದೊಡ್ಡಮಠದೋರು ಕಣಮ್ಮ' ಎಂದು ಉತ್ತರಿಸಿದರಂತೆ! ಶಂಕರಪ್ಪನವರ ಭೌತಿಕ ಆಕೃತಿ ಇದ್ದಿದ್ದೇ ಹಾಗೆ. ರಾಮಯ್ಯನವರ ನಿರೂಪಣೆಯಲ್ಲೇ ಇನ್ನೊಂದು ಪ್ರಸಂಗ ಬರುತ್ತದೆ. ಬುದ್ಧಪೂರ್ಣಿಮೆಯ ರಾತ್ರಿ ಸುಮಾರು ೧೦ ಗಂಟೆಗೆ ಕೆ.ಬಿ. ಸಿದ್ದಯ್ಯನವರ ಮನೆಯಿಂದ ಆಟೋರಿಕ್ಷಾದಲ್ಲಿ ಗೆಳೆಯರೆಲ್ಲ ಸಿದ್ದರಬೆಟ್ಟಕ್ಕೆ ಹೊರಡುತ್ತಾರೆ. ದಾರಿ ಮಧ್ಯೆ ಕಾಡು ಹಾದಿಯಲ್ಲಿ ಸಾಗಬೇಕಿರುವಾಗ ಇದ್ದಕ್ಕಿದ್ದಂತೆ ದೊಣ್ಣೆ ಹಿಡಿದ ನಾಲ್ಕೈದು ಯುವಕರು ಪ್ರತ್ಯಕ್ಷರಾಗಿ ದಾಳಿಗೆ ಮುಂದಾಗುತ್ತಾರೆ. 'ಆ ತರುಣರ ಪೈಕಿ ಒಬ್ಬ ಆಟೋದೊಳಗೆ ತಲೆ ತೂರಿಸಿ ನಮ್ಮನ್ನು ನೋಡಿ ಇವರಾರೋ ಸಾಧುಗಳು ಕಣ್ರೋ, ಬಿಟ್‌ಬಿಡ್ರೋ ಎಂದು ಆಟೋ ಮುಂದುವರೆಯಲು ಬಿಟ್ಟ. ಅವರಿಗೆ ಶಂಕರಪ್ಪ ಒಳ್ಳೆದಾತಪ್ಪ ಎಂದರು. "ನೋಡ್ದ ಬುದ್ಧ ದರ್ಶನ! ನನ್ನ ಗಡ್ಡ ಇಲ್ಲದಿದ್ದರೆ ದೊಣ್ಣೆಸೇವೆ ಆಗ್ತಾ ಇತ್ತು" ಎಂದರು. ಬೆಪ್ಪ ಮೋರೆಯಾಗಿದ್ದ ನಮ್ಮ ಮುಖದಲ್ಲಿ ನಗು ಬಂತು.... (ತುಂಬಾಡಿ ರಾಮಯ್ಯ)!

ಸಹಜವಾಗಿಯೇ ಇಲ್ಲಿನ ಎಲ್ಲ ಬರಹಗಳ ಗುಣಮಟ್ಟ ಏಕಪ್ರಕಾರವಾಗಿಲ್ಲ. ಕೆಲವು ಖ್ಯಾತನಾಮರು ಕೂಡ ಸಂತೆ ಹೊತ್ತಿಗೆ ಮೂರು ಮೊಳ ನೇಯ್ದಂತೆ ಬರೆದು ಬಿಸಾಕಿರುವುದೂ ಇದೆ. ಆದರೆ ಬಹುತೇಕ ಬರಹಗಳ ಹಿಂದಿನ ಪ್ರಾಮಾಣಿಕ ಶ್ರದ್ಧೆ ಎದ್ದು ಕಾಣುವಂತಿದೆ. ಅದೇ ಸಮಾಧಾನ. ಉಮೇಶ್ ಕುಲಕರ್ಣಿಯವರ ಬರಹವಂತೂ ಶಂಕರಪ್ಪನವರ ಇಡೀ ವ್ಯಕ್ತಿತ್ವ ಹಾಗೂ ಪಯಣಗಳನ್ನು ಒಂದೇ ಸಾಲಿನಲ್ಲಿ ಸಮರ್ಥವಾಗಿ ಹಿಡಿದಿಡುತ್ತದೆ:

ಉಮೇಶ್ ಕುಲಕರ್ಣಿ ತಮ್ಮ ಬರವಣಿಗೆಯಲ್ಲಿ ಪುಣೆ ಇನ್‌ಸ್ಟಿಟ್ಯೂಟಿನ ಒಂದು ಡಿಪ್ಲೊಮಾ ಫಿಲ್ಮ್‌ನ ವಿವರ ನೀಡುತ್ತಾರೆ. ವಿನಯ ಶುಕ್ಲಾ ನಿರ್ದೇಶನದ ಈ ಕಿರುಚಿತ್ರದಲ್ಲಿ ನಾಲ್ಕು ಯುವಕರು ಮತ್ತು ಒಬ್ಬ ಯುವತಿ ಊರಾಚೆ ಕೋಟೆಯ ಭಗ್ನಾವಶೇಷಗಳಿಗೆ ಬರುತ್ತಾರೆ. ನಾಲ್ಕು ಮಂದಿ ಯುವಕರು ಕಣ್ಣು ಮುಚ್ಚಿಕೊಂಡಾಗ ಆ ಯುವತಿ ಕಣ್ಮರೆಯಾಗುತ್ತಾಳೆ. ಯುವಕರೆಲ್ಲ ಕಣ್ಣು ತೆರೆದು ಅವಳನ್ನು ಹುಡುಕತೊಡಗುತ್ತಾರೆ. ಕೊನೆಯ ಒಬ್ಬ ಯುವಕ ಮಾತ್ರ ಅವಳನ್ನು ಹುಡುಕಲು ಪ್ರಯತ್ನಿಸುವುದೇ ಇಲ್ಲ. ಉಮೇಶ್ ಕುಲಕರ್ಣಿ ಕತೆಯನ್ನು ಹೀಗೆ ಮುಗಿಸುತ್ತಾರೆ:

...ಶಾಂತಚಿತ್ತನಾಗಿ ಒಂದು ವೃಕ್ಷದ ಕೆಳಗೆ ಬಂಡೆಗಲ್ಲಿನ ಮೇಲೆ ಪದ್ಮಾಸನ ಹಾಕಿ ಕುಳಿತು ಕಣ್ಣು ಮಚ್ಚಿ ಧ್ಯಾನಿಸುತ್ತಾನೆ. ಧ್ಯಾನಾವಸ್ಥೆಯಲ್ಲೇ ಧ್ವನಿ ತಾರಕಾವಸ್ಥೆ ತಲುಪಿ ಮಸ್ತಿಷ್ಕದಲ್ಲಿ ರಿಂಗಣಿಸುತ್ತದೆ. ಮುಖದ ಮೇಲೆ ನೀರಿನ ಪ್ರಕ್ಷಾಳನದ ಜೊತೆ ಮಂದಹಾಸ ಮೂಡುತ್ತದೆ. ಹಾಗೇ ಕಣ್ಣು ಮುಚ್ಚಿದವನು ಬೆಳಕಿನಲ್ಲಿ ಲೀನವಾಗುತ್ತಾನೆ.


ಕುಲಕರ್ಣಿ ಮುಂದಕ್ಕೆ ಹೀಗೆ ಬರೆದು ಮುಗಿಸುತ್ತಾರೆ-

ಈ ಕೊನೆಯ ವ್ಯಕ್ತಿ ಮಾಯೆಯನ್ನು ಕಂಡುಕೊಂಡು ಜೀರ್ಣಿಸಿಕೊಂಡ. ಅರ್ಥೈಸಿಕೊಂಡು ಯಾರಿಗೂ ಅದನ್ನು ಅರುಹದೆ ಮುಕ್ತಿ ಪಡೆದ ಕೆ.ಎಂ. ಶಂಕರಪ್ಪ ಎಂದು ನನ್ನ ಮನಸ್ಸಿಗೆ ಅನಿಸುತ್ತದೆ.....

–ಎನ್.ಎಸ್. ಶಂಕರ್

ಪು : ದೇಸಿ ಕನ್ನಡ ದೇಸಿ ಪರಂಪರೆ ಲೇ: ಹಿ.ಚಿ. ಬೋರಲಿಂಗಯ್ಯ ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು : ೩೩೦ ಬೆಲೆ : ರೂ ೨೬೦/-

ದೇಸೀ ಕನ್ನಡ ಪರಂಪರೆಯ ಹುಡುಕಾಟ



೧೯೮೦ರ ದಶಕದಿಂದಆರಂಭವಾದ ಜಾಗತೀಕರಣ ಮತ್ತು ಈಚೆಗೆ ಕಾಣಿಸಿಕೊಳ್ಳುತ್ತಿರುವ ಉಗ್ರ ರಾಷ್ಟ್ರೀಯವಾದದ 'ಸಂದರ್ಭದಲ್ಲಿ ಸಹಜವಾಗಿ ಮತ್ತು ಸುಲಭವಾಗಿ ಸಂಭವಿಸುವ ಎಲ್ಲ ಬಗೆಯ ಅನ್ಯ ಪ್ರಭಾವಗಳ ವಿರುದ್ಧ ಕನ್ನಡವನ್ನು ಎತ್ತಿ ಕಟ್ಟಿ ವಿವರಿಸುವ ಜನಪ್ರಿಯ ಚಿಂತನಾಕ್ರಮವೊಂದು ಇದೀಗ ಕರ್ನಾಟಕದಲ್ಲಿ ಎದ್ದುಕಾಣಿಸುತ್ತಿದೆ. ಕನ್ನಡಕ್ಕೆ ಕನ್ನಡದ್ದೇ ಆದ ಯೋಚನಾಕ್ರಮವೊಂದು ಇದೆಯೆಂದೂ, ಕಾರಣಾಂತರಗಳಿಂದ ಅದನ್ನು ಮರೆತುಬಿಟ್ಟಿದ್ದೇವೆಯೆಂದೂ, ಜಾನಪದ, ಭಾಷೆ, ವ್ಯಾಕರಣ ಮತ್ತಿತರ ಪರಿಕರಗಳ ಮೂಲಕ ಮತ್ತೆ ಅದನ್ನು ನೆನಪಿಗೆ ತಂದುಕೊಂಡು, ಕನ್ನಡ ದೇಸಿಯೊಂದನ್ನು ಕಟ್ಟಬೇಕೆಂದೂ ವಾದಿಸಲಾಗುತ್ತಿದೆ. ಪ್ರೊ. ಹಿ ಚಿ ಬೋರಲಿಂಗಯ್ಯನವರ ಈ ಈಚಿನ ಕೃತಿ ಜಾನ ಪದ ಆಕರಗಳ ಮೂಲಕ ಕನ್ನಡ ದೇಸಿಯತ್ತ ಓದುಗರ ಗಮನ ಸೆಳೆಯುವ ಮುಖ್ಯಕೃತಿಯಾಗಿದೆ. 'ಸಾವಿರಾರು ವರ್ಷಗಳ ವೈದಿಕ ಪ್ರಭಾವ ಮತ್ತು ನೂರಾರು ವರ್ಷಗಳ ವಸಾಹತು ಹೇರಿಕೆ ಪರಿಣಾಮ ನಮ್ಮಲ್ಲಿ ಅರ್ಧಸತ್ಯದ ಚರಿತ್ರೆಯೊಂದು ನಿರ್ಮಾಣವಾಯಿತು. ಈ ಬಗೆಗಿನ ಪಂಡಿತರ ಜಾಣ ಮರೆವು ಶತಮಾನಗಳಿಂದಲೂ ಮುಂದುವರೆದುಕೊಂಡೇ ಬಂದಿತು. ಅನೇಕ ವರ್ಷಗಳಿಂದ ನನ್ನನ್ನು ಕಾಡುತ್ತಿದ್ದ ಈ ಸಂಗತಿಯೇ ಪ್ರಸ್ತುತ ಬರಹ ಕೈಗೊಳ್ಳಲು ಪ್ರೇರಣೆ' ಎಂದು ಅವರು ಹೇಳಿಕೊಂಡಿದ್ದಾರೆ. ತಮ್ಮ ಹಿಂದಿನ ಕೃತಿಗಳಲ್ಲಿಯೂ ಬೋರಲಿಂಗಯ್ಯನವರು ಈ ಧೋರಣೆಯನ್ನು ಸಮರ್ಥಿಸಿಕೊಳ್ಳುವಂಥ ವಿಚಾರಗಳನ್ನು ಮಂಡಿಸಿದ್ದಾರೆ. ಲೇಖನಗಳನ್ನೂ ಬರೆದಿದ್ದಾರೆ.

ಹಾಗೆ ನೋಡಿದರೆ ಕನ್ನಡ ಜಾನಪದದ ಸಂಗ್ರಹ ಮತ್ತು ಅಧ್ಯಯನದ ಆರಂಭಿಕ ಹಂತದಿಂದಲೂ ಕನ್ನಡ ದೇಸಿಯನ್ನು ಮೌಖಿಕ ಆಕರಗಳ ಮೂಲಕ ಉದಾರ ಮತ್ತು ಪ್ರಶಂಸಾಪರ ನಿಲುವಿನಿಂದ 'ವಿವರಿಸುವ ಒಂದು ಪ್ರಯತ್ನ ನಡೆಯುತ್ತಲೇ ಬಂದಿದೆ. ೧೯೨೩ರಷ್ಟು ಹಿಂದೆಯೇ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತ್ರಿಪದಿಗಳ ಬಗ್ಗೆ ಬರೆಯುತ್ತಾ-'ಇದು ಹರಿಜನರಲ್ಲಿ ಸಿಕ್ಕಿದ ಪದ್ಯ. ಯಾವ ತಪೋವನದಲ್ಲಾಗಲೀ, ಅರಮನೆಯಲ್ಲಾಗಲೀ, ಇದಕ್ಕೆ ಮೀರಿದ ಸಂಸ್ಕೃತಿ ದೊರೆಯಲಾರದು.... ಅಸಂಸ್ಕೃತರೆನ್ನಬಹುದಾದ ಜನರಲ್ಲಿ ಕಾಣುವ ಈ ಸಂಸ್ಕೃತಿಯ ಮೆರುಗನ್ನು ನೋಡಿ ಯಾರಾದರೂ ಆಶ್ಚರ್ಯ ಪಡಬೇಕು' ಎಂದು ಹೇಳಿದ್ದರು. ಗಮನಿಸಬೇಕಾದ ಅಂಶವೆಂದರೆ ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ನಡೆದ ಅಧ್ಯಯನಗಳು ಅಖಿಲ ಭಾರತ ಮಟ್ಟದಲ್ಲಿ ಕಂಡುಬರುವ ವೈದಿಕ ಸಂಸ್ಕೃತಿಯ ಸ್ವರೂಪಕ್ಕೂ ಪ್ರಾದೇಶಿಕವಾಗಿ ಕಂಡುಬರುವ ಜನಪದ ಸಂಸ್ಕೃತಿಯ (ದೇಸೀ) ಸ್ವರೂಪಕ್ಕೂ ಮಧ್ಯೆ ಯಾವುದೇ ಸಂಘರ್ಷವನ್ನು ಕಂಡಿಲ್ಲ. ಸಂಸ್ಕೃತಿಯ ಸ್ವರೂಪವನ್ನು ಸಂಘರ್ಷಾತೀತಗೊಳಿಸಿ ಅದಕ್ಕೊಂದು ಏಕರೂಪವನ್ನು ಕೊಡುವ ಪ್ರಯತ್ನವನ್ನು ಅವರೆಲ್ಲ ಮಾಡಿದ್ದರು. ಅದು ವಸಾಹತುಕಾಲದ ಅಗತ್ಯವೂ ಆಗಿತ್ತು.

ಈ ಬಗೆಯ ಚಿಂತನಾ ಕ್ರಮಗಳಿಂದ ಬೋರಲಿಂಗಯ್ಯನವರು ತನ್ನನ್ನು ಬಿಡಿಸಿಕೊಂಡು ಸಂಘರ್ಷದ ಹಾದಿ ಹಿಡಿದಿದ್ದಾರೆ. ದೇಸೀ ಕನ್ನಡ ಪರಂಪರೆಗೆ ಬರೆದ ಪೀಠಿಕೆಯಲ್ಲಿಅವರು ಪ್ರಾಚೀನ ಪಂಡಿತರು, ಅರ್ವಾಚೀನ ವಿದ್ವಾಂಸರು ಲಾಕ್ಷಣಿಕರು ಮತ್ತು ಇತಿಹಾಸಕಾರರು ಹೇಗೆ ಮೌಖಿಕ ನಿರೂಪಣೆಗಳನ್ನು ನಿರ್ಲಕ್ಷಿಕೊಂಡು ಬಂದಿದ್ದಾರೆ ಮಾತ್ರವಲ್ಲ, ಅನೇಕ ಬಾರಿ ಅವಹೇಳನಕ್ಕೂ ಗುರಿ ಮಾಡಿದ್ದಾರೆ ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ಈ ಹಂತದಲ್ಲಿ ಅವರು ದೇಸಿ ಮತ್ತು ದೇಶೀ ಎಂಬೆರಡು ಪದಗಳ ಅರ್ಥವ್ಯಾಪ್ತಿಯನ್ನು ಖಚಿತಗೊಳಿಸಲು ಪ್ರಯತ್ನಿಸುತ್ತಾ, ಕನ್ನಡ ದೇಸಿಯನ್ನು ಪರ್ಯಾಯ ಸಾಂಸ್ಕೃತಿಕ ಧಾರೆಯಾಗಿ ಗುರುತಿಸುವ ಉತ್ಸಾಹವನ್ನು ತೋರಿದ್ದಾರೆ. ಈ ಪರ್ಯಾಯ ಸಾಂಸ್ಕೃತಿಕ ಧಾರೆಯ ಮೂಲಗಳನ್ನು ಪ್ರಾಚೀನ ಸಂಗಂ ಸಾಹಿತ್ಯ, ಕವಿರಾಜ ಮಾರ್ಗ, ವಸ್ತುಕ ವರ್ಣಕ, ಚತ್ತಾಣ-ಬೆದಂಡೆ, ಪಗರಣ, ಬಲೀಂದ್ರನ ಆಚರಣೆ, ನಾಗಾರಾಧನೆ, ಪಾಣಾರಾಟ, ಮಂಡಲಾಚರಣೆ, ಕಥನ ಮೇಳಗಳು, ಜನಪದ ಮಹಾಕಾವ್ಯಗಳು, ಬಯಲಾಟಗಳು ಮತ್ತು ತೊಗಲು ಬೊಂಬೆಯಾಟದಲ್ಲಿ ಅವರು ಗುರುತಿಸಲು ಪ್ರಯತ್ನಿಸಿದ್ದಾರೆ. ಈ ಪ್ರಯತ್ನವೇ ಪ್ರಸ್ತುತ ಪುಸ್ತಕದ ಮುಖ್ಯ ಭಾಗ. ಕನ್ನಡ ಜಾನಪದದ ಅನೇಕ ಮುಖ್ಯ ಪ್ರಕಾರಗಳನ್ನು ತಮ್ಮ ಅನುಭವ, ಕ್ಷೇತ್ರಕಾರ್ಯ ಹಾಗೂ ವಿಸ್ತಾರವಾದ ಓದಿನ ಮೂಲಕ ವಿವರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಹಾಗಂತ ಈ ಮಾಹಿತಿಗಳು ಮೊದಲ ಬಾರಿಗೆ ಇಲ್ಲಿ ದೊರಕುತ್ತಿವೆ ಎಂದೇನೂ ಅಲ್ಲ. ಸ್ವತಃ ಬೋರಲಿಂಗಯ್ಯನವರೂ, ಇತರ ಅನೇಕ ಜನಪದ ವಿದ್ವಾಂಸರೂ ಅವುಗಳ ಬಗ್ಗೆ ಆಗಾಗ ಬರೆಯುತ್ತಲೇ ಬಂದಿದ್ದಾರೆ. ಆದರೆ ಒಂದು ನಿರ್ದಿಷ್ಟ ಉದ್ದೇಶಕ್ಕೆ ಆ ಮಾಹಿತಿಗಳನ್ನು ಬಳಸಿ, ಅವುಗಳಿಂದ ಹೊಸ ಅರ್ಥವನ್ನು ಹೊರಡಿಸುವಲ್ಲಿ ಬೋರಲಿಂಗಯ್ಯನವರು ಯಶಸ್ವಿಯಾಗಿದ್ದಾರೆ. ಕನ್ನಡ ದೇಸಿಯ ಹುಡುಕಾಟಕ್ಕೆ ಬೇಕಾದ ಹೇರಳ ಮಾಹಿತಿಗಳನ್ನು ಈ ಪುಸ್ತಕ ಕ್ರೋಢೀಕರಿಸಿಕೊಡುತ್ತದೆ.

ಈ ಮಾಹಿತಿಗಳನ್ನು ಇನ್ನಷ್ಟು ವಿಸ್ತಾರವಾಗಿ ವಿಶ್ಲೇಷಿಸುವ ಕೆಲಸ ಈಗ ನಡೆಯಬೇಕಾಗಿದೆ. ಇಲ್ಲಿರುವ ಎಲ್ಲ ವಿವರಣೆಗಳನ್ನು ಗಮನಿಸಿದಾಗ ಇವು ಇದುವರೆಗೆ ಅವಗಣನೆಗೆ ಒಳಗಾಗಿದ್ದು ಸ್ಪಷ್ಟವಾಗುತ್ತದೆ. ಆದರೆ ಇದನ್ನು ಈಗ ಮುನ್ನೆಲೆಗೆ ತಂದಾಗ ಅವುಗಳಿಂದ ಸಾಕಾರಗೊಳ್ಳುವ ಕನ್ನಡ ದೇಸಿಯ ಸ್ವರೂಪವೇನು ಎಂಬುದು ಅಸ್ಪಷ್ಟವಾಗಿಯೇ ಉಳಿಯುತ್ತದೆ. ಲೇಖಕರು ವಿವರಿಸುವ ಮಹಾಕಾವ್ಯಗಳು, ಬಯಲಾಟಗಳು, ಆಚರಣೆಗಳೆಲ್ಲ ಭಾರತದ ಬೇರೆ ಬೇರೆ ಭಾಷೆಗಳಲ್ಲೂ ಇವೆ. ಇದು ಹೌದಾದರೆ ಇವು ಕನ್ನಡದಲ್ಲಿ ಹೇಗೆ ಭಿನ್ನವಾಗಿವೆ ಎಂದು ಹೇಳಲು ನಮಗೆ ಸಾಧ್ಯವಾಗಬೇಕು. ಇದಕ್ಕೆ ಅವಶ್ಯವಾಗಿ ತೌಲನಿಕ ಅಧ್ಯಯನ ನಡೆಯಬೇಕು. ಇದರ ಜೊತೆಗೆ ಯಾವುದು ಕನ್ನಡದ್ದು, ಯಾವುದು ಕನ್ನಡಕ್ಕೆ ಹೊರಗಿನಿಂದ ಬಂದು ಸೇರಿದ್ದು ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಂಡಾಗ ಕನ್ನಡ ದೇಸಿಯ ಕನಿಷ್ಠತಮ ಘಟಕಗಳು ಯಾವುವು ಎಂಬ ಬಗ್ಗೆ ಕೆಲವು ಒಳನೋಟಗಳು ಸಿಗಬಹುದು. ಜೊತೆಗೆ ಕರ್ನಾಟಕ ರಾಜ್ಯವೂ ಇತರ ರಾಜ್ಯಗಳಿಗಿಂತ ಸ್ವಲ್ಪ ಬೇರೆ ಎಂಬುದನ್ನು ಚಾರಿತ್ರಿಕವಾಗಿ ಹುರುತಿಸಿಕೊಳ್ಳಬೇಕು. ಉತ್ತರದ ಜೈನಧರ್ಮ ಕನ್ನಡ ಸಂವೇದನೆಯನ್ನು ನವಿರಾಗಿ ರೂಪಿಸಿದೆ. ಬೌದ್ಧಧರ್ಮವು ಕರ್ನಾಟಕದ ಅನೇಕ ಜನಪದ ಆಚರಣೆಗಳಲ್ಲಿ ಸೂಕ್ಷ್ಮವಾಗಿ ಉಳಿದಿದೆ. ಪಾಡ್ದನಗಳಲ್ಲಿ ಮುಸ್ಲಿಮ್ ನಾಯಕರಿದ್ದಾರೆ. ವಸಾಹತು ಕಾಲಘಟ್ಟದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಕನ್ನಡವನ್ನು ಬೆಳೆಸಿದರು.

ಹೀಗೆ ಅನ್ಯ ಪ್ರಭಾವಗಳನ್ನು ಅರಗಿಸಿಕೊಂಡು, ಅವನ್ನು ಪುನರ್‌ಸೃಸ್ಟಿಸಿಕೊಂಡು ಕನ್ನಡ ಬೆಳೆದಿದೆ. ಕನ್ನಡ ಸಂಸ್ಕೃತಿಗೆ ಅಂಥ ಗುಣವೊಂದಿದೆ. ಇಂಥ ಸಂದರ್ಭದಲ್ಲಿ ಕನ್ನಡ ದೇಸಿಯನ್ನು ಅರ್ಥಮಾಡಿಕೊಳ್ಳಲು ಪ್ರಸ್ತುತ ಕೃತಿ ಬಹಳವಾಗಿ ಸಹಕರಿಸಬಲ್ಲುದು.

-ಡಾ. ಪುರುಷೋತ್ತಮ ಬಿಳಿಮಲೆ


ಪ್ರಿಯ ಓದುಗರೇ,

'ಹೊಸ ಮನುಷ್ಯ' ತನಗೆ ಬೇಕಾದ ಬರಹಗಳನ್ನು ತಾನೇ ಲೇಖಕರನ್ನು ಸಂಪರ್ಕಿಸಿ ತರಿಸಿಕೊಳ್ಳುತ್ತದೆ. ಆದುದರಿಂದ ಯಾರೂ ಅಯಾಚಿತವಾಗಿ ಬರಹ ಕಳಿಸಬಾರದೆಂದು ಕೋರುತ್ತೇವೆ

ಹಾಗೇ, ನಮ್ಮ ಪತ್ರಿಕೆಯಲ್ಲಿ 'ಪುಸ್ತಕಾವಲೋಕನ'ಕ್ಕಾಗಿ ಯಾರೂ ಪುಸ್ತಕಗಳನ್ನು ಕಳಿಸಬಾರದಾಗಿ ಕೋರುತ್ತೇವೆ. ಅವಲೋಕನಕ್ಕೆ ಬೇಕಾದ ಪುಸ್ತಕಗಳನ್ನು ನಾವೇ ಆಯ್ದು ತರಿಸಿಕೊಳ್ಳುತ್ತೇವೆ.- ಸಂಪಾದಕ

ಪು : ಶೋಧ (ಕಾದಂಬರಿ) ಲೇ : ಎಸ್.ಎಫ್. ಯೋಗಪ್ಪನವರ್ ಪ್ರ : ಪಲ್ಲವ ಪ್ರಕಾಶನ, ಚನ್ನಪಟ್ಟಣ ಪು : ೧೩೦ ಬೆಲೆ : ರೂ. ೧೨೫/-

ತತ್ವಜ್ಞಾನದ ಕಾವ್ಯಾತ್ಮಕ ಪಯಣ



ಎಸ್.ಎಫ್.ಯೋಗಪ್ಪನವರ್ ತೀರ ಬಿಡುಬೆಳಕಿನಲ್ಲಿ ಮೆರೆಯುವ ಪರಿಚಿತ ಲೇಖಕ ಅಲ್ಲ. 'ಲಂಕೇಶ್ ಪತ್ರಿಕೆ'ಯಲ್ಲಿ ಲಂಕೇಶರೊಡಗೂಡಿ ಯೋಗಪ್ಪನವರ್ ಚಿತ್ರಿಸಿದ 'ರೂಪಕ ಲೇಖಕರು' ಅಂಕಣ, ಯೋಗಪ್ಪನವರನ್ನು ಓದುಗರ ಮುಂದೆ ತಂದು ನಿಲ್ಲಿಸಿತ್ತು. ತಮ್ಮ ಗಂಭೀರ ಓದು ಮತ್ತು ಚಿಂತನೆಗಳ ಜೊತೆ ತಮ್ಮ ಪಾಡಿಗೆ ತಾವಿದ್ದ ಈ ಲೇಖಕ ಬರೆದದ್ದು ಕಡಿಮೆಯೇ. ಕಳೆದ ವರ್ಷ ಅವರು ಪ್ರಕಟಿಸಿದ ಅನುವಾದ, ಸಾಲಿಂಜರ್‌ನ 'ದ ಕ್ಯಾಚರ್ ಇನ್ ದ ರೈ' ಮತ್ತೆ ಯೋಗಪ್ಪನವರ ಸಾಮರ್ಥ್ಯವನ್ನು, ಓದುಗರ ಮುಂದೆ ಮಂಡಿಸಿತು. ಇದೀಗ ಅವರ ಹೊಸ ಕಾದಂಬರಿ 'ಶೋಧ' ಪ್ರಕಟವಾಗಿದೆ.

ಇದು ವಿಭಿನ್ನ ದಾರಿಯನ್ನು ತುಳಿದಿರುವ ಕೃತಿ. ಇಲ್ಲಿ ಕಥೆಯೆಂಬುದು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಇಲ್ಲ. ಅಲ್ಲಲ್ಲಿ ಇರುವಂತೆ ಕಂಡರೂ, ಅದು ನಿಜವೋ ಭ್ರಮೆಯೋ ಎಂಬ ಸಂದೇಹಕ್ಕೆ ಈಡುಮಾಡುತ್ತದೆ. ಅಷ್ಟೇ ಅಲ್ಲ, ನಿಜ-ಭ್ರಮೆಗಳ ನಡುವಿನ ಗೆರೆ ಯಾವುದು ಎಂಬ ಪ್ರಶ್ನೆಯನ್ನೂ ಎತ್ತುತ್ತದೆ. ಇಂಥ ಪ್ರಶ್ನೆಯ ಮೂಲಕ ಹೊರಡುವ ಈ ಕೃತಿ ಒಂದು ಫಿಲಾಸಫಿಕಲ್ ಪಯಣದಂತೆಯೂ ಕಾಣಿಸುತ್ತದೆ. ಫಿಲಾಸಫಿಕಲ್ ಎಂದು ಹೇಳಿದರೂ, ಈ ಕೃತಿ ತುಂಬಿಕೊಂಡಿರುವ ಕಾವ್ಯದ ತೀವ್ರತೆ, ತಲ್ಲಣ, ಸೊಬಗು, ಬೆಡಗು, ಬಿನ್ನಾಣಗಳು ಸೆಳೆದುಕೊಳ್ಳುತ್ತವೆ. ಇಲ್ಲಿಯ ಕಾವ್ಯಕ್ಕೆ ಕೃತಕ ನಯಗಾರಿಕೆಯ ಭಾಷಾಹೊದಿಕೆ ಇಲ್ಲ. ಬಾಗಲಕೋಟೆ, ಬಾದಾಮಿ ಸುತ್ತಮುತ್ತಲಿನ ಆಡುಭಾಷೆಯ ಕಸುವು, ಬಿಗಿ ಬನಿಗಳಲ್ಲಿಯೇ ಇಲ್ಲಿಯ ಕಾವ್ಯ ಅರಳಿದೆ. ಬಯಲು ಸೀಮೆಯ ಸಾಮಾನ್ಯ ಮರ, ಗಿಡ, ಬಿಸಿಲು, ಬೆಳದಿಂಗಳು ಯೋಗಪ್ಪನವರ ಬರವಣಿಗೆಯ ಕಸುವಿನಿಂದಾಗಿ ಅದ್ಭುತ ರೂಪಕಗಳಂತೆ ಕಣ್ಣು ಕುಕ್ಕುತ್ತವೆ. ನಿಜವನ್ನು ಭ್ರಮೆ ಮಾಡುತ್ತವೆ; ಭ್ರಮೆಯನ್ನು ನಿಜ ಮಾಡುತ್ತವೆ. ಕಾವ್ಯವನ್ನು ಫಿಲಾಸಫಿಯಾಗಿ, ಫಿಲಾಸಫಿಯನ್ನು ಕಾವ್ಯವಾಗಿ ಮಾರ್ಪಡಿಸುತ್ತ, ಬದುಕೆಂಬುದು ಕಾವ್ಯವೊ, ಫಿಲಾಸಫಿಯೊ ಅಥವಾ ಅದೆಲ್ಲವನ್ನೂ ಒಳಗೊಂಡ, ಸರಳವಾಗಿ ಕಂಡರೂ ಬಿಡಿಸಲಾಗದ ಜಟಿಲ, ಸಂಕೀರ್ಣ ಸ್ವರೂಪದ ಅನಿವಾರ್ಯತೆಯೊ ಎಂಬ ಸಂದಿಗ್ಧವನ್ನು ಮುಂದಿಡುತ್ತವೆ.

ನಾವು ನಿಜವೆಂದು ನಂಬಿಕೊಂಡು ಬಂದಿರುವ ನಿಜ ಮಾತ್ರ ನಿಜವೇ? ಭ್ರಮೆಯೆಂದು ಹೇಳುವ ಭ್ರಮೆ ನಿಜಕ್ಕೂ ಭ್ರಮೆಯೇ? ನಿಜದಲ್ಲಿ ಭ್ರಮೆ, ಭ್ರಮೆಯಲ್ಲಿ ನಿಜವನ್ನು ಬೇರ್ಪಡಿಸಲಾಗದ ರೀತಿಯಲ್ಲಿ ಬೆರೆಸಿಕೊಂಡಿರುವ ಮನುಷ್ಯನ ಬದುಕನ್ನು ಬಗೆದು ನೋಡುವ ಬಗೆ ಯಾವುದು?- ಇಂಥ ಹಲವಾರು ಪ್ರಶ್ನೆಗಳನ್ನು ಈ ಕೃತಿ ಓದುಗರ ಮುಂದೆ ನಿಲ್ಲಿಸುತ್ತದೆ.

ಏನನ್ನೂ ಹೇಳದೆ, ಎಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು, ಏನನ್ನೂ ಹುಡುಕದೆ, ಎಲ್ಲವನ್ನು ಅರಸುವುದು, ಹುಡುಕಾಟದಂತೆ ಕಾಣಿಸುತ್ತಲೇ ಹುಡುಕಾಟದ ನೆಲೆಯನ್ನು ಮೀರಿದ ಮಜಲಿಗಾಗಿ ಹಂಬಲಿಸುವುದು ಈ ಕೃತಿಯ ಮುಖ್ಯ ಶೋಧವಾಗಿರುವಂತೆ ತೋರುತ್ತದೆ.

ಈ ಕೃತಿಯಲ್ಲಿ ಪ್ರಧಾನವಾದ ಪಾತ್ರಗಳು ಎರಡೇ: ಒಬ್ಬ ಪೊಲೀಸ, ಇನ್ನೊಬ್ಬ 'ಮಾಹಿತಿದಾರ.' ಇವರಿಬ್ಬರ ಹುಡುಕಾಟವೇ 'ಶೋಧ' ಕಾದಂಬರಿ. ವಿಚಿತ್ರ ಎಂದರೆ, ಈ ಪೊಲೀಸನಿಗೆ ತಾನು ಹುಡುಕಲು ಹೊರಟಿರುವ ವ್ಯಕ್ತಿಯ ಮುಖವೇ ಕಂಡಿಲ್ಲ. ಕಾಗದದ ಮೇಲೆ ಗೀಚಿದ ಗೆರೆಗಳಲ್ಲಿರುವ ಮೂಡಿದ ಮಸುಕು ಚಿತ್ರವನ್ನೇ ನಂಬಿ ಆ ಅಪರಾಧಿಯನ್ನು ಹುಡುಕಲು ಹೊರಟಿದ್ದಾನೆ. ಹೋಗಲಿ, ಅವನ ಅಪರಾಧವಾದರೂ ಏನು? ಅದೂ ಪೊಲೀಸನಿಗೆ ತಿಳಿಯದು. ಇನ್ನೊಬ್ಬ 'ಮಾಹಿತಿದಾರ.' ತನ್ನ ಪಾಡಿಗೆ ತಾನಿದ್ದು ಬದುಕುತ್ತಿರುವ ಅಮಾಯಕ. ಅವನಿಗೆ 'ಮಾಹಿತಿದಾರ'ನ ಹಣೆಪಟ್ಟಿಯನ್ನು ಕಟ್ಟಿರುವವನೇ ಪೊಲೀಸ. ಪೊಲೀಸನಿಗೆ ಅಪರಾಧಿಯನ್ನು ಹುಡುಕಿ, ಕೋಳವನ್ನು ತೊಡಿಸಿ ನ್ಯಾಯಾಲಯದ ಮುಂದೆ ನಿಲ್ಲಿಸಿ ಗಲ್ಲುಶಿಕ್ಷೆ ಕೊಡಿಸುವ ಆತುರ. ಅವನ ಗುರಿಯೂ ಅಷ್ಟೆ. ಅದರಾಚೆಗೆ ಅವನ ಹುಡುಕಾಟ ಇಲ್ಲವೇ ಇಲ್ಲ. ಈ 'ಮಾಹಿತಿದಾರ'ನಿಗೂ ಒಂದು ಹುಡುಕಾಟವಿದೆ. ಅವನು ಹುಡುಕುತ್ತಿರುವ ವ್ಯಕ್ತಿ, ಬೆಳಕಿನಂಥವನು, ತಂಗಾಳಿಯಂಥವನು; ಸಂತೋಷವನ್ನು, ನೆಮ್ಮದಿಯನ್ನು, ಬದುಕಿಗೆ ಅರ್ಥವನ್ನು ಕೊಡುವವನು. ಅವನು ಸಿಕ್ಕರೆ ಮುಗಿಯಿತು, ತನ್ನ ಬದುಕು ಪೂರ್ಣಗೊಳ್ಳುತ್ತದೆ, ಸಾರ್ಥಕವಾಗುತ್ತದೆ ಎಂದು ನಂಬಿಕೊಂಡವನು. ಒಬ್ಬನ ಹುಡುಕಾಟ ಭೌತಿಕ ಜಗತ್ತಿನ ಸುಖ ಲೋಲುಪತೆಯ ಕಡೆಗಾದರೆ, ಇನ್ನೊಬ್ಬನ ಹುಡುಕಾಟ ಇದನ್ನು ದಾಟಿದ, ಹೇಳಲಾಗದುದರ ಕಡೆಗೆ. ಇದು ನಿಜವೋ, ಭ್ರಮೆಯೊ? ನಿಸರ್ಗ ಕಟ್ಟಿಕೊಂಡ ಸೊಬಗೆಲ್ಲವೂ ನೀಡುವ ನೆಮ್ಮದಿ ನಿಜದಂತೆಯೂ ಕಾಣಿಸುತ್ತದೆ; ಭ್ರಮೆಯಂತೆಯೂ ಕಾಣಿಸುತ್ತದೆ. ಈ ಪೊಲೀಸ ಅಪರಾಧಿಯ ಹುಡುಕಾಟದ ಕಣ್ಣಪಟ್ಟಿ ಕಟ್ಟಿಕೊಂಡಿದ್ದರೆ, 'ಮಾಹಿತಿದಾರ' ಅಖಂಡ ಬದುಕನ್ನು ಕಾಣಲು ತೆರೆದ ನೋಟವನ್ನು ಪಡೆದವನಾಗಿದ್ದಾನೆ.

ಬೆಳದಿಂಗಳಂಥ ಹೆಣ್ಣುಮಗಳು, ದೇವರಿಗಾಗಿ ಹೂವನ್ನು ಮಡಿಲಲ್ಲಿ ತುಂಬಿಕೊಂಡು ನಡುರಾತ್ರಿಯಲ್ಲಿ ನಡೆಯುವ ಹುಡುಗ, ಬಾಳೆಗೊನೆಯನ್ನು ಹೊತ್ತು ತಂದು ಸತ್ತ ಪೊಲೀಸನ ಪದತಲದಲ್ಲಿ ಇಟ್ಟು ಪ್ರೀತಿ ತೋರುವ ಮಂಗಗಳು, ಸಂಬಂಧದ ಯಾವ ಎಳೆಯೂ ಇಲ್ಲದಿದ್ದರೂ, ಸತ್ತ ಪೊಲೀಸನಿಗಾಗಿ ಅಳುವ ಹಿಜಡಾಗಳು-ಎಷ್ಟೊಂದು ಎಳೆಗಳು. ಬೇಕಾದವರು ಬೇಕಾದ ಎಳೆಗಳನ್ನು ಎತ್ತಿಕೊಂಡು ತಮಗೆ ಬೇಕಾದ ಕತೆಯನ್ನು, ಕಾದಂಬರಿಯನ್ನು ನೇಯ್ದುಕೊಳ್ಳಬಹುದು.

ಇಲ್ಲಿಯ ಕಥಾನಾಯಕ ಬದುಕಿನಿಂದ ವಿಮುಖವಾದವನೇ? ಖಂಡಿತಾ ಅಲ್ಲ. ಬದುಕಿನ ಬಗೆಗೆ ಅವನಿಗಿರುವ ಗಾಢ ಆಸಕ್ತಿಯಿಂದಾಗಿಯೇ ಇಲ್ಲಿ ಬದುಕಿನ ಅನೇಕ ಮುಖಗಳು ಕಾಣಿಸುತ್ತವೆ; ಈ ಜಗತ್ತನ್ನು ಸದ್ದಿಲ್ಲದೆ ಪೊರೆಯುತ್ತ ಬಂದಿರುವ ಒಳ್ಳೆಯತನ, ಮುಗ್ಧತೆ, ಪರೋಪಕಾರಬುದ್ಧಿ, ಅಖಂಡ ಪ್ರೀತಿಯ ತಾಯ್ತನ ಇವೆಲ್ಲವನ್ನೂ ಬೇರೆಯ ರೀತಿಯಲ್ಲಿಯೇ ಈ ಕಥಾನಾಯಕ ತೋರಿಸುತ್ತಾನೆ. ಬದುಕಿನ ಬಗೆಗೆ ಅವನು ಇಟ್ಟುಕೊಂಡಿರುವ ನಂಬಿಕೆ ಮತ್ತು ಪ್ರೀತಿಗಳೇ ಇದಕ್ಕೆ ಕಾರಣವಾಗಿವೆ.

ಪೊಲೀಸ್ ಇಲಾಖೆಯ ಬಗೆಗಿನ ಅನೇಕ ಒಳನೋಟಗಳನ್ನು ಈ ಕೃತಿ ಕಟ್ಟಿಕೊಡುತ್ತದೆ. 'ಯಕ್ಷಪ್ರಶ್ನೆ'ಯಂಥ ಅಧ್ಯಾಯ ಒಂದು ಸ್ಯಾಂಪಲ್ ಮಾತ್ರ. ಹಾಗೆಂದು ಈ ಕೃತಿ ಪೊಲೀಸ್ ಇಲಾಖೆಯನ್ನು ಉಪೇಕ್ಷಿಸಿ, ಗೇಲಿಗೆ ಒಳಪಡಿಸುವುದಿಲ್ಲ. ಕಡಿಮೆ ವೇತನವನ್ನು ಪಡೆಯುವ ಸಾಮಾನ್ಯ ಪೇದೆಯೊಬ್ಬ ಅನುಭವಿಸುವ ನೋವು, ಯಾತನೆ, ಅಸಹಾಯಕತೆ, ಮೇಲಿನವರ ದಬ್ಬಾಳಿಕೆಯಲ್ಲಿ ಅವನು ನಲುಗುವ ಪರಿ-ಇವೆಲ್ಲವನ್ನೂ ಅನುಕಂಪದಿಂದಲೇ ಚಿತ್ರಿಸುತ್ತದೆ. ಬದುಕನ್ನು ತೆರೆದ ಕಣ್ಣುಗಳಲ್ಲಿ ನೋಡಲಾಗದಂಥ ಪರಿಸ್ಥಿತಿ, ಕಣ್ಣುಪಟ್ಟಿ ಕಟ್ಟಿಕೊಂಡು ಅಪರಾಧಿಯ ಬೆನ್ನುಹತ್ತುವಲ್ಲಿನ ಯಾಂತ್ರಿಕತೆ ಇವೆಲ್ಲವನ್ನು ಪಡೆದುಕೊಂಡಿರುವ ನಮ್ಮ ಪೊಲೀಸ್ ಇಲಾಖೆಯನ್ನು ಚಿತ್ರಿಸುತ್ತಲೇ ಇದರ ಹಿಂದಿರುವ ನಮ್ಮ ರಾಜಕೀಯ ವ್ಯವಸ್ಥೆಯನ್ನೂ ಈ ಕೃತಿ ಪರೋಕ್ಷವಾಗಿ ಛೇಡಿಸುತ್ತದೆ.

-ಜಿ.ಪಿ. ಬಸವರಾಜು

ಚಂದಾರರಾಗಬಯಸುವವರ ಗಮನಕ್ಕೆ

ಪತ್ರಿಕೆಗೆ ಚಂದಾರರಾಗ ಬಯಸುವವರು ವಾರ್ಷಿಕ ಚಂದಾ 200 ರೂ.ಗಳನ್ನು ಸಂಪಾದಕರಿಗೆ ಪತ್ರಿಕೆಯ ಮುಖಪುಟದಲ್ಲಿರುವ ವಿಳಾಸಕ್ಕೆ ಎಂ.ಓ ಮಾಡಬಹುದು ಅಥವಾ ಚೆಕ್ ಕಳಿಸಬಹುದು. ಬ್ಯಾಂಕ್ ಮೂಲಕ ಚಂದಾ ಸಂದಾಯ ಮಾಡಬಯಸುವವರು ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವಿನೋಬ ನಗರ ಶಾಖೆಯಲ್ಲಿ ಸಂಪಾದಕರು : 'ಹೊಸ ಮನುಷ್ಯ' ಹೆಸರಿನಲ್ಲಿ ತೆರೆದಿರುವ ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ವರ್ಗಾವಣೆ ಮಾಡಬಹುದು. ಆದರೆ ಯಾರೂ ದಯವಿಟ್ಟು ಬ್ಯಾಂಕಿಗೆ ನಗದು ಕಟ್ಟಿ ಹಣ ವರ್ಗಾವಣೆ ಮಾಡಬಾರದು. ಅದು ಹೆಚ್ಚುವರಿ ಬ್ಯಾಂಕ್ ಶುಲ್ಕಕ್ಕೆ ಕಾರಣವಾಗುತ್ತದೆ. ನಮ್ಮ ಬ್ಯಾಂಕಿನ ಕೋಡ್ : SBIN 0040444. ಚಂದಾ ವರ್ಗಾವಣೆ ಮಾಡಿದ ಕೂಡಲೇ 9449242284 ಈ ಸಂಖ್ಯೆಗೆ ವಿವರ ಕಳಿಸುವುದು ಅತ್ಯಗತ್ಯ. -ಸಂ

ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹೊಸ ವರ್ಷದ ಹಾರ್ದಿಕ ಶುಭಾಶಯಗಳು!



ಬಿ.ಎಸ್ ಶಶಿಕಲಾ


ರಂಗಾಯಣ, ಮೈಸೂರು

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹೊಸ ವರ್ಷದ ಹಾರ್ದಿಕ ಶುಭಾಶಯಗಳು!



ವಿವೇಕ ಬ್ಯೂರೋ,
(ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ)
. ಕೆ. ಆರ್ ಪುರಂ, **ಹಾಸನ-೫೭೩ ೨೦೧**
ಮೊಬೈಲ್ : **೯೪೪೮೮೬೭೦೮೭**

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹೊಸ ವರ್ಷದ ಹಾರ್ದಿಕ ಶುಭಾಶಯಗಳು!



ಅವಿರತ ಪ್ರತಿಷ್ಠಾನ
#೭೩, ೩ನೇ ಘಟ್ಟ,
೨ ನೇ ಮುಖ್ಯ ರಸ್ತೆ, ವಿನಾಯಕ ನಗರ
ವಿಜಯನಗರ, ಬೆಂಗಳೂರು - ೫೬೦ ೦೪೦

ತಿಂಗಳ ಸಾಲುಗಳು...



ಪ್ರೀತಿ ಇಲ್ಲ ಹೊರತು
ಎಲ್ಲ ಕೆಲಸಗಳೂ ನಿಜವಾಗಿ ನಿರರ್ಥಕವೇ
-ಖಲೀಲ್ ಗಿಬ್ರಾನ್

ಶುಭಾಶಯಗಳೊಂದಿಗೆ,

ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್
ಲೆಕ್ಕ ಪರಿಶೋಧಕರು, ಮೈಸೂರು
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrail Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)